ಸೋಮವಾರ, ಏಪ್ರಿಲ್ 11, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 100 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ

ವನ್ಯಜೀವಿ ಸಂರಕ್ಷಣಾ ವಿಷಯಗಳ ಅಧ್ಯಯನಕ್ಕಾಗಿರುವ ವಿವಿಧ ಕೋರ್ಸ್‌ಗಳ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.



ಇಮ್ರಾನ್ ಪದಚ್ಯುತಿ ಬಳಿಕ ಪ್ರಧಾನಿ ಹುದ್ದೆಗೆ ಶಾಹಬಾಝ್ ನಾಮಪತ್ರ

ಪಾಕ್: ಸರ್ಕಾರ ರಚನೆ ಸರ್ಕಸ್

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರ ವಿರುದ್ಧದ ಅವಿಶ್ವಾಸ ನಿರ್ಣಯ ಅಂಗೀಕಾರವಾಗಿದ್ದರೂ ಆ ದೇಶದ ರಾಜಕೀಯ ಅನಿಶ್ಚಿತ ಸ್ಥಿತಿ ಕೊನೆಯಾಗುವಂತೆ ಕಾಣುತ್ತಿಲ್ಲ. ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಅಧ್ಯಕ್ಷ ಶಾಹಬಾಝ್ ಷರೀಫ್ ಅವರು ಪ್ರಧಾನಿ ಹುದ್ದೆಗೆ ನಾಮಪತ್ರ ಸಲ್ಲಿಸಿದ್ದಾರೆ. ಆದರೆ, ಶಾಹಬಾಝ್ ಅವರು ಪ್ರಧಾನಿ ಹುದ್ದೆಗೆ ಸ್ಪರ್ಧಿಸಲು ಅವಕಾಶ ಕೊಟ್ಟರೆ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ಸಂಸದರು ರಾಜೀನಾಮೆ ನೀಡಲಿದ್ದಾರೆ ಎಂದು ಪಕ್ಷವು ಭಾನುವಾರ ಹೇಳಿದೆ.

ಇಮ್ರಾನ್ ಅವರನ್ನು ಶನಿವಾರ ತಡರಾತ್ರಿ ಅವಿಶ್ವಾಸ ನಿರ್ಣಯದ ಮೂಲಕ ಪದಚ್ಯುತಗೊಳಿಸಲಾಗಿದೆ. ಹೊಸ ಸರ್ಕಾರ ರಚನೆಯ ಪ್ರಕ್ರಿಯೆಗಳು ಪಾಕಿಸ್ತಾನ ಸಂಸತ್ತಿನಲ್ಲಿ ಭಾನುವಾರ ಆರಂಭಗೊಂಡಿದೆ.

ಸಮಾಜವಾದಿ, ಉದಾರವಾದಿ ಮತ್ತು ಧಾರ್ಮಿಕ ಮೂಲಭೂತವಾದಿ ಪಕ್ಷಗಳೆಲ್ಲವೂ ಇರುವ ಹಲವು ಪಕ್ಷಗಳ ಮೈತ್ರಿಕೂಟವನ್ನು ರಚಿಸಲಾಗಿದೆ. ಈ ಮೈತ್ರಿಕೂಟವು 70 ವರ್ಷದ ಶಾಹಬಾಝ್ ಅವರನ್ನು ಪ್ರಧಾನಿ ಹುದ್ದೆಯ ಒಮ್ಮತದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದೆ. ಇಮ್ರಾನ್ ಅವರ ಪಿಟಿಐ, ಮಾಜಿ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸಿದೆ. ಶಾಹಬಾಝ್ ಅವರು ಸದನದ ನಾಯಕರಾಗಿ ಆಯ್ಕೆಯಾಗುವ ಸಾಧ್ಯತೆಯೇ ಹೆಚ್ಚು.

ದೇಶದ ಮಾಜಿ ಅಧ್ಯಕ್ಷ ಮತ್ತು ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಸಹ ಅಧ್ಯಕ್ಷ ಆಸಿಫ್ ಅಲಿ ಝರ್ದಾರಿ ಅವರ ಮಗ ಬಿಲಾವಲ್ ಭುಟ್ಟೊ ಅವರು ಹೊಸ ವಿದೇಶಾಂಗ ಸಚಿವರಾಗುವ ಸಾಧ್ಯತೆ ಇದೆ.

ಶಾಹಬಾಝ್ ಮತ್ತು ಅವರ ಮಗ ಹಂಝಾ ಅವರ ವಿರುದ್ಧದ 1,400 ಕೋಟಿ ಪಾಕಿಸ್ತಾನ ರೂಪಾಯಿಯ ಅಕ್ರಮ ವರ್ಗಾವಣೆ ಪ್ರಕರಣದ ತೀರ್ಪನ್ನು ಸೋಮವಾರ ಪ್ರಕಟಿಸುವುದಾಗಿ ಫೆಡರಲ್ ಇನ್‌ವೆಸ್ಟಿಗೇಷನ್ ಏಜೆನ್ಸಿಯ ವಿಶೇಷ ನ್ಯಾಯಾಲಯ ಘೋಷಿಸಿದೆ ಎಂದು ಪಿಟಿಐ ಹೇಳಿದೆ. ಶಾಹಬಾಝ್ ಅವರಿಗೆ ಪ್ರಧಾನಿ ಸ್ಥಾನಕ್ಕೆ ಸ್ಪರ್ಧಿಸಲು ಅವಕಾಶ ಕೊಡಬಾರದು ಎಂಬುದಕ್ಕೆ ಇಮ್ರಾನ್ ಅವರ ಪಕ್ಷ ಮುಂದಿಟ್ಟಿರುವ ಪ್ರಮುಖ ಕಾರಣ ಇದು.

ಆದರೆ, ಈ ಆರೋಪಗಳನ್ನು ಸಂಸತ್ತಿನ ಕಾರ್ಯಾಲಯವು ತಿರಸ್ಕರಿಸಿದೆ. 342 ಸದಸ್ಯ ಬಲದ ಸಂಸತ್ತಿನಲ್ಲಿ ಸರಳ ಬಹುಮತಕ್ಕೆ 172 ಸದಸ್ಯರ ಬೆಂಬಲ ಬೇಕು. ಇಮ್ರಾನ್ ವಿರುದ್ಧದ ಅವಿಶ್ವಾಸ ನಿರ್ಣಯದ ಪರ 174 ಸಂಸದರು ಮತ ಹಾಕಿದ್ದರು.

ಇನ್ನಷ್ಟು ಸುದ್ದಿಗಳು 6

ಆಮದು ಸರ್ಕಾರವನ್ನು ಒಪ್ಪುವುದಿಲ್ಲ: ಇಮ್ರಾನ್

'1947ರಲ್ಲಿ ಪಾಕಿಸ್ತಾನವು ಸ್ವತಂತ್ರ ದೇಶವಾಯಿತು; ಆದರೆ, ಸರ್ಕಾರ ಬದಲಾವಣೆಯ ವಿದೇಶಿ ಸಂಚಿನ ವಿರುದ್ಧದ ಸ್ವಾತಂತ್ರ್ಯ ಹೋರಾಟ ಇಂದು ಆರಂಭವಾಗಿದೆ. ಪೌರರೇ ದೇಶದ ಸಾರ್ವಭೌಮತೆ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಿಕೊಂಡಿದ್ದಾರೆ' ಎಂದು ಇಮ್ರಾನ್ ಟ್ವೀಟ್ ಮಾಡಿದ್ದಾರೆ. ಪದಚ್ಯುತಿಯ ಬಳಿಕ ಇದು ಅವರ ಮೊದಲ ಪ್ರತಿಕ್ರಿಯೆಯಾಗಿದೆ.

'ಆಮದು ಸರ್ಕಾರ'ವನ್ನು ಒಪ್ಪಿಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಅವರು ಶುಕ್ರವಾರ ಹೇಳಿದ್ದರು. ತಮ್ಮ ಸರ್ಕಾರವು ಸ್ವತಂತ್ರ ವಿದೇಶಾಂಗ ನೀತಿಯನ್ನು ಅನುಸರಿಸಿದ ಕಾರಣಕ್ಕಾಗಿಯೇ ಸರ್ಕಾರವನ್ನು ಉರುಳಿಸಲಾಗಿದೆ ಎಂದು ಇಮ್ರಾನ್ ಹೇಳಿದ್ದಾರೆ. ಈ ಸಂಚಿನ ಹಿಂದೆ ಅಮೆರಿಕ ಇದೆ ಎಂದು ಆರೋಪಿಸಿದ್ದರು. ಆದರೆ, ಈ ಆರೋಪವನ್ನು ಅಮೆರಿಕ ಅಲ್ಲಗಳೆದಿದೆ.

ದೇಶ ತೊರೆಯುವುದನ್ನು ತಡೆಯಿರಿ: ಹೈಕೋರ್ಟ್‌ಗೆ ಅರ್ಜಿ

ಇಮ್ರಾನ್ ಮತ್ತು ಅವರ ಸಚಿವ ಸಂಪುಟದ ಸದಸ್ಯರು ದೇಶ ಬಿಟ್ಟು ಹೋಗುವುದನ್ನು ತಡೆಯಬೇಕು ಎಂದು ಕೋರಿದ ಅರ್ಜಿಯೊಂದು ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿದೆ. ಈ ಅರ್ಜಿಯ ವಿಚಾರಣೆ ಸೋಮವಾರ ನಡೆಯಲಿದೆ.

ಪಾಕಿಸ್ತಾನದ ಫೆಡರಲ್ ಇನ್‌ವೆಸ್ಟಿಗೇಷನ್ ಏಜೆನ್ಸಿಯು ಎಲ್ಲ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ತನ್ನ ಸಿಬ್ಬಂದಿಯನ್ನು ಕಟ್ಟೆಚ್ಚರದಲ್ಲಿ ಇರಿಸಿದೆ. ಇಮ್ರಾನ್ ಸರ್ಕಾರದಲ್ಲಿ ಮಹತ್ವದ ಹುದ್ದೆಯಲ್ಲಿದ್ದ ಅಧಿಕಾರಿಗಳು, ಸಚಿವರು ವಿದೇಶಕ್ಕೆ ಹೋಗುವುದನ್ನು ತಡೆಯಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. 'ನಿರಾಕ್ಷೇಪಣಾ ಪತ್ರ' ಇದ್ದರಷ್ಟೇ ದೇಶದಿಂದ ಹೊರಕ್ಕೆ ಹೋಗಲು ಸಾಧ್ಯ.


ಪಿಎಸ್ಐ ನೇಮಕಾತಿ ಅಕ್ರಮ: ಸಿಐಡಿ ತನಿಖೆ ಆರಂಭ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಆರೋಪಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆ ಆರಂಭಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು. 5

ವಿದ್ಯುತ್ ಚಾಲಿತ ವಾಹನ ಮಾರಾಟ 3 ಪಟ್ಟು ಹೆಚ್ಚಳ 10

ಚಿನಕುರಳಿ

ಪ್ರಕಾಶ್ ಶೆಟ್ಟಿ



ಚಂದ್ರಶೇಖರ್ ಕೊಲೆ ಪ್ರಕರಣ ಸಿಐಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗಜೀವನ್ ರಾಂ ನಗರದಲ್ಲಿ ಇತ್ತೀಚೆಗೆ ನಡೆದ ಚಂದ್ರಶೇಖರ್ ಕೊಲೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಿ ಆದೇಶ ಹೊರಡಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಈ ಕುರಿತು ಭಾನುವಾರ ಹೇಳಿಕೆ ನೀಡಿರುವ ಅವರು, 'ಯುವಕನ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲ ಆಯಾಮಗಳಿಂದಲೂ ತನಿಖೆ ನಡೆಯಬೇಕು. ಸತ್ಯವನ್ನು ಬಯಲಿಗೆಳೆದು, ಹಂತಕರನ್ನು ಶಿಕ್ಷೆಗೆ ಒಳಪಡಿಸಬೇಕು ಎಂಬ ಉದ್ದೇಶದಿಂದ ಸಿಐಡಿ ತನಿಖೆಗೆ ಆದೇಶ ಹೊರಡಿಸಲಾಗಿದೆ' ಎಂದು ಮಾಹಿತಿ ನೀಡಿದರು.

ನುಗ್ಗಿಕೇರಿ ಪ್ರಕರಣ: ನಾಲ್ವರು ವಶಕ್ಕೆ

ಧಾರವಾಡ: ನುಗ್ಗಿಕೇರಿಯಲ್ಲಿ ಶನಿವಾರ ನಡೆದಿದ್ದ ಮುಸ್ಲಿಮರ ಅಂಗಡಿಗಳ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀರಾಮಸೇನೆಯ ನಾಲ್ವರು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನುಗ್ಗಿಕೇರಿ ಆಂಜನೇಯ ದೇವಸ್ಥಾನದ ಆವರಣದಲ್ಲಿ ವ್ಯಾಪಾರ ಮಾಡುತ್ತಿದ್ದ ನಬೀಸಾಬ್ ಗೌಸುಸಾಬ್ ಕಿಲ್ಲೇದಾರ, ಮೆಹಬೂಬ್‌ಸಾಬ್ ಮುಜಾವರ್, ಶರೀಫ್ ತಡಕೋಡ ಇವರ ಅಂಗಡಿಗಳನ್ನು 8 ರಿಂದ 10 ಜನರಿದ್ದ ಗುಂಪು ಧ್ವಂಸಗೊಳಿಸಿತ್ತು. ಈ ಬಗ್ಗೆ ಗ್ರಾಮೀಣ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. 'ಈ ಸಂಬಂಧ ಮೈಲಾರಪ್ಪ ಗುಡ್ಡಪ್ಪನವರ (27), ಮಹಾನಿಂಗ ಐಗಳಿ (26), ಚಿದಾನಂದ ಕಲಾಲ (25), ಕುಮಾರ ಕಟ್ಟಿಮನಿ (26) ಅವರನ್ನು ಗ್ರಾಮೀಣ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿ.ಕೃಷ್ಣಕಾಂತ್ ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 4

ಬೇಸಿಗೆ: ನೀರಿನ ಅಭಾವ ನೀಗಿಸಲು ತೋಟಗಾರಿಕೆ ಇಲಾಖೆಯಿಂದ ತಯಾರಿ

ಕಬ್ಬನ್ ಉದ್ಯಾನ: ಶುದ್ಧೀಕರಿಸಿದ ನೀರಿನ ಮರುಬಳಕೆ

• ಮನೋಹರ್ ಎಂ.

ಬೆಂಗಳೂರು: ಕಬ್ಬನ್ ಉದ್ಯಾನಕ್ಕೆ ಬೇಸಿಗೆಯಲ್ಲಿ ನೀರಿನ ಕೊರತೆ ಆಗದಂತೆ ನೋಡಿಕೊಳ್ಳಲು ಉದ್ಯಾನದಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕ (ಎಸ್‌ಟಿಪಿ) ಹಾಗೂ ಇತರ ಜಲಮೂಲಗಳಿಂದ ನೀರು ಬಳಕೆಗೆ ತೋಟಗಾರಿಕೆ ಇಲಾಖೆ ಸಿದ್ಧತೆ ನಡೆಸಿದೆ.



ಎಚ್‌.ಟಿ. ಬಾಲಕೃಷ್ಣ

‘ಜೂನ್‌ನಿಂದ ಜನವರಿವರೆಗಿನ ಅವಧಿಯಲ್ಲಿ ದಿನಕ್ಕೆ ಕೇವಲ 5 ಲಕ್ಷ ಲೀಟರ್‌ಗಳಷ್ಟು ನೀರು ಉದ್ಯಾನಕ್ಕೆ ಸಾಕು. ಬೇಸಿಗೆಯಲ್ಲಿ ತುಸು ಹೆಚ್ಚಿನ ಪ್ರಮಾಣದ ನೀರು ಬೇಕಾಗುತ್ತದೆ. ಕಬ್ಬನ್ ಉದ್ಯಾನದಲ್ಲಿರುವ ಎಸ್‌ಟಿಪಿಯಿಂದ ದಿನಕ್ಕೆ 4 ದಶಲಕ್ಷ ಲೀಟರ್‌ಗಳಷ್ಟು (ಎಂಎಲ್‌ಡಿ) ನೀರು ಲಭ್ಯವಾಗುತ್ತಿದ್ದು, ಬೇಸಿಗೆಯಲ್ಲಿ ಅದನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಿದ್ದೇವೆ’ ಎಂದು ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ (ಕಬ್ಬನ್ ಉದ್ಯಾನ) ಎಚ್‌.ಟಿ. ಬಾಲಕೃಷ್ಣ ‘ಪ್ರಜಾವಾಣಿ’ಗೆ ತಿಳಿಸಿದರು.



ಕಬ್ಬನ್ ಉದ್ಯಾನದಲ್ಲಿ ಗಿಡಗಳಿಗೆ ನೀರೆರೆಯುತ್ತಿರುವ ಸಿಬ್ಬಂದಿ —ಪ್ರಜಾವಾಣಿ ಚಿತ್ರ

‘ಉದ್ಯಾನದಲ್ಲಿ ಏಳು ಬಾವಿಗಳು, 72 ಇಂಗು ಗುಂಡಿಗಳು, ಎರಡು ಕೊಳಗಳು ಹಾಗೂ ಎರಡು ಕೊಳವೆ-ಬಾವಿಗಳಿವೆ. ಮಳೆ ನೀರು ಸಂಗ್ರಹದ ವ್ಯವಸ್ಥೆಯೂ ಸಮರ್ಪಕವಾಗಿದೆ. ಬೇಸಿಗೆಯಲ್ಲೂ ಉದ್ಯಾನದ ನಿರ್ವಹಣೆಗೆ ದಿನಕ್ಕೆ 15 ಲಕ್ಷ ಲೀಟರ್‌ಗಳಷ್ಟು ನೀರು ಸಾಕಾಗುತ್ತದೆ. ಹಾಗಾಗಿ ಬೇಸಿಗೆಯಲ್ಲಿ ನೀರಿನ ಅಭಾವ ಎದುರಾಗುವ ಸಾಧ್ಯತೆ ಕಡಿಮೆ’ ಎಂದರು.

‘ಮಳೆ ನೀರು ಸಂಗ್ರಹಕ್ಕಾಗಿ ಉದ್ಯಾನದಲ್ಲಿ ನಿರ್ಮಿಸಿರುವ ಇಂಗು ಗುಂಡಿಗಳು, ಬಾವಿಗಳಿಂದಾಗಿ ಬೇಸಿಗೆಯಲ್ಲಿ ನೀರಿನ ಅಭಾವ ಕಾಣುತ್ತಿಲ್ಲ. ಉದ್ಯಾನದ ಮರ-ಗಿಡಗಳಿಗೆ ಬೇಸಿಗೆಯಲ್ಲೂ ಯಥಾಸ್ಥಿತಿಯಲ್ಲಿ ನೀರು ನಿರ್ವಹಣೆ ಆಗಲಿದೆ. ಸ್ಮಾರ್ಟ್‌ಸಿಟಿ ಯೋಜನೆಯಡಿ ಉದ್ಯಾನದ ಕಮಲದ ಕೊಳದ ಅಭಿವೃದ್ಧಿ ಕಾಮಗಾರಿ ಪ್ರಗತಿಯಲ್ಲಿದ್ದು, ಇದು ಪೂರ್ಣಗೊಂಡ ನಂತರ ಇಲ್ಲಿಯೂ ಮಳೆ ನೀರು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಗೊಳ್ಳಲಿದೆ’ ಎಂದು ಹೇಳಿದರು.

‘ಹುಲ್ಲು ಕಡಿಮೆಗೊಳಿಸಿ– ನೀರು ಉಳಿಸಿ’

‘ಉದ್ಯಾನದ ಖಾಲಿ ಜಾಗಗಳಲ್ಲಿ ಹುಲ್ಲುಹಾಸನ್ನು ಹೆಚ್ಚಾಗಿ ಬೆಳೆಸುತ್ತಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಬೇಕಾಗುತ್ತದೆ. ಹುಲ್ಲಿನ ಬದಲಿಗೆ ಮರಗಳನ್ನು ಬೆಳೆಸುವುದು ಒಳ್ಳೆಯದು. ಹುಲ್ಲು ಬೆಳೆಸುವುದನ್ನು ಕಡಿಮೆ ಮಾಡಿದರೆ, ಉದ್ಯಾನಕ್ಕೆ ಮತ್ತಷ್ಟು ನೀರು ಉಳಿಯಲಿದೆ’ ಎಂದು ಜಲತಜ್ಞ ಎಸ್‌.ವಿಶ್ವನಾಥ್ ಸಲಹೆ ನೀಡಿದರು.

ಅಂಕಿ-ಅಂಶಗಳು

197 ಎಕರೆ
ಕಬ್ಬನ್ ಉದ್ಯಾನದ ವಿಸ್ತೀರ್ಣ

9000
ಉದ್ಯಾನದಲ್ಲಿರುವ ಮರಗಳು

ನೀರು ಇಂಗಿಸಲು ಸೂಕ್ತ ಸ್ಥಳ: ‘ಕಬ್ಬನ್ ಉದ್ಯಾನವು ಮಳೆ ನೀರು ಇಂಗಿಸಲು ಸೂಕ್ತವಾದ ಸ್ಥಳ. ಮಳೆ ನೀರು ಸಂಗ್ರಹಕ್ಕೆ ಇಲ್ಲಿ ಪೂರಕ ವಾತಾವರಣವಿದೆ. ಕಬ್ಬನ್ ಉದ್ಯಾನದ ಜಲಸ್ಥಿತಿಗೆ ಸಂಬಂಧಿಸಿ ಅಲ್ಲಿನ ಮಳೆಯ ದತ್ತಾಂಶ, ಜಲಮೂಲಗಳ ಸಾಮರ್ಥ್ಯ ಕುರಿತು ಸಂಶೋಧನಾ ವಿದ್ಯಾರ್ಥಿಗಳಿಂದ ಅಧ್ಯಯನ ನಡೆಯುತ್ತಿದೆ’ ಎಂದು ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ (ಯುವಿಸಿಇ) ಜಲಸಂಪನ್ಮೂಲ ಎಂಜಿನಿಯರಿಂಗ್ ವಿಭಾಗದ ಪ್ರೊ.ಎಂ.ಇನಾಯತ್ ಉಲ್ಲಾ ವಿವರಿಸಿದರು.

ಚಿತ್ರ ರಚನೆಯಲ್ಲಿ ವಿಹಾನ್ ‘ಗ್ರ್ಯಾಂಡ್ ಮಾಸ್ಟರ್’



ವಿಹಾನ್

ಬೆಂಗಳೂರು: ನಗರದ ವಿದ್ಯಾರಣ್ಯಪುರದ ನಂದಿನಿ ಮತ್ತು ವಿರೂಪಾಕ್ಷ ದಂಪತಿಯ ಪುತ್ರ ವಿಹಾನ್ ಮುತ್ಯಾಲ್ ‘ಏಷ್ಯಾ ಬುಕ್ ಆಫ್ ರೆಕಾರ್ಡ್ಸ್’ನಲ್ಲಿ 100 ವಿಭಿನ್ನ ಚಿತ್ರಗಳ ರಚನೆಯಲ್ಲಿ ‘ಗ್ರ್ಯಾಂಡ್ ಮಾಸ್ಟರ್’ ಗೌರವಕ್ಕೆ ಪಾತ್ರನಾಗಿದ್ದಾನೆ.

5 ವರ್ಷದ ವಿಹಾನ್ ಜಾಲಹಳ್ಳಿಯ ಎ.ಸಿ.ಶಾಲೆಯಲ್ಲಿ ಯು.ಕೆ.ಜಿ ಶಿಕ್ಷಣ ಮುಗಿಸಿದ್ದಾನೆ. ಕಾಗದ, ಪಿಸ್ತಾ ಚಿಪ್ಪುಗಳು, ಪೆನ್ಸಿಲ್ ಮೊನೆ ಮಾಡಿದಾಗ ಸಿಗುವ ಸಿಪ್ಪೆ, ಬಾಟಲಿ, ಐಸ್‌ಕ್ರೀಂ ಕಡ್ಡಿ, ಕವಲು ಚಮಚ (ಫೋರ್ಕ್), ಸ್ಪಂಜುಗಳು, ಉಪ್ಪು, ಕುಂಚ ಸೇರಿದಂತೆ ಹಲವು ವಸ್ತುಗಳನ್ನು ಬಳಸಿ 100 ವಿಭಿನ್ನ ಚಿತ್ರಗಳನ್ನು ರಚಿಸಿದ್ದಾನೆ.

ಇದಕ್ಕಾಗಿ ‘ಗ್ರ್ಯಾಂಡ್ ಮಾಸ್ಟರ್’ ಬಿರುದು ನೀಡಿ ಗೌರವಿಸಿದೆ. ಮಾರ್ಚ್‌ನಲ್ಲಿ ಪ್ರಶಸ್ತಿ ನೀಡಲಾಯಿತು. ಸಣ್ಣ ವಯಸ್ಸಿಗೆ ಚಿತ್ರ ರಚಿಸಿದ ಇವರ ಸಾಧನೆ ‘ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್’ನಲ್ಲೂ ದಾಖಲಾಗಿದೆ.

ಎಲ್ಲ ಕ್ಷೇತ್ರಗಳಲ್ಲಿ ‘ಜಾನಪದ ಉತ್ಸವ’: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಜಾನಪದ ಉತ್ಸವ ಹಮ್ಮಿಕೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ತಿಳಿಸಿದರು.

ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ವಾಜಪೇಯಿ ಆಟದ ಮೈದಾನದಲ್ಲಿ ಭಾನುವಾರ ನಡೆದ ಜಾನಪದ ಜಾತ್ರೆಯ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಜಾನಪದದಿಂದಾಗಿ ಕನ್ನಡಕ್ಕೆ ದೊಡ್ಡ ಶಕ್ತಿ ಇದೆ. ಜಾನಪದವನ್ನು ಉಳಿಸಿದರೆ ಕನ್ನಡದ ಶಕ್ತಿ ಹೆಚ್ಚುತ್ತಿದೆ. ಕೋವಿಡ್ ಕಾರಣದಿಂದ ಎರಡು ವರ್ಷ ಜಾನಪದ ಜಾತ್ರೆ ನಡೆಸಲು ಸಾಧ್ಯವಾಗಿರಲಿಲ್ಲ. ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಪುನಃ ಆರಂಭಿಸಲಾಗಿದೆ. ಎಲ್ಲ ಕ್ಷೇತ್ರಗಳಲ್ಲೂ ಕಾರ್ಯಕ್ರಮ ಆಯೋಜಿಸಲಾಗುವುದು’ ಎಂದರು.

‘ಕನ್ನಡ ಭಾರತದಲ್ಲಿ ಅತ್ಯಂತ ಪ್ರಾಚೀನ ಭಾಷೆ. ಕನ್ನಡ ಭಾಷೆಯ ಶಕ್ತಿಯನ್ನು ಕಸಿಯಲು ಯಾರಿಗೂ ಸಾಧ್ಯವಿಲ್ಲ. ಈ ಬಗ್ಗೆ ಯಾರಿಗೂ ಅನುಮಾನ ಬೇಡ. ಕನ್ನಡಕ್ಕೆ ಅಗ್ರಮಾನ್ಯ ಸ್ಥಾನ ದೊರಕುವುದನ್ನು ತಪ್ಪಿಸಲು ಯಾರಿಂದಲೂ ಆಗದು’ ಎಂದು ಹೇಳಿದರು.



ಪದ್ಮನಾಭನಗರದ ವಾಜಪೇಯಿ ಆಟದ ಮೈದಾನದಲ್ಲಿ ಭಾನುವಾರ ನಡೆದ ಜಾನಪದ ಜಾತ್ರೆಯಲ್ಲಿ ಕಲಾವಿದರು ಹೊತ್ತಿದ್ದ ಧ್ವಜಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಮಿಸಿದರು. ಕಂದಾಯ ಸಚಿವ ಆರ್‌. ಅಶೋಕ ಇದ್ದರು

‘ಇಡೀ ವಿಶ್ವದಲ್ಲಿ ಪ್ರತ್ಯೇಕ ಜಾನಪದ ವಿಶ್ವವಿದ್ಯಾಲಯ ಇರುವುದು ಕರ್ನಾಟಕದಲ್ಲಿ ಮಾತ್ರ. ಹಾವೇರಿಯ ಜಾನಪದ ವಿಶ್ವವಿದ್ಯಾಲಯ ಮತ್ತು ಹಂಪಿಯ ಕನ್ನಡ ವಿಶ್ವವಿದ್ಯಾಲಯಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು’ ಎಂದರು.

‘ನಾಗರೀಕತೆ ಮಾತ್ರ ಸಂಸ್ಕೃತಿ ಅಲ್ಲ. ನಾವು ಏನಾಗಿದ್ದೇವೆಯೋ ಅದು ಕೂಡ ಸಂಸ್ಕೃತಿ. ಜಾನಪದ ನಮ್ಮ ಸಂಸ್ಕೃತಿಯ ಭಾಗ. ಬೆಂಗಳೂರಿನಲ್ಲಿ ಜಾನಪದಕ್ಕೆ ಇಷ್ಟೊಂದು ದೊಡ್ಡ ಪ್ರಮಾಣದ ಅಭಿಮಾನ ಇರುವುದು ಸಂತೋಷದ ಸಂಗತಿ. ಇಂತಹ ಕಾರ್ಯಕ್ರಮಕ್ಕೆ ದೊಡ್ಡ ಸಂಖ್ಯೆಯ ಜನರು ಸೇರಿರುವುದು ಸಂತೋಷದ ಸಂಗತಿ’ ಎಂದು ಹೇಳಿದರು.

ಕಂದಾಯ ಸಚಿವ ಆರ್‌.ಅಶೋಕ, ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ.ಮೋಹನ್, ವಿಧಾನಸಭೆಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಸಚೇತಕ ಸತೀಶ್ ರೆಡ್ಡಿ, ಶಾಸಕರಾದ ಬಿ.ಎಸ್‌. ಯಡಿಯೂರಪ್ಪ, ರಾಜೂ ಗೌಡ, ವಿಧಾನ ಪರಿಷತ್ ಸದಸ್ಯೆ ಎಚ್‌.ಎಂ. ರಮೇಶ್ ಗೌಡ, ಮಾಜಿ ಶಾಸಕ ಜಗ್ಗೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಧಾನ ಕಾರ್ಯದರ್ಶಿ ಮಂಜುಳಾ ಉಪಸ್ಥಿತರಿದ್ದರು.

‘ಬೆಂಗಳೂರು ನಿಜವಾದ ಅಂತರರಾಷ್ಟ್ರೀಯ ನಗರ’

‘ಬೆಂಗಳೂರು ನಿಜವಾದ ಅಂತರರಾಷ್ಟ್ರೀಯ ನಗರ. ಜಗತ್ತಿನ ದೊಡ್ಡ ಉದ್ದಿಮೆಗಳೆಲ್ಲವೂ ಇಲ್ಲಿ ವಹಿವಾಟು ನಡೆಸಲು ಆಸಕ್ತಿ ತಳೆದಿವೆ. ರಾಜ್ಯದ ರಾಜಧಾನಿ ಈಗ ಜಗತ್ತಿನ ಆರ್ಥಿಕ ರಾಜಧಾನಿಯಾಗಿ ಬೆಳೆಯುತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘2021ನೇ ಆರ್ಥಿಕ ವರ್ಷದ ಮೂರು ತ್ರೈಮಾಸಿಕಗಳಲ್ಲಿ ಭಾರತಕ್ಕೆ ಬಂದ ವಿದೇಶಿ ನೇರ ಬಂಡವಾಳದಲ್ಲಿ ಶೇ 47ರಷ್ಟು ಕರ್ನಾಟಕಕ್ಕೆ ಬಂದಿದೆ. ಇದಕ್ಕೆ ಬೆಂಗಳೂರು ಕಾರಣ’ ಎಂದರು.

ಸುದ್ದಿ 2 ನಿಮಿಷ

ಪ್ರತಿ ಜಿಲ್ಲೆಯಲ್ಲೂ ಇಎಸ್‌ಐ ಆಸ್ಪತ್ರೆ: ಕೇಂದ್ರಕ್ಕೆ ಮನವಿ

ಬೆಂಗಳೂರು: ರಾಜ್ಯದ ಜಿಲ್ಲೆಗೊಂದು ಇಎಸ್‌ಐ ಆಸ್ಪತ್ರೆ ಆರಂಭಿಸಲು ಅನುಮತಿ ನೀಡಬೇಕು ಎಂದು ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಸಿಂಗ್ ಯಾದವ್ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದ ಹೆಬ್ಬಾರ್ ಈ ಮನವಿ ಸಲ್ಲಿಸಿದ್ದಾರೆ.

ರಾಜ್ಯದ ವಿವಿಧೆಡೆ 69 ಚಿಕಿತ್ಸಾಲಯ ತೆರೆಯಲು ಅನುಮತಿ ಕೋರಲಾಗಿದೆ. ಕೇಂದ್ರ ಸರ್ಕಾರ 19 ಚಿಕಿತ್ಸಾಲಯ ಆರಂಭಿಸಲು ಅನುಮತಿ ನೀಡಿದ್ದು, ಉಳಿದ 50 ಚಿಕಿತ್ಸಾಲಯ ಆರಂಭಿಸಲು ಆದಷ್ಟು ಬೇಗ ಅನುಮತಿ ನೀಡಬೇಕು. ಈಗಿರುವ ಇಎಸ್‌ಐ ಆಸ್ಪತ್ರೆಗಳಿಗೆ ಸಿಬ್ಬಂದಿ ಮತ್ತು ಉಪಕರಣಗಳನ್ನು ನೀಡುವ ಮೂಲಕ ಶಕ್ತಿ ತುಂಬಬೇಕು ಎಂದು ಮನವಿ ಮಾಡಿದರು.

ಜಿಲ್ಲೆಗಳಲ್ಲಿ ಇರುವ ಚಿಕಿತ್ಸಾಲಯಗಳನ್ನು ಆರೋಗ್ಯ ಕಲ್ಯಾಣ ಕೇಂದ್ರಗಳಾಗಿ ಪರಿವರ್ತಿಸಬೇಕು. ಈ ಕಲ್ಯಾಣ ಕೇಂದ್ರಗಳಲ್ಲಿ ಇಸಿಜಿ, ಮೈನರ್ ಓಟಿ, ಆಕ್ಸಿಜನ್ ಸೇವೆಗಳ ಜತೆಗೆ ಅಗತ್ಯ ವೈದ್ಯ ಸಿಬ್ಬಂದಿಯನ್ನೂ ಒದಗಿಸಬೇಕು. ಇದರಿಂದಾಗಿ ರೋಗಿಗಳನ್ನು ಇತರ ಆಸ್ಪತ್ರೆಗಳಿಗೆ ಕಳುಹಿಸುವ ಪರಿಪಾಠವನ್ನು ತಡೆಯಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಈಗ ಏಳು ಇಎಸ್‌ಐ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಿಗೆ ಎಂಐಸಿಯು (ಮೆಡಿಕಲ್ ಐಸಿಯು) ವ್ಯವಸ್ಥೆ ಮಾಡಬೇಕು ಮತ್ತು ರಾಜ್ಯದಲ್ಲಿರುವ ವಿಮಾ ಚಿಕಿತ್ಸಾಲಯಗಳಿಗೆ ಸಮರ್ಪಕ ಕಟ್ಟಡ ಇಲ್ಲ. ಹೀಗಾಗಿ ಈ ಚಿಕಿತ್ಸಾಲಯಗಳಿಗೆ ಆಧುನಿಕ ವ್ಯವಸ್ಥೆಗಳೊಂದಿಗೆ ಸ್ವಂತ ಕಟ್ಟಡ ಒದಗಿಸಲು ಕ್ರಮಕೈಗೊಳ್ಳಬೇಕು ಎಂದೂ ಆಗ್ರಹಿಸಿದರು.



‘ಅಡುಗೆ ಸಹಾಯಕರಿಗೆ ಕಡ್ಡಾಯ ಬಿಡುಗಡೆ ಬೇಡ’

ಬೆಂಗಳೂರು: ಶಾಲೆಗಳಲ್ಲಿನ ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ 60 ವರ್ಷ ಮೀರಿದ ಅಡುಗೆ ಸಹಾಯಕರನ್ನು ಕಡ್ಡಾಯವಾಗಿ ಬಿಡುಗಡೆ ಮಾಡಬಾರದು ಎಂದು ಶಾಸಕ ಎಸ್‌.ಸುರೇಶ್ ಕುಮಾರ್ ಒತ್ತಾಯಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು, ‘ಅಡುಗೆ ಸಹಾಯಕರನ್ನು ನೌಕರರ ನಿವೃತ್ತಿ ವಯೋಮಾನಕ್ಕೆ ಹೋಲಿಸುವುದು ಸರಿಯಲ್ಲ. ಸ್ಥಳೀಯ ಅಗತ್ಯ ಆಧರಿಸಿ ಶಾಲಾಮಟ್ಟದಲ್ಲಿ ತೀರ್ಮಾನ ತೆಗೆದುಕೊಳ್ಳಲು ಅವಕಾಶ ನೀಡಬೇಕು’ ಎಂದು ಕೋರಿದ್ದಾರೆ.

‘ಶಿಕ್ಷಣ ಇಲಾಖೆ ಆಯುಕ್ತರು ಈ ಬಗ್ಗೆ ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ ಪಡೆದು ಮುಖ್ಯೋಪಾಧ್ಯಾಯರ ವಿವೇಚನೆಗೆ ಇದನ್ನು ಬಿಡುವ ಕುರಿತು ಪರಿಷ್ಕೃತ ಸುತ್ತೋಲೆ ಹೊರಡಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ನಿವೃತ್ತಿ ವೇಳೆ ಅಡುಗೆ ಸಹಾಯಕರಿಗೆ ನೆರವಾಗಲು ಸರ್ಕಾರವು ಒಂದು ಇಡುಗಂಟು ನೀಡಬೇಕು. ಶಾಲಾಮಟ್ಟದಲ್ಲಿ ಘನತೆಯಿಂದ ಬೀಳ್ಕೊಡುಗೆ ನೀಡುವಂತೆಯೂ ಸುತ್ತೋಲೆಯನ್ನು ಹೊರಡಿಸಬೇಕು’ ಎಂದು ಕೋರಿದ್ದಾರೆ.

ನಗರದಲ್ಲಿ ಇಂದು

ಶಿವಮೂರ್ತಿ ಮುರುಘಾ ಶರಣರ ‘ಸಮಾನತೆಯ ದಿನ’: ಬೆಳಿಗ್ಗೆ 7ಕ್ಕೆ ಸಹಜ ಶಿವಯೋಗ, ಬೆಳಿಗ್ಗೆ 9ಕ್ಕೆ ಉದ್ಘಾಟನೆ ಮತ್ತು ಗಣಮೇಳದ ಮಹಾಸಂಪುಟದ ಬಿಡುಗಡೆ-ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾನ್ನಿಧ್ಯ-ಸಿದ್ಧಲಿಂಗ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಅತಿಥಿಗಳು-ಎಚ್‌.ಡಿ.ಕುಮಾರಸ್ವಾಮಿ, ಗೋವಿಂದ ಕಾರಜೋಳ, ಡಿ.ಕೆ.ಶಿವಕುಮಾರ್, ವಿ.ಸೋಮಣ್ಣ, ಬಿ.ವೈ.ವಿಜಯೇಂದ್ರ, ಮಲ್ಲೇಪುರಂ ಜಿ.ವೆಂಕಟೇಶ, ಆಯೋಜನೆ-ಪರಿವರ್ತನಪರ ಧರ್ಮ ಸಂಸತ್, ಸ್ಥಳ-ವೈಟ್ ಪೆಟಲ್ಸ್, ಅರಮನೆ ಮೈದಾನ,

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ-ಅಂಜಲಿ ಶ್ರೀರಾಮ್, ಆಯೋಜನೆ-ಶ್ರೀವಾಣಿ ಕಲಾ ಕೇಂದ್ರ, ಸ್ಥಳ-ವಾಣಿ ವಿದ್ಯಾ ಕೇಂದ್ರ, ಬಸವೇಶ್ವರನಗರ, ಸಂಜೆ 6.30

ಬೆಂಗಳೂರು ನಗರ ವಿಶ್ವವಿದ್ಯಾಲಯದ ಘಟಿಕೋತ್ಸವ: ಅಧ್ಯಕ್ಷತೆ-ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯ ಭಾಷಣ-ಕೆ.ಕಸ್ತೂರಿ ರಂಗನ್, ಅತಿಥಿ-ಸಚಿವ ಸಿ.ಎನ್‌.ಅಶ್ವತ್ಥನಾರಾಯಣ, ವರದಿ ಮಂಡನೆ-ಕುಲಪತಿ ಲಿಂಗರಾಜ ಗಾಂಧಿ, ಸ್ಥಳ-ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

84ನೇ ಶ್ರೀರಾಮನವಮಿ ಉತ್ಸವ ಮತ್ತು ಅಂತರರಾಷ್ಟ್ರೀಯ ಸಂಗೀತೋತ್ಸವ: ಕರ್ನಾಟಕ ಸಂಗೀತ ಕಾರ್ಯಕ್ರಮ-ವಿನಯ್ ಶರ್ವಾ, ಜಿ.ಯು.ಗಣೇಶ್ ಪ್ರಸಾದ್, ಅರ್ಜುನ್ ಕುಮಾರ್, ಭಾರದ್ವಾಜ್ ಶಥವಲ್ಲಿ, ಆಯೋಜನೆ-ಶ್ರೀರಾಮಸೇವಾ ಮಂಡಳಿಯ ರಾಮನವಮಿ ಉತ್ಸವ ಟ್ರಸ್ಟ್, ಸ್ಥಳ-ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಮೈದಾನ, ಸಂಜೆ 5ರಿಂದ

ನಿಧನ ವಾರ್ತೆ

ಎನ್‌.ಶಿವಕುಮಾರ್



ಬೆಂಗಳೂರು: ಆರ್‌.ಟಿ.ನಗರದ ನಿವಾಸಿ, ಸಣ್ಣ ನೀರಾವರಿ ಇಲಾಖೆಯ ನಿವೃತ್ತ ಎಇಇ ಎನ್‌.ಶಿವಕುಮಾರ್ (78) ಅವರು ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಇದ್ದಾರೆ. ಸೋಮವಾರ ಬೆಳಿಗ್ಗೆ ಚಾಮರಾಜಪೇಟೆಯ ವೀರಶೈವ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೊರೆಸ್ವಾಮಿ ಜಯಂತಿ: ಸೌಹಾರ್ದ ಸತ್ಯಾಗ್ರಹ

ರಾಜ್ಯದಲ್ಲಿ ಜನರ ಒಡೆಯುವ ಕೆಲಸ ಶುರು: ಪ್ರತಿಭಟನಕಾರರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಹೋರಾಟಗಾರ ದಿವಂಗತ ಎಚ್‌.ಎಸ್‌.ದೊರೆಸ್ವಾಮಿ ಅವರ 104ನೇ ಜನ್ಮದಿನಾಚರಣೆ ಅಂಗವಾಗಿ ನಗರದಲ್ಲಿ ಭಾನುವಾರ ‘ಸೌಹಾರ್ದ ಸತ್ಯಾಗ್ರಹ’ ನಡೆಯಿತು.

ಎಚ್‌.ಎಸ್‌.ದೊರೆಸ್ವಾಮಿ ಜನ್ಮ ದಿನಾಚರಣೆ ಸಮಿತಿ, ಕರ್ನಾಟಕ ಪ್ರಜಾಧಿಕಾರ ಹೋರಾಟ ಸಮಿತಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಹಾಗೂ ಇತರೆ ಸಂಘಟನೆಗಳ ನೇತೃತ್ವದಲ್ಲಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿತ್ತು.

ವಿಧಾನಸೌಧ ಎದುರಿನ ಶಾಂತವೇರಿ ಗೋಪಾಲಗೌಡ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವರು ರಾಷ್ಟ್ರಧ್ವಜ ಹಿಡಿದಿದ್ದರು.



ಸೌಹಾರ್ದ ಸತ್ಯಾಗ್ರಹ ಪ್ರಯುಕ್ತ ವಿಧಾನಸೌಧ ಸಮೀಪದ ಶಾಂತವೇರಿ ಗೋಪಾಲಗೌಡ ವೃತ್ತದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ಭಾನುವಾರ ಮೆರವಣಿಗೆ ನಡೆಸಲಾಯಿತು

‘ಸ್ವಾತಂತ್ರ್ಯ ರಕ್ಷಣೆಗಾಗಿ ಸ್ವಸ್ಥ ಸೌಹಾರ್ದ ಸಮಾಜಕ್ಕಾಗಿ ಹೆಮ್ಮೆಯ ಹೆಜ್ಜೆ’ ಎಂಬ ಬರಹವುಳ್ಳ ಫಲಕಗಳನ್ನ ಪ್ರದರ್ಶಿಸಿದರು. ನಂತರ ಸ್ವಾತಂತ್ರ್ಯ ಉದ್ಯಾನದಲ್ಲಿ ಸತ್ಯಾಗ್ರಹ ಮುಂದುವರಿಯಿತು.

ಲೇಖಕಿ ಬಿ.ಟಿ.ಲಲಿತಾ ನಾಯಕ್, ‘ಸಮಾಜದ ಸೌಹಾರ್ದ ಹಾಗೂ ಶಾಂತಿಗೆ ಧಕ್ಕೆ ಉಂಟು ಮಾಡುವವರನ್ನು ದಿಟ್ಟತನದಿಂದ ಎದುರಿಸಬೇಕಾಗಿದೆ. ಸೌಹಾರ್ದವನ್ನು ಕಾಪಾಡಲು ಕಟಿಬದ್ಧರಾಗಬೇಕಿದೆ’ ಎಂದರು.

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಕಾರ್ಯದರ್ಶಿ ಈ.ಬಸವರಾಜು, ‘ಸೌಹಾರ್ದದಿಂದ ಇರುವ ಜನರನ್ನು ಒಡೆಯುವ ಕೆಲಸ ರಾಜ್ಯದಲ್ಲಿ ಪ್ರಾರಂಭವಾಗಿದೆ. ಇದು ಎಲ್ಲಿಗೆ ಹೋಗಿ ತಲುಪುತ್ತದೆಯೋ ಎಂದು ತಿಳಿಯುತ್ತಿಲ್ಲ’ ಎಂದು ಕಳವಳ ವ್ಯಕ್ತಪಡಿಸಿದರು.

ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದವರು ಸೌಹಾರ್ದದ ಸಂದೇಶ ಸಾರುವ ಕವನ ವಾಚಿಸಿದರು. ಹಾಡು ಹಾಡಿದರು. ಸಾಹಿತಿ ಕೆ. ಶರೀಫಾ, ವಿಜಯಮ್ಮ, ಎಚ್‌.ಕೆ. ವಿವೇಕಾನಂದ ಹಾಗೂ ಇತರರು ಭಾಗವಹಿಸಿದ್ದರು.

ಲೇಖಕಿ ಡಾ.ವಸುಂಧರಾ ಭೂಪತಿ ಆಶಯ • ನಾಲ್ಕು ಕೃತಿಗಳ ಲೋಕಾರ್ಪಣೆ

‘ಬದುಕು ಪ್ರೀತಿಸುವ ಕೃತಿಗಳು ಹೆಚ್ಚು ಬರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನುಷ್ಯ ಸಂಬಂಧಗಳು ಹದಗೆಡುತ್ತಿರುವ ಪ್ರಸ್ತುತ ಕಾಲದಲ್ಲಿ ಪಂಪ ಮಹಾಕವಿಯ 'ಮನುಜ ಕುಲಂ, ತಾನೊಂದೆ ವಲಂ' ಎಂಬ ಮಾತು ಬದುಕಿನ ದಾರಿದೀಪವಾಗಬೇಕು’ ಎಂದು ಲೇಖಕಿ ಡಾ.ವಸುಂಧರಾ ಭೂಪತಿ ಅಭಿಪ್ರಾಯಪಟ್ಟರು.

ಬೆನಕ ಬುಕ್ಸ್ ಬ್ಯಾಂಕ್ ಯಳಗಲ್ಲು (ಕೊಡೂರು) ಹಾಗೂ ಬೆಂಗಳೂರಿನ ‘ಪ್ರಾಫಿಟ್ ಪ್ಲಸ್’ ಮಾಸಪತ್ರಿಕೆ ಸಹಯೋಗದಲ್ಲಿ ಭಾನುವಾರ ಲೇಖಕಿ ಸುಧಾ ಶರ್ಮಾ ಚವತ್ತಿ ಅವರ ‘ನಮ್ಮೊಳಗೆ ನಾವು’, ಪತ್ರಕರ್ತೆ ಮಾಲತಿ ಭಟ್ ಅವರ ‘ದೀಪದ ಮಲ್ಲಿಯರು’, ಕವಯಿತ್ರಿ ಶೋಭಾ ಹೆಗಡೆ ಅವರ ‘ಅವಳೆಂಬ ಸುಗಂಧ’ ಹಾಗೂ ಬರಹಗಾರ್ತಿ ಸಿ.ಚಿತ್ರ ಅವರ ‘ಅನಾಮಿಕಳ ಅಂತರಂಗ’ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸಮಾಜ ಮತ್ತು ಕುಟುಂಬಗಳು ವಿಘಟನೆಗೊಳ್ಳುತ್ತಿರುವ ಸಂದರ್ಭದಲ್ಲಿ ಸೌಹಾರ್ದ ಮುಖ್ಯ. ಸಾಮರಸ್ಯಕ್ಕೆ ಧಕ್ಕೆಯಾಗುತ್ತಿರುವ ಇಂತಹ ಸಂದರ್ಭದಲ್ಲಿ ಬದುಕಿನ ಪ್ರೀತಿ ಹೆಚ್ಚಿಸುವ ರೀತಿಯಲ್ಲಿ ಈ ನಾಲ್ಕು ಕೃತಿಗಳು ರಚನೆಯಾಗಿವೆ’ ಎಂದು ವಿಶ್ಲೇಷಿಸಿದರು.

‘ಪ್ರಜಾವಾಣಿ'ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ‘ಸುತ್ತಲಿನ ವಿದ್ಯಮಾನಗಳಗಿಂತಲೂ ನಮ್ಮೊಳಗೆ ನಾವು ಮಾತನಾಡುವ ಅಗತ್ಯವಿದೆ. ಎಲ್ಲವೂ ನಮ್ಮದು ಎನ್ನುವುದು ಒಳ್ಳೆಯದು. ಆದರೆ, ಅದು ಸಕಾರಣಕ್ಕೆ ಇರಬೇಕು. ಹಿಂದೆ ಕೂಡು ಕುಟುಂಬಗಳಿದ್ದವು. ಅತ್ಯಂತ ಸಹನೆ, ಸಹಕಾರ, ಸಹಬಾಳ್ವೆ ಕಲಿಸುತ್ತಿದ್ದವು. ವ್ಯಕ್ತಿಯ ಕೋಪ-ತಾಪ-ಅವಸರಗಳನ್ನು ನಿಯಂತ್ರಿಸುತ್ತಿದ್ದವು. ಹೀಗಾಗಿ, ಈ ವ್ಯವಸ್ಥೆ ಮಹತ್ವ ಪಡೆದಿತ್ತು. ಇಂದು ಪರಿಸ್ಥಿತಿ ಬದಲಾಗಿದೆ’ ಎಂದರು.



‘ನಮ್ಮೊಳಗೆ ನಾವು’, ‘ದೀಪದ ಮಲ್ಲಿಯರು’, ‘ಅವಳೆಂಬ ಸುಗಂಧ’ ಹಾಗೂ ‘ಅನಾಮಿಕಳ ಅಂತರಂಗ’ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಲೇಖಕಿ ಸಿ.ಚಿತ್ರ ಮತ್ತು ಕವಯಿತ್ರಿ ಶೋಭಾ ಹೆಗಡೆ, ಪತ್ರಕರ್ತೆ ಮಾಲತಿ ಭಟ್, ಲೇಖಕಿ ಶಾಂತಾ ನಾಗರಾಜ್, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಲೇಖಕಿ ವಸುಂಧರಾ ಭೂಪತಿ, ಹಾಸ್ಯ ಸಾಹಿತಿ ಭುವನೇಶ್ವರಿ ಹೆಗಡೆ ಹಾಗೂ ಲೇಖಕಿ ಸುಧಾ ಶರ್ಮಾ ಚವತ್ತಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಆಪ್ತಸಮಾಲೋಚಕಿ ಡಾ. ಶಾಂತಾ ನಾಗರಾಜ್, ‘ಖಿನ್ನತೆಯಿಂದ ಬಳಲುವವರ ಸಂಖ್ಯೆ ಇಂದು ಹೆಚ್ಚಾಗುತ್ತಿದೆ. ದೇಶದಲ್ಲಿ ಸುಮಾರು 30 ಕೋಟಿ ಮಂದಿ ವಿವಿಧ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಆದರೆ, ಇವರು ಮಾನಸಿಕ ರೋಗಿಗಳಲ್ಲ. ಪ್ರತಿ ಮೂವರಲ್ಲಿ ಒಬ್ಬರಿಗೆ ಭಾವನೆಗಳ ಅಭಿವ್ಯಕ್ತಿ ಸಾಧ್ಯವಾಗುವುದಿಲ್ಲ. ಇಂದು ಜನಸಂಖ್ಯೆಗೆ ಅಗತ್ಯವಿರುವಷ್ಟು ಮನೋವೈದ್ಯರಿಲ್ಲ. 10 ಸಾವಿರ ಮಂದಿಗೆ ಒಬ್ಬ ಮನೋವೈದ್ಯರಿದ್ದಾರೆ’ ಎಂದು ವಿವರಿಸಿದರು.

ಲೇಖಕಿ ಭುವನೇಶ್ವರಿ ಹೆಗಡೆ, ‘ಸ್ತ್ರೀವಾದವನ್ನು ಕೇಂದ್ರೀಕರಿಸಿ ಮಾನವೀಯತೆಯನ್ನು ವಿಜೃಂಭಿಸುವ ಬರಹಗಳನ್ನು ಈ ನಾಲ್ಕು ಪುಸ್ತಕಗಳಲ್ಲಿ ಕಾಣಬಹುದು’ ಎಂದರು.

ಕೃತಿಗಳ ಲೇಖಕಿಯರಾದ ಸುಧಾ ಶರ್ಮಾ ಚವತ್ತಿ, ಶೋಭಾ ಹೆಗಡೆ, ಸಿ. ಚಿತ್ರ ಹಾಗೂ ಮಾಲತಿ ಭಟ್ ಇದ್ದರು.

ಪುಸ್ತಕಗಳ ಪರಿಚಯ

ಹೆಸರು: ‘ನಮ್ಮೊಳಗೆ ನಾವು’
ಲೇಖಕಿ: ಸುಧಾ ಶರ್ಮಾ, ಚವತ್ತಿ
ಪುಟ: 144
ಬೆಲೆ: ₹130

ಪುಸ್ತಕ: ‘ದೀಪದ ಮಲ್ಲಿಯರು’ (ಬದುಕು ಬೆಳಗಿಸಿದ ಸಾಧಕಿಯರ ಕಥೆಗಳು)
ಲೇಖಕಿ: ಮಾಲತಿ ಭಟ್
ಪುಟಗಳು: 140
ಬೆಲೆ: ₹130

ಪುಸ್ತಕ: ‘ಅವಳೆಂಬ ಸುಗಂಧ’
ಲೇಖಕಿ: ಶೋಭಾ ಹೆಗಡೆ
ಪುಟಗಳು: 172
ಬೆಲೆ: ₹160

ಪುಸ್ತಕ: ‘ಅನಾಮಿಕಳ ಅಂತರಂಗ’
ಲೇಖಕಿ: ಸಿ. ಚಿತ್ರ
ಪುಟಗಳು:140
ಬೆಲೆ: ₹130
ಈ ನಾಲ್ಕು ಕೃತಿಗಳ ಪ್ರಕಾಶನ: ಬೆನಕ ಬುಕ್ಸ್ ಬ್ಯಾಂಕ್

ಅಂಬೇಡ್ಕರ್ ಹಬ್ಬದ ದಿನ 'ಬೋಧಿವೃಕ್ಷ' ಹಾಗೂ 'ಬೋಧಿವರ್ಧನ' ಪ್ರಶಸ್ತಿ ಪ್ರದಾನ

ಆರು ಮಂದಿಗೆ ಸ್ಫೂರ್ತಿಧಾಮ ಪ್ರಶಸ್ತಿ

ಪ್ರಜಾವಾಣಿ ವಾರ್ತೆ


ಡಾ. ಶಿವ ಪ್ರವೀಣ್ ಕುಮಾರ್


ಗುರುಪ್ರಸಾದ್ ಕೆರಗೋಡು


ಡಿ. ನಾಗಲಕ್ಷ್ಮಿ


ಪದ್ಮಾಲಯ ನಾಗರಾಜ್


ಡಾ. ಮಹೇಂದ್ರ ಕುಮಾರ್


ಮೇರಿ ಲೋಬೋ

ಬೆಂಗಳೂರು: 'ಅಂಬೇಡ್ಕರ್ ಹಬ್ಬ'ದ ಅಂಗವಾಗಿ ಸ್ಫೂರ್ತಿಧಾಮ ನೀಡುವ 2022ನೇ ಸಾಲಿನ 'ಬೋಧಿವೃಕ್ಷ' ಹಾಗೂ 'ಬೋಧಿವರ್ಧನ' ಪ್ರಶಸ್ತಿಗಳಿಗೆ ಆರು ಮಂದಿಯನ್ನು ಆಯ್ಕೆ ಮಾಡಲಾಗಿದೆ.

ಹದಿನಾಲ್ಕು ವರ್ಷಗಳಿಂದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು 'ಅಂಬೇಡ್ಕರ್ ಹಬ್ಬ'ವಾಗಿ ಆಚರಿಸಿಕೊಂಡು ಬರುತ್ತಿರುವ ಸ್ಫೂರ್ತಿಧಾಮವು, ತಳ ಸಮುದಾಯಗಳ ಏಳ್ಗೆಗಾಗಿ ದುಡಿದವರನ್ನು ಗುರುತಿಸಿ, ಗೌರವಿಸುವ ಸಲುವಾಗಿ 'ಬೋಧಿವೃಕ್ಷ' ಹೆಸರಿನ ಒಂದು ರಾಷ್ಟ್ರ ಪ್ರಶಸ್ತಿ ಮತ್ತು 'ಬೋಧಿವರ್ಧನ' ಹೆಸರಿನಲ್ಲಿ ಐದು ರಾಜ್ಯ ಪ್ರಶಸ್ತಿಗಳನ್ನು ನೀಡುತ್ತಿದೆ.

'ಬೋಧಿವೃಕ್ಷ'ವು ಪ್ರಶಸ್ತಿ ಫಲಕ ಮತ್ತು ₹1 ಲಕ್ಷ ನಗದು ಹಾಗೂ 'ಬೋಧಿವರ್ಧನ'ವು ಪ್ರಶಸ್ತಿ ಫಲಕ ಮತ್ತು ತಲಾ ₹25 ಸಾವಿರ ನಗದು ಒಳಗೊಂಡಿದೆ. ಏ.14ರಂದು ಮಾಗಡಿ ರಸ್ತೆಯಲ್ಲಿನ ಸ್ಫೂರ್ತಿಧಾಮದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

'ಬೋಧಿವೃಕ್ಷ' ಪ್ರಶಸ್ತಿಗೆ ತೆಲಂಗಾಣದ ಡಾ.ರಾಳ್ಳಪಲ್ಲಿ ಶಿವ ಪ್ರವೀಣ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರವೀಣ್ ಕುಮಾರ್ ಅವರು ತೆಲಂಗಾಣದ ತಳ ಸಮುದಾಯಗಳಿಗೆ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಮೂಲಕ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶ್ರಮಿಸುತ್ತಿದ್ದಾರೆ. 2 ಲಕ್ಷಕ್ಕೂ ಹೆಚ್ಚು ಕೂಲಿ ಕಾರ್ಮಿಕರ ಮಕ್ಕಳ ಬದುಕಿನಲ್ಲಿ ಆಮೂಲಾಗ್ರ ಪರಿವರ್ತನೆ ತಂದಿದ್ದಾರೆ. ಇವರ ಪ್ರಯತ್ನದಿಂದ, ಕಳೆದ 5 ವರ್ಷಗಳಲ್ಲಿ 325 ವಿದ್ಯಾರ್ಥಿಗಳು ವೈದ್ಯಕೀಯ ಕಾಲೇಜುಗಳಲ್ಲಿ, 220 ವಿದ್ಯಾರ್ಥಿಗಳು ಐಐಟಿ ಮತ್ತು ಎನ್ಐಟಿಗಳಲ್ಲಿ ಹಾಗೂ ಸಾವಿರಾರು ವಿದ್ಯಾರ್ಥಿಗಳು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಪ್ರವೀಣ್ ಕುಮಾರ್ ಅವರು ಐಪಿಎಸ್ ಅಧಿಕಾರಿಯಾಗಿದ್ದವರು.

'ಬೋಧಿವರ್ಧನ' ಪ್ರಶಸ್ತಿಗೆ ಗುರುಪ್ರಸಾದ್ ಕೆರಗೋಡು, ಡಿ.ನಾಗಲಕ್ಷ್ಮಿ, ಪದ್ಮಾಲಯ ನಾಗರಾಜ್, ಡಾ. ಬಿ.ಪಿ. ಮಹೇಂದ್ರ ಕುಮಾರ್ ಮತ್ತು ಮೇರಿ ಲೋಬೋ ಆಯ್ಕೆಯಾಗಿದ್ದಾರೆ.

ಜೆಎನ್‌ಯುನಲ್ಲಿ ಗುಂಪು ಘರ್ಷಣೆ

ನವದೆಹಲಿ (ಪಿಟಿಐ): ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕಾವೇರಿ ಹಾಸ್ಟೆಲ್‌ನಲ್ಲಿ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಎಬಿವಿಪಿ ಸದಸ್ಯರು ಹಾಸ್ಟೆಲ್‌ನಲ್ಲಿ ಮಾಂಸಾಹಾರ ಸೇವಿಸದಂತೆ ವಿದ್ಯಾರ್ಥಿಗಳನ್ನು ತಡೆದು ಹಿಂಸಾತ್ಮಕ ವಾತಾವರಣ ಸೃಷ್ಟಿಸಿದ್ದಾರೆ ಎಂದು ವಿ.ವಿ.ಯ ವಿದ್ಯಾರ್ಥಿಸಂಘ (ಜೆಎನ್‌ಯುಎಸ್‌ಯು) ಆರೋಪಿಸಿದೆ. ಆದರೆ ಎಬಿವಿಪಿ ಈ ಆರೋಪವನ್ನು ನಿರಾಕರಿಸಿದೆ. ರಾಮ ನವಮಿ ನಿಮಿತ್ತ ಹಾಸ್ಟೆಲ್‌ನಲ್ಲಿ ಏರ್ಪಡಿಸಿದ್ದ ಪೂಜೆಗೆ ಎಡ ಪಂಥೀಯರು ಅಡ್ಡಿಪಡಿಸಿದ್ದಾರೆ ಎಂದು ಆಪಾದಿಸಿದೆ.

'ಎರಡೂ ಗುಂಪಿನವರು ಪರಸ್ಪರ ವಿರುದ್ಧ ಕಲ್ಲು ತೂರಾಟ ನಡೆಸಿದರು. ಕೆಲ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಈಗ ಪರಿಸ್ಥಿತಿ ನಿಯಂತ್ರಣದಲ್ಲಿದೆ' ಉಪ ಪೊಲೀಸ್ ಆಯುಕ್ತ (ನೈರುತ್ಯ) ಮನೋಜ್ ಸಿ. ತಿಳಿಸಿದ್ದಾರೆ.

ಡ್ರಗ್ಸ್ ಮಾರಾಟ: ಸೆಕ್ಯುರಿಟಿ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಲೋಕೇಂದ್ರನಾಥ್ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಬಂಧಿತನು ನಗರದಲ್ಲಿ ಸೆಕ್ಯುರಿಟಿ ಸಿಬ್ಬಂದಿ ಆಗಿದ್ದ. ಪೆಡ್ಲರ್‌ಗಳಿಂದ ಮಾದಕ ವಸ್ತು ಖರೀದಿಸಿ ತಂದು ಹೆಚ್ಚಿನ ದರಕ್ಕೆ ಮಾರುತ್ತಿದ್ದ. ಬಾಗಲೂರು ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದಾಗ ಬಂಧಿಸ ಲಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಯಿಂದ ₹ 3 ಲಕ್ಷ ಮೌಲ್ಯದ 10 ಗ್ರಾಂ ತೂಕದ ಎಂಡಿಎಂಎ ಮಾತ್ರೆಗಳು, 80 ಗ್ರಾಂ ಚರಸ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

'ಡ್ರಗ್ಸ್ ಎಲ್ಲಿ ಸಿಗುತ್ತದೆ? ದರವೆಷ್ಟು? ಎಂಬುದನ್ನು ಆರೋಪಿ ಗೂಗಲ್ ಜಾಲತಾಣದಲ್ಲಿ ಹುಡುಕಾಡಿ ತಿಳಿದುಕೊಂಡಿದ್ದ. ಪ್ರತಿ ಗ್ರಾಂ ಡ್ರಗ್ಸ್‌ಗೆ ₹ 5 ಸಾವಿರದಿಂದ ₹ 8 ಸಾವಿರ ಪಡೆಯುತ್ತಿದ್ದ. ಈತನ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ ಬಾಗಲೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಅವರು ಹೇಳಿದರು.

ಅಪರಾಧ ಸುದ್ದಿ

ಕಾರುಗಳು ಡಿಕ್ಕಿ: ಒಬ್ಬ ಸಾವು, ನಾಲ್ವರಿಗೆ ಗಾಯ

ವಿಟ್ಲ (ದಕ್ಷಿಣ ಕನ್ನಡ): ಮಾಣಿ ಸಮೀಪ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಕಾರುಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಬೆಂಗಳೂರು ಕುರುಬಹಳ್ಳಿ ನಿವಾಸಿ ಲಕ್ಷ್ಮಣ ಆಚಾರಿ (65) ಮೃತಪಟ್ಟಿದ್ದು, ಕಾರು ಚಾಲಕ ಸೇರಿ ನಾಲ್ವರು ಗಾಯಗೊಂಡಿದ್ದಾರೆ.

ಲಕ್ಷ್ಮಣ ಆಚಾರಿ ಅವರು ಪುತ್ರಿಯ ವಿವಾಹ ಆಮಂತ್ರಣ ನೀಡಲು ಬರುತ್ತಿದ್ದರು. ರಾಷ್ಟ್ರೀಯ ಹೆದ್ದಾರಿಯ ಬುಡೋಳಿ ಎಂಬಲ್ಲಿ ಅಪಘಾತ ಸಂಭವಿಸಿದ್ದು, ವಿಟ್ಲ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಲಾಟೆ: ಚೂಪಾದ ಆಯುಧದಿಂದ ಹಲ್ಲೆ

ಬೆಂಗಳೂರು: ನಗರದ ಗೂಡ್‌ಶೆಡ್ ರಸ್ತೆಯಲ್ಲಿ ಗಲಾಟೆ ನಡೆದಿದ್ದು, ಸಂದೀಪ್ ಎಂಬುವರಿಗೆ ಹರಿತವಾದ ಆಯುಧದಿಂದ ಇರಿಯಲಾಗಿದೆ. ಈ ಬಗ್ಗೆ ಕಾಟನ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಭಾನುವಾರ ರಾತ್ರಿ ಗಲಾಟೆ ನಡೆದಿದೆ. ಸಂದೀಪ್ ಅವರ ಕೈ ಹಾಗೂ ಎದೆ ಭಾಗಕ್ಕೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಹೇಳಿಕೆ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸಂದೀಪ್ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಸುನೀಲ್ ಹಾಗೂ ಸೂರ್ಯ ಎಂಬುವರನ್ನು ಬಂಧಿಸಲಾಗಿದೆ. ಅವರ ಬಳಿಯ ಆಯುಧ ಜಪ್ತಿ ಮಾಡಲಾಗಿದೆ. ಗಲಾಟೆಗೆ ಕಾರಣವೇನು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಹೇಳಿದರು.

'ವಿಷ್ಣು ಸ್ತಂಭ' ಕುತುಬ್ ಮಿನಾರ್ ಆಗಿದೆ: ವಿಎಚ್‌ಪಿ

ನವದೆಹಲಿ (ಪಿಟಿಐ): 'ಕುತುಬ್ ಮಿನಾರ್ ಈ ಮೊದಲು ವಿಷ್ಣು ಸ್ತಂಭವಾಗಿತ್ತು' ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ರಾಷ್ಟ್ರೀಯ ವಕ್ತಾರ ವಿನೋದ್ ಬನ್ಸಾಲ್ ಭಾನುವಾರ ಹೇಳಿದ್ದಾರೆ.

'ವಿಷ್ಣುಸ್ತಂಭದ ಕೆಲ ಭಾಗಗಳನ್ನು ಮುಸ್ಲಿಂ ಆಡಳಿತಗಾರ ಮರುನಿರ್ಮಾಣ ಮಾಡಿದ್ದಾರೆ. ಹಿಂದೂ ಅರಸನ ಅವಧಿಯಲ್ಲಿ 73 ಮೀ ಎತ್ತರದ ಸ್ತಂಭವನ್ನು ವಿಷ್ಣು ದೇವಾಲಯದ ಮೇಲೆ ನಿರ್ಮಿಸಲಾಗಿತ್ತು' ಎಂದು ಅವರು ಪ್ರತಿಪಾದಿಸಿದ್ದಾರೆ. 'ಮುಸ್ಲಿಂ ಆಡಳಿತ ಬಂದ ನಂತರ ವಿಷ್ಣು ಸ್ತಂಭದ ಅಳಿದುಳಿದ ಭಾಗವನ್ನು ಮರುನಿರ್ಮಾಣ ಮಾಡಿ ಅದಕ್ಕೆ ಕುವ್ವಾತ್-ಉಲ್-ಇಸ್ಲಾಂ (ಇಸ್ಲಾಮಿನ ಶಕ್ತಿ) ಎಂದು ಮರುನಾಮಕರಣ ಮಾಡಿದರು' ಎಂದು ತಿಳಿಸಿದರು.

ಆಂಧ್ರಪ್ರದೇಶದಿಂದ ನಗರಕ್ಕೆ ಗಾಂಜಾ

ಬೆಂಗಳೂರು: ಆಂಧ್ರಪ್ರದೇಶದಿಂದ ಗಾಂಜಾ ತಂದು ನಗರದಲ್ಲಿ ಮಾರುತ್ತಿದ್ದ ಇಬ್ಬರನ್ನು ಶ್ರೀರಾಮಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಮೆಜೆಸ್ಟಿಕ್ ಕಡೆಯಿಂದ ಸಂಜಯ್‌ಗಾಂಧಿನಗರ ಕಡೆ ಏ.8ರಂದು ಹೊರಟಿದ್ದ ಬೈಕ್‌ನಲ್ಲಿ ಗಾಂಜಾ ಸಾಗಿಸುತ್ತಿದ್ದು, 22 ಕೆ.ಜಿ ಗಾಂಜಾ ಪತ್ತೆಯಾಯಿತು' ಎಂದು ಪೊಲೀಸರು ಹೇಳಿದರು.

'ಬಂಧಿತರು ಅಪರಾಧ ಹಿನ್ನೆಲೆಯುಳ್ಳವರು. ಈ ಹಿಂದೆ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದರು. ಪುನಃ ಗಾಂಜಾ ಮಾರಾಟ ಮುಂದುವರಿಸಿದ್ದರು' ಎಂದು ಅವರು ತಿಳಿಸಿದರು.

ಕ್ರಿಕೆಟ್ ಬೆಟ್ಟಿಂಗ್: ₹ 2.50 ಲಕ್ಷ ಜಪ್ತಿ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪದಡಿ ಶ್ರೀಧರ್ ಎಂಬುವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದು, ₹ 2.50 ಲಕ್ಷ ನಗದು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಮಾಗಡಿ ರಸ್ತೆಯ 5ನೇ ಅಡ್ಡರಸ್ತೆಯಲ್ಲಿರುವ ಮನೆಯೊಂದರ ಬಳಿ ಬೆಟ್ಟಿಂಗ್‌ಗೆ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಅದೇ ಸಂದರ್ಭದಲ್ಲೇ ದಾಳಿ ಮಾಡಿ ಆತನನ್ನು ಬಂಧಿಸಲಾಯಿತು' ಎಂದೂ ತಿಳಿಸಿದರು.

ವಾಹನ ಗುದ್ದಿ ಪಾದಚಾರಿ ಸಾವು

ಬೆಂಗಳೂರು: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯ ಬೆಳ್ಳಹಳ್ಳಿ ಮೇಲ್ಸೇತುವೆಯಲ್ಲಿ ಶನಿವಾರ ನಡೆದುಕೊಂಡು ಹೋಗುತ್ತಿದ್ದ ಮುನಿರಾಜು (50) ಎಂಬುವರು ಟಾಟಾ ಏಸ್ ವಾಹನ ಗುದ್ದಿ ಮೃತಪಟ್ಟಿದ್ದಾರೆ.

'ಮುನಿರಾಜು ಮಗನ ಜೊತೆ ಹೊರಟಿದ್ದರು. ವಾಹನ ಗುದ್ದಿ 'ತಲೆಗೆ ತೀವ್ರ ಪೆಟ್ಟಾಗಿದ್ದ ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ಯ ಲಾಗಿತ್ತು. ಅಲ್ಲಿ ವೈದ್ಯರು, ಮುನಿರಾಜು ಮೃತಪಟ್ಟಿರುವುದಾಗಿ ಹೇಳಿದರು'.'ಟಾಟಾ ಏಸ್ ವಾಹನ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣ ಎಂದು ಮೇಲ್ನೋಟಕ್ಕೆ ಗೊತ್ತಾಗಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪಘಾತ: ಮೂವರು ಮಹಿಳೆಯರು ಸಾವು

ಪ್ರಜಾವಾಣಿ ವಾರ್ತೆ

ಕೋರ (ತುಮಕೂರು): ಕಟ್ಟಿಗೇನಹಳ್ಳಿ ಗೇಟ್ ಬಳಿ ಭಾನುವಾರ ಬೆಳಿಗ್ಗೆ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ನಿಲುಗಡೆ ಮಾಡಿದ್ದ ಲಾರಿಗೆ ವೇಗವಾಗಿ ಬಂದ ಕಾರು ಹಿಂದಿನಿಂದ ಡಿಕ್ಕಿ ಹೊಡೆದಿದ್ದು, ಕಾರಿನಲ್ಲಿದ್ದ ಮೂವರು ಮಹಿಳೆಯರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಘಟನೆಯಲ್ಲಿ ಮಗುವೊಂದು ಗಂಭೀರ ಗಾಯಗೊಂಡಿದ್ದು, ಮೂವರು ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪುಣೆ ಕಡೆ ಹೊರಟಿದ್ದ ಲಾರಿ ಹೆದ್ದಾರಿ ಪಕ್ಕ ನಿಂತಿತ್ತು.

ಬೆಂಗಳೂರು ಕಡೆಯಿಂದ ಬಂದ ಕಾರು ಡಿಕ್ಕಿ ಹೊಡೆಯಿತು. ಕಾರಿನಲ್ಲಿದ್ದ ಅದಿತಿ (32), ಅನ್ನಪೂರ್ಣಾ (55) ಹಾಗೂ ಆರತಿ ಮೃತಪಟ್ಟರು. ಗಂಭೀರವಾಗಿ ಗಾಯಗೊಂಡ ಮಗುವನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಕಾರಿನಲ್ಲಿದ್ದವರು ಬೆಂಗಳೂರಿನಿಂದ ಬಾಗಲಕೋಟೆ ಜಿಲ್ಲೆಯ ಇಳಕಲ್‌ಗೆ ನಾಮಕರಣ ಕಾರ್ಯಕ್ರಮಕ್ಕಾಗಿ ತೆರಳುತ್ತಿದ್ದರು.

ಗಸ್ತು ಇಲ್ಲ: ಹೆದ್ದಾರಿಗಳಲ್ಲಿ ಗಸ್ತು ನಡೆಯದಿರುವುದು ಇಂತಹ ಅವಘಡಗಳಿಗೆ ಕಾರಣ.ಹೆದ್ದಾರಿಗಳ ಪಕ್ಕ ನಿಲ್ಲುವ ವಾಹನಗಳ ತೆರವಿಗೆ ಗಸ್ತು ಪೊಲೀಸರು ಕ್ರಮವಹಿಸುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.


ಐಐಎಂ ಸಂಸ್ಥೆಯಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು

ಐಐಎಂ:690 ವಿದ್ಯಾರ್ಥಿಗಳಿಗೆ ಪದವಿ

ಬೆಂಗಳೂರು: ಭಾರತೀಯ ನಿರ್ವಹಣಾ ಸಂಸ್ಥೆಯ (ಐಐಎಂ) 47ನೇ ಘಟಿಕೋತ್ಸವದಲ್ಲಿ ಶನಿವಾರ 690 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇವರಲ್ಲಿ ಪಿಎಚ್.ಡಿ ಪದವಿ ಪಡೆದವರೂ ಇದ್ದಾರೆ. 9 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದಿದ್ದಾರೆ.

'2020-22ನೇ ಸಾಲಿನ ಪ್ರೋಗ್ರಾಮ್ ಇನ್ ಮ್ಯಾನೇಜ್‌ಮೆಂಟ್‌ನ ಸ್ನಾತಕೋತ್ತರ ಪದವಿಯಲ್ಲಿ ಪ್ರತ್ಯೂಷ್ ಗೋಯಲ್ ಮೊದಲ ರ್‍ಯಾಂಕ್ ಪುರಸ್ಕೃತರಾದರೆ, ಅವಿರುದ್ಧ್ ಜೈನ್ ಮತ್ತು ಪ್ರಿಯಾಂಕ್ ದೇಡಿಯಾ ಎರಡನೇ ರ್‍ಯಾಂಕ್ ಪಡೆದರು.

'ಪ್ರೋಗ್ರಾಮ್-ಇನ್-ಮ್ಯಾನೇಜ್‌ಮೆಂಟ್' ಸ್ನಾತಕೋತ್ತರ ಪದವಿ (ಪಿಜಿಪಿ) ಮತ್ತು ಬ್ಯುಸಿನೆಸ್ ಅನಾಲಿಟಿಕ್ಸ್ ಸ್ನಾತಕೋತ್ತರ ವಿಭಾಗದ (ಪಿಜಿಪಿ-ಬಿಎ) ಎರಡೂ ಕೋರ್ಸ್‌ಗಳಲ್ಲಿ ಅತ್ಯುತ್ತಮ ಸಾಧನೆಗಾಗಿ ಮೈಥಿಲಿ ಅವರು ಚಿನ್ನದ ಪದಕ ಪಡೆದರು. ಬ್ಯುಸಿನೆಸ್ ಅನಾಲಿಟಿಕ್ಸ್ ಸ್ನಾತಕೋತ್ತರ ಪದವಿಯಲ್ಲಿ ಜೀವನ್ ನಾಗರಾಜ್ ಮೊದಲ ರ್‍ಯಾಂಕ್ ಪಡೆದರು. 'ಇಪಿಜಿಪಿ' ಕೋರ್ಸ್‌ನಲ್ಲಿ ಬೆಂಡಿ ಅಶೋಕ್ ಕುಮಾರ್ ಮೊದಲ ರ್‍ಯಾಂಕ್ ಮತ್ತು ರಂಗನಾಥನ್ ಶೇಖರ್ ಅತ್ಯುತ್ತಮ ಆಲ್‌ರೌಂಡ್ ಸಾಧನೆಯ ಗೌರವ ಪಡೆದರು.

ಎಂಟರ್‌ಪ್ರೈಸಸ್ ಮ್ಯಾನೇಜ್‌ಮೆಂಟ್‌ನಲ್ಲಿ ಸ್ನಾತಕೋತ್ತರ ಪದವಿಯಲ್ಲಿ (ಪಿಜಿಪಿಇಎಂ) ರೋಹನ್ ಬಜಲಾ ಮೊದಲ ರ್‍ಯಾಂಕ್ ಪಡೆದರೆ, ಡಿ.ಉಮೇಶ್ ಸರ್ವತೋಮುಖ ಸಾಧನೆಯ ಗೌರವ ಪಡೆದರು.

ಸಂಸ್ಥೆಯ ಸಾಧನೆಗಳನ್ನು ವಿವರಿಸಿದ ನಿರ್ದೇಶಕ ಪ್ರೊ.ರಿಷಿಕೇಶ ಟಿ. ಕೃಷ್ಣನ್ ಅವರು, '2023ರಲ್ಲಿ ಪದವಿಪೂರ್ವ ಕೋರ್ಸ್‌ಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಅರ್ಥಶಾಸ್ತ್ರ, ಮನೋವಿಜ್ಞಾನ ಮತ್ತು ಡೇಟಾ ವಿಜ್ಞಾನ ಮತ್ತು ಪರಿಸರ ಸುಸ್ಥಿರತೆ ಕುರಿತ ಕೋರ್ಸ್‌ಗಳನ್ನು ಸಂಸ್ಥೆಯ ಹೊಸ ಪ್ರಾಂಗಣದಲ್ಲಿ ಆರಂಭಿಸಲಾಗುವುದು' ಎಂದು ತಿಳಿಸಿದರು.

ಆಡಳಿತ ಮಂಡಳಿಯ ಅಧ್ಯಕ್ಷ ಡಾ.ದೇವಿ ಪ್ರಸಾದ್ ಶೆಟ್ಟಿ ಅವರು ಸಂಸ್ಥೆಯ ಸಾಧನೆಗಳು, ಡಿಜಿಟಲ್ ಕಲಿಕೆ, ಹಿರಿಯ ವಿದ್ಯಾರ್ಥಿಗಳ ಕೊಡುಗೆಗಳನ್ನು ವಿವರಿಸಿದರು. ಎಜೆಡ್‌ಬಿ ವ್ಯವಸ್ಥಾಪಕ ಪಾಲುದಾರ ಮತ್ತು ಸಹಸ್ಥಾಪಕರಾದ ಜಿಯಾ ಮೋದಿ ಪಾಲ್ಗೊಂಡಿದ್ದರು.

‘ಮುಸ್ಲಿಮರ ವ್ಯಾಪಾರಕ್ಕೆ ನಿರ್ಬಂಧ ವಿಧಿಸುವವರ ವಿರುದ್ಧ ಕ್ರಮ’

ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ವಿಜಯನಗರ: ಮುಸ್ಲಿಂ ವರ್ತಕರು ವ್ಯಾಪಾರ ಮಾಡುವುದಕ್ಕೆ ನಿರ್ಬಂಧ ವಿಧಿಸುವ ಹಿಂದೂ ಸಂಘಟನೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಎಚ್ಚರಿಸಿದ್ದಾರೆ.

ಧಾರವಾಡದಲ್ಲಿ ಮುಸ್ಲಿಮರ ಅಂಗಡಿ ಧ್ವಂಸಗೊಳಿಸಿದ ಘಟನೆ ಬಗ್ಗೆ ಪ್ರಕ್ರಿಯಿಸಿದ ಅವರು, ‘ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ವಿಧಿಸುವವರು ಅಥವಾ ಗಲಾಟೆ ಮಾಡುತ್ತಿರುವವರ ವಿರುದ್ಧ ಕ್ರಮ ಜರುಗಿಸುತ್ತೇವೆ. ದೇಶದಲ್ಲಿ ವ್ಯಾಪಾರ ಮಾಡಲು ಸಂವಿಧಾನಾತ್ಮಕವಾಗಿ ಎಲ್ಲರಿಗೂ ಹಕ್ಕಿದೆ. ಕಾನೂನು ಉಲ್ಲಂಘಿಸುವವರನ್ನು ಪ್ರೋತ್ಸಾಹಿಸುವುದಿಲ್ಲ’ ಎಂದರು.

‘ಮುಸ್ಲಿಂ ವರ್ತಕರಿಗೆ ನಿರ್ಬಂಧಿಸುವುದಕ್ಕೆ ಸರ್ಕಾರದ ಬೆಂಬಲವಿಲ್ಲ. ಹಿಂದೂಪರ ಸಂಘಟನೆಗಳವರು ಏಕೆ ಮಾಡುತ್ತಿದ್ದಾರೆ? ಮಿತಿ ಮೀರಿದರೆ, ಕಾನೂನು ಕೈಗೆತ್ತಿಕೊಂಡರೆ, ಸರ್ಕಾರ ಕ್ರಮ ವಹಿಸಿಯೇ ತೀರುತ್ತದೆ. ಇದರಲ್ಲಿ ಎರಡು ಮಾತಿಲ್ಲ’ ಎಂದು ಅವರು ಎಚ್ಚರಿಕೆ ನೀಡಿದರು.

ಮಾಧುಸ್ವಾಮಿಯೊಂದಿಗೆ ಮಾತನಾಡುವೆ: ಮುಖ್ಯಮಂತ್ರಿ ಬೊಮ್ಮಾಯಿ

‘ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಕೊಟ್ಟಿರುವ ಹೇಳಿಕೆ ಗಮನಿಸಿಲ್ಲ. ಅವರು ಯಾವ ಹಿನ್ನೆಲೆಯಲ್ಲಿ ಹೇಳಿದರೆಂದು ಗೊತ್ತಿಲ್ಲ. ಅವರೊಂದಿಗೆ ಮಾತನಾಡುವೆ. ಎಲ್ಲರೂ ಸಾಮರಸ್ಯದಿಂದ ಇದ್ದರೆ ಅಭಿವೃದ್ಧಿ ಸಾಧ್ಯ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಜಯನಗರ ಜಿಲ್ಲೆ ಹರಪನಹಳ್ಳಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದರು.

ಸಂಜೆ ಬೆಳಗಾವಿಯಲ್ಲಿ ಮಾತನಾಡಿದ ಸಚಿವ ಮಾಧುಸ್ವಾಮಿ, ‘ಕಾನೂನು ಸುವ್ಯವಸ್ಥೆ ಹದಗೆಟ್ಟರೆ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ ಎಂದೆಲ್ಲ ಹೇಳಿರುವೆನೆಂದು ಖಾಸಗಿ ಸುದ್ದಿ ವಾಹಿನಿಯೊಂದು ಪ್ರಸಾರ ಮಾಡಿದೆ ಎಂದು ಗೊತ್ತಾಗಿದೆ. ಸರ್ಕಾರದಲ್ಲಿದ್ದು ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುವ ಪರಿಸ್ಥಿತಿ ಯಾವತ್ತೂ ಉದ್ಭವವಾಗಿಲ್ಲ. ಆ ರೀತಿ ಮಾತಾಡಿಲ್ಲ’ ಎಂದು ಸ್ಪಷ್ಟಪಡಿಸಿದರು.

ಕೋಮು ಸೌಹಾರ್ದ ಕಾಪಾಡಬೇಕು. ಎಲ್ಲಾ ಮುಸ್ಲಿಮರನ್ನು ಒಂದೇ ರೀತಿ ಕಾಣಬಾರದು. ಎಲ್ಲರೂ ಕೆಟ್ಟವರೆಂದು ನಿರ್ಣಯಕ್ಕೆ ಬರುವುದು ತಪ್ಪಾಗುತ್ತದೆ. ಯಾರೂ ಅಂತಹ ಭಾವನೆ ಬೆಳೆಸಿಕೊಳ್ಳಬಾರದು

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಸರ್ಕಾರದ ಕುಮ್ಮಕ್ಕಿನಿಂದಾಗಿ ರಾಜ್ಯದಲ್ಲಿ ಧರ್ಮ ಸಂಘರ್ಷ ನಡೆಯುತ್ತಿದೆ. ಧಾರವಾಡದಲ್ಲಿ ಬಡ ವ್ಯಾಪಾರಿಯ ಅಂಗಡಿ ಮೇಲೆ ದಾಳಿ ಮಾಡಿದ್ದಾರಲ್ಲಾ, ಅವರಷ್ಟು ರಣಹೇಡಿಗಳು ಯಾರೂ ಇಲ್ಲ

ಬಿ.ಕೆ.ಹರಿಪ್ರಸಾದ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ನುಗ್ಗಿಕೇರಿ ಆಂಜನೇಯ ದೇವಸ್ಥಾನದಲ್ಲಿ ದಾಳಿಗೊಳಗಾದ ವ್ಯಾಪಾರಿ ನಬೀಸಾಬ್‌ಗೆ ಧನಸಹಾಯ

‘ಹನುಮಪ್ಪನ ದರ್ಶನಕ್ಕಾದರೂ ಅವಕಾಶ ನೀಡಿ’

ಪ್ರಜಾವಾಣಿ ವಾರ್ತೆ

ಧಾರವಾಡ: ‘ಹನುಮಪ್ಪನ ದಯೆಯಿಂದಲೇ ಕಳೆದ 15 ವರ್ಷಗಳಿಂದ ಇಲ್ಲಿ ವ್ಯಾಪಾರ ನಡೆಸಿಕೊಂಡು ಬಂದಿದ್ದೇನೆ. ಆತನಿಂದಾಗಿಯೇ ವಾರಕ್ಕೆ ₹2 ಸಾವಿರ ವ್ಯಾಪಾರವಾಗುತ್ತಿತ್ತು. ಅದರಲ್ಲೇ ಕುಟುಂಬ ನಿರ್ವಹಣೆಯೂ ನಡೆಯುತ್ತಿತ್ತು. ಈಗ ಮುಂದೇನು ಎಂಬ ಪ್ರಶ್ನೆ ಎದುರಾಗಿದೆ. ನನಗೆ ಕೊನೆಯ ಪಕ್ಷ ಆ ಹನುಮಪ್ಪನ ದರ್ಶನಕ್ಕೆ ಅವಕಾಶ ಮಾಡಿಕೊಟ್ಟರೂ ಸಾಕು...’

ಹೀಗೆಂದು ಕಣ್ತುಂಬಿಕೊಂಡು ಅಂಗಲಾಚಿದವರು ಇಲ್ಲಿನ ನುಗ್ಗಿಕೇರಿ ಆಂಜನೇಯ ದೇವಸ್ಥಾನದ ಆವರಣದಲ್ಲಿ ಕಲ್ಲಂಗಡಿ ಹಣ್ಣು ಮಾರಾಟ ಮಾಡುವ ವ್ಯಾಪಾರಿ ನಬೀಸಾಬ್.

ಶ್ರೀರಾಮಸೇನೆ ಕಾರ್ಯಕರ್ತರ ದಾಳಿಗೆ ಸುಮಾರು ಐದು ಕ್ವಿಂಟಲ್ ಕಲ್ಲಂಗಡಿ ನಷ್ಟ ಅನುಭವಿಸಿದ ನಬೀಸಾಬ್ ಇನ್ನೂ ಆಘಾತದಿಂದ ಹೊರಗೆ ಬಂದಿಲ್ಲ. ‘8ರಿಂದ 10 ಜನರಿದ್ದ ತಂಡ ಅಂಗಡಿಯನ್ನು ಹಾಳು ಮಾಡಿತು. ಅವರು ಯಾರು ಎಂಬುದೂ ನನಗೆ ಗೊತ್ತಿಲ್ಲ. ಅವರೊಂದಿಗೆ ನನ್ನ ವೈಯಕ್ತಿಕ ದ್ವೇಷವೂ ಇಲ್ಲ. ಹಣ್ಣು ಎಸೆಯುವ ಬದಲು, ಜನರಿಗಾದರೂ ಹಂಚಿದ್ದರೆ ಅವರ ಹೊಟ್ಟೆಯಾದರೂ ತಣ್ಣಗೆ ಇರುತ್ತಿತ್ತು’ ಎಂದು ಕಣ್ಣೀರಾದರು.

ನುಗ್ಗಿಕೇರಿಯಲ್ಲಿ ನಡೆದ ಘಟನೆ ರಾಷ್ಟ್ರಮಟ್ಟದ ಸುದ್ದಿ ಆಗುತ್ತಿದ್ದಂತೆಯೇ ದೇಶದ ಹಲವು ಪ್ರದೇಶಗಳಿಂದ ನಬೀಸಾಬ್‌ಗೆ ಕರೆಗಳ ಮಹಾಪೂರವೇ ಹರಿದುಬರುತ್ತಿದೆ. ಕರೆ ಮಾಡಿದವರು ಧೈರ್ಯ ಹೇಳಿ ಸಂತೈಸುತ್ತಿದ್ದಾರೆ.

ಯುವ ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಹಾಗೂ ರಾಜ್ಯ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಅವರು ನುಗ್ಗಿಕೇರಿಗೆ ಭೇಟಿ ನೀಡಿ ನಷ್ಟಕ್ಕೊಳಗಾದ ವ್ಯಾಪಾರಿಗಳಿಗೆ ಧೈರ್ಯ ತುಂಬಿದರು. ದಾಳಿಗೊಳಗಾದ ನಾಲ್ಕು ಅಂಗಡಿಗಳಿಗೆ ತಲಾ ₹25ಸಾವಿರ ಪರಿಹಾರ ನೀಡಿದರು. ಈ ಸಂದರ್ಭದಲ್ಲಿ ಯುವ ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ವಿನೋದ ಅಸೂಟಿ, ಮಹಾನಗರ ಜಿಲ್ಲಾ ಘಟಕದ ಅಧ್ಯಕ್ಷ ಇಮ್ರಾನ್ ಕಳ್ಳಿಮನಿ ಇದ್ದರು.

‘ಮೊದಲಿಗೆ ಹಿಜಾಬ್ ಗಲಾಟೆ ಆಯಿತು. ಇದೀಗ ಹಿಂದೂಯೇತರ ವ್ಯಾಪಾರ ವಿಷಯ ಬಂದಿದೆ. ಕಲ್ಲಂಗಡಿ, ಮಾವು ಯಾವುದೇ ಇರಲಿ ಅದನ್ನು ಬೀದಿಗೆ ಚೆಲ್ಲಿ ಹಾಳು ಮಾಡಿದರೆ ಅದು ನೇರವಾಗಿ ರೈತರ ಮೇಲೆ ಮಾಡುವ ದಾಳಿಯಾಗಿದೆ. ಇವೆಲ್ಲದಕ್ಕೂ ಸರ್ಕಾರದ ಕುಮ್ಮಕ್ಕು ಇದೆ. ಆಡಳಿತ ನಡೆಸುತ್ತಿರುವ ಪಕ್ಷದ ನಾಯಕರೂ ಪ್ರಚೋದಿಸುವ ಹೇಳಿಕೆಯನ್ನೇ ನೀಡುತ್ತಿದ್ದಾರೆ’ ಎಂದು ಶ್ರೀನಿವಾಸ್ ಆರೋಪಿಸಿದರು.

ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ನೀಡಿದ ₹ 10 ಸಾವಿರವನ್ನು ಪಕ್ಷದ ಕಾರ್ಯಕರ್ತರು ನಬೀಸಾಬ್‌ಗೆ ನೀಡಿದರು. ಲಡಾಯಿ ಪ್ರಕಾಶನದ ಬಸವರಾಜ ಸೂಳಿಬಾವಿ ₹ 2 ಸಾವಿರ ನೆರವು ನೀಡಿದರು.

ಮುಖ್ಯಾಂಶಗಳು

- ಯಾರೊಂದಿಗೂ ದ್ವೇಷ ಇಲ್ಲ: ನಬೀಸಾಬ್
- ವ್ಯಾಪಾರಿಗಳಿಗೆ ಹಲವರಿಂದ ನೆರವು



ಹನುಮಪ್ಪನ ಮೇಲೆ ನನಗೂ ಅವರಷ್ಟೇ ನಂಬಿಕೆ ಇದೆ. ನಿತ್ಯ ದರ್ಶನ ಮಾಡುತ್ತೇನೆ. ಮಕ್ಕಳು ಕೈಬಿಟ್ಟರೂ ದೇವರು ಕೈಹಿಡಿದಿದ್ದ. ನನ್ನನ್ನು ಇಲ್ಲಿಂದ ಬಿಡಿಸಿದರೆ ನಾನು ಬದುಕುಳಿಯುವುದಿಲ್ಲ

ನಬೀಸಾಬ್, ಕಲ್ಲಂಗಡಿ ಹಣ್ಣಿನ ವ್ಯಾಪಾರಿ

ಪುಂಡರ ಬಂಧನಕ್ಕೆ ಕುಮಾರಸ್ವಾಮಿ ಆಗ್ರಹ

ರಾಮನಗರ: ಧಾರವಾಡದ ನುಗ್ಗಿಕೇರಿಯ ಆಂಜನೇಯ ದೇಗುಲದ ಬಳಿ ಮುಸ್ಲಿಂ ವರ್ತಕನ ಅಂಗಡಿ ಮೇಲೆ ದಾಳಿ ಮಾಡಿದ ಆರೋಪಿಗಳನ್ನು ಕೂಡಲೇ ಬಂಧಿಸಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಚನ್ನಪಟ್ಟಣ ತಾಲ್ಲೂಕಿನ ಅಂಗರಹಳ್ಳಿಯಲ್ಲಿ ಭಾನುವಾರ ಪತ್ರಕರ್ತರ ಜೊತೆ ಅವರು ಮಾತನಾಡಿದರು. ‘15 ವರ್ಷದಿಂದ ದೇಗುಲದ ಬಳಿ ಹಣ್ಣಿನ ವ್ಯಾಪಾರ ಮಾಡುತ್ತಿದ್ದ ವ್ಯಕ್ತಿ ಮೇಲೆ ಹಲ್ಲೆ ನಡೆಸಿರುವುದು ಖಂಡನೀಯ. ಇದನ್ನು ಈಗಲೇ ತಡೆಯದೇ ಹೋದರೆ ಮುಂದೆ ಜೀವಹಾನಿ ಆಗಬಹುದು’ ಎಂದರು.

‘ಒಂದು ಸಮಾಜವನ್ನೇ ಗುರಿಯಾಗಿಸಿಕೊಂಡು ಅವರ ಮೇಲೆ ದಾಳಿ ನಡೆಸುತ್ತಿರುವುದು ಖಂಡನೀಯ. ಅವರ ತಾಳ್ಮೆಗೂ ಮಿತಿ ಇರುತ್ತದೆ. ಅವರು ತಿರುಗಿ ಬಿದ್ದರೆ ಯಾವ ಸರ್ಕಾರಗಳೂ ಉಳಿಯುವುದಿಲ್ಲ. ರಾಜ್ಯ ಸರ್ಕಾರ ಅಂತಹದ್ದಕ್ಕೆ ಅವಕಾಶ ನೀಡಬಾರದು. ಇಂತಹ ವಿಚಾರಗಳಲ್ಲಿ ಸರ್ಕಾರ ಪದೇ ಪದೇ ನಿಷ್ಕ್ರಿಯವಾಗಿ ವರ್ತಿಸಿದರೆ ಮುಂದೆ ದೊಡ್ಡ ಬೆಲೆ ತೆರಬೇಕಾಗುತ್ತದೆ’ ಎಂದು ಎಚ್ಚರಿಸಿದರು.

‘ಬೊಮ್ಮಾಯಿ ಗೋಮುಖ ವ್ಯಾಘ್ರ ಆಗದಿರಲಿ’

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರಾಜ್ಯದ ಸರ್ವರನ್ನೂ ಸಮಾನವಾಗಿ ಕಾಣಬೇಕು. ಗೋಮುಖ ವ್ಯಾಘ್ರ ಆಗಬಾರದು ಎಂದು ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಧಾರವಾಡದ ನುಗ್ಗಿಕೇರಿ ಆಂಜನೇಯ ದೇವಸ್ಥಾನದಲ್ಲಿ ಶ್ರೀರಾಮ ಸೇನೆ ಸದಸ್ಯರು ಮುಸ್ಲಿಂ ವ್ಯಾಪಾರಿಯ ಕಲ್ಲಂಗಡಿ ಹಣ್ಣುಗಳನ್ನು ನಾಶ ಮಾಡಿರುವ ಕುರಿತು ಭಾನುವಾರ ಸರಣಿ ಟ್ವೀಟ್ ಮಾಡಿರುವ ಅವರು, ‘ಧರ್ಮದ ಹೆಸರಿನಲ್ಲಿ ಒಡೆದು ಆಳುವ ನಿಮ್ಮ ನೀತಿ ಕೊನೆಗೆ ನಿಮಗೇ ಮುಳ್ಳಾಗಲಿದೆ ಎಂಬ ಕನಿಷ್ಠ ಪ್ರಜ್ಞೆ ನಿಮಗಿರಲಿ’ ಎಂದು ಮುಖ್ಯಮಂತ್ರಿಯವರಿಗೆ ಎಚ್ಚರಿಸಿದ್ದಾರೆ.

ರಾಮನವಮಿ: ಮಜ್ಜಿಗೆ, ಪಾನಕ ವಿತರಿಸಿದ ಮುಸ್ಲಿಮರು

ಪ್ರಜಾವಾಣಿ ವಾರ್ತೆ

ಕಲಬುರಗಿ: ರಾಮನವಮಿ ಪ್ರಯುಕ್ತ ನಗರದಲ್ಲಿ ಭಾನುವಾರ ಆಯೋಜಿಸಲಾಗಿದ್ದ ರಾಮನ ಮೂರ್ತಿಯ ಮೆರವಣಿಗೆ ವೇಳೆ ಮುಸ್ಲಿಮರು ಸ್ವಯಂಪ್ರೇರಣೆಯಿಂದ ಮಜ್ಜಿಗೆ, ಪಾನಕ ಹಾಗೂ ನೀರು ವಿತರಿಸಿದರು.

ನಗರದ ಆಳಂದ ಚೆಕ್‌ಪೋಸ್ಟ್‌ನಿಂದ ಜಗತ್ ವೃತ್ತದವರೆಗೆ ರಾಮನವಮಿ ಉತ್ಸವ ಸಮಿತಿ ಮತ್ತು ಶ್ರೀರಾಮಸೇನೆ ಸಂಘಟನೆ ಬೃಹತ್ ಮೆರವಣಿಗೆ ಆಯೋಜಿಸಿತ್ತು. ಶೇಖ್ ರೋಜಾದ ಖಾದ್ರಿ ಚೌಕ್ ಮಸೀದಿ ಬಳಿ ಮೆರವಣಿಗೆ ಬರುತ್ತಿದ್ದಂತೆಯೇ ಅಲ್ಲಿಯೇ ಟೆಂಟ್ ಹಾಕಿದ್ದ ಮುಸ್ಲಿಮರು ಮಜ್ಜಿಗೆ, ಪಾನಕ ವಿತರಿಸಿದರು.

ಕೆಲವರು ಟೆಂಟ್ ಬಳಿಯೇ ಬಂದು ಮಜ್ಜಿಗೆ, ಪಾನಕ ಕುಡಿದರೆ, ಇನ್ನು ಕೆಲವರಿಗೆ ಅವರಿದ್ದಲ್ಲೇ ಮುಸ್ಲಿಂ ಸ್ವಯಂಸೇವಕರು ತೆರಳಿ ನೀರಿನ ಪ್ಯಾಕೆಟ್ ವಿತರಿಸಿದರು.

ಮೆರವಣಿಗೆಯಲ್ಲಿ ಭಾಗವಹಿಸಿದ್ದ ಯುವಕರು ಮುಸ್ಲಿಮರ ಸೌಹಾರ್ದ ಭಾವ ಕಂಡು ಸಂತಸಪಟ್ಟರು. ಕೈ ಕುಲುಕಿ ಅವರಿಗೆ ಧನ್ಯವಾದ ಅರ್ಪಿಸಿದರು.

‘ನಾಲ್ಕು ವರ್ಷಗಳಿಂದ ನಾವು ಹಿಂದೂ ಸಹೋದರರಿಗೆ ಮಜ್ಜಿಗೆ, ಪಾನಕ ವಿತರಿಸುತ್ತಿದ್ದೇವೆ. ನಮಗೆ ಧರ್ಮ ಮುಖ್ಯವಲ್ಲ. ಬಾಯಾರಿಕೆಯಿಂದ ಬಂದವರಿಗೆ ದಾಹ ನೀಗಿಸುವುದು ಮುಖ್ಯ. ಹೀಗಾಗಿ, ಯುವಕರ ತಂಡವನ್ನು ಕಟ್ಟಿಕೊಂಡು ರಾಮನವಮಿ ಮೆರವಣಿಗೆಯಲ್ಲಿ ಪಾನಕ ನೀಡುತ್ತೇವೆ’ ಎಂದು ಮುಖಂಡ ರಹೀಮ್ ಸಾಬ್ ಮುಲ್ಲಾ ತಿಳಿಸಿದರು.



ಸೌಹಾರ್ದ ಪಾನಕ ಕಲಬುರಗಿಯಲ್ಲಿ ರಾಮನವಮಿ ಆಚರಣೆ ಅಂಗವಾಗಿ ಭಾನುವಾರ ಶೇಖ್ ರೋಜಾ ಬಳಿ ಮೆರವಣಿಗೆಯಲ್ಲಿ ಬಂದ ಹಿಂದೂಗಳಿಗೆ ಮುಸ್ಲಿಂ ಸಮುದಾಯದವರು ಪಾನಕ ವಿತರಿಸಿದರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮಸೀದಿ ಮುಂಭಾಗ ರಾಮನವಮಿ ಆಚರಣೆಗೆ ಅನುಮತಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಷ್ಟ್ರೀಯ ಹಿಂದೂ ಸಮಿತಿ ಹಾಗೂ ಸುಜೀವ್ ಸಂಸ್ಥೆಯು ಇಲ್ಲಿನ ಮೀನಾ ಬಜಾರ್‌ನ ಆಜ್ಹಂ ಮಸೀದಿ ಮುಂಭಾಗ ಭಾನುವಾರ ಏರ್ಪಡಿಸಿದ್ದ ‘ರಾಮನವಮಿ’ ಆಚರಣೆಗೆ ಪೊಲೀಸರು ಅನುಮತಿ ನಿರಾಕರಿಸಿದ್ದಾರೆ.

ಇದೊಂದು ಸೂಕ್ಷ್ಮ ಪ್ರದೇಶವಾಗಿರುವುದರಿಂದ ಇಲ್ಲಿ ರಾಮನ ಭಾವಚಿತ್ರ ಇಟ್ಟು, ಪುಷ್ಪನಮನ ಸಲ್ಲಿಸುವುದು, ಪಾನಕ, ಮಜ್ಜಿಗೆ ವಿತರಿಸುವುದು ಬೇಡ ಎಂದು ಸಂಘಟಕರಿಗೆ ಪೊಲೀಸರು ಸೂಚಿಸಿದ್ದಾರೆ.

‘ಎಲ್ಲ ಧರ್ಮದವರೂ ಸೇರಿ ಒಟ್ಟಾಗಿ ಮಸೀದಿ ಮುಂಭಾಗ ರಾಮನವಮಿ ಆಚರಿಸಲು ಸಿದ್ಧತೆ ನಡೆಸಿದ್ದೆವು. ಆದರೆ, ಪೊಲೀಸರು ಅನುಮತಿ ನಿರಾಕರಿಸಿದರು. ರಂಜಾನ್ ಮಾಸದ ಕೊನೆಯ ದಿನ ಇಫ್ತಾರ್ ಕೂಟ ಹಾಗೂ ರಾಮನವಮಿಯನ್ನು ಒಟ್ಟಿಗೆ ಆಚರಿಸಲು ಅನುಮತಿ ಕೇಳಿದ್ದೇವೆ’ ಎಂದು ಸುಜೀವ್ ಸಂಸ್ಥೆಯು ಸಂಚಾಲಕ ಸುನಿಲ್ ‘ಪ್ರಜಾವಾಣಿ’ಗೆ ತಿಳಿಸಿದರು.

ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡ ರೆಡ್ಡಿ ಸಹೋದರರು

ಪ್ರಜಾವಾಣಿ ವಾರ್ತೆ

ಹ ರ ಪ ನ ಹ ಳ್ಳಿ / ಹೊ ಸ ಪೇ ಟೆ (ವಿಜಯನಗರ): ಒಂದು ದಶಕದ ನಂತರ ಬಳ್ಳಾರಿಯ ರೆಡ್ಡಿ ಸಹೋದರರು ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು. ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ 2011ರಲ್ಲಿ ಜನಾರ್ದನ ರೆಡ್ಡಿ ಜೈಲು ಸೇರಿದ ನಂತರ ಮೂವರು ಸಹೋದರರು ಒಟ್ಟಿಗೆ ಸೇರಿರಲಿಲ್ಲ.

ವಿಶೇಷವಾಗಿ ಈ ಪ್ರಕರಣದ ಬಳಿಕ ಕರುಣಾಕರ ರೆಡ್ಡಿ ಅಂತರ ಕಾಯ್ದುಕೊಂಡಿದ್ದರು. ಆದರೆ, ಭಾನುವಾರ ಒಂದೇ ಕಾರ್ಯಕ್ರಮದಲ್ಲಿ ಸಹೋದರರು ವೇದಿಕೆ ಹಂಚಿಕೊಂಡು, ಪರಸ್ಪರ ಮೆಚ್ಚುಗೆಯ ಮಾತುಗಳನ್ನಾಡುತ್ತ ಒಗ್ಗಟ್ಟು ಪ್ರದರ್ಶಿಸಿದರು.

ಶಾಸಕ ಜಿ. ಕರುಣಾಕರ ರೆಡ್ಡಿ ಜನ್ಮದಿನದ ಸಂದರ್ಭದಲ್ಲಿ ಹರಪನಹಳ್ಳಿಯಲ್ಲಿ ಏರ್ಪಡಿಸಿದ್ದ ಸೀತಾರಾಮ ಕಲ್ಯಾಣೋತ್ಸವದಲ್ಲಿ ಕರುಣಾಕರ ರೆಡ್ಡಿ, ಶಾಸಕ ಸೋಮಶೇಖರ್ ರೆಡ್ಡಿ, ಮಾಜಿಸಚಿವ ಗಾಲಿ ಜನಾರ್ದನ ರೆಡ್ಡಿ ಅವರಿದ್ದ ವೇದಿಕೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಾರಿಗೆ ಸಚಿವ ಬಿ. ಶ್ರೀರಾಮುಲು ಸೇರಿದಂತೆ ಹಲವು ಶಾಸಕರು, ಸಂಸದರು ಪಾಲ್ಗೊಂಡಿದ್ದರು.

‘ಜನಾರ್ದನ ರೆಡ್ಡಿ ಅವರನ್ನು ರಾಜಕೀಯಕ್ಕೆ ಕರೆ ತರುವ ಯೋಚನೆ ಇದೆಯೇ’ ಎಂದು ಸುದ್ದಿಗಾರರರ ಪ್ರಶ್ನೆಗೆ, ‘ಈ ಬಗ್ಗೆ ಯಾವುದೇ ಚಿಂತನೆ ನಡೆದಿಲ್ಲ’ ಎಂದಷ್ಟೇ ಮುಖ್ಯಮಂತ್ರಿ ಹೇಳಿದರು.

ಸಿದ್ಧೇಶ್ವರ ದೇವಾಲಯಕ್ಕೆ ಮುಸ್ಲಿಮರಿಂದಲೂ ದೇಣಿಗೆ

ಕಲಕರಡಿ: ಸೌಹಾರ್ದ ಸಾರುವ ಕೆರೆಬೇಟೆ

• ಗಣಪತಿ ಹೆಗಡೆ

ಶಿರಸಿ: ತಾಲ್ಲೂಕಿನ ಕಲಕರಡಿ ಗ್ರಾಮದ ಸಿದ್ಧೇಶ್ವರ ದೇವಸ್ಥಾನದ ಸಹಾಯಾರ್ಥ ನಡೆಯುವ ಕೆರೆಬೇಟೆಯಲ್ಲಿ ಮುಸ್ಲಿಂ ಸಮುದಾಯದ ಜನರು ಪಾಲ್ಗೊಳ್ಳುವುದು ಸಾಮಾನ್ಯ. ದೇವಾಲಯದ ಅಭಿವೃದ್ಧಿಗೆ ದೇಣಿಗೆ ಸಲುವಾಗಿ ಪ್ರತಿ ಕೂಣಿಗೆ ನಿಗದಿಪಡಿಸಲಾದ ದರವನ್ನು ಅವರು ಖುಷಿಯಿಂದಲೇ ಪಾವತಿಸುತ್ತಾರೆ.

ಈ ವರ್ಷವೂ ಮುಸ್ಲಿಂ ಸಮುದಾಯದ ಸುಮಾರು 20 ಮಂದಿ ಕೆರೆಬೇಟೆಯಲ್ಲಿ ಪಾಲ್ಗೊಂಡು, ‘ಸೌಹಾರ್ದದ ವಿಚಾರದಲ್ಲಿ ಭಿನ್ನಾಭಿಪ್ರಾಯವಿಲ್ಲ’ ಎಂಬುದನ್ನು ಸಾರಿದರು.

ಕಲಕರಡಿ, ಅಂಡಗಿ, ಬನವಾಸಿ ಮತ್ತಿತರ ಕಡೆಗಳಿಂದ ಬಂದಿದ್ದ ಮುಸ್ಲಿಂ ಸಮುದಾಯದವರು ದೇವಾಲಯದವರು ನೀಡಿದ ದೇಣಿಗೆ ಚೀಟಿ ಪಡೆದು, ಸ್ಥಳೀಯರಿಂದ ಕೂಣಿ ಖರೀದಿಸಿ ಮೀನು ಬೇಟೆಗೆ ಇಳಿದಿದ್ದರು.

‘ಅಕ್ಕಪಕ್ಕದ ಕೆಲವರು ಗ್ರಾಮಗಳಲ್ಲೇ ನಮ್ಮವರ ಅಂಗಡಿಗಳಿಗೆ ಜಾತ್ರೆ ವೇಳೆ ಅವಕಾಶ ನೀಡಲಿಲ್ಲ. ರಾಜ್ಯದ ಕೆಲವು ಕಡೆ ಇಂತಹ ಘಟನೆ ನಡೆಯುತ್ತಿರುವುದು ತಿಳಿದು ನೋವಾಯಿತು. ಆದರೆ ನಮ್ಮ ಗ್ರಾಮದಲ್ಲಿ ಅಂತಹ ಘಟನೆಗೆ ಆಸ್ಪದ ನೀಡಿಲ್ಲ ಎಂಬುದೇ ನಮಗೆ ಸಮಾಧಾನದ ಜತೆಗೆ ಖುಷಿ ಮೂಡಿಸಿದೆ’ ಎಂದು ಕಲಕರಡಿ ಗ್ರಾಮದ ಮೌಲಾಲಿ ಹೇಳಿದರು.

‘ಪ್ರತಿ ವರ್ಷ ಕೆರೆಬೇಟೆಯಲ್ಲಿ ಪಾಲ್ಗೊಳ್ಳುತ್ತೇವೆ. ಜಾತಿ, ಧರ್ಮದ ಭೇದವನ್ನು ಯಾರೂ ಇಲ್ಲಿ ಮಾಡಿಲ್ಲ. ದೇವಸ್ಥಾನದ ಅಭಿವೃದ್ಧಿ ಕಾರ್ಯಕ್ಕೆ ಕೈಲಾದಷ್ಟು ಸಹಾಯವನ್ನೂ ಮಾಡುತ್ತ ಬಂದಿದ್ದೇವೆ’ ಎಂದು ಗ್ರಾಮಸ್ಥ ಅಜೀಜ್ ತಿಳಿಸಿದರು.

‘ಸಿದ್ಧೇಶ್ವರ ದೇವಾಲಯದ ಅಭಿವೃದ್ಧಿ ಚಟುವಟಿಕೆ, ಜೀರ್ಣೋದ್ಧಾರ ಕಾರ್ಯಕ್ಕೆ ಗ್ರಾಮದ ಪ್ರತಿ ಮನೆಗೆ ನಿಗದಿತ ಮೊತ್ತದ ದೇಣಿಗೆ ಚೀಟಿ ನೀಡಲಾಗಿದೆ. ಗ್ರಾಮದ ನಾಲ್ಕೈದು ಮುಸ್ಲಿಂ ಸಮುದಾಯದ ಮನೆಗೂ ಚೀಟಿ ಕಳುಹಿಸಲಾಗಿತ್ತು. ಅವರು ದೇಣಿಗೆ ಪಾವತಿಸಿದ್ದಾರೆ’ ಎಂದು ದೇವಾಲಯದ ಆಡಳಿತ ಸಮಿತಿ ಉಪಾಧ್ಯಕ್ಷ ಲವಪ್ಪ ನಾಯ್ಕ ‘ಪ್ರಜಾವಾಣಿ’ಗೆ ತಿಳಿಸಿದರು.

ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಎಂಬ ಭೇದವಿಲ್ಲದೆ ಒಗ್ಗಟ್ಟಾಗಿದ್ದೇವೆ. ಪ್ರತಿಯೊಬ್ಬರೂ ಕಷ್ಟದಲ್ಲಿ ಪರಸ್ಪರ ಸಹಕಾರ ನೀಡುತ್ತೇವೆ

ಮೌಲಾಲಿ ಅಲಿ, ಕಲಕರಡಿ ಗ್ರಾಮಸ್ಥ



ಶಿರಸಿ ತಾಲ್ಲೂಕಿನ ಕಲಕರಡಿ ಗ್ರಾಮದಲ್ಲಿ ಸಿದ್ಧೇಶ್ವರ ದೇವಾಲಯದ ಅಭಿವೃದ್ಧಿ ಸಹಾಯಾರ್ಥ ಭಾನುವಾರ ಕೆರೆಬೇಟೆ ನಡೆಯಿತು.

ಉತ್ಸಾಹ ತುಂಬಿದ ಕೆರೆಬೇಟೆ

ಕಲಕರಡಿ ಗ್ರಾಮದ ಸಿದ್ಧೇಶ್ವರ ದೇವಸ್ಥಾನದ ಅಭಿವೃದ್ಧಿ ಸಹಾಯಾರ್ಥ ಭಾನುವಾರ ಕೆರೆಬೇಟೆ ನಡೆಯಿತು. ಸುಡು ಬಿಸಿಲನ್ನೂ ಲೆಕ್ಕಿಸದೆ ಕಲಕರಡಿ, ಅಂಡಗಿ, ಮಧುರವಳ್ಳಿ, ಬನವಾಸಿ, ಗುಡ್ನಾಪುರ, ಇನ್ನಿತರ ಗ್ರಾಮಗಳ 340ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಪ್ರತಿ ಕೂಣಿಗೆ ತಲಾ ₹500 ನಿಗದಿಪಡಿಸಲಾಗಿದ್ದು, ದೇವಸ್ಥಾನಕ್ಕೆ ಸುಮಾರು ₹1.70 ಲಕ್ಷದಷ್ಟು ಆದಾಯ ಸಂಗ್ರಹವಾಯಿತು ಎಂದು ದೇವಾಲಯದ ಸಮಿತಿಯವರು ತಿಳಿಸಿದರು.

ಒಳನೋಟ

‘ಮುಗಿಯದ ‘ತಿರುವು’

ಬೆಂಗಳೂರು: ‘ನದಿ ತಿರುವು–ಹಣದ ಹರಿವು?’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಭಾನುವಾರ (ಏ.10) ಪ್ರಕಟವಾದ ‘ಒಳನೋಟ’ ವರದಿಗೆ ರಾಜ್ಯಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

‘ಅವೈಜ್ಞಾನಿಕ ಯೋಜನೆ ಕೈಬಿಡಿ’



ನದಿಗಳ ನೈಸರ್ಗಿಕ ಹರಿವನ್ನು ಬದಲಿಸುವ ಅವೈಜ್ಞಾನಿಕ ಯೋಜನೆ ಮತ್ತು ಯೋಚನೆಗಳನ್ನು ಸರ್ಕಾರ ಕೈಬಿಡಬೇಕು. ಇರುವ ಹಳ್ಳ, ನದಿ, ಕೆರೆ, ಅಣೆಕಟ್ಟುಗಳನ್ನು ಪುನರುಜ್ಜೀವನಗೊಳಿಸುವ ಕೆಲಸಕ್ಕೆ ಸರ್ಕಾರ ವಿಶೇಷ ಗಮನ ಹರಿಸಬೇಕು. ಜನರಿಗೆ ನೀರಿನ ಮಹತ್ವ ತಿಳಿಸುವ ಮತ್ತು ಆಯಾ ಭೌಗೋಳಿಕ ಪ್ರದೇಶಗಳಲ್ಲಿ ಕಡಿಮೆ ನೀರು ಬಳಸಿ ಕೃಷಿ ಮಾಡುವ ಬಗ್ಗೆಯೂ ಅರಿವು ಮೂಡಿಸಬೇಕು.

ಎಸ್.ನಾಗರಾಜ, ಬಾಗಲಕೋಟೆ

‘ಒತ್ತುವರಿ ತಡೆಯಿರಿ’



ಜೀವಸಂಕುಲಗಳ ನಾಶಕ್ಕೆ ಕಾರಣವಾಗುತ್ತಿರುವ ನದಿ ತಿರುವು ಯೋಜನೆಗಳನ್ನು ನಿಲ್ಲಿಸಬೇಕು. ಕೆರೆಗಳ ಅಭಿವೃದ್ಧಿ ಮತ್ತು ಸಂರಕ್ಷಣೆಗೆ ಕೆಲವೇ ಕೋಟಿಗಳನ್ನು ಮೀಸಲಿಟ್ಟರೆ, ಬೆಂಗಳೂರಿನ ನೀರಿನ ದಾಹ ನೀಗಿಸಬಹುದು. ಇಲ್ಲಿನ ಕೆರೆಗಳು ಮತ್ತು ರಾಜಕಾಲುವೆಗಳ ಒತ್ತುವರಿಯನ್ನು ತಡೆದು, ಮಳೆ ನೀರು ಹರಿಯುವಂತೆ ಮಾಡಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು.

ಆಶಾಬಾಯಿ, ಬೆಂಗಳೂರು

‘ನದಿ ತಿರುವು ಪ್ರಕೃತಿಗೆ ವಿರುದ್ಧ’



ನದಿಯು ಪ್ರಕೃತಿಯ ಒಂದು ಭಾಗ. ಪ್ರಕೃತಿಗೆ ವಿರುದ್ಧವಾದ ಚಟುವಟಿಕೆಗಳು ಯಶಸ್ವಿಯಾಗಿರುವ ಇತಿಹಾಸವಿಲ್ಲ. ಹಾಗಾಗಿ ಸ್ಥಳೀಯ ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ಅಂತರ್ಜಲ ಮಟ್ಟ ಹೆಚ್ಚಿಸುವ ಯೋಜನೆಗಳಿಗೆ ಹೆಚ್ಚು ಮಹತ್ವ ನೀಡಬೇಕು.

ಆಂಜನೇಯ, ಮಧುಗಿರಿ

‘ಜಲಮೂಲಗಳ ಸ್ವಚ್ಛತೆ ಕಾಪಾಡಿ’



ರಾಜ್ಯದಲ್ಲಿನ ಕೆರೆ, ಕಾಲುವೆಗಳು ಶುದ್ಧವಾಗಿಲ್ಲ. ಸ್ವಚ್ಛತೆಯ ಅಭಾವದಿಂದ ಮಲದ ಗುಂಡಿಗಳಾಗಿ ಬದಲಾಗಿವೆ. ಬೆಂಗಳೂರಿನಲ್ಲಿ 900ಕ್ಕೂ ಹೆಚ್ಚು ಇದ್ದ ಕೆರೆಗಳ ಸಂಖ್ಯೆ ಈಗ 210ಕ್ಕೆ ಕುಸಿದಿದೆ. ಈಗಲಾದರೂ ನಾವೆಲ್ಲ ಎಚ್ಚೆತ್ತುಕೊಳ್ಳದಿದ್ದರೆ, ಅಪಾಯ ತಪ್ಪಿದ್ದಲ್ಲ. ಪರಿಸರಕ್ಕೆ ಮಾರಕವಾಗಿರುವ ನದಿ ಜೋಡಣೆ ಯೋಜನೆ ಕೈಬಿಟ್ಟು, ಇರುವಂತಹ ಕೆರೆ, ಕಾಲುವೆಗಳನ್ನು ಅಭಿವೃದ್ಧಿಪಡಿಸಬೇಕು. ಈ ಮೂಲಕ ಸ್ವಚ್ಛತೆ ಮತ್ತು ಪರಿಸರ ಸಮತೋಲನವನ್ನು ಕಾಪಾಡಬೇಕು. ಕ್ರಮೇಣ ನೀರಿನ ಅಭಾವವೂ ಕಡಿಮೆಯಾಗಲಿದೆ.

ಬೀರಪ್ಪ, ಬೆಳಗಾವಿ

‘ಜಲ ಸಂರಕ್ಷಣೆಗೆ ಹಣ ವಿನಿಯೋಗಿಸಿ’



ನದಿ ತಿರುವು ಯೋಜನೆಗಳು ಅವೈಜ್ಞಾನಿಕ. ಕೆಲ ದುಷ್ಟ ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಗುತ್ತಿಗೆದಾರ ಕಂಪನಿ ಗಳು ಮಾತ್ರ ಈ ಯೋಜನೆಗಳ ಮೇಲೆ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಈ ದುಷ್ಟ ಕೂಟದ ಕೆಲವೇ ಜನರ ಹಿತಾಸಕ್ತಿಗಾಗಿ ಮುಂದಿನ ತಲೆ ಮಾರುಗಳಿಗೆ ಸಿಗಬೇಕಾದ ನೈಸರ್ಗಿಕ ಸಂಪತ್ತನ್ನು ನಾಶ ಮಾಡುತ್ತಿದ್ದೇವೆ. ಇಂತಹ ಮೂರ್ಖ ಯೋಜನೆಗಳನ್ನು ರೂಪಿಸುವ ಬದಲು ನೀರು ಇಂಗಿಸುವ ಗುಂಡಿಗಳ ನಿರ್ಮಾಣ, ಚೆಕ್ ಡ್ಯಾಂ ನಿರ್ಮಾಣ, ಕೆರೆಗಳ ಹೂಳೆತ್ತುವಿಕೆ, ನೀರಿನ ಸಂಸ್ಕರಣೆಯಂತಹ ಕೆಲಸಗಳಿಗೆ ಹಣ ವಿನಿಯೋಗಿಸಿದರೆ ದೀರ್ಘಕಾಲದ ನೀರಿನ ಸಮಸ್ಯೆಯನ್ನು ತಡೆಗಟ್ಟಬಹುದು.

ದರ್ಶನ್, ಚಿತ್ರದುರ್ಗ



ಕುಣಿಗಲ್ ತಾಲ್ಲೂಕು ಬಿದನಗೆರೆ ಬಸವೇಶ್ವರ ಮಠದಲ್ಲಿ ಭಾನುವಾರ ಉದ್ಘಾಟನೆಗೊಂಡ 161 ಅಡಿ ಎತ್ತರದ ಪಂಚಮುಖಿ ಆಂಜನೇಯ ಪ್ರತಿಮೆ

161 ಅಡಿ ಎತ್ತರದ ಪಂಚಮುಖಿ ಆಂಜನೇಯ ಪ್ರತಿಮೆ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ತಾಲ್ಲೂಕಿನ ಬಿದನಗೆರೆ ಸತ್ಯಶನೇಶ್ವರ ದೇವಾಲಯದ ಬಸವೇಶ್ವರಮಠದಲ್ಲಿ ನಿರ್ಮಾಣಗೊಂಡಿರುವ 161 ಅಡಿ ಎತ್ತರದ ಪಂಚಮುಖಿ ಆಂಜನೇಯ ಪ್ರತಿಮೆಯನ್ನು ಭಾನುವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು.

'ಮುಂದಿನ ದಿನಗಳಲ್ಲಿ ಬಿದನಗೆರೆ ರಾಜ್ಯದ ಪ್ರಮುಖ ಪ್ರವಾಸಿ ತಾಣವಾಗುವುದರಲ್ಲಿ ಸಂದೇಹವಿಲ್ಲ' ಎಂದು ಬೊಮ್ಮಾಯಿ ಹೇಳಿದರು.

'161 ಅಡಿ ಎತ್ತರದ ಪಂಚಮುಖಿ ಆಂಜನೇಯ ವಿಗ್ರಹ ವಿಶ್ವದ ಎತ್ತರದ ವಿಗ್ರಹ ಎಂಬ ದಾಖಲೆ ಬರೆದಿದೆ. ಮಠದಲ್ಲಿ ಸಾಮಾಜಿಕ ಕಾರ್ಯಗಳು ನಿರಂತರವಾಗಿ ನಡೆಯಲಿ' ಎಂದು ನಂಜಾವಧೂತ ಸ್ವಾಮೀಜಿ ಆಶಿಸಿದರು. ಬಸವೇಶ್ವರ ಮಠದ ಪೀಠಾಧಿಕಾರಿ ಧನಂಜಯ್ಯ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠಾಧಿಕಾರಿ ವಚನಾನಂದ ಸ್ವಾಮೀಜಿ, ಅರೆಶಂಕರ ಮಠದ ಸಿದ್ದರಾಮಚೈತನ್ಯ ಸ್ವಾಮೀಜಿ, ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಸಂಸದ ಮುನಿಸ್ವಾಮಿ, ಶಾಸಕ ಡಾ.ರಂಗನಾಥ್ ಮತ್ತಿತರರು ಇದ್ದರು.

545 ಪಿಎಸ್‌ಐ ಹುದ್ದೆಗಳ ನೇಮಕಾತಿ • ಸಿಐಡಿ ಅಧಿಕಾರಿಗಳ ವಿಚಾರಣೆಯಿಂದ ಬಯಲು

ಒಎಂಆರ್ 'ಅಕ್ರಮ' ಎಸಗಿ 7ನೇ ರ‍್ಯಾಂಕ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದಕ್ಕೆ ಪುರಾವೆ ಪತ್ತೆಯಾಗಿದೆ. ಒಎಂಆರ್ (ಆಪ್ಟಿಕಲ್ ಮಾರ್ಕ್ಸ್ ರೆಕಗ್ನಿಷನ್) ಹಾಳೆ ತಿದ್ದಿ 7 ನೇ ರ‍್ಯಾಂಕ್ ಗಿಟ್ಟಿಸಿದ್ದ ಅಭ್ಯರ್ಥಿ ವೀರೇಶ್ ಎಂಬಾತನ ಅಕ್ರಮವನ್ನು ಸಿಐಡಿ ಅಧಿಕಾರಿಗಳು ಬಯಲು ಮಾಡಿದ್ದಾರೆ.

545 ಪಿಎಸ್‌ಐ ಹುದ್ದೆಗಳ ನೇಮಕಾತಿಗಾಗಿ 2021ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ದೈಹಿಕ ಹಾಗೂ ಲಿಖಿತ ಪರೀಕ್ಷೆ ನಡೆಸಿ 2022ರ ಜನವರಿ 19ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಆರೋಪಗಳು ಕೇಳಿಬಂದಿದ್ದವು. 'ಪಿಎಸ್‌ಐ ನೇಮಕಾತಿಯಲ್ಲೂ ಅಕ್ರಮ' ಶೀರ್ಷಿಕೆಯಡಿ 2022ರ ಜನವರಿ 25 ರ 'ಪ್ರಜಾವಾಣಿ'ಯ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾಗಿತ್ತು.

ಆಯ್ಕೆಯಾಗಿದ್ದ ಅಭ್ಯರ್ಥಿಗಳ ಉತ್ತರ ಪತ್ರಿಕೆಗಳ ಪರಿಶೀಲನೆ ನಡೆಸಿದ್ದ ನೇಮಕಾತಿ ವಿಭಾಗಕ್ಕೂ ಅನುಮಾನ ಬಂದಿತ್ತು. ಹೀಗಾಗಿ, ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಅಕ್ರಮದ ಬಗ್ಗೆ ವಿಚಾರಣೆ ನಡೆಸುವಂತೆ ರಾಜ್ಯ ಸರ್ಕಾರವು ಸಿಐಡಿಯ ಆರ್ಥಿಕ ಗುಪ್ತವಾರ್ತೆ ಘಟಕಕ್ಕೆ

> **ಸಿಐಡಿ ಅಧಿಕಾರಿಗಳೇ ನಗರಕ್ಕೆ ಬಂದು ವೀರೇಶ್ ವಿರುದ್ಧ ದೂರು ದಾಖಲಿಸಿದ್ದಾರೆ. ಆರೋಪಿಯನ್ನು ಬಂಧಿಸಿ ವಿಚಾರಣೆಗಾಗಿ ಕರೆದೊಯ್ದಿದ್ದಾರೆ**
>
> **ವೈ.ಎಸ್. ರವಿಕುಮಾರ್,** ಕಲಬುರಗಿ ನಗರ ಪೊಲೀಸ್ ಕಮಿಷನರ್

(ಎಫ್‌ಐಯು) ಸೂಚಿಸಿತ್ತು. ಎರಡು ತಿಂಗಳು ವಿಚಾರಣೆ ನಡೆಸಿರುವ ಸಿಐಡಿ ಅಧಿಕಾರಿಗಳು, ಕೆಲ ಅಭ್ಯರ್ಥಿಗಳು ಎಸಗಿದ್ದ ಅಕ್ರಮವನ್ನು ಪತ್ತೆ ಹಚ್ಚಿದ್ದಾರೆ.

ಸದ್ಯ ಅಭ್ಯರ್ಥಿ ವೀರೇಶ್ ಹಾಗೂ ಇತರರ ವಿರುದ್ಧ ಕ್ರಿಮಿನಲ್ ಪಿತೂರಿ (ಐಪಿಸಿ 120ಬಿ), ಸಹಿ ನಕಲು (ಐಪಿಸಿ 465), ಕೆಲಸ ಕೊಡಿಸುವುದಾಗಿ ವಂಚನೆ (417), ವಂಚನೆ (ಐಪಿಸಿ 420), ಅಪರಾಧ ಸಂಚು (ಐಪಿಸಿ 34) ಆರೋಪದಡಿ ಕಲಬುರಗಿಯ ಚೌಕ್ ಠಾಣೆಯಲ್ಲಿ ಶನಿವಾರ ಎಫ್‌ಐಆರ್ ದಾಖಲಿಸಿದ್ದಾರೆ. ಮತ್ತಷ್ಟು ಅಭ್ಯರ್ಥಿಗಳ ವಿರುದ್ಧ ರಾಜ್ಯದಾದ್ಯಂತ ಪ್ರಕರಣಗಳು ದಾಖಲಾಗುವ ಸಾಧ್ಯತೆಯೂ ಇದೆ.

'ಅಕ್ರಮದ ಬಗ್ಗೆ ಇನ್‌ಸ್ಪೆಕ್ಟರ್ ಕೆ.ಎಚ್. ದಿಲೀಪ್‌ಕುಮಾರ್ ವಿಚಾರಣೆ ನಡೆಸಿ ವರದಿ ಸಿದ್ಧಪಡಿಸಿದ್ದಾರೆ. ಅದರನ್ವಯ ದಾಖಲಾಗಿರುವ ಪ್ರಕರಣದಲ್ಲಿ ಅಭ್ಯರ್ಥಿ ವೀರೇಶ್‌ನನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಆತನನ್ನು ಕಸ್ಟಡಿಗೆ ಪಡೆದು ಬೆಂಗಳೂರಿಗೆ ಕರೆತಂದು ತನಿಖೆ ಮುಂದುವರಿಸಲಾಗುವುದು' ಎಂದು ಸಿಐಡಿ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಆರೋಪಿ ವೀರೇಶ್ ಎಎಸ್‌ಐ ಪುತ್ರ'

'ಆರೋಪಿ ವೀರೇಶ್ ಅವರ ತಂದೆ ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ಆಗಿದ್ದು, ಕಲಬುರಗಿ ಜಿಲ್ಲೆಯ ಠಾಣೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ಮಗನ ಅಕ್ರಮದ ಬಗ್ಗೆ ತಂದೆಯಿಂದಲೂ ಮಾಹಿತಿ ಪಡೆಯಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

21 ಪ್ರಶ್ನೆಗೆ ಉತ್ತರಿಸಿ, 121.87 ಅಂಕ: 'ಪಿಎಸ್‌ಐ ಹುದ್ದೆಗೆ ಅರ್ಜಿ (ಸಂಖ್ಯೆ 2271151) ಸಲ್ಲಿಸಿದ್ದ ವೀರೇಶ್ ಅವರಿಗೆ ನೋಂದಣಿ ಸಂಖ್ಯೆ- 9221946 ನೀಡಲಾಗಿತ್ತು. ಕಲಬುರಗಿಯ ಜಿಡಿಎ ಬಡಾವಣೆಯ ಗೋಕುಲ್ ನಗರದಲ್ಲಿರುವ ಜ್ಞಾನಜ್ಯೋತಿ ಇಂಗ್ಲಿಷ್ ಮಾಧ್ಯಮ ಶಾಲೆಯ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದರು' ಎಂದು ಸಿಐಡಿ ಅಧಿಕಾರಿ ಹೇಳಿದರು.

'ಪತ್ರಿಕೆ -2ರ (ಸಾಮಾನ್ಯ ಅಧ್ಯಯನ) ಒಎಂಆರ್ ಹಾಳೆಯಲ್ಲಿ ಕೇವಲ 21 ಪ್ರಶ್ನೆಗಳಿಗೆ ವೀರೇಶ್ ಉತ್ತರಿಸಿದ್ದರು. ಅದರ ನಕಲು ಪ್ರತಿಯನ್ನು ಅಭ್ಯರ್ಥಿಗೆ ನೀಡಿ, ಅಸಲಿ ಪ್ರತಿಯನ್ನು ಬೆಂಗಳೂರಿನ ಸಿಐಡಿ ಕಚೇರಿ ಆವರಣದಲ್ಲಿರುವ ನೇಮಕಾತಿ ವಿಭಾಗಕ್ಕೆ ಕಳುಹಿಸಲಾಗಿತ್ತು. ಆದರೆ, ವಿಭಾಗದಲ್ಲಿದ್ದ ಒಎಂಆರ್ ಅಸಲಿ ಪ್ರತಿಯಲ್ಲಿ 100 ಪ್ರಶ್ನೆಗಳಿಗೂ ಉತ್ತರಿಸಿರುವುದು ದಾಖಲಾಗಿದೆ. ಅದೇ ಪ್ರತಿಯನ್ನು ಮೌಲ್ಯಮಾಪನ ಮಾಡಿ, 121.875 ಅಂಕಗಳನ್ನು ನೀಡಲಾಗಿದೆ' ಎಂದೂ ತಿಳಿಸಿದರು.

'ಪತ್ರಿಕೆ-1ರಲ್ಲಿ (ಪ್ರಬಂಧ, ಭಾಷಾಂತರ, ಸಾರಾಂಶ ಬರಹ) 35 ಅಂಕ ಹಾಗೂ ಪತ್ರಿಕೆ-2ರಲ್ಲಿ 121.875 ಅಂಕ ಪಡೆದಿದ್ದ ವೀರೇಶ್, ಕಲ್ಯಾಣ ಕರ್ನಾಟಕ ಮೀಸಲಾತಿಯಲ್ಲಿ 7ನೇ ರ‍್ಯಾಂಕ್ ಪಡೆದು ಪಿಎಸ್‌ಐ ಹುದ್ದೆಗೆ ಆಯ್ಕೆಯಾಗಿದ್ದಾರೆ. ಅವರ ಆಯ್ಕೆಯನ್ನು ರದ್ದುಪಡಿಸುವಂತೆ ವರದಿಯಲ್ಲಿ ಕೋರಲಾಗಿದೆ' ಎಂದರು.

ಒಎಂಆರ್ ತಿದ್ದಿ ಅಕ್ರಮ: 'ಆರೋಪಿ ವೀರೇಶ್, ಪರೀಕ್ಷೆ ನಂತರ ಇತರರ ಸಹಾಯದಿಂದ ಅಸಲಿ ಒಎಂಆರ್ ಹಾಳೆ ಪಡೆದುಕೊಂಡಿದ್ದಾನೆ. ತಾನು ಬಿಟ್ಟಿದ್ದ ಜಾಗದಲ್ಲಿ ಸರಿ ಉತ್ತರಗಳನ್ನು ಭರ್ತಿ ಮಾಡಿದ್ದಾನೆ. ಅದೇ ಒಎಂಆರ್ ಹಾಳೆಯನ್ನು ನೇಮಕಾತಿ ವಿಭಾಗದಲ್ಲಿದ್ದ ಬಂಡಲ್‌ನಲ್ಲಿ ಸೇರಿಸುವಂತೆ ಮಾಡಿ ಅಕ್ರಮ ಎಸಗಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಸಿಐಡಿ ಅಧಿಕಾರಿ ತಿಳಿಸಿದರು.

ನೇಮಕಾತಿ ವಿಭಾಗದ ಸಿಬ್ಬಂದಿ ಶಾಮೀಲು?

'ರಾಜ್ಯದ ಎಲ್ಲ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದ ಅಭ್ಯರ್ಥಿಗಳ ಅಸಲಿ ಒಎಂಆರ್ ಹಾಳೆಗಳು ಬೆಂಗಳೂರಿನ ಪೊಲೀಸ್ ನೇಮಕಾತಿ ವಿಭಾಗಕ್ಕೆ ಬಂದಿದ್ದವು. ಅದೇ ಹಾಳೆಯನ್ನೇ ವೀರೇಶ್ ವಾಪಸು ಪಡೆದು ತಿದ್ದಿದ್ದಾನೆ. ಹೀಗಾಗಿ, ನೇಮಕಾತಿ ವಿಭಾಗದ ಸಿಬ್ಬಂದಿಯೂ ಅಕ್ರಮದಲ್ಲಿ ಶಾಮೀಲಾಗಿರುವ ಅನುಮಾನವಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ವೀರೇಶ್ ಮಾತ್ರವಲ್ಲದೇ ಮತ್ತಷ್ಟು ಅಭ್ಯರ್ಥಿಗಳು, ಒಎಂಆರ್ ಹಾಳೆ ತಿದ್ದಿ ಉತ್ತಮ ಅಂಕ ಪಡೆದು ಆಯ್ಕೆಯಾಗಿರುವ ಮಾಹಿತಿ ಇದೆ. ಅದಕ್ಕೆ ಸಂಬಂಧಪಟ್ಟ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದೆ. ಅಗತ್ಯಬಿದ್ದರೆ ವಿಭಾಗದ ಸಿಬ್ಬಂದಿಯನ್ನೂ ವಿಚಾರಣೆ ನಡೆಸಲಾಗುವುದು' ಎಂದೂ ತಿಳಿಸಿವೆ.

ತನಿಖೆ ಆರಂಭ: ಆರಗ

ಬೆಂಗಳೂರು: 545 ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ ನೇಮಕಾತಿಯಲ್ಲಿ ಅಕ್ರಮ ನಡೆದಿರುವ ಆರೋಪಕ್ಕೆ ಸಂಬಂಧಿಸಿದಂತೆ ಸಿಐಡಿ ತನಿಖೆ ಆರಂಭಿಸಲಾಗಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ಕಲಬುರಗಿಯ ಜ್ಞಾನಜ್ಯೋತಿ ಶಾಲೆಯ ಪರೀಕ್ಷಾ ಕೇಂದ್ರದಲ್ಲಿ ಅಕ್ರಮ ನಡೆದಿರುವ ಶಂಕೆ ಇದೆ. ಅಲ್ಲಿನ ಚೌಕ್ ಠಾಣೆಯಲ್ಲಿ ವೀರೇಶ್ ಮತ್ತು ಇತರರ ವಿರುದ್ಧ ಶನಿವಾರ ಎಫ್‌ಐಆರ್ ದಾಖಲಿಸಿದ್ದು, ನಂತರ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿದೆ ಎಂದರು.

'ಲಕ್ಷಾಂತರ ರೂಪಾಯಿ ನೀಡಿರುವ ಶಂಕೆ'

'ಪಿಎಸ್‌ಐ ಆಗಬೇಕೆಂಬ ಆಸೆ ಇಟ್ಟುಕೊಂಡಿದ್ದ ವೀರೇಶ್, ಲಕ್ಷಾಂತರ ರೂಪಾಯಿ ನೀಡಿ ಒಎಂಆರ್ ಅಸಲಿ ಹಾಳೆ ಪಡೆದುಕೊಂಡಿರುವ ಶಂಕೆ ಇದೆ. ಈತನಿಂದ ಹಣ ಪಡೆದಿರುವವರು ಯಾರು ಎಂಬುದು ತನಿಖೆಯಿಂದ ಗೊತ್ತಾಗಬೇಕು' ಎಂದು ಪೊಲೀಸ್ ಮೂಲಗಳು ಹೇಳಿವೆ.



ಹೊಸನಗರ ತಾಲ್ಲೂಕಿನ ರಾಮಚಂದ್ರಪುರ ಮಠದಲ್ಲಿ ಭಾನುವಾರ ರಾಮೋತ್ಸವದ ಅಂಗವಾಗಿ ರಥೋತ್ಸವ ನಡೆಯಿತು

ಸಿಡಿಲು ಬಡಿದು ಯುವಕ ಸಾವು

ಹುಬ್ಬಳ್ಳಿ: ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಬಂಕನೇರಿ ಗ್ರಾಮದಲ್ಲಿ ಭಾನುವಾರ ಸಂಜೆ ಸಿಡಿಲು ಬಡಿದು ಯುವಕ ನಾಗರಾಜ ಹನುಮಪ್ಪ ನಾಗನೂರ (22) ಹಾಗೂ ಗದಗ ಜಿಲ್ಲೆಯ ಡಂಬಳದ ಯುವಕ ಸಿಡಿಲು ಬಡಿದು ಸಾವಿಗೀಡಾಗಿದ್ದಾರೆ.

ವಿಜಯಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನ ನಾಗೂರ ಗ್ರಾಮದ ಜಮೀನೊಂದರಲ್ಲಿ ಆಕಳು ಸಿಡಿಲಿನಿಂದ ಮೃತಪಟ್ಟಿದೆ. ಬಬಲೇಶ್ವರ ತಾಲ್ಲೂಕಿನ ಯಕ್ಕುಂಡಿಯಲ್ಲಿ ಭಾರಿ ಬಿರುಗಾಳಿ ಸಹಿತಿ ಆಲಿಕಲ್ಲು ಮಳೆಯಾಗಿದೆ.

ವಿಜಯಪುರ ಜಿಲ್ಲೆಯಲ್ಲೇ ಪ್ರಥಮ ಬಾರಿಗೆ ಕೊಲ್ಹಾರದಲ್ಲಿ ರೈತ ಸಿದ್ದಪ್ಪ ಬಾಲಗೊಂಡ ಅವರು ತಮ್ಮ ಒಂದು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಕಾಶ್ಮೀರಿ ಸೇಬು ಹಣ್ಣುಗಳು ನೆಲಕ್ಕುರುಳಿವೆ.

ಬೆಳಗಾವಿ ನಗರದಲ್ಲಿ ಜೋರು ಮಳೆಯಾಗಿದೆ. ರಾಮದುರ್ಗ ಪಟ್ಟಣದಲ್ಲಿ ಆಲಿಕಲ್ಲು ಮಳೆ ಬಿದ್ದಿದೆ. ಹುಬ್ಬಳ್ಳಿಯಲ್ಲಿಯೂ ಕೆಲ ಸಮಯ ಗುಡುಗು ಸಹಿತ ಮಳೆಯಾಗಿದೆ.

ಶಿವಮೊಗ್ಗ: ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆ ಯಾಯಿತು. ಶಿವಮೊಗ್ಗ ತಾಲ್ಲೂಕು, ಭದ್ರಾವತಿ, ಹೊಸನಗರ, ಸೊರಬ, ಕೋಣಂದೂರಿನಲ್ಲಿ ಹಾಗೂ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ಗುಡುಗು, ಮಿಂಚು, ಬಿರುಗಾಳಿ ಸಹಿತ ಮಳೆಯಾಗಿದೆ.

ಬೊಮ್ಮಾಯಿ ಸಂಘ ಪರಿವಾರದ ಪುಂಡರ ಕೈಗೊಂಬೆ: ಸಿದ್ದರಾಮಯ್ಯ

'ಸರ್ಕಾರವನ್ನೇ ಸಂಘಪರಿವಾರಕ್ಕೆ ಅಡವಿಟ್ಟ ಸಿಎಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಮ್ಮ ಸಂಪುಟ ಮತ್ತು ಪಕ್ಷದ ಮೇಲೆ ನಿಯಂತ್ರಣವಿಲ್ಲ. ಸರ್ಕಾರವನ್ನೇ ಸಂಘ ಪರಿವಾರಕ್ಕೆ ಅಡವಿಟ್ಟಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, 'ಬೊಮ್ಮಾಯಿ ಜನರ ಗಮನವನ್ನು ಬೇರೆಡೆ ಸೆಳೆದು, ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಸರ್ಕಾರವನ್ನು ಸಂಘ ಪರಿವಾರಕ್ಕೆ ಹೊರಗುತ್ತಿಗೆಗೆ ನೀಡಿದ್ದಾರೆ. ಅಲ್ಲಿರುವ ಕೆಲವು ಪುಂಡರ ಕೈಗೆ ಅಧಿಕಾರ ನೀಡಿರುವಂತೆ ಕಾಣುತ್ತಿದೆ. ಸರ್ಕಾರವನ್ನು ಸಂಘ ಪರಿವಾರಕ್ಕೆ ಅಡವಿಟ್ಟರೆ ಕುರ್ಚಿ ಉಳಿಸಿಕೊಳ್ಳಬಹುದು ಎಂದು ಬೊಮ್ಮಾಯಿ ಕನಸು ಕಾಣುತ್ತಿದ್ದಾರೆ. ಈ ಪುಂಡಾಟಿಕೆ ಅವರ ಕುರ್ಚಿಯನ್ನೂ ಕಿತ್ತುಕೊಳ್ಳಲಿದೆ' ಎಂದರು.

ರಾಜ್ಯದ ಮುಖ್ಯಮಂತ್ರಿಯಾಗಿ ಬೊಮ್ಮಾಯಿ ಇನ್ನೂ ಅಧಿಕಾರದಲ್ಲಿದ್ದರೆ ಧಾರವಾಡದ ಮುಸ್ಲಿಂ ವರ್ತಕರ ಮೇಲೆ ದೌರ್ಜನ್ಯ ಎಸಗಿದ್ದ ಶ್ರೀರಾಮ ಸೇನೆಯ ಪುಂಡರನ್ನು ಒದ್ದು ಒಳಗೆ ಹಾಕಲು ಪೊಲೀಸರಿಗೆ ಆದೇಶ ನೀಡಬೇಕು. ಸಾಧ್ಯವಿಲ್ಲ ಎಂದಾದರೆ ರಾಜೀನಾಮೆ ನೀಡಿ ಕುರ್ಚಿಯ ಮಾನ ಕಾಪಾಡಬೇಕು ಎಂದು ಆಗ್ರಹಿಸಿದರು.

ರಾಜ್ಯ ಬೇಡದ ಕೂಸು, ಅಳುವ ಕೂಸುಗಳನ್ನು ನೋಡಿಯಾಗಿದೆ. ಈಗಿನದ್ದು ಆಡುವ ಗೊಂಬೆಯ ಸರ್ಕಾರ. ಆ ಕೂಸುಗಳಿಗೆ ಜೀವವಾದರೂ ಇತ್ತು. ಈಗಿನದ್ದು ಸಂಪೂರ್ಣ ನಿರ್ಜೀವ ಆಟದ ಗೊಂಬೆ. ಮುಖ್ಯಮಂತ್ರಿ ಸಂಘ ಪರಿವಾರದ ಪುಂಡರ ಕೈಯಲ್ಲಿನ ಆಟಿಕೆಯ ಗೊಂಬೆಯಂತಾಗಿದ್ದಾರೆ ಎಂದು ಟೀಕಿಸಿದರು.

ಬಿಜೆಪಿ ಪ್ರತಿಪಾದಿಸುವ 'ರಾಮ ರಾಜ್ಯ'ದ ಒಂದು ಚಿತ್ರವನ್ನು ರಾಮ ನವಮಿ ಸಮಯದಲ್ಲೇ ಶ್ರೀರಾಮ ಸೇನೆಯ ಗೂಂಡಾಗಳು ಧಾರವಾಡದಲ್ಲಿ ಜಗತ್ತಿನ ಎದುರು ಇಟ್ಟಿದ್ದಾರೆ. ಇಂತಹ ಗೂಂಡಾಗಳಿಗೆ ರಾಮನ ಹೆಸರು ಹೇಳುವ ಯಾವ ಯೋಗ್ಯತೆ ಇದೆ? ಧಾರವಾಡದಲ್ಲಿ ಕೇವಲ ಮುಸ್ಲಿಂ ವ್ಯಾಪಾರಿಯ ಮೇಲೆ ದಾಳಿಯಾಗಿಲ್ಲ. ಅದು ಕಲ್ಲಂಗಡಿ ಬೆಳೆಯುವ ರೈತರ ಮೇಲಿನ ದಾಳಿಯೂ ಹೌದು. ಹೀಗೆಯೇ ಬಿಟ್ಟರೆ ಇವರು ಎಲ್ಲರ ಮನೆ ಬಾಗಿಲನ್ನೂ ತಟ್ಟುತ್ತಾರೆ ಎಂದರು.

ಮೂಕ ಬಸವಣ್ಣ: ಸಿ.ಟಿ. ರವಿ, ಎನ್. ರವಿಕುಮಾರ್ ಮತ್ತಿತರ ಕೂಗುಮಾರಿಗಳು ರಾಜ್ಯದ ಪೊಲೀಸ್ ಮಹಾನಿರ್ದೇಶಕರ ಹೇಳಿಕೆಯನ್ನೇ ಧಿಕ್ಕರಿಸುತ್ತಿದ್ದಾರೆ. ಅವರನ್ನು ಬಾಯಿ ಮುಚ್ಚಿಸಲು ಆಗದ ಬೊಮ್ಮಾಯಿ ಮೂಕ ಬಸವಣ್ಣನಾಗಿದ್ದಾರೆ. ಇಂತಹ ತಂಟೆಕೋರರ ಹೇಳಿಕೆಯಿಂದ ಪೊಲೀಸ್ ಇಲಾಖೆಯ ನೈತಿಕ ಸ್ಥೈರ್ಯ ಕುಸಿಯುತ್ತಿದೆ ಎಂದು ಸಿದ್ದರಾಮಯ್ಯ ಟೀಕಿಸಿದರು.

ಹಿಂದೂಗಳನ್ನು ಪ್ರಚೋದಿಸುವುದು ಇವರ ಉದ್ದೇಶ. ಇಂತಹವರಿಂದ ಕಾನೂನು ಸುವ್ಯವಸ್ಥೆ ಕಾಪಾಡಲು ಸಾಧ್ಯವಿಲ್ಲ. ಇದು ಮುಖ್ಯಮಂತ್ರಿಯವರ ಪಾಪದ ಕೂಸು. ಬೀದಿ ಗೂಂಡಾಗಳ ಪುಂಡಾಟಿಕೆಯನ್ನು 'ಕ್ರಿಯೆಗೆ ಪ್ರತಿಕ್ರಿಯೆ' ಎಂದು ಬೊಮ್ಮಾಯಿ ಹೇಳಿದ್ದರು. ಆ ಬಳಿಕ ಕೊಲೆ, ಹಿಂಸಾಚಾರ, ಗಲಾಟೆ, ದೌರ್ಜನ್ಯಗಳ ಹೊಸ ಸರಣಿ ರಾಜ್ಯದಲ್ಲಿ ಪ್ರಾರಂಭವಾಗಿದೆ. ಇದರಿಂದ ಕಾನೂನು ವ್ಯವಸ್ಥೆಯೇ ಕುಸಿದುಬಿದ್ದು ನಾಗರಿಕ ಯುದ್ಧಕ್ಕೆ ದಾರಿಮಾಡಿಕೊಟ್ಟಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಪ್ರಮಾಣಪತ್ರ ನನಗೆ ಬೇಕಿಲ್ಲ: ಆರಗ ಜ್ಞಾನೇಂದ್ರ

ಬೆಂಗಳೂರು: 'ಗೃಹ ಸಚಿವನಾಗಿ ನಾನು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಈ ವಿಚಾರದಲ್ಲಿ ನನಗೆ ಸಿದ್ದರಾಮಯ್ಯ ಅವರಿಂದ ಪ್ರಮಾಣಪತ್ರ ಬೇಕಾಗಿಲ್ಲ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

'ಜ್ಞಾನೇಂದ್ರ ಅಸಮರ್ಥ ಗೃಹ ಸಚಿವ' ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ಕುರಿತು ಭಾನುವಾರ ಪ್ರತಿಕ್ರಿಯಿಸಿದ ಅವರು, 'ನಮ್ಮ ಪಕ್ಷ ಮತ್ತು ಮುಖ್ಯಮಂತ್ರಿ ಮೆಚ್ಚುವಂತೆ ಕೆಲಸ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸರಿಯಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿಲ್ಲದ ಕಾರಣದಿಂದ ರಾಜ್ಯದಲ್ಲಿ ಜಂಗಲ್ ರಾಜ್ ನಿರ್ಮಾಣವಾಗಿದೆ ಎಂದು ಆರೋಪಿಸುತ್ತಿದ್ದಾರೆ. ಅವರ ಪ್ರಮಾಣಪತ್ರದಿಂದ ನನ್ನ ಸಾಮರ್ಥ್ಯ ಅಳೆಯಲು ಸಾಧ್ಯವಿಲ್ಲ' ಎಂದರು.

'ನಾನು ಸಮರ್ಥವಾಗಿ ಕೆಲಸ ಮಾಡುತ್ತಿದ್ದೇನೆ, ಇಲಾಖೆಯನ್ನು ಸರಿಯಾಗಿ ನಿಭಾಯಿಸುತ್ತಿದ್ದೇನೆ. ಕೆಲವು ಘಟನೆಗಳನ್ನು ಮುಂದಿಟ್ಟುಕೊಂಡು ಅಸಮರ್ಥ ಎಂದು ಬಿಂಬಿಸುವುದು ಸರಿಯಲ್ಲ. ಯಾವುದೇ ಘಟನೆ ಸಂಭವಿಸಿದರೂ ವಿಳಂಬ ಮಾಡದೇ ಆರೋಪಿಗಳನ್ನು ಬಂಧಿಸಲಾಗುತ್ತಿದೆ' ಎಂದು ಹೇಳಿದರು.

ಸಿದ್ದರಾಮಯ್ಯ ಕಾಲದಲ್ಲಿ ಗೃಹ ಇಲಾಖೆಯೇ ನಿಷ್ಕ್ರಿಯವಾಗಿತ್ತು. ಯಾರೋ ಒಬ್ಬ ನಿವೃತ್ತ ಪೊಲೀಸ್ ಅಧಿಕಾರಿಯ ಕೈಗೆ ಗೃಹ ಇಲಾಖೆಯನ್ನು ಒಪ್ಪಿಸಿದ್ದರು. ಪಿಎಫ್‌ಐ ಸಂಘಟನೆ ವಿರುದ್ಧದ ಪ್ರಕರಣಗಳನ್ನು ಹಿಂಪಡೆದವರಿಂದ ಯಾವ ಪ್ರಮಾಣಪತ್ರವೂ ಬೇಕಿಲ್ಲ ಎಂದರು.

ನಾಳೆಯಿಂದ 3 ತಂಡಗಳಲ್ಲಿ ಬಿಜೆಪಿ ಪ್ರವಾಸ

ಬೆಂಗಳೂರು: ಮುಂದಿನ ವರ್ಷ ನಡೆಯುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬೂತ್ ಮಟ್ಟದ ಮತ್ತು ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆಗಳನ್ನು ಹಮ್ಮಿಕೊಳ್ಳಲು ಮಂಗಳವಾರದಿಂದ (ಏ.12) ಬಿಜೆಪಿ ನಾಯಕರು ಮೂರು ತಂಡಗಳಲ್ಲಿ ಪ್ರವಾಸ ನಡೆಸಲಿದ್ದಾರೆ.

ಮೂರು ವಿಭಾಗಗಳಲ್ಲಿ ಮೂರು ತಂಡಗಳು ಒಟ್ಟು 9 ಕಡೆಗಳಲ್ಲಿ ಸಭೆಗಳನ್ನು ನಡೆಸಲಿವೆ. ಇದೇ 23 ಕ್ಕೆ ಪ್ರವಾಸ ಮುಕ್ತಾಯವಾಗಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತು ಶಾಸಕ ಬಿ.ಎಸ್.ಯಡಿಯೂರಪ್ಪ ಈ ತಂಡಗಳ ನೇತೃತ್ವ ವಹಿಸಲಿದ್ದಾರೆ. ಪಕ್ಷದ ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್ ಅವರು ಯಡಿಯೂರಪ್ಪ ತಂಡದಲ್ಲಿರುತ್ತಾರೆ.

ಪ್ರತಿ ಜಿಲ್ಲಾ ಕೇಂದ್ರದಲ್ಲೂ ಕೋರ್ ಕಮಿಟಿ ಸಭೆ ನಡೆಯಲಿದೆ. ನಂತರ ಆಯಾ ಜಿಲ್ಲಾ ಪದಾಧಿಕಾರಿಗಳೊಂದಿಗೆ ಸಭೆ ನಡೆಯಲಿದೆ. ಜಿಲ್ಲೆಯ ಪ್ರಮುಖರೊಂದಿಗೆ ವೈಯಕ್ತಿಕ ನೆಲೆಯಲ್ಲಿ ಮಾತುಕತೆಯೂ ನಡೆಯಲಿದೆ. ಅಲ್ಲದೆ, ವಿಭಾಗ ಕೇಂದ್ರದ ಮಂಡಲಗಳ ಬೂತ್ ಅಧ್ಯಕ್ಷರ ಮತ್ತು ಶಕ್ತಿ ಕೇಂದ್ರದ ಪ್ರಮುಖರ ಸಮಾವೇಶವೂ ನಡೆಯಲಿದೆ.

ಈಗಾಗಲೇ ಬೂತ್ ಮಟ್ಟದಲ್ಲಿ ಚುನಾವಣೆಗಾಗಿ ಕಾರ್ಯಕರ್ತರನ್ನು ಸಕ್ರಿಯಗೊಳಿಸಲಾಗಿದ್ದು, ಬೂತ್ ಪ್ರಮುಖರಿಗೆ ಜವಾಬ್ದಾರಿಗಳನ್ನೂ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸ್ವಾಮೀಜಿಗಳ ಭೇಟಿ: ವಿವಿಧ ಸಮುದಾಯಗಳ ಮಠಾಧೀಶರನ್ನು ಭೇಟಿ ಮಾಡಿ ಅವರ 'ಆಶೀರ್ವಾದ' ಕೋರುವ ಮೂಲಕ ಆಯಾಯ ಸಮುದಾಯಗಳ ಜನರನ್ನು ಸೆಳೆಯುವ ಕಸರತ್ತೂ ಬಿಜೆಪಿ ಆರಂಭಿಸಲಿದೆ. ಅದರಲ್ಲೂ ವಿಶೇಷವಾಗಿ ದಲಿತ ಮತ್ತು ಹಿಂದುಳಿದ ವರ್ಗಗಳ ಮಠಾಧೀಶರನ್ನು ಸಂಪರ್ಕಿಸುವ ಕಾರ್ಯವೂ ನಡೆಯಲಿದೆ. ಇದಕ್ಕೆ ಪೂರಕ ಎಂಬಂತೆ ಇತ್ತೀಚೆಗೆ 55 ಮಠಗಳಿಗೆ ಒಟ್ಟು ₹119 ಕೋಟಿ ಅನುದಾನವನ್ನೂ ಬಿಡುಗಡೆ ಮಾಡಲಾಗಿತ್ತು. ಸೋಷಿಯಲ್ ಎಂಜಿನಿಯರಿಂಗ್‌ಗೂ ಇದು ಸಹಾಯಕವಾಗಲಿದೆ ಎಂದು ಮೂಲಗಳು ಹೇಳಿವೆ.

ಪ್ರತಿ ದಿನ ಸಚಿವರ ಸುದ್ದಿಗೋಷ್ಠಿ: ಪಕ್ಷದ ಸಂಸ್ಥಾಪನಾ ದಿನದ ಅಂಗವಾಗಿ ಬಿಜೆಪಿ ಆಡಳಿತವಿರುವ ಎಲ್ಲ ರಾಜ್ಯಗಳಲ್ಲಿ ಇದೇ 27 ರವರೆಗೆ ಪ್ರತಿ ದಿನ ಕನಿಷ್ಠ ಒಬ್ಬ ಸಚಿವರಿಂದ ತಮ್ಮ ಸರ್ಕಾರಗಳ ಸಾಧನೆಗಳನ್ನು ಜನರಿಗೆ ವಿವರಿಸಲು ಸುದ್ದಿಗೋಷ್ಠಿ ನಡೆಸುವಂತೆ ಪಕ್ಷದ ವರಿಷ್ಠರು ಸೂಚನೆ ನೀಡಿದ್ದಾರೆ.

ಎಲ್ಲ ರಾಜ್ಯಗಳಲ್ಲೂ ಸಚಿವರಿಂದ ಸುದ್ದಿಗೋಷ್ಠಿ ನಡೆಸಲಾಗುತ್ತಿದ್ದು, ಕರ್ನಾಟಕದಲ್ಲಿ ವಿ.ಸೋಮಣ್ಣ, ಕೆ.ಎಸ್. ಈಶ್ವರಪ್ಪ ಅವರಿಂದ ಈಗಾಗಲೇ ಸುದ್ದಿಗೋಷ್ಠಿ ನಡೆಸಿದ್ದು, ಇದು 27 ರವರೆಗೂ ನಡೆಯಲಿದೆ.

ತಹಶೀಲ್ದಾರ್ ಕಾಲಿಗೆ ಬಿದ್ದ ರೈತ

ತುಮಕೂರು: ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಕಂದಾಯ ಇಲಾಖೆಗೆ ಅಲೆದು ಸುಸ್ತಾದ ರೈತರೊಬ್ಬರು ಜಿಲ್ಲಾಧಿಕಾರಿ ಕಚೇರಿಯಲ್ಲಿ ತಹಶೀಲ್ದಾರ್ ಮೋಹನ್‌ಕುಮಾರ್ ಕಾಲು ಹಿಡಿದು ಗೋಗರೆಯುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ತಾಲ್ಲೂಕಿನ ನಾಗವಲ್ಲಿಯ ರೈತ ಮುನಿಯಪ್ಪ ಜಮೀನಿಗೆ ಸಾಗುವಳಿ ಪತ್ರ ಪಡೆದಿದ್ದರು. ಆದರೆ, ಜಮೀನಿನ ಅಕ್ಕಪಕ್ಕದವರು ಈ ವಿಚಾರವಾಗಿ ತಗಾದೆ ತೆಗೆದಿದ್ದರು. ಈ ವಿಷಯದ ಕುರಿತು ನ್ಯಾಯ ಕೊಡಿಸುವಂತೆ ಮುನಿಯಪ್ಪ ಹಲವು ದಿನಗಳಿಂದ ಕಂದಾಯ ಇಲಾಖೆಗೆ ಅಲೆದಾಡುತ್ತಿದ್ದರು.

ತಾಲ್ಲೂಕು ಕಚೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸಮಸ್ಯೆಗೆ ಸ್ಪಂದಿಸಿರಲಿಲ್ಲ. ಇದರಿಂದ ರೋಸಿ ಹೋದ ಮುನಿಯಪ್ಪ ನ್ಯಾಯ ಕೊಡಿಸುವಂತೆ ತಹಶೀಲ್ದಾರ್ ಕಾಲಿಗೆ ಬಿದ್ದು ಅಂಗಲಾಚಿದ್ದಾರೆ. ಅಧಿಕಾರಿಗಳ ಕಾರ್ಯವೈಖರಿಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

'ಎಫ್‌ಬಿಐ ತಂಡ ಭಾರತಕ್ಕೆ ಬಂದಿಲ್ಲ'

ನವದೆಹಲಿ: 'ಕರ್ನಾಟಕದಲ್ಲಿನ ಬಿಟ್ ಕಾಯಿನ್ ಪ್ರಕರಣ ಕುರಿತು ತನಿಖೆ ನಡೆಸಲು ಅಮೆರಿಕದ ಎಫ್‌ಬಿಐ ಅಧಿಕಾರಿಗಳ ತಂಡ ಭಾರತಕ್ಕೆ ಬಂದಿಲ್ಲ' ಎಂದು ಸಿಬಿಐ ಭಾನುವಾರ ಹೇಳಿದೆ.

'ತನಿಖೆ ನಡೆಸಲು ಎಫ್‌ಬಿಐ ತಂಡ ಭಾರತಕ್ಕೆ ಬಂದಿದೆ ಎಂಬ ವರದಿಗಳು ನಿರಾಧಾರ. ಪ್ರಕರಣ ಕುರಿತು ತನಿಖೆ ಕೈಗೊಳ್ಳುವ ಸಂಬಂಧ ಸಿಬಿಐಗೆ ಎಫ್‌ಬಿಐ ಯಾವುದೇ ಮನವಿಯನ್ನೂ ಸಲ್ಲಿಸಿಲ್ಲ' ಎಂದು ಸಿಬಿಐ ವಕ್ತಾರ ಆರ್.ಸಿ.ಜೋಶಿ ಹೇಳಿದ್ದಾರೆ.

'ಎಫ್‌ಬಿಐ ಸೇರಿದಂತೆ ಅಂತರರಾಷ್ಟ್ರೀಯ ತನಿಖಾ ಸಂಸ್ಥೆಗಳೊಂದಿಗೆ ಸಮನ್ವಯಕ್ಕಾಗಿ ಭಾರತದಲ್ಲಿ ನ್ಯಾಷನಲ್ ಸೆಂಟ್ರಲ್ ಬ್ಯುರೊ ಫಾರ್ ಇಂಟರ್‌ಪೋಲ್ ಇದೆ. ಹೀಗಾಗಿ ತನಿಖೆ ನಡೆಸುವ ಸಂಬಂಧ ಎಫ್‌ಬಿಐಗೆ ಅನುಮತಿ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಅವರು ಹೇಳಿದ್ದಾರೆ.

ರೋಗಿಗಳ ಸಂಬಂಧಿಗಳಿಗೆ ಊಟ–ತಿಂಡಿ ಸಮಸ್ಯೆ • ಸಂಸ್ಥೆಯ ಆವರಣದಲ್ಲಿ ಕ್ಯಾಂಟೀನ್ ನಿರ್ಮಿಸಲು ಆಗ್ರಹ

ಸರ್ಕಾರಿ ಆಸ್ಪತ್ರೆ ತಪ್ಪುಗ್ರಹಿಕೆ ನೀಗಿಸುವ ಆರ್‌ಜಿಐಸಿಡಿ

• ವರುಣ ಹೆಗಡೆ

ಬೆಂಗಳೂರು: 'ಪತಿಯು ಚಿಕಿತ್ಸೆಗಾಗಿ ಈ ಆಸ್ಪತ್ರೆಗೆ ದಾಖಲಾಗಿದ್ದು, ಇಲ್ಲಿಗೆ ಬಂದ ಮೇಲೆ ಸರ್ಕಾರಿ ಆಸ್ಪತ್ರೆ ಬಗೆಗಿನ ತಪ್ಪುಗ್ರಹಿಕೆ ದೂರವಾಗಿದೆ. ಸರ್ಕಾರಿ ಯೋಜನೆಗಳಡಿ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಇದೇ ಚಿಕಿತ್ಸೆಗೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತಿತ್ತು'.

ಹೊಸೂರು ರಸ್ತೆ ಬಳಿ ಇರುವ ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆಯ (ಆರ್‌ಜಿಐಸಿಡಿ) ಆಸ್ಪತ್ರೆಯ ಬಗ್ಗೆ ಕೆ.ಆರ್. ಮಾರುಕಟ್ಟೆಯ ನಿವಾಸಿ ಆಯಿಷಾ ಅವರ ಮನದ ಮಾತುಗಳಿವು. ರೋಗಿಯ ಸಹಾಯಕ್ಕಾಗಿ ಉಳಿದುಕೊಳ್ಳುವ ಬಂಧುಗಳಿಗೂ ಸ್ನಾನಕ್ಕೆ ಬಿಸಿ ನೀರಿನ ಸೌಲಭ್ಯ ಒದಗಿಸಿರುವ ಬಗ್ಗೆ ಹಾಗೂ ಆಸ್ಪತ್ರೆ ನಿರ್ವಹಣೆಯ ಬಗ್ಗೆಯೂ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಬಿಪಿಎಲ್ ಕುಟುಂಬದವರಿಗೆ ಅಗ್ಗದ ದರದಲ್ಲಿ ಗುಣಮಟ್ಟದ ಚಿಕಿತ್ಸೆ ದೊರೆಯುತ್ತಿದೆ. ಬಿಡುವಿನಲ್ಲಿ ವಿಹರಿಸಲು ಉದ್ಯಾನ, ಔಷಧ ವನವಿದೆ. ಎರಡು ಮಹಡಿಯ ಕಟ್ಟಡದಲ್ಲಿ ವಿಶಾಲವಾದ ವಾರ್ಡ್, ಶುದ್ಧ ಕುಡಿಯುವ ನೀರು ಸೇರಿದಂತೆ ವಿವಿಧ ಸೌಕರ್ಯಗಳನ್ನು ಹೊಂದಿರುವ ಈ ಆಸ್ಪತ್ರೆ ಬಗ್ಗೆ ಇಲ್ಲಿ ಚಿಕಿತ್ಸೆ ಪಡೆಯುವ ಬಹುತೇಕ ರೋಗಿಗಳು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು.

ಸ್ವಚ್ಛತೆಗೆ ಆದ್ಯತೆ: 'ಸಂಸ್ಥೆಯ ಆವರಣ, ವಾರ್ಡ್‌ಗಳಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ರೋಗಿಗಳಿಗೆ ರಾಗಿ ಮುದ್ದೆ, ಮೊಟ್ಟೆ ಸೇರಿ ಪೌಷ್ಟಿಕ ಊಟವನ್ನೂ ನೀಡಲಾಗುತ್ತಿದೆ. ರೋಗಿಯ ಜತೆಗೆ ಒಬ್ಬರಿಗೆ ಉಳಿಯಲು ಅವಕಾಶವಿದೆ. ಕುಡಿಯಲು ಬಿಸಿ ನೀರೂ ದೊರೆಯುತ್ತದೆ. ವೈದ್ಯರು ಉತ್ತಮವಾಗಿ ಚಿಕಿತ್ಸೆ ಒದಗಿಸುತ್ತಿದ್ದಾರೆ' ಎಂದು ರೋಗಿಗಳ ಸಂಬಂಧಿಗಳು ಮೆಚ್ಚುಗೆ ವ್ಯಕ್ತಪಡಿಸಿದರು.

'ಶ್ವಾಸಕೋಶಕ್ಕೆ ಹಾನಿಯಾಗಿದ್ದರಿಂದ ಆಸ್ಪತ್ರೆಗೆ ದಾಖಲಾಗಿ, ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೆ. ಈಗ ಚೇತರಿಸಿಕೊಳ್ಳುತ್ತಿದ್ದೇನೆ. ವೈದ್ಯರು ಉತ್ತಮವಾಗಿ ಚಿಕಿತ್ಸೆ ನೀಡಿದ್ದಾರೆ. ವಾರ್ಡ್‌ಗಳು ಸ್ವಚ್ಛವಾಗಿವೆ. ಸಕಾಲಕ್ಕೆ ಊಟ–ತಿಂಡಿ ಒದಗಿಸಲಾಗುತ್ತಿದೆ' ಎಂದು ಕಲಬುರಗಿಯ ರೋಗಿಯೊಬ್ಬರು ತಿಳಿಸಿದರು.

'ಕೋವಿಡ್ ಸೋಂಕಿತರಿಗೆ ಚಿಕಿತ್ಸೆ ಒದಗಿಸುವಾಗ ಅಧಿಕ ಕಾರ್ಯದೊತ್ತಡದಲ್ಲಿ ಕೆಲಸ ಮಾಡಬೇಕಾಯಿತು. ಈಗ ಆಸ್ಪತ್ರೆಯಲ್ಲಿ ರೋಗಿಗಳ ಸಂಖ್ಯೆ ಕಡಿಮೆ ಇರುವುದರಿಂದ ಕೆಲಸದೊತ್ತಡವೂ ಕಡಿಮೆ ಆಗಿದೆ' ಎಂದು ಆಸ್ಪತ್ರೆ ಸಿಬ್ಬಂದಿಯೊಬ್ಬರು ತಿಳಿಸಿದರು.

ಈ ಸಂಸ್ಥೆಯು ಕ್ಷಯರೋಗ ಮತ್ತು ಎದೆ ರೋಗಗಳ ಚಿಕಿತ್ಸೆಗೆ ಹೆಸರುವಾಸಿ. ಇಲ್ಲಿ ಚಿಕಿತ್ಸೆ ಪಡೆದುಕೊಳ್ಳಲು ರಾಜ್ಯದ ವಿವಿಧ ಜಿಲ್ಲೆಗಳಲ್ಲದೇ, ಹೊರರಾಜ್ಯಗಳಿಂದಲೂ ರೋಗಿಗಳು ಬರುತ್ತಾರೆ. ನಗರದಲ್ಲಿ 2020ರ ಮಾರ್ಚ್‌ನಲ್ಲಿ ಕೋವಿಡ್ ಪ್ರಕರಣಗಳು ಪತ್ತೆಯಾದಾಗ ಇಲ್ಲಿಯೇ ಕೊರೊನಾ ಸೋಂಕಿತರ ಚಿಕಿತ್ಸೆಗೆ ಅವಕಾಶ ಕಲ್ಪಿಸಲಾಗಿತ್ತು.

ಕೊರೊನಾ ಸೋಂಕಿತರ ಸಂಖ್ಯೆ ಏರಿಕೆ ಕಂಡಾಗ ಆಸ್ಪತ್ರೆಯನ್ನು ಪೂರ್ಣ ಪ್ರಮಾಣದಲ್ಲಿ ಕೋವಿಡ್ ಆಸ್ಪತ್ರೆಯನ್ನಾಗಿ ಪರಿವರ್ತಿಸಿ, ಚಿಕಿತ್ಸೆ ನೀಡಲಾಗಿತ್ತು. ಇದರಿಂದಾಗಿ ಎದೆರೋಗಗಳನ್ನು ಎದುರಿಸುತ್ತಿರುವವರಿಗೆ ಚಿಕಿತ್ಸೆ ಸಮಸ್ಯೆಯಾಗಿತ್ತು. ಈಗ ಕೋವಿಡ್ ನಿಯಂತ್ರಣಕ್ಕೆ ಬಂದಿರುವುದರಿಂದ ಕೋವಿಡೇತರ ಚಿಕಿತ್ಸೆಗೆ ಇಲ್ಲಿ ಆದ್ಯತೆ ನೀಡಲಾಗುತ್ತಿದೆ.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಶೀತ ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆ ಇರುವವರಿಗೆ ಸಂಸ್ಥೆಯ ಹಿಂಭಾಗ ತಾತ್ಕಾಲಿಕ ಆಸ್ಪತ್ರೆ (ಮೇಕ್ ಶಿಫ್ಟ್) ನಿರ್ಮಿಸಲಾಗಿತ್ತು. 200 ಹಾಸಿಗೆಗಳ ಮೇಕ್ ಶಿಫ್ಟ್ ಆಸ್ಪತ್ರೆಯನ್ನೂ ಈಗ ಕೋವಿಡೇತರ ಚಿಕಿತ್ಸೆಗೆ ಬಳಸಿಕೊಳ್ಳಲಾಗುತ್ತಿದೆ. ಇದನ್ನು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ₹ 200 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿತ್ತು.

ಯಾವುದೇ ಹೊಸಸೋಂಕು ಕಾಣಿಸಿಕೊಂಡರೂ ಚಿಕಿತ್ಸೆ ಒದಗಿಸಲು ಸರ್ಕಾರ ಈ ಸಂಸ್ಥೆಯನ್ನೇ ಆಯ್ಕೆಮಾಡಿದೆ. ಹಿಂದೆ ಸಾರ್ಸ್, ಎಬೋಲಾ, ಎಚ್‌1ಎನ್‌1, ನಿಫಾ ಕಾಣಿಸಿಕೊಂಡಿದ್ದ ಸಂದರ್ಭದಲ್ಲಿಯೂ ಈ ಸಂಸ್ಥೆಯಲ್ಲೇ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಲಾಗಿತ್ತು.



ರಾಜೀವ್ ಗಾಂಧಿ ಎದೆ ರೋಗಗಳ ಸಂಸ್ಥೆಯ ಹೊರನೋಟ –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

'ಸಹಾಯಕರಿಗೆ ವಿಶ್ರಾಂತಿ ಧಾಮ'



'ಸಂಸ್ಥೆಯಲ್ಲಿ ಪ್ರತಿನಿತ್ಯ ಬೆಳಿಗ್ಗೆ ಮತ್ತು ರಾತ್ರಿ ವ್ಯವಸ್ಥೆಯ ಬಗ್ಗೆ ರೋಗಿಗಳಿಂದ ಹಾಗೂ ಅವರ ಸಹಾಯಕರಿಂದ ಮಾಹಿತಿ ಸಂಗ್ರಹಿಸಿ, ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ. ಸ್ವಚ್ಛತೆ ಮತ್ತು ಗುಣಮಟ್ಟದ ಚಿಕಿತ್ಸೆಗೆ ಆದ್ಯತೆ ನೀಡಲಾಗಿದೆ. ಎರಡು ಎಕರೆ ಪ್ರದೇಶದಲ್ಲಿ ಮೂರು ಮಹಡಿಯ ವಿಶ್ರಾಂತಿ ಧಾಮ ನಿರ್ಮಿಸಲಾಗುತ್ತಿದೆ. ಇದು ₹ 10 ಕೋಟಿ ವೆಚ್ಚದಲ್ಲಿ ತಲೆ ಎತ್ತಲಿದ್ದು, ಮೂರು ಮಹಡಿಗಳನ್ನು ಒಳಗೊಳ್ಳಲಿದೆ. ಆರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳುತ್ತದೆ. ಅಲ್ಲಿ ರೋಗಿಗಳ ಸಹಾಯಕರು ಸೇರಿದಂತೆ 250 ಮಂದಿಗೆ ಉಳಿದುಕೊಳ್ಳಲು ಅವಕಾಶ ಕಲ್ಪಿಸಲು ಸಾಧ್ಯ' ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

'ಸಹಾಯಕರಿಗೆ ಊಟ ಮಾಡಲು ಆಸ್ಪತ್ರೆ ಒಳಗಡೆ ಕಟ್ಟೆ ನಿರ್ಮಿಸಿ, ವ್ಯವಸ್ಥೆ ಮಾಡಿಕೊಡಲಾಗಿದೆ. ಕ್ಯಾಂಟೀನ್ ನಿರ್ಮಿಸುವ ಪ್ರಯತ್ನ ನಡೆಯುತ್ತಿದೆ. ಕ್ಷಯರೋಗಿಗಳಿದ್ದಾರೆ ಎಂಬ ಕಾರಣಕ್ಕೆ ಕ್ಯಾಂಟೀನ್ ತೆರೆಯಲು ಕೆಲವರು ಹಿಂದೇಟು ಹಾಕಿದ್ದಾರೆ. ಕ್ಯಾಂಟೀನ್‌ಗೆ ಸಂಬಂಧಿಸಿ ಮೂರು ನಾಲ್ಕು ಅರ್ಜಿಗಳು ಬಂದಿವೆ' ಎಂದು ಹೇಳಿದರು.

ಅಂಕಿ ಅಂಶಗಳು

470 ಆಸ್ಪತ್ರೆಯ ಹಾಸಿಗೆಗಳ ಸಾಮರ್ಥ್ಯ	**200-250** ಆಸ್ಪತ್ರೆಗೆ ದಿನದಲ್ಲಿ ಭೇಟಿ ನೀಡುವ ಹೊರರೋಗಿಗಳ ಸರಾಸರಿ ಸಂಖ್ಯೆ
170-180 ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸರಾಸರಿ ಒಳರೋಗಿಗಳು	**30** ಆಸ್ಪತ್ರೆಯಲ್ಲಿ ಲಭ್ಯ ಇರುವ ತಜ್ಞ ವೈದ್ಯರು



ವೈದ್ಯರು ಚೆನ್ನಾಗಿ ಕಾಳಜಿ ವಹಿಸುತ್ತಾರೆ. ಸ್ವಚ್ಛತೆ ನಡೆಯುವ ವೇಳೆ ಸಹಾಯಕರನ್ನು ಹೊರಗೆ ಕಳುಹಿಸಲಾಗುತ್ತದೆ. ವಿಶ್ರಾಂತಿಗೆ ಹೊರಗಡೆ ಶೆಡ್ ನಿರ್ಮಿಸಿದರೆ ಉತ್ತಮ

ರಾಕೇಶ್, ಚಿಕ್ಕಬಳ್ಳಾಪುರ




ವೈದ್ಯರು ರೋಗಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಸಹಾಯಕರಿಗೂ ಇರಲು ವ್ಯವಸ್ಥೆ ಕಲ್ಪಿಸಲಾಗಿದೆ. ಉತ್ತಮ ವ್ಯವಸ್ಥೆ ಆಸ್ಪತ್ರೆಯಲ್ಲಿದೆ

ಮಂಗಮ್ಮ, ಜಯನಗರ

ಸರ್ಕಾರಿ ಆಸ್ಪತ್ರೆ ಹೀಗಿದೆ ವ್ಯವಸ್ಥೆ 5

ರೋಗಿಯ ಜತೆಗೆ ಇರುವವರಿಗೆ ಊಟ–ತಿಂಡಿ ನೀಡಿದರೆ ಅನುಕೂಲ. ಇಲ್ಲ ಕಡಿಮೆ ಹಣಕ್ಕೆ ಊಟ–ತಿಂಡಿ ಒದಗಿಸಬೇಕು. ರೋಗಿಗಳನ್ನು ಗಾಲಿ ಕುರ್ಚಿಯಲ್ಲಿ ಕರೆದೊಯ್ಯಲು ಹಣ ಕೇಳುತ್ತಾರೆ

ವೀರಣ್ಣ, ಕಲಬುರಗಿ



ಮಗನಿಗೆ ಶಸ್ತ್ರಚಿಕಿತ್ಸೆಯಾಗಿದೆ. ಒಂದು ತಿಂಗಳಿಂದ ಆಸ್ಪತ್ರೆಯಲ್ಲಿ ಇದ್ದೇನೆ. ಉತ್ತಮವಾದ ಚಿಕಿತ್ಸೆ ದೊರೆಯುತ್ತಿದೆ. ಎಲ್ಲ ಸೌಲಭ್ಯವೂ ಇದೆ

ಎಚ್‌.ಎಂ.ಬಸಪ್ಪಯ್ಯ, ಶಿಕಾರಿಪುರ

'ಮಿಲ್ಕ್ ಪಾರ್ಲರ್, ಹಣ್ಣಿನ ಅಂಗಡಿ ಅಗತ್ಯ'

ರೋಗಿಗಳಿಗೆ ಆಸ್ಪತ್ರೆಯಲ್ಲಿಯೇ ಊಟ–ತಿಂಡಿ ತಯಾರಿಸಿ, ಒದಗಿಸಲಾಗುತ್ತದೆ. ರೋಗಿಗಳ ಸಹಾಯಕರು ಹೊರಗೆ ಊಟ–ತಿಂಡಿ ಸೇವಿಸಬೇಕು. ಆಸ್ಪತ್ರೆ ಆವರಣದಲ್ಲಿ ಕ್ಯಾಂಟೀನ್ ಇಲ್ಲದಿರುವುದು ಸಮಸ್ಯೆಯಾಗಿದೆ. ಹೀಗಾಗಿ, ಕ್ಯಾಂಟೀನ್ ನಿರ್ಮಿಸಿ, ರಿಯಾಯಿತಿ ದರದಲ್ಲಿ ಊಟ–ತಿಂಡಿಗಳನ್ನು ಒದಗಿಸಬೇಕು ಎಂಬುದು ರೋಗಿಗಳ ಸಂಬಂಧಿಗಳ ಮನವಿ. ರೋಗಿಗಳಿಗೆ ಹಾಲು–ಹಣ್ಣುಗಳನ್ನು ಒದಗಿಸಲು ಮಿಲ್ಕ್ ಪಾರ್ಲರ್ ಹಾಗೂ ಹಣ್ಣಿನ ಅಂಗಡಿ ತೆರೆಯಬೇಕು ಎಂದು ಆಸ್ಪತ್ರೆಗೆ ದಾಖಲಾದವರ ಸಂಬಂಧಿಗಳು ಒತ್ತಾಯಿಸಿದ್ದಾರೆ.

'ಆಸ್ಪತ್ರೆ ಆವರಣದಲ್ಲಿ ಕ್ಯಾಂಟೀನ್ ಇಲ್ಲದಿರುವುದರಿಂದ ಊಟ–ತಿಂಡಿ ಸಮಸ್ಯೆ ಆಗುತ್ತಿದೆ. ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ಆವರಣದಲ್ಲಿ ಕ್ಯಾಂಟೀನ್ ಇದೆ. ಅಲ್ಲಿ ಎರಡು ಇಡ್ಲಿಗೆ ₹ 40 ಹಾಗೂ ದೋಸೆಗೆ ₹ 50 ಪಾವತಿಸಬೇಕಾಗುತ್ತದೆ. ದಿನವೊಂದಕ್ಕೆ ಊಟ–ತಿಂಡಿಗೆ ₹ 200 ಕ್ಕೂ ಅಧಿಕ ವೆಚ್ಚ ಆಗುತ್ತಿದೆ. ಆಸ್ಪತ್ರೆಯಲ್ಲಿ ಸಹಾಯಕರೊಬ್ಬರಿಗೆ ಉಚಿತವಾಗಿ ಊಟ–ತಿಂಡಿ ನೀಡಿದರೆ ಅಥವಾ ಕ್ಯಾಂಟೀನ್ ನಿರ್ಮಿಸಿ, ರಿಯಾಯತಿ ದರದಲ್ಲಿ ಒದಗಿಸಿದರೆ ಅನುಕೂಲ ಆಗುತ್ತದೆ' ಎಂದು ರೋಗಿಗಳ ಸಹಾಯಕರು ತಿಳಿಸಿದರು.

ಸುದ್ದಿ 2 ನಿಮಿಷ

ಕೆಎಸ್‌ಒಯು ಹಗರಣ ಸಿಬಿಐ ತನಿಖೆ ಸಾಧ್ಯತೆ

ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ (ಕೆಎಸ್‌ಒಯು) ಅಕ್ರಮಗಳಿಗೆ ಸಂಬಂಧಿಸಿ ಸಿಬಿಐ ತನಿಖೆ ನಡೆಸಲು ರಾಜ್ಯಪಾಲರು ಒಪ್ಪಿಗೆ ಸೂಚಿಸಿದ್ದಾರೆ.

'ವಿಶ್ವವಿದ್ಯಾಲಯದ ಸಹಭಾಗಿತ್ವದ ಸಂಸ್ಥೆಗಳು 2009–10 ಹಾಗೂ 2015–16ರ ನಡುವೆ ವಿದ್ಯಾರ್ಥಿಗಳಿಂದ ಸಂಗ್ರಹಿಸಿರುವ ಶುಲ್ಕ ದುರುಪಯೋಗ ಸಂಬಂಧ ವಿಶ್ವವಿದ್ಯಾಲಯದ ಕುಲಸಚಿವರು ಪತ್ರ ಬರೆದಿದ್ದಾರೆ. ವಿ.ವಿ ಶಿಫಾರಸ್ಸಿನಂತೆ ಸಮಗ್ರ ತನಿಖೆ ನಡೆಸಲು ರಾಜ್ಯಪಾಲರು ಬಯಸಿದ್ದಾರೆ' ಎಂದು ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯು ಉನ್ನತ ಶಿಕ್ಷಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರದ ಮೂಲಕ ನಿರ್ದೇಶಿಸಿದ್ದಾರೆ.

ಅಕ್ರಮಗಳ ಸಂಬಂಧ ಸಲ್ಲಿಕೆಯಾಗಿದ್ದ 'ಬಿ' ರಿಪೋರ್ಟ್ ತಿರಸ್ಕರಿಸಿದ್ದ ಮೈಸೂರಿನ ಸಿಜೆಎಂ ನ್ಯಾಯಾಲಯ ಹೊಸದಾಗಿ ತನಿಖೆ ನಡೆಸಲು ಆದೇಶಿಸಿತ್ತು. ಈ ಸಂಬಂಧ ಮತ್ತೆ ಪೊಲೀಸರಿಗೆ ದೂರು ನೀಡಲಾಗುವುದು ಎಂದು ವಿ.ವಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಪಿನ್ ರಾವತ್ ಉದ್ಯಾನ ಲೋಕಾರ್ಪಣೆ



ಬೆಂಗಳೂರು: ಪದ್ಮನಾಭನಗರ ವಾರ್ಡ್‌ನಲ್ಲಿ ಬಿಬಿಎಂಪಿ ವತಿಯಿಂದ ನಿರ್ಮಿಸಿರುವ 'ಜನರಲ್ ಬಿಪಿನ್ ರಾವತ್ ಸ್ವಾತಂತ್ರ್ಯ ಉದ್ಯಾನ'ವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಲೋಕಾರ್ಪಣೆ ಮಾಡಿದರು.

ಒಂದು ಎಕರೆ ಪ್ರದೇಶದಲ್ಲಿ ₹ 2 ಕೋಟಿ ವೆಚ್ಚದಲ್ಲಿ ಉದ್ಯಾನ ನಿರ್ಮಿಸಲಾಗಿದೆ. ಮಂಟಪ (ಗಾಜೆಬೊ) ಹಾಗೂ ಸ್ವಾತಂತ್ರ್ಯ ಸಂಗ್ರಾಮದ ಪ್ರತಿಕೃತಿ, ಆಲಂಕಾರಿಕ ಗ್ರಿಲ್‌ಗಳ ಸುಸಜ್ಜಿತ ಆವರಣ ಗೋಡೆ, ಆಕರ್ಷಕ ಪ್ರವೇಶದ್ವಾರ ಇದರ ಮೆರುಗು ಹೆಚ್ಚಿಸಿವೆ.

215 ಮೀಟರ್ ಉದ್ದದ ನಡಿಗೆ ಪಥವನ್ನು ನಿರ್ಮಿಸಲಾಗಿದ್ದು, ಅದಕ್ಕೆ ಕಾಬಲ್ ಸ್ಟೋನ್‌ಗಳನ್ನು ಪೋಣಿಸಲಾಗಿದೆ. ಇಲ್ಲಿಗೆ ಬರುವ ವಿಹಾರಿಗಳು ವಿಶ್ರಾಂತಿ ಪಡೆಯಲು 24 ಕಡೆ ಕಲ್ಲಿನ ಆಸನಗಳನ್ನು ಹಾಗೂ ಐದು ಕಡೆ ವಿಹಾರ ಮಂಟಪಗಳನ್ನು (ಪರ್ಗೋಲಾ) ಹಾಗೂ 12 ಕಡೆ ಆಕರ್ಷಕ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ.

ಉದ್ಯಾನಕ್ಕೆ ನೀರು ಪೂರೈಸಲೆಂದೇ ಕೊಳವೆಬಾವಿ ಕೊರೆಯಿಸಲಾಗಿದೆ. ವ್ಯಾಯಾಮ ಪರಿಕರಗಳನ್ನು ಅಳವಡಿಸಲಾಗಿದೆ. ಕಂದಾಯ ಸಚಿವ ಆರ್. ಅಶೋಕ, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಬಿ.ಎಸ್ ಯಡಿಯೂರಪ್ಪ, ಎಂ.ಕೃಷ್ಣಪ್ಪ, ಸತೀಶ್ ರೆಡ್ಡಿ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ್ ಗುಪ್ತ ಉಪಸ್ಥಿತರಿದ್ದರು.



ನಗರದ ಒಟಿಸಿ ಮುಖ್ಯರಸ್ತೆಯಲ್ಲಿ ಭಾನುವಾರ ನಡೆದ ಶೋಭಾಯಾತ್ರೆಯಲ್ಲಿ ಪಾಲ್ಗೊಂಡಿದ್ದ ಭಕ್ತಾದಿಗಳು – ಪ್ರಜಾವಾಣಿ ಚಿತ್ರ.



ನಗರದ ಆನಂದರಾವ್ ವೃತ್ತದ ಬಳಿಯ ಪಟಾಲ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ರಾಮ, ಲಕ್ಷ್ಮಣ್, ಹನುಮನ ವೇಷಧಾರಿಗಳು ಗಮನಸೆಳೆದರು

ಕೊಳೆಗೇರಿ ನಿವಾಸಿಗಳಿಗೆ ಹಕ್ಕುಪತ್ರ ವಿತರಣೆ

ಬೆಂಗಳೂರು: ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೊಳೆಗೇರಿ ಪ್ರದೇಶಗಳಲ್ಲಿ ವಾಸಿಸುವ 2 ಸಾವಿರ ಮಂದಿಗೆ ಶನಿವಾರ ಹಕ್ಕುಪತ್ರ ವಿತರಿಸಲಾಯಿತು.

ಇದೇ ವೇಳೆ ಪಾರ್ವತಿಪುರದಲ್ಲಿ ಬಹುಮಹಡಿ ಕಟ್ಟಡವನ್ನೂ ಉದ್ಘಾಟಿಸಿದ ವಸತಿ ಸಚಿವ ವಿ.ಸೋಮಣ್ಣ, 'ಇಲಾಖೆಯು 3 ಲಕ್ಷ ಮನೆಗಳನ್ನು ನಿರ್ಮಿಸುವ ಯೋಜನೆ ಕೈಗೊಂಡಿದೆ. ರಾಜ್ಯದಲ್ಲಿ 28 ಸಾವಿರ ಕೊಳಚೆ ಪ್ರದೇಶಗಳಿವೆ' ಎಂದರು. 'ಹಕ್ಕುಪತ್ರವನ್ನು ಮಹಿಳೆಯರ ಹೆಸರಿಗೆ ನೋಂದಣಿ ಮಾಡಿಕೊಡಲಾಗುತ್ತಿದೆ. ಚಿಕ್ಕಪೇಟೆ ಕ್ಷೇತ್ರದಲ್ಲಿ 1 ಸಾವಿರ ಮನೆಗಳ ನಿರ್ಮಾಣಕ್ಕೆ ಆದೇಶ ನಿಡಲಾಗಿದೆ' ಎಂದರು.

ಸಂಸದ ತೇಜಸ್ವಿ ಸೂರ್ಯ, 'ದೇಶದಲ್ಲಿ ವಸತಿ ಇಲ್ಲದ 80 ಲಕ್ಷ ಕುಟುಂಬಗಳಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮನೆ ನಿರ್ಮಿಸಿಕೊಡಲಾಗುತ್ತಿದೆ' ಎಂದರು.

ಶಾಸಕ ಉದಯ್ ಬಿ.ಗರುಡಾಚಾರ್, 'ಪಾರ್ವತಿಪುರದ 45 ಕುಟುಂಬಗಳಿಗೆ ಬಹುಮಹಡಿ ವಸತಿ ಕಟ್ಟಡ ನಿರ್ಮಿಸಲಾಗಿದೆ' ಎಂದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್, ಕೊಳಗೇರಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ವೆಂಕಟೇಶ್, ಗರುಡಾ ಫೌಂಡೇಷನ್ ಸ್ಥಾಪಕಿ ಮೇದಿನಿ ಗರುಡಾಚಾರ್, ವಾಣಿ.ವಿ.ರಾವ್, ಡಿ.ಎನ್.ರಮೇಶ್, ಪ್ರತಿಭಾ ಧನರಾಜ್, ಭಾಗ್ಯವತಿ ಅಮರೇಶ್ ಭಾಗವಹಿಸಿದ್ದರು.



'ರೇವಾ ಅಭಿನಂದನ' ಕಾರ್ಯಕ್ರಮವನ್ನು ಡಾ.ಪಿ.ಶ್ಯಾಮರಾವ್ ಉದ್ಯಾಟಿಸಿದರು. ಡಾ.ಎಂ.ಧನಂಜಯ ಗುರುಪ್ರೀತ್ ಜಗ್ಗಿ ಇತರರಿದ್ದಾರೆ

ರೇವಾ ವಿ.ವಿಯ 2,800 ವಿದ್ಯಾರ್ಥಿಗಳಿಗೆ ಉದ್ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇವಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿರುವ 2,800 ವಿದ್ಯಾರ್ಥಿಗಳು ಈ ಸಾಲಿನಲ್ಲಿ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಪಡೆದಿದ್ದಾರೆ. ವಿಶ್ವವಿದ್ಯಾಲಯದ ವೃತ್ತಿ ಮಾರ್ಗದರ್ಶನ ಕೇಂದ್ರದ ವತಿಯಿಂದ ಶನಿವಾರ ಏರ್ಪಡಿಸಿದ್ದ 'ರೇವಾ ಅಭಿನಂದನ' ಕಾರ್ಯಕ್ರಮದಲ್ಲಿ ಈ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ಕುಲಾಧಿಪತಿ ಪ್ರೊ.ಪಿ.ಶ್ಯಾಮರಾವ್ ಅವರು ಮಾತನಾಡಿ, 'ವಿದ್ಯಾರ್ಥಿಗಳ ಗಮನಾರ್ಹ ಸಾಧನೆಯು ನಮಗೆ ಹೆಮ್ಮೆ ಮೂಡಿಸಿದೆ. ಸಂಸ್ಥೆಯ ವಿದ್ಯಾರ್ಥಿಗಳು ಉದ್ಯೋಗದಾತರಾಗಬೇಕು ಎಂಬುದು ನಮ್ಮ ಕನಸು. ಇದು 2025ರ ಒಳಗೆ ಕೈಗೂಡಲಿದೆ' ಎಂದು ಭರವಸೆ ವ್ಯಕ್ತಪಡಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ಧನಂಜಯ ಅವರು ಮಾತನಾಡಿ, 'ವಿದ್ಯಾರ್ಥಿಗಳು ಕೌಶಲ ಅಭಿವೃದ್ಧಿಪಡಿಸಿಕೊಂಡು ವೃತ್ತಿ ಜೀವನದಲ್ಲಿ ಉತ್ತುಂಗಕ್ಕೇರಬೇಕು. ಈ ನಿಟ್ಟಿನಲ್ಲಿ ಸಂಸ್ಥೆಯು ಅಗತ್ಯ ಸಹಾಯ ಮಾಡಲಿದೆ' ಎಂದು ಹೇಳಿದರು.

ಮೈಂಡ್‌ಟ್ರೀ ಸಂಸ್ಥೆಯ ಪ್ರತಿಭಾರ್ಜನೆ ವಿಭಾಗದ ಜಾಗತಿಕ ಮುಖ್ಯಸ್ಥ ವೆಂಕಟರಾಮಶೇಷನ್, ಎನ್‌ಟಿಟಿ ಲಿಮಿಟೆಡ್ ಸಂಸ್ಥೆಯ ಕಾರ್ಯಾಚರಣೆ ವಿಭಾಗದ ನಿರ್ದೇಶಕ ರಾಜೀವ್ ವಾಜೀರ್, ಬೆಟ್ನೋಲ್ ಸಂಸ್ಥೆಯ ಪ್ರತಿಭಾರ್ಜನೆ ವಿಭಾಗದ ಜಾಗತಿಕ ಮುಖ್ಯಸ್ಥೆ ಗುರುಪ್ರೀತ್ ಜಗ್ಗಿ, ಕಾಗ್ನಿಜೆಂಟ್ ಸಂಸ್ಥೆಯ ನೇಮಕಾತಿ ವಿಭಾಗದ ವ್ಯವಸ್ಥಾಪಕ ಅಂಕುರ್ ಬ್ಯಾನರ್ಜಿ ಅವರು ಅತಿಥಿಗಳಾಗಿದ್ದರು.

ವಿವಿಧ ದೇಗುಲಗಳ ಬಳಿ ಭಕ್ತರ ದಂಡು: ಪಾನಕ, ಕೊಸಂಬರಿ ವಿತರಣೆ

ರಾಮನವಮಿ ಸಂಭ್ರಮ, ಶೋಭಾಯಾತ್ರೆ ಮೆರುಗು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಕ್ತಿ, ಸಡಗರ-ಸಂಭ್ರಮದೊಂದಿಗೆ ನಗರದಲ್ಲಿ ಶ್ರೀರಾಮನವಮಿಯನ್ನು ಭಾನುವಾರ ಆಚರಿಸಲಾಯಿತು. ವಿವಿಧ ದೇಗುಲಗಳಲ್ಲಿ ಶ್ರೀರಾಮ ಸ್ಮರಣೆ, ವಿಶೇಷ ಪೂಜೆ, ಅಭಿಷೇಕ ಕಾರ್ಯಕ್ರಮಗಳು ನಡೆದವು.

ಅಲ್ಲಲ್ಲಿ ನಡೆದ ಶೋಭಾಯಾತ್ರೆಗಳು ಹಬ್ಬದ ಮೆರುಗು ಹೆಚ್ಚಿಸಿದವು. ಆಂಜನೇಯ ಹಾಗೂ ಶ್ರೀರಾಮ ದೇವಾಲಯಗಳನ್ನು ತಳಿರು ತೋರಣಗಳಿಂದ ವಿಶೇಷವಾಗಿ ಸಿಂಗರಿಸಲಾಗಿತ್ತು. ಬೆಳಿಗ್ಗೆಯಿಂದಲೇ ಭಕ್ತರು ಸಾಲಾಗಿ ನಿಂತು ದೇವರ ದರ್ಶನ ಪಡೆದರು.

ಭಕ್ತಾದಿಗಳಿಗೆ ಪಾನಕ, ಕೊಸಂಬರಿ, ಮಜ್ಜಿಗೆ ವಿತರಿಸಲಾಯಿತು. ರಾಮನ ವೇಷಧಾರಿಗಳು ಸಹ ಪಾನಕ ವಿತರಿಸಿ ಗಮನಸೆಳೆದರು. ಹಲವು ಸಂಘಟನೆಗಳು ನಗರದ ವಿವಿಧೆಡೆ ಆಯೋಜಿಸಿದ್ದ ಶ್ರೀರಾಮನ ಶೋಭಾಯಾತ್ರೆ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿತು. ಶ್ರೀರಾಮನ ಘೋಷಣೆಗಳೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕಳೆದೆರಡು ವರ್ಷಗಳಿಂದ ಕೋವಿಡ್ ಕಾರಣಕ್ಕೆ ಸರಳವಾಗಿ ರಾಮನವಮಿ ಆಚರಿಸಲಾಗಿತ್ತು. ಭಕ್ತರಿಗೂ ಪ್ರವೇಶ ನೀಡಿರಲಿಲ್ಲ. ಸಾಂಕೇತಿಕವಾಗಿ ಪೂಜೆ ಕೈಗೊಳ್ಳಲಾಗಿತ್ತು. ಈ ಬಾರಿ ಮತ್ತೆ ಎಂದಿನಂತೆ ನಗರದಲ್ಲೆಡೆ ಸಂಭ್ರಮದ ವಾತಾವರಣ ಸೃಷ್ಟಿಯಾಗಿತ್ತು.

ವಿವಿಧ ಕಡೆಗಳಲ್ಲಿ ರಾಮ ಭಕ್ತರು ರಾಮನಾಮ ಸಂಕೀರ್ತನೆ, ಭಜನೆ ನಡೆಸಿ ತಮ್ಮ ಭಕ್ತಿ ಮೆರೆದರು. ಮಲ್ಲೇಶ್ವರದ ಕೋದಂಡರಾಮಪುರದ ಕೋದಂಡರಾಮ ಭಜನಾ ಮಂದಿರ, ಯಶವಂತಪುರ ವೃತ್ತದಲ್ಲಿರುವ ದಾರಿ ಆಂಜನೇಯಸ್ವಾಮಿ ದೇವಸ್ಥಾನ, ರಂಗನಾಥಪುರದಲ್ಲಿರುವ ವೀರಾಂಜನೇಯ ಸ್ವಾಮಿ ದೇವಸ್ಥಾನ, ಅಶ್ವತ್ಥನಗರದಲ್ಲಿರುವ ಆಂಜನೇಯ ದೇವಸ್ಥಾನ, ಗಾಳಿ ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆಯ ಆಂಜನೇಯ ದೇವಸ್ಥಾನ, ರಾಗಿಗುಡ್ಡದ ಆಂಜನೇಯ ದೇವಾಲಯ, ರಾಜಾಜಿನಗರದ ಶ್ರೀರಾಮಮಂದಿರ ಸೇರಿದಂತೆ ನಗರದ ವಿವಿಧ ಆಂಜನೇಯ ಹಾಗೂ ರಾಮಮಂದಿರಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಬೆಳಗ್ಗೆಯಿಂದಲೇ ಜರುಗಿದವು. ವಿವಿಧ ದೇವಾಲಯಗಳಲ್ಲಿ ಸಂಗೀತೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿತ್ತು.

ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು ಹಲವು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಸೋಂಪುರದಲ್ಲಿ ವಿಶೇಷ ಪೂಜೆ: ದಾಬಾಸ್‌ಪೇಟೆ ಬಳಿಯ ಸೋಂಪುರ ಹೋಬಳಿಯ ಎಲ್ಲ ಗ್ರಾಮಗಳಲ್ಲೂ ಗ್ರಾಮಸ್ಥರು ಶ್ರೀರಾಮನವಮಿ ಆಚರಿಸಿದರು. ದೇವಾಲಯಗಳಲ್ಲಿ ದೇವರನ್ನು ಹೂವುಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು. ಜನರಿಗೆ ಪಾನಕ, ಕೊಸಂಬರಿ, ನೀರು ಮಜ್ಜಿಗೆ ವಿತರಿಸಲಾಯಿತು.

ಆಗಲಕುಪ್ಪೆಯ ಕೋದಂಡರಾಮ ಸ್ವಾಮಿ, ನರಸೀಪುರದ ಆತ್ಮರಾಮ ಸ್ವಾಮಿ, ರಾಮದೇವರ ಬೆಟ್ಟ ಹಾಗೂ ಹೆಗ್ಗುಂದ ಬೆಟ್ಟದ ಶ್ರೀರಾಮ ದೇವಾಲಯಗಳು, ಚನ್ನೋಹಳ್ಳಿ, ಹಾಲೇನಹಳ್ಳಿ, ಹೆಗ್ಗುಂದ, ಕುಂಟಬೊಮ್ಮನಹಳ್ಳಿ, ಕುರುವಲ್ಲ ತಿಮ್ಮನಹಳ್ಳಿ, ವೀರಸಾಗರ ಗ್ರಾಮಗಳ ಆಂಜನೇಯ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆದವು. ದಾಬಸ್ ಪೇಟೆ ಪಟ್ಟಣ, ಶಿವಗಂಗೆ, ನರಸೀಪುರ ಇನ್ನಿತರ ಕಡೆ ಅರವಟ್ಟಿಗೆಗಳನ್ನು ತೆರೆದು ಸಾರ್ವಜನಿಕರಿಗೆ ನೀರು ಮಜ್ಜಿಗೆ, ಕೋಸಂಬರಿ, ಪಾನಕ ವಿತರಿಸಲಾಯಿತು.

ಕೆ.ಆರ್.ಪುರ ಬಳಿಯ ರಾಮಮೂರ್ತಿನಗರದ ಐಟಿಐ ಸಿದ್ಧಿ ವಿನಾಯಕ ಸ್ವಾಮಿ ದೇವಸ್ಥಾನದಿಂದ ವಿಜಿನಾಪುರದ ಕುವೆಂಪು ಆಟದ ಮೈದಾನವರೆಗೂ ಶ್ರೀರಾಮ ನವಮಿ ಉತ್ಸವ ಸಮಿತಿ ವತಿಯಿಂದ ಶ್ರೀರಾಮನ ಮೂರ್ತಿಯ ಬೃಹತ್ ಪ್ರತಿಮೆಯೊಂದಿಗೆ ಶೋಭಾಯಾತ್ರೆ ನಡೆಯಿತು.

ಬಿಜೆಪಿ, ಹಿಂದೂ ಜಾಗರಣ ವೇದಿಕೆ, ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಶ್ರೀರಾಮನ ಘೋಷಣೆಗಳೊಂದಿಗೆ ಸಾಗಿದರು. ಮಂಗಳೂರಿನ ಚಂಡೆ ಮದ್ದಲೆ ಮೇಳ ಜನರನ್ನು ಆಕರ್ಷಿಸಿತು. ಚಿಕ್ಕ ಮಕ್ಕಳು ಶ್ರೀರಾಮನ ವೇಷಭೂಷಣ ತೊಟ್ಟು ದಾರಿಯುದ್ದಕ್ಕೂ ಸಾಗಿದರು.

ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಶೋಭಯಾತ್ರೆಯಲ್ಲಿ ಭಾಗವಹಿಸಿದ್ದರು. ನಂತರ ಮಾತನಾಡಿದ ಸಚಿವ ಬೈರತಿ ಬಸವರಾಜ, 'ಶ್ರೀರಾಮನ ಆರಾಧನೆಯನ್ನು ಪ್ರತಿಯೊಬ್ಬರೂ ಮಾಡುತ್ತಿದ್ದಾರೆ. ಹಿಂದುತ್ವ ಉಳಿಸಲು ನಾವೆಲ್ಲರೂ ಸಂಘಟಿತರಾಗಬೇಕಿದೆ' ಎಂದು ಹೇಳಿದರು.

ಪದ್ಮನಾಭನಗರದಲ್ಲಿ ರಾಮ ರಥಯಾತ್ರೆ

ಪದ್ಮನಾಭನಗರದಲ್ಲಿ ಸಚಿವ ಆರ್. ಅಶೋಕ ನೇತೃತ್ವದಲ್ಲಿ ಪ್ರಪ್ರಥಮ ಬಾರಿಗೆ ನಡೆದ ಶ್ರೀರಾಮ ರಥಯಾತ್ರೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ದಾರಿಯುದ್ದಕ್ಕೂ ರಾಮ ನಾಮದ ಝೇಂಕಾರ ಮುಗಿಲು ಮುಟ್ಟಿತ್ತು.

ಜನರು ಸ್ವಯಂಪ್ರೇರಿತರಾಗಿ ಅಲ್ಲಲ್ಲಿ ರಾಮ ರಥಕ್ಕೆ ಪೂಜೆ ಸಲ್ಲಿಸಿದರು. ಜಾನಪದ ಕಲಾವಿದರ, ಡೊಳ್ಳು ಕುಣಿತ, ಭಜನೆ ಪಾದಯಾತ್ರೆಯಲ್ಲಿ ಭಾಗವಹಿಸಿದವರ ಉತ್ಸಾಹ ಹೆಚ್ಚಿಸಿತ್ತು.

ಸುಮಾರು 6 ಕಿ.ಮೀ ದೂರದವರೆಗೆ ಸಾಗಿದ ಯಾತ್ರೆಯಲ್ಲಿ ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಎಂ. ಕೃಷ್ಣಪ್ಪ, ರವಿ ಸುಬ್ರಹ್ಮಣ್ಯ, ಈಶ್ವರಾನಂದ ಸ್ವಾಮೀಜಿ, ಮಾದಾರ ಚನ್ನಯ್ಯ ಸ್ವಾಮೀಜಿ, ಆರ್‌ಎಸ್‌ಎಸ್ ಮುಖಂಡ ತಿಪ್ಪೇಸ್ವಾಮಿ ಅವರೂ ಪಾಲ್ಗೊಂಡರು. ರಾಮನವಮಿ ಪ್ರಯುಕ್ತ ಆರ್. ಅಶೋಕ ಅವರು ಶಾಸಕರ ಕಚೇರಿಯಲ್ಲಿ ಪೂಜೆ ಸಲ್ಲಿಸಿದರು.

'ಎಲ್ಲ ಧರ್ಮದವರೂ ರಥಯಾತ್ರೆಯಲ್ಲಿ ಭಾಗವಹಿಸಿದ್ದರು. ರಾಮ ರಾಜ್ಯ ಆಗಬೇಕು ಎನ್ನುವ ಕಾರಣಕ್ಕೆ ಬೆಂಗಳೂರಿನಲ್ಲಿ ಪ್ರಥಮ ಬಾರಿಗೆ ಈ ಯಾತ್ರೆ ಆಯೋಜಿಸಲಾಗಿತ್ತು. ಮರ್ಯಾದಾ ಪುರುಷೋತ್ತಮ ರಾಮನ ಆದರ್ಶಗಳನ್ನು ನಾವೆಲ್ಲ ಪಾಲಿಸೋಣ' ಎಂದು ಅಶೋಕ ಹೇಳಿದರು.



ಪದ್ಮನಾಭನಗರದಲ್ಲಿ ನಡೆದ ಶ್ರೀರಾಮರಥ ಯಾತ್ರೆಯಲ್ಲಿ ಸಂಸದ ತೇಜಸ್ವಿ ಸೂರ್ಯ, ಸಚಿವ ಆರ್.ಅಶೋಕ, ಈಶ್ವರಾನಂದಪುರಿ ಸ್ವಾಮೀಜಿ, ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶಾಸಕ ಎಂ ಕೃಷ್ಣಪ್ಪ, ರವಿ ಸುಬ್ರಹ್ಮಣ್ಯ ಪಾಲ್ಗೊಂಡರು –ಪ್ರಜಾವಾಣಿ ಚಿತ್ರ

ಎಎಪಿ ಮಹಿಳಾ ಘಟಕ ಟೀಕೆ, ದರ ಏರಿಕೆ ವಿರುದ್ಧ ಪ್ರತಿಭಟನೆ

'ಎಲ್‌ಪಿಜಿ ಸಬ್ಸಿಡಿ ಸೊನ್ನೆಗೆ ಇಳಿಸಿದ ಬಿಜೆಪಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಆಮ್ ಆದ್ಮಿ ಪಾರ್ಟಿಯ ಮಹಿಳಾ ಘಟಕದವರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಅಡುಗೆ ತಯಾರಿಯ ಅಣಕು ಪ್ರದರ್ಶನ ನಡೆಸುವ ಮೂಲಕ ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟಿಸಿದರು.

ಪಕ್ಷದ ಬೆಂಗಳೂರು ನಗರ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಸುಹಾಸಿನಿ ಅವರು ಮಾತನಾಡಿ, 'ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಕೇವಲ₹ 400ಕ್ಕೆ ಅಡುಗೆ ಅನಿಲ ಸಿಲಿಂಡರ್ ಸಿಗುತ್ತಿತ್ತು. ಜತೆಗೆ ಶೇ 50ರಷ್ಟು ಸಬ್ಸಿಡಿ ಸಿಗುತ್ತಿತ್ತು. ಬ್ಯಾಂಕ್ ಖಾತೆಗೆ ಸಬ್ಸಿಡಿ ಮೊತ್ತವನ್ನು ಹಾಕುವ ಭರವಸೆ ನೀಡಿದ ಸರ್ಕಾರ ನಂತರ ಹಂತಹಂತವಾಗಿ ಸಬ್ಸಿಡಿ ಮೊತ್ತವನ್ನು ಸೊನ್ನೆಗೆ ಇಳಿಸಿತು. ಈಗ ಸಿಲಿಂಡರ್ ಬೆಲೆಯನ್ನು ಪದೇ ಪದೇ ಹೆಚ್ಚಿಸುವ ಮೂಲಕ ಗಾಯದ ಮೇಲೆ ಬರೆ ಎಳೆಯುತ್ತಿದೆ' ಎಂದು ಟೀಕಿಸಿದರು.

ಪಕ್ಷದ ಬೆಂಗಳೂರು ಮಹಿಳಾ ಘಟಕದ ಅಧ್ಯಕ್ಷೆ ಕುಶಲಸ್ವಾಮಿ, 'ಕೇಂದ್ರ ಸರ್ಕಾರವು ಅಡುಗೆ ಅನಿಲ, ಇಂಧನ ತೈಲಗಳ ದರ ಏರಿಕೆ ಮಾಡುತ್ತಿದ್ದರೆ, ರಾಜ್ಯ ಸರ್ಕಾರವು ವಿದ್ಯುತ್ ದರ ಹೆಚ್ಚಿಸಿದೆ. ಉದ್ಯಮಿಗಳಿಗೆ ಲಾಭ ಮಾಡಿಕೊಟ್ಟು ಅವರಿಂದ ಪಕ್ಷಕ್ಕೆ ದೇಣಿಗೆ ಪಡೆಯುವ ಹುನ್ನಾರ ಇದು. ಇದರ ಪರಿಣಾಮವಾಗಿ ಸಾಮಾನ್ಯ ಜನರು ಕಷ್ಟ ಅನುಭವಿಸುತ್ತಿದ್ದಾರೆ' ಎಂದು ದೂರಿದರು.

ಪಕ್ಷದ ವಕ್ತಾರರಾದ ಉಷಾ ಮೋಹನ್, 'ಬಿಜೆಪಿ ನೇತೃತ್ವದ ಸರ್ಕಾರಗಳು ಭ್ರಷ್ಟಾಚಾರದ ಮೂಲಕ ಜನರ ತೆರಿಗೆ ಹಣವನ್ನು ಲೂಟಿ ಮಾಡುತ್ತಿವೆ. ಮತ್ತೊಂಡೆದೆ ದರ ಏರಿಕೆ ಮೂಲಕ ಜನರ ಉಳಿತಾಯದ ಹಣಕ್ಕೂ ಕನ್ನ ಹಾಕುತ್ತಿವೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಕ್ಷದ ಮುಖಂಡರಾದ ಅರ್ಚನಾ, ಮರಿಯಾ, ಗೀತಮ್ಮ, ರೇಖಶ್ರೀ, ಪುಷ್ಪ ಕೇಶವ್, ಚಿತ್ರ ಭಾಗವಹಿಸಿದ್ದರು.



ಅಡುಗೆ ತಯಾರಿಸುವ ಅಣಕು ಪ್ರದರ್ಶನದ ಮೂಲಕ ಆಮ್ ಆದ್ಮಿ ಪಾರ್ಟಿಯ ಕಾರ್ಯಕರ್ತೆಯರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ ನಡೆಸಿದರು

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.

ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (**9606038256**) ಸಹ ಮಾಡಬಹುದು.

ಚರಂಡಿ ಕಾಮಗಾರಿ ಪೂರ್ಣಗೊಳಿಸಿ

ರಾಜಾಜಿನಗರದ 5ನೇ ಬ್ಲಾಕ್‌ನಲ್ಲಿರುವ ರಾಮಮಂದಿರ ವಾರ್ಡ್‌ನ 65ನೇ ಅಡ್ಡರಸ್ತೆಯಲ್ಲಿ ಚರಂಡಿ ಕಾಮಗಾರಿ ವಿಳಂಬವಾಗಿದೆ. ಸುಮಾರು 15 ದಿನಗಳಿಂದ ಚರಂಡಿಗಳನ್ನು ತೆರೆದು ಬಿಟ್ಟಿದ್ದಾರೆ. ಇದರಿಂದ ಸ್ಥಳೀಯ ನಿವಾಸಿಗಳು ಆತಂಕದಲ್ಲೇ ದಿನ ಕಳೆಯುತ್ತಿದ್ದಾರೆ. ಚರಂಡಿ ಮೇಲಿದ್ದ ಕಲ್ಲಿನ ಚಪ್ಪಡಿಗಳನ್ನು ತೆರೆದಿರುವುದರಿಂದ ಮಕ್ಕಳು ಮತ್ತು ವಯಸ್ಸಾದವರಿಗೆ ಬಹಳ ಸಮಸ್ಯೆಯಾಗಿದೆ.

ಮನೆಗಳ ಮುಂಭಾಗದಲ್ಲೇ ಈ ದುಸ್ಥಿತಿ ಇರುವುದರಿಂದ ಮಕ್ಕಳನ್ನು ಹೊರಗೆ ಬಿಡದೆ ಎಚ್ಚರ ವಹಿಸುತ್ತಿದ್ದೇವೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಿದರೆ, ಬಹಳ ಅನುಕೂಲವಾಗಲಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಸುರೇಂದ್ರ, ಸ್ಥಳೀಯ ನಿವಾಸಿ



ರಾಮಮಂದಿರ ವಾರ್ಡ್‌ನಲ್ಲಿ ನಿಧಾನಗತಿಯಲ್ಲಿ ಸಾಗಿರುವ ಚರಂಡಿ ಕಾಮಗಾರಿ

ಅತಿಕ್ರಮಣ ತೆರವು:ರಸ್ತೆ ಸಂಚಾರ ಮುಕ್ತ




ಕೆ.ಆರ್‌.ಪುರದ ಹಳೆ ಮದ್ರಾಸ್ ರಸ್ತೆಯಲ್ಲಿ ಒತ್ತುವರಿ ತೆರವಿಗೂ ಮುನ್ನ ಇದ್ದ ಸ್ಥಿತಿ

ಬೀದಿ ವ್ಯಾಪಾರಿಗಳಿಂದ ಅತಿಕ್ರಮಣಗೊಂಡಿದ್ದ ಕೆ.ಆರ್.ಪುರ ಬಳಿ ಇರುವ ಹಳೆ ಮದ್ರಾಸ್ ರಸ್ತೆ ಈಗ ಸಂಚಾರಕ್ಕೆ ಮುಕ್ತವಾಗಿದೆ. ರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಬೀದಿ ವ್ಯಾಪಾರಿಗಳ ಮಳಿಗೆಗಳನ್ನು ತೆರವು ಮಾಡಲಾಗಿದೆ. ಇದರ ಜತೆ ಇಲ್ಲಿನ ಪಾದಚಾರಿ ಮೇಲ್ಸೇತುವೆಯಲ್ಲಿದ್ದ ಮಳಿಗೆಗಳನ್ನೂ ಬೇರೆಡೆಗೆ ಸ್ಥಳಾಂತರಿಸಲಾಗಿದೆ.

‘ಹಳೆ ಮದ್ರಾಸ್ ರಸ್ತೆಯನ್ನು ಮಾರುಕಟ್ಟೆ ವಹಿವಾಟಿಗಾಗಿ ಅತಿಕ್ರಮಿಸಿದ್ದು, ಸಮೀಪದಲ್ಲೇ ಬಸ್ ಪ್ರಯಾಣಿಕರ ತಂಗುದಾಣವಿದ್ದರೂ ಬಸ್‌ಗಳಿಗೆ ಮೀಸಲಾಗಿರುವ ಜಾಗದಲ್ಲಿ ತಳ್ಳು ಗಾಡಿಗಳು, ಆಟೊಗಳು ಹಾಗೂ ಖಾಸಗಿ ವಾಹನಗಳು ನಿಂತಿರುತ್ತವೆ. ಪಾದಚಾರಿಗಳ ಅನುಕೂಲಕ್ಕೆ ನಿರ್ಮಿಸಿರುವ ಮೇಲ್ಸೇತುವೆಯಲ್ಲೂ ಬೀದಿ ವ್ಯಾಪಾರಿಗಳ ಹಾವಳಿ ಹೆಚ್ಚಾಗಿದೆ’ ಎಂದು ಸಾರ್ವಜನಿಕರು ದೂರಿದ್ದರು.

ಈ ಬಗ್ಗೆ ‘ರಸ್ತೆ ಅತಿಕ್ರಮಿಸಿದ ಮಾರುಕಟ್ಟೆ’ ಶೀರ್ಷಿಕೆಯಡಿ ಕಳೆದ ವಾರದ ‘ಕುಂದು ಕೊರತೆ’ ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಬಿಬಿಎಂಪಿ ಅಧಿಕಾರಿಗಳು ರಸ್ತೆ ಅತಿಕ್ರಮಣ ಮಾಡಿದ್ದ ಮಳಿಗೆಗಳನ್ನು ತೆರವುಗೊಳಿಸಿದ್ದಾರೆ.



ಕೆ.ಆರ್‌.ಪುರದ ಹಳೆ ಮದ್ರಾಸ್ ರಸ್ತೆ ಒತ್ತುವರಿ ತೆರವಾದ ನಂತರ

ವರದಿ ಫಲಶ್ರುತಿ

ಚರಂಡಿ ಚಪ್ಪಡಿ ಸರಿಪಡಿಸಲು ಕ್ರಮ



ಜಕ್ಕೂರು ಬಡಾವಣೆಯ 19ನೇ ಅಡ್ಡರಸ್ತೆಯಲ್ಲಿ ಹಲವು ವರ್ಷಗಳಿಂದ ಹಾಳಾಗಿದ್ದ ಚರಂಡಿ ಚಪ್ಪಡಿ ಕಲ್ಲುಗಳ ದುರಸ್ತಿಗೆ ಬಿಬಿಎಂಪಿ ಸಿಬ್ಬಂದಿ ಕ್ರಮ ಕೈಗೊಂಡಿದ್ದಾರೆ.

‘ರಸ್ತೆಗೆ ಅಡ್ಡವಾಗಿ ಹಾದು ಹೋಗಿರುವ ಚರಂಡಿ ಮಾರ್ಗಕ್ಕೆ ಮುಚ್ಚಲಾಗಿದ್ದ ಕಲ್ಲಿನ ಚಪ್ಪಡಿಗಳು ಹಾಳಾಗಿದ್ದವು. ಇದರಿಂದ ರಸ್ತೆಯಲ್ಲಿ ಗುಂಡಿಯೂ ನಿರ್ಮಾಣವಾಗಿತ್ತು. ವಾಹನ ಸವಾರರು ಆಯತಪ್ಪಿ ಬೀಳುತ್ತಿದ್ದು, ಚರಂಡಿಯ ಚಪ್ಪಡಿಯನ್ನು ಬದಲಿಸಬೇಕು’ ಎಂದು ಸ್ಥಳೀಯರು ದೂರಿದ್ದರು.

ಈ ಬಗ್ಗೆ ‘ಚರಂಡಿ ಚಪ್ಪಡಿ ಸರಿಪಡಿಸಿ’ ಶೀರ್ಷಿಕೆಯಡಿ ಕಳೆದ ವಾರದ ‘ಕುಂದು ಕೊರತೆ’ ಅಂಕಣದಲ್ಲಿ ವರದಿ ಪ್ರಕಟವಾಗಿತ್ತು. ವರದಿ ಬಳಿಕ ಎಚ್ಚೆತ್ತ ಅಧಿಕಾರಿಗಳು ಚಪ್ಪಡಿ ದುರಸ್ತಿಗೆ ಕ್ರಮ ಕೈಗೊಂಡಿದ್ದಾರೆ.

ಜಕ್ಕೂರು ಬಡಾವಣೆಯ 19ನೇ ಅಡ್ಡರಸ್ತೆಯಲ್ಲಿ ಚಪ್ಪಡಿಗಳನ್ನು ಸರಿಪಡಿಸಲಾಗಿದೆ

‘ಬೀದಿ ನಾಯಿ– ಸಂತಾನ ನಿಯಂತ್ರಿಸಿ’

ಕೆಂಗೇರಿಯ ಕೋಟೆ ಬೀದಿಯಲ್ಲಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಇಲ್ಲಿನ ನಿವಾಸಿಗಳು ಭಯಭೀತರಾಗಿದ್ದಾರೆ. ನಾಯಿಗಳ ಹಿಂಡು ರಸ್ತೆಯಲ್ಲಿ ಸಂಚರಿಸುವ ಸಾರ್ವಜನಿಕರ ಮೇಲೆ ಎರಗುತ್ತವೆ. ಇಲ್ಲಿನ ಸರ್ಕಾರಿ ಆಸ್ಪತ್ರೆ ಬಳಿಯೂ ನಾಯಿಗಳ ಉಪಟಳ ಮಿತಿ ಮೀರಿದೆ.

ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಶಾಲಾ ಬಾಲಕಿಯೊಬ್ಬಳನ್ನು ಕಚ್ಚಿರುವ ಘಟನೆಯೂ ನಡೆದಿದೆ. ಬೀದಿನಾಯಿಗಳನ್ನು ಪತ್ತೆಹಚ್ಚಿ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ನಡೆಸಲು ಬಿಬಿಎಂಪಿ ಪಶುಸಂಗೋಪನಾ ವಿಭಾಗದ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು ನಿರಾತಂಕವಾಗಿ ನಡೆಯಲು ಅನುವು ಮಾಡಿಕೊಡಬೇಕು.

ನರಸಿಂಹ, ಕೆಂಗೇರಿ ಕೋಟೆ ಬೀದಿ ನಿವಾಸಿ

‘ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಿ’

ಜ್ಞಾನಭಾರತಿ ವಾರ್ಡ್‌ನ ಮಲ್ಲತ್ತಹಳ್ಳಿ ಗ್ರಾಮಕ್ಕೆ ಹೋಗುವ 2ನೇ ಅಡ್ಡರಸ್ತೆಯು ಹಲವಾರು ವರ್ಷಗಳಿಂದ ಡಾಂಬರು ಕಂಡಿಲ್ಲ. ಈ ಭಾಗದಲ್ಲಿ ನೂರಾರು ಕುಟುಂಬಗಳು ವಾಸವಿದ್ದು, ಸೂಕ್ತ ರಸ್ತೆ ಇಲ್ಲವಾಗಿದೆ. ಮಳೆ ಬಂದರೆ ಈ ರಸ್ತೆ ಕೆಸರುಮಯವಾಗುತ್ತದೆ.

ಅಲ್ಲಲ್ಲಿ ಗುಂಡಿ ಇರುವುದರಿಂದ ಈ ರಸ್ತೆ ವಾಹನಗಳ ಮತ್ತು ಜನರ ಸಂಚಾರಕ್ಕೂ ಯೋಗ್ಯವಾಗಿಲ್ಲ. ದಯವಿಟ್ಟು ಡಾಂಬರೀಕರಣ ಮಾಡುವ ಮೂಲಕ ಇಲ್ಲಿನ ರಸ್ತೆಯನ್ನು ದುರಸ್ತಿಗೊಳಿಸಬೇಕು. ಈ ಬಗ್ಗೆ ಪಾಲಿಕೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕು.

ತುಕಾರಾಂ, ಬಾಲಗಂಗಾಧರ ನಗರ



ಮಲ್ಲತ್ತಹಳ್ಳಿಯಲ್ಲಿ ಡಾಂಬರು ಕಾಣದ ರಸ್ತೆ



ಗುಜರಾತ್‌ನ ಗಾಂಧಿನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದರು. ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ.ಸತೀಶ್ ಇದ್ದರು.

ಮಾರುಕಟ್ಟೆ ನಿರ್ವಹಣೆಯಲ್ಲಿ ಅತ್ಯುತ್ತಮ ಸೇವೆ: ಕೆಎಂಎಫ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿಯೇ ಅತ್ಯುತ್ತಮ ವ್ಯಾಪಾರ ಮಾರುಕಟ್ಟೆ ವಿಸ್ತರಣಾ ಜಾಲಕ್ಕೆ ನೀಡಲಾಗುವ ಪ್ರಶಸ್ತಿಯನ್ನು ಕರ್ನಾಟಕ ಹಾಲು ಮಹಾಮಂಡಳಿಗೆ (ಕೆಎಂಎಫ್) ನೀಡಲಾಗಿದೆ.

ರಾಷ್ಟ್ರೀಯ ಸಹಕಾರಿ ಹೈನುಗಾರಿಕೆ ಮಹಾ ಮಂಡಲದ (ಎನ್‌ಸಿಡಿಎಫ್‌ಐ) ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ ಹಾಲು, ಹಾಲಿನ ಉತ್ಪಾದನೆಗಳ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಗೆ ಕೆಎಂಎಫ್‌ಗೆ ಈ ಪ್ರಶಸ್ತಿ ನೀಡಲಾಗಿದೆ.

ಎನ್‌ಸಿಡಿಎಫ್‌ಐ ಕಳೆದ ಐದು ವರ್ಷದ ಅವಧಿಯಲ್ಲಿ ಸುಮಾರು ₹5 ಸಾವಿರ ಕೋಟಿಗೂ ಅಧಿಕ ವ್ಯವಹಾರಗಳನ್ನು ನಡೆಸಿದೆ. ಇದರಲ್ಲಿ ಈ ಸಂಸ್ಥೆ ಜತೆಗೆ ಕೆಎಂಎಫ್ ಸುಮಾರು ₹2,400 ಕೋಟಿ ರೂಪಾಯಿ ವ್ಯಾಪಾರ ವಹಿವಾಟು ನಡೆಸಿದೆ. ಹೀಗಾಗಿ, ಕೆಎಂಎಫ್‌ನ ನಂದಿನಿ ಬ್ರಾಂಡ್ ಎನ್‌ಸಿಡಿಎಫ್‌ಐ ಪ್ರಶಸ್ತಿಗೆ ಪಾತ್ರವಾಗಿದೆ.

ಗುಜರಾತ್‌ನ ಗಾಂಧಿನಗರದಲ್ಲಿ ಭಾನುವಾರ ನಡೆದ ಎನ್‌ಸಿಡಿಎಫ್‌ಐ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಕೆಎಂಎಫ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಅಮಿತ್ ಶಾ ಅವರು, ‘ದೇಶದಲ್ಲಿ ಅಮೂಲ್ ಮೊದಲ ಸ್ಥಾನದಲ್ಲಿದೆ. ಕೆಎಂಎಫ್ ಎರಡನೇ ಸ್ಥಾನ ಅಲಂಕರಿಸಿದೆ. ಕರ್ನಾಟಕವಲ್ಲದೇ ನೆರೆಯ ಬಹುತೇಕ ರಾಜ್ಯಗಳಲ್ಲಿಯೂ ‘ನಂದಿನಿ’ ಬ್ರಾಂಡ್ ಹೆಸರಿನಲ್ಲಿ ಹಾಲು ಮತ್ತು ಹಾಲಿನ ಉತ್ಪಾದನೆಗಳನ್ನು ರೈತ ಸಮುದಾಯಕ್ಕೆ ನೀಡುತ್ತಿದೆ. ಈ ಮೂಲಕ ಹೈನು ಉದ್ಯಮ ಬೆಳೆಯಲು ಈ ಸಂಸ್ಥೆಯು ಶ್ರಮಿಸುತ್ತಿದೆ. ತಮಿಳುನಾಡಿನಲ್ಲಿ ಸಹ ಸಹಕಾರಿ ಸಂಘಗಳು ಬೆಳೆಯಬೇಕಾಗಿದೆ. ದೇಶದಾದ್ಯಂತ ಹೈನುಗಾರಿಕೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ’ ಎಂದು ಹೇಳಿದರು.

ಜಿನಭಜನೆ; ಬೆಳಗಾವಿ ಪ್ರಥಮ

ಮೈಸೂರು: ಭಾರತೀಯ ಜೈನ್ ಮಿಲನ್ ವಲಯ-8 ಇಲ್ಲಿನ ಕಲಾಮಂದಿರದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಜಿನಭಜನೆ ಸ್ಪರ್ಧೆಯಲ್ಲಿ ಬೆಳಗಾವಿಯ ಧಾರಣಿ ಮಹಿಳಾ ಜಿನ ಭಜನಾ ತಂಡ ಪ್ರಥಮ (₹ 35 ಸಾವಿರ), ಹುಬ್ಬಳ್ಳಿಯ ದಿವ್ಯಧ್ವನಿ ತಂಡ ದ್ವಿತೀಯ (₹ 25 ಸಾವಿರ) ಹಾಗೂ ಬೆಂಗಳೂರಿನ ಸ್ವರಾಭಿಷೇಕ ತಂಡ ತೃತೀಯ (₹ 15 ಸಾವಿರ) ಬಹುಮಾನ ಗಳಿಸಿದವು. ಜಿನಾನುಗ್ರಹ ಬಹುಮಾನಕ್ಕೆ ಆಯ್ಕೆಯಾದ 17 ತಂಡಗಳಿಗೆ ತಲಾ ₹ 5 ಸಾವಿರ ಹಾಗೂ ಭಾಗವಹಿಸಿದ ಉಳಿದವರಿಗೆ ₹ 3 ಸಾವಿರ ನೀಡಲಾಯಿತು.

ಸತತ ಎರಡು ದಿನ ಇಲ್ಲಿ ನಡೆದ ಜಿನಭಜನೆ ಸ್ಪರ್ಧೆಯಲ್ಲಿ ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿ, ಶಿವಮೊಗ್ಗ, ಬೆಂಗಳೂರು, ದಾವಣಗೆರೆ ವಲಯಗಳಿಂದ 40 ತಂಡಗಳು ಭಾಗವಹಿಸಿದ್ದವು.

ವಿಐಎಸ್‌ಎಲ್ ಪುನಶ್ಚೇತನಕ್ಕೆ ಚಿಂತನೆ: ಸಿಎಂ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ



ಬೊಮ್ಮಾಯಿ

ಬೆಂಗಳೂರು: ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು (ವಿಐಎಸ್‌ಎಲ್) ಖಾಸಗಿಯವರ ಸಹಭಾಗಿತ್ವದಲ್ಲಿ ಪುನಶ್ಚೇತನಗೊಳಿಸುವ ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಬೆಂಗಳೂರಿನಲ್ಲಿ ನೆಲೆಸಿರುವ ತೀರ್ಥಹಳ್ಳಿ ವಿಧಾನಸಭೆ ಕ್ಷೇತ್ರದಜನರಿಗೆ ನಗರದ ಅರಮನೆ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ‘ಮಲೆನಾಡಿಗರ ಸ್ನೇಹ ಮಿಲನ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾದ ಬಳಿಕ ಶಿವಮೊಗ್ಗ ಜಿಲ್ಲೆ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಮೈಸೂರು ಕಾಗದ ಕಾರ್ಖಾನೆ, ವಿಐಎಸ್‌ಎಲ್ ಜಿಲ್ಲೆಯ ಪ್ರಮುಖ ಉದ್ದಿಮೆಗಳಾಗಿದ್ದವು. ಜಾಗತೀಕರಣದ ಪರಿಣಾಮಗಳಿಂದ ಮುಚ್ಚುವ ಹಂತಕ್ಕೆ ಬಂದಿವೆ. ನೌಕರರಿಗೆ ತೊಂದರೆಯಾಗದಂತೆ ಖಾಸಗಿ ಸಹಭಾಗಿತ್ವದಲ್ಲಿ ಪುನಶ್ಚೇತನಗೊಳಿಸುವ ಚಿಂತನೆ ಇದೆ’ ಎಂದರು. ಶಿವಮೊಗ್ಗ ಜಿಲ್ಲೆಯಲ್ಲಿ ಹಲವು ಬೃಹತ್ ಉದ್ದಿಮೆಗಳು ಕಾರ್ಯಾರಂಭ ಮಾಡಿವೆ. ಅಂತರರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣವೂ ನಿರ್ಮಾಣವಾಗುತ್ತಿದೆ. ಜೋಗ ಜಲಪಾತವನ್ನು ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸಲು ₹ 270 ಕೋಟಿ ಅನುದಾನ ಒದಗಿಸಲಾಗಿದೆ ಎಂದು ಹೇಳಿದರು.

ಮರಳಿ ತೀರ್ಥಹಳ್ಳಿಗೆ ಅಭಿಯಾನ: ಬೆಂಗಳೂರಿನಲ್ಲಿ ನೆಲೆಸಿರುವ ತೀರ್ಥಹಳ್ಳಿಯ ಜನರ ಸೇವೆ ತವರು ಕ್ಷೇತ್ರಕ್ಕೂ ದೊರೆಯಬೇಕು. ಇದಕ್ಕಾಗಿ ‘ಮರಳಿ ತೀರ್ಥಹಳ್ಳಿಗೆ’ ಎಂಬ ಅಭಿಯಾನವನ್ನು ಆರಂಭಿಸಬೇಕು ಎಂದು ಬೊಮ್ಮಾಯಿ ಅವರು ಸಲಹೆ ನೀಡಿದರು.

‘ತೀರ್ಥಹಳ್ಳಿ ಎಂದರೆ ದೇವರು ವಾಸಿಸುವ ಸ್ಥಳ, ಅದು ದೇವರ ದರ್ಶನವಾಗುವ ಸ್ಥಳ. ಆ ನೆಲದಲ್ಲಿ ಹುಟ್ಟಿ ಬೆಳೆದ ರಾಷ್ಟ್ರಕವಿ ಕುವೆಂಪು ಅವರ ಆದರ್ಶಗಳು ಎಂದಿಗೂ ಪ್ರಸ್ತುತ’ ಎಂದರು.

ಸಚಿವರಾದ ಆರಗ ಜ್ಞಾನೇಂದ್ರ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಬಿ.ಎಸ್. ಯಡಿಯೂರಪ್ಪ, ಹರತಾಳು ಹಾಲಪ್ಪ, ಕುಮಾರ್ ಬಂಗಾರಪ್ಪ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್ ಇದ್ದರು.

ದೆಹಲಿಯಲ್ಲಿ ಸುಡು ಬಿಸಿಲು

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ ದಾಖಲೆಯ 42.4 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗಿದೆ. ಅಲ್ಲದೆ ಹರಿಯಾಣದ ಫರಿದಾಬಾದ್‌ನಲ್ಲಿ 45.2 ಡಿಗ್ರಿ ತಾಪಮಾನ ದಾಖಲಾಗಿದೆ.

ದೆಹಲಿಯಲ್ಲಿ ಭಾನುವಾರ ತಾಪಮಾನ ಕೊಂಚ ಇಳಿದಿದ್ದು, 42 ಡಿಗ್ರಿ ಸೆಲ್ಸಿಯಸ್‌ಗೆ ಸೀಮಿತವಾಗಿದೆ. ಭಾರತೀಯ ಹವಾಮಾನ ಇಲಾಖೆಯು (ಐಎಂಡಿ), ದೆಹಲಿಯ ಹಲವೆಡೆ ಬಿಸಿ ಗಾಳಿಯ ಪ್ರಭಾವ ಮುಂದುವರಿಯಲಿದೆ ಎಂದು ಎಚ್ಚರಿಕೆ ನೀಡಿದೆ.

ಶನಿವಾರ ದಾಖಲಾದ ತಾಪಮಾನವು 5 ವರ್ಷಗಳಲ್ಲಿ ಮೊದಲ ಬಾರಿಗೆ ದಾಖಲಾದ ಗರಿಷ್ಠ ತಾಪಮಾನವಾಗಿದೆ. ದೆಹಲಿಯಲ್ಲಿ ಆರೆಂಜ್ ಅಲರ್ಟ್ ನೀಡಲಾಗಿದೆ. 2017ರ ಏಪ್ರಿಲ್ 21ರಂದು ದೆಹಲಿಯಲ್ಲಿ ದಾಖಲೆಯ 43.2 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. 1941ರ ಏ.29ರಂದು ದಾಖಲಾಗಿದ್ದ 45.6 ಡಿಗ್ರಿ ಸೆಲ್ಸಿಯಸ್ ತಾಪಮಾನವು ಏಪ್ರಿಲ್‌ನಲ್ಲಿ ದಾಖಲಾದ ಅತಿ ಗರಿಷ್ಠ ತಾಪಮಾನವಾಗಿದೆ.

‘ಸವ್ಯಸಾಚಿ’ ಗೌರವ ಗ್ರಂಥ ಲೋಕಾರ್ಪಣೆ • ಬರಗೂರು ಶ್ಲಾಘನೆ

ಪರಮೇಶ್ವರ ಸಜ್ಜನ ರಾಜಕಾರಣಿ

ಪ್ರಜಾವಾಣಿ ವಾರ್ತೆ



ತುಮಕೂರಿನಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ನೌಕರರ ಒಕ್ಕೂಟ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ‘ಸವ್ಯಸಾಚಿ’ ಗೌರವ ಗ್ರಂಥ ಲೋಕಾರ್ಪಣೆ ಗೊಳಿಸಲಾಯಿತು. ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಕಂಬಾರ, ಶಾಸಕ ಡಾ.ಜಿ.ಪರಮೇಶ್ವರ, ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯೆ ಕನ್ನಿಕಾ ಪರಮೇಶ್ವರಿ, ಇಂಡೋ ಶ್ರೀಲಂಕಾ ಇಂಟರ್ ನ್ಯಾಷನಲ್ ಬುದ್ದಿಸ್ಟ್ ಅಸೋಸಿಯೇಷನ್ ಅಧ್ಯಕ್ಷ ಕೆ.ಸಿರಿ ಸುಮೇಧಾ ಥೇರಾ, ರಾಮಕೃಷ್ಣ ವಿವೇಕಾನಂದ ಆಶ್ರಮದ ವೀರೇಶಾನಂದ ಸರಸ್ವತಿ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

ತುಮಕೂರು: ‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಲು ಕಾಂಗ್ರೆಸ್‌ಗೆ ಬರಬೇಕಾಯಿತು. ಡಾ.ಜಿ.ಪರಮೇಶ್ವರ ಉಪ ಮುಖ್ಯಮಂತ್ರಿ ಆಗಲು ಸಮ್ಮಿಶ್ರ ಸರ್ಕಾರ ರಚನೆಯಾಗಬೇಕಾಯಿತು. ಇದು ಎಂಥ ವಿಪರ್ಯಾಸ’ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರಶ್ನಿಸಿದರು.

ಅಗಳಕೋಟೆಯ ಸಿದ್ಧಾರ್ಥ ವೈದ್ಯಕೀಯ ಕಾಲೇಜು ಆವರಣದಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ನೌಕರರ ಒಕ್ಕೂಟ ಭಾನುವಾರ ಹಮ್ಮಿಕೊಂಡಿದ್ದ ಶಾಸಕ ಡಾ.ಜಿ.ಪರಮೇಶ್ವರ ಅವರ ಸಾಧನೆಯ ‘ಸವ್ಯಸಾಚಿ’ ಗೌರವ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಇದು ಕೇವಲ ಪರಮೇಶ್ವರ ಅವರೊಬ್ಬರ ಪ್ರಶ್ನೆಯಷ್ಟೇ ಅಲ್ಲ. ಈ ನಾಡು, ದೇಶದ ಪರಿಶಿಷ್ಟ ಜಾತಿಯ ರಾಜಕಾರಣದ ಪ್ರಶ್ನೆ. ರಾಜಕಾರಣದಲ್ಲಿ ನಾಯಕ ಮತ್ತು ಖಳನಾಯಕನನ್ನು ನಿರ್ಮಾಣ ಮಾಡುವ ಹುಸಿ ಬೌದ್ಧಿಕ ಕಾರ್ಖಾನೆಗಳು ಇಂದು ಜಾಸ್ತಿಯಾಗುತ್ತಿವೆ. ಸರ್ವ ಜನಾಂಗದ ಶಾಂತಿಯ ತೋಟವನ್ನು ಧ್ವಂಸ ಮಾಡುವ ಕೆಲಸವಾಗುತ್ತಿದೆ. ಧರ್ಮದ ಅಪವ್ಯಾಖ್ಯಾನಗಳಾಗುತ್ತಿವೆ. ಇಂತಹ ಸಮಯದಲ್ಲಿ ಪರಮೇಶ್ವರ್ ಅವರಂತಹ ಸಜ್ಜನ, ಸಮಚಿತ್ತದ ರಾಜಕಾರಣಿಗಳ ಅವಶ್ಯತೆಯಿದೆ’ ಎಂದರು.

‘ಪರಮೇಶ್ವರ ತುಂಬಾ ಮೃಧು ಅಂತಾರೆ. ನಾನು ಒಂದು ಥರಾ ನೀರು ಇದ್ದ ಹಾಗೆ. ನೀರು ಸಮುದ್ರದ ಬಂಡೆ ಒಡೆಯುತ್ತದೆ. ಹಾಗೆ ನಾನು ಎಷ್ಟೇ ಮೃಧುವಾಗಿದ್ದರೂ ನನ್ನ ಚಿಂತನೆಗಳು ತುಂಬಾ ಕಠಿಣವಾಗಿರುತ್ತವೆ’ ಎಂದು ಸಿದ್ಧಾರ್ಥ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ, ಶಾಸಕ ಡಾ.ಜಿ.ಪರಮೇಶ್ವರ ಸ್ವವಿಮರ್ಶೆ ಮಾಡಿಕೊಂಡರು.

‘ಸಿದ್ಧಾರ್ಥ ಶಿಕ್ಷಣ ಸಂಸ್ಥೆಯಿಂದ ಇದುವರೆಗೆ 35 ಸಾವಿರ ಎಂಜಿನಿಯರ್, ಆರು ಸಾವಿರ ವೈದ್ಯರು, ಹಲವು ಶಿಕ್ಷಕರು ಹೊರ ಹೊಮ್ಮಿದ್ದಾರೆ. ಮುಂದಿನ ದಿನಗಳಲ್ಲಿ ಸಂಸ್ಥೆಯಿಂದ ಮತ್ತಷ್ಟು ಉತ್ತಮ ಕೆಲಸ ನಡೆಯಲಿವೆ. ತಂದೆ, ತಾಯಿ ಸಂಸ್ಕಾರ ಕಲಿಸಿದ್ದಾರೆ. ಅವರ ಹಾದಿಯಲ್ಲಿ ಸಾಗುತ್ತಿದ್ದೇನೆ’ ಎಂದರು.

‘ಸ್ವರಾಜ್ಯ–75’ ಪುಸ್ತಕ ಬಿಡುಗಡೆ

‘ಬಲಿಷ್ಠ ರಾಷ್ಟ್ರ ನಿರ್ಮಾಣಕ್ಕೆ ಯುವಜನರೇ ಶಕ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದ ಜನಸಂಖ್ಯೆಯಲ್ಲಿ ಶೇ 35ರಷ್ಟು ಮಂದಿ 20 ವರ್ಷದೊಳಗಿನವರು. ದೇಶ ಇನ್ನಷ್ಟು ಬಲಿಷ್ಠವಾಗಿ ಜಗತ್ತಿನಲ್ಲಿ ಹೊರ ಹೊಮ್ಮಲು ಇವರೇ ಶಕ್ತಿ’ ಎಂದು ವಿಜ್ಞಾನಿ ಕೆ.ರಾಧಾಕೃಷ್ಣನ್ ಭಾನುವಾರ ಅಭಿಪ್ರಾಯಪಟ್ಟರು.

‘ದಿಶಾ ಭಾರತ್’ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಸ್ವರಾಜ್ಯ–75’ ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು. ‘ಸ್ವಾತಂತ್ರ್ಯ ಹೋರಾಟ ಹಾಗೂ ಹೋರಾಟಗಾರರ ಬಗ್ಗೆ ಯುವಜನರಿಗೆ ತಿಳಿಸುವ ಕೆಲಸವಾಗಬೇಕು’ ಎಂದು ಹೇಳಿದರು.

ಉಪನ್ಯಾಸಕ ಸಿಬಂತಿ ಪದ್ಮನಾಭ ಕೆ.ವಿ. ಅವರು, ‘ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿ ಕೆಲವರ ಹೆಸರನ್ನು ಪಠ್ಯದಲ್ಲಿ ಓದಲಾಗುತ್ತಿತ್ತು. ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ, ಆರ್ಥಿಕ, ಸಾಂಸ್ಕೃತಿಕ ಸ್ವಾತಂತ್ರ್ಯ ಬಂದಿದೆಯೇ? ಸ್ವಾತಂತ್ರ್ಯ ಹೋರಾಟ ಹಾಗೂ ಹೋರಾಟಗಾರರ ಬಗ್ಗೆ ಸರಳವಾಗಿ ತಿಳಿಸುವ ಪುಸ್ತಕಗಳು ಅಗತ್ಯ’ ಎಂದು ಹೇಳಿದರು.



‘ಸ್ವರಾಜ್ಯ–75’ ಪುಸ್ತಕವನ್ನು (ಎಡದಿಂದ ಮೂರನೆಯವರು) ಕೆ.ರಾಧಾಕೃಷ್ಣನ್ ಭಾನುವಾರ ಬಿಡುಗಡೆ ಮಾಡಿದರು. ಸಿಬಂತಿ ಪದ್ಮನಾಭ ಕೆ.ವಿ., ದಿಶಾ ಭಾರತ್ ಅಧ್ಯಕ್ಷ ಎನ್‌.ವಿ.ರಘುರಾಮ್, ಸಂಸ್ಥಾಪನಾ ನಿರ್ದೇಶಕಿ ರೇಖಾ ರಾಮಚಂದ್ರನ್ ಹಾಗೂ ರಾಜೇಶ್ ಪದ್ಮಾರ್ ಇದ್ದಾರೆ

ಪುಸ್ತಕದ ಸಂಪಾದಕ ರಾಜೇಶ್ ಪದ್ಮಾರ್, ‘ಕಾಲೇಜು ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿ 80 ಪುಟಗಳಲ್ಲಿ ಪುಸ್ತಕ ಸಿದ್ಧಗೊಳಿಸಲಾಗಿದೆ. ಸ್ವಾತಂತ್ರ್ಯ ಹೋರಾಟ ಬಹುಮುಖ ಎನ್ನುವುದನ್ನು ಸಾರಲಾಗಿದೆ. ಸ್ವಾತಂತ್ರ್ಯದ ಹೋರಾಟ ದೇಶದ ಎಲ್ಲೆಡೆ ನಡೆದಿದ್ದು, ವಿಸ್ತಾರವಾದ ಹೋರಾಟವಾಗಿದೆ. ಇತಿಹಾಸದ ಪಠ್ಯದಲ್ಲಿ ನಾಲ್ಕೈದು ಮಂದಿ ಸ್ವಾತಂತ್ರ್ಯ ತಂದುಕೊಟ್ಟರು ಎಂದು ಮೇಲಿಂದ ಮೇಲೆ ಹೇಳಿಕೊಡಲಾಗುತ್ತದೆ. ಸ್ವಾತಂತ್ರ್ಯ ದಿನ, ವಿವಿಧ ದಿನಾಚರಣೆಗಳ ವೇಳೆ ಮಾತ್ರ ಸ್ವಾತಂತ್ರ್ಯ ಹೋರಾಟದ ಒಟ್ಟು ಸ್ಮರಣೆ ಮಾಡಲಾಗುತ್ತದೆ. ದಿನನಿತ್ಯ ಸ್ಮರಣೆ ಮಾಡುವ ಕೆಲಸ ಆಗಬೇಕು’ ಎಂದರು.



ವಚನ ಜ್ಯೋತಿ ಬಳಗ ನಗರದಲ್ಲಿ ಆಯೋಜಿಸಿದ್ದ ‘ವಚನಯಾನದ ನೂರರ ಸಂಭ್ರಮ’ ಕಾರ್ಯಕ್ರಮವನ್ನು ಚಿಣ್ಣರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಬೇಲಿಮಠದ ಶಿವರುದ್ರ ಸ್ವಾಮೀಜಿ, ಬಳಗದ ಅಧ್ಯಕ್ಷ ಎಸ್‌.ಪಿನಾಕಪಾಣಿ, ಕಾರ್ಯಾಧ್ಯಕ್ಷ ಗುರುಪ್ರಸಾದ ಕುಚ್ಚಂಗಿ, ಪ್ರಧಾನ ಕಾರ್ಯದರ್ಶಿ ಪ್ರಭು ಇಸುವನಹಳ್ಳಿ, ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನಕುಮಾರ್, ನಾಗರಬಾವಿ ಬಸವ ಬಳಗದ ಅಧ್ಯಕ್ಷ ಎಚ್‌.ಎಸ್‌.ರಾಜಶೇಖರ್, ವಿಶ್ವಗುರು ಬಸವಣ್ಣ ಸೊಸೈಟಿಯ ಅಧ್ಯಕ್ಷ ಜಯಕುಮಾರ್ ಇದ್ದಾರೆ

ಶ್ರೀನಗರ: ಇಬ್ಬರು ಉಗ್ರರ ಹತ್ಯೆ

ಶ್ರೀನಗರ: ಇಲ್ಲಿನ ಬಿಷೆಂಬರ್ ಪ್ರದೇಶದಲ್ಲಿ ಭಾನುವಾರ ಪಾಕಿಸ್ತಾನದ ಲಷ್ಕರ್–ಎ–ತಯಬಾದ (ಎಲ್‌ಇಟಿ) ಇಬ್ಬರು ಉಗ್ರರನ್ನು ಭದ್ರತಾ ಪಡೆಗಳು ಹತ್ಯೆ ಮಾಡಿವೆ.

ಹತ್ಯೆಯಾದ ಉಗ್ರರು ಕೆಲ ದಿನಗಳ ಹಿಂದೆ ಸಿಆರ್‌ಪಿಎಫ್ ಯೋಧರ ಶಿಬಿರದ ಮೇಲೆ ದಾಳಿ ಮಾಡಿದ್ದರು ಎಂದು ರಕ್ಷಣಾ ಪಡೆ ವಕ್ತಾರರು ತಿಳಿಸಿದರು.

ಕಾರ್ಯಾಚರಣೆ ವೇಳೆ ಭದ್ರತಾ ಪಡೆಯ ಮೂವರು ಯೋಧರಿಗೆ ಗಾಯಗಳಾಗಿವೆ ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.

ಬೈಕ್ ಏರಿ ರಸ್ತೆ ಪರಿಶೀಲಿಸಿದ ಲಿಂಬಾವಳಿ

ಕೆ.ಆರ್.ಪುರ: ಮಹದೇವಪುರ ವಿಧಾನ ಸಭಾ ಕ್ಷೇತ್ರದ ಪ್ರಮುಖ ರಸ್ತೆಗಳ ಗುಣಮಟ್ಟ ಮತ್ತು ಸ್ಥಿತಿಗತಿ ಪರಿಶೀಲಿಸಲು ಅಧಿಕಾರಿಗಳು ಹಾಗೂ ಸಾರ್ವಜನಿಕರೊಂದಿಗೆ ಶಾಸಕ ಅರವಿಂದ ಲಿಂಬಾವಳಿ ಅವರು ‘ಕ್ಲೀನ್ ಸ್ಟ್ರೀಟ್ –75ಕೆ ಚಾಲೆಂಜ್’ ತಪಾಸಣೆ ಅಭಿಯಾನ ಹಮ್ಮಿಕೊಂಡಿದ್ದಾರೆ. ಇದರ ಅಂಗವಾಗಿ ಭಾನುವಾರ ಅವರು ಮೋಟರ್ ಬೈಕ್‌ನಲ್ಲಿ 40 ಕಿ.ಮೀ ಸವಾರಿ ಮಾಡಿದರು.

ಕಾಡುಬೀಸನಹಳ್ಳಿ ಕೆಳ ಸೇತುವೆಯಿಂದ ಹೊರಟು ವರ್ತೂರು ಪೊಲೀಸ್ ಠಾಣೆ ರಸ್ತೆ, ವರ್ತೂರು ಕೊಡಿ, ಗುಂಜೂರು, ಕಾರ್ಮೆಲರಾಂ ರೈಲ್ವೆ ಸೇತುವೆ, ಸರ್ಜಾಪುರ ರಸ್ತೆ, ಕಸವನಹಳ್ಳಿ ರಸ್ತೆ, ಬೆಳ್ಳಂದೂರು ಮುಖ್ಯ ರಸ್ತೆ, ಹರಳೂರು ರಸ್ತೆ, ಇಬ್ಬಲೂರು ಜಂಕ್ಷನ್, ಹೊರವಲಯ ರಸ್ತೆ ಮೂಲಕ ದೇವರಬೀಸನಹಳ್ಳಿ ತಲುಪಿದರು.

‘ರಸ್ತೆಗಳ ಅಭಿವೃದ್ಧಿ ಗುಣಮಟ್ಟ, ಬೀದಿಗಳ ಸ್ವಚ್ಛತೆ ಪರಿಶೀಲಿಸಲು ಬೈಕ್‌ನಲ್ಲಿ ತಪಾಸಣೆ ಕೈಗೊಂಡಿದ್ದೇನೆ. ಸಮಸ್ಯೆಗಳ ನಿವಾರಣೆಗೆ ಕ್ರಮಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದೇನೆ. ಪಾದಚಾರಿ ಮಾರ್ಗಗಳನ್ನು ಒತ್ತುವರಿ ಮಾಡಿರುವ ಅಂಗಡಿ, ಮಳಿಗೆಗಳನ್ನು ತಕ್ಷಣ ತೆರವುಗೊಳಿಸುವಂತೆ ಸೂಚಿಸಿದ್ದೇನೆ’ ಎಂದು ಲಿಂಬಾವಳಿ ತಿಳಿಸಿದರು.

ಮಹದೇವಪುರ ವಲಯದ ಜಂಟಿ ಆಯುಕ್ತ ವೆಂಕಟಾಚಲಪತಿ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಕ್ಲೆಮೆಂಟ್ ಜಯಕುಮಾರ್, ಮುಖಂಡರಾದ ರಾಜರೆಡ್ಡಿ, ಜಯಚಂದ್ರ ರೆಡ್ಡಿ, ವೆಂಕಟಸ್ವಾಮಿ ರೆಡ್ಡಿ, ವರ್ತೂರು ಶ್ರೀಧರ್, ಎಲ್.ರಾಜೇಶ್, ನಲ್ಲೂರಹಳ್ಳಿ ಚಂದ್ರಶೇಖರರೆಡ್ಡಿ ಇದ್ದರು.



ರಸ್ತೆಗಳ ಗುಣಮಟ್ಟ ಪರಿಶೀಲಿಸುವ ಉದ್ದೇಶಕ್ಕಾಗಿ ಶಾಸಕ ಅರವಿಂದ ಲಿಂಬಾವಳಿ ಮೋಟರ್ ಬೈಕ್ ಸವಾರಿ ಮಾಡಿದರು

ಹಿಂದೆಯೂ ಇಂಥ ಘಟನೆಗಳು ನಡೆದಿವೆ –ಬಿ.ವೈ.ವಿಜಯೇಂದ್ರ ಹೇಳಿಕೆ

ವಿರೋಧ ಪಕ್ಷಗಳಿಂದ ಘಟನೆ ವೈಭವೀಕರಣ

ಪ್ರಜಾವಾಣಿ ವಾರ್ತೆ

ರಾಮನಗರ: ‘ಬಿಜೆಪಿಯು ಕೇಂದ್ರ, ರಾಜ್ಯ ಸರ್ಕಾರದ ಸಾಧನೆಯನ್ನು ಮುಂದಿಟ್ಟುಕೊಂಡು ಮುಂದಿನ ಚುನಾವಣೆ ಎದುರಿಸುತ್ತದೆ. ಬೇರೆ ವಿಚಾರಗಳ ಪ್ರಸ್ತಾಪಿಸುವ ಪ್ರಶ್ನೆಯೇ ಇಲ್ಲ’ ಎಂದು ಪಕ್ಷದ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ವಿಜಯನಗರದಲ್ಲಿರುವ ಆಂಜನೇಯ ಸ್ವಾಮಿ ದೇವಾಲಯಯಲ್ಲಿ ಭಾನುವಾರ ರಾಮನವಮಿ ಅಂಗವಾಗಿ ಪೂಜೆ ಸಲ್ಲಿಸಿದ ಸಂದರ್ಭ ಪತ್ರಕರ್ತರ ಜೊತೆ ಅವರು ಮಾತನಾಡಿದರು.

ಧಾರವಾಡದ ಘಟನೆ ಸೇರಿದಂತೆ ರಾಜ್ಯದಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ನಡೆದಿರುವ ಘಟನೆಗಳ ಕುರಿತು ಪ್ರತಿಕ್ರಿಯೆ ನೀಡಿ ‘ರಾಜ್ಯದಲ್ಲಿ ಹಿಂದೆಯೂ ಇಂತಹ ಘಟನೆಗಳು ಆಗಾಗ್ಗೆ ನಡೆದಿದ್ದವು’ ಎಂದರು.

‘ಆದರೆ ಇದು ಚುನಾವಣಾ ಪೂರ್ವ ವರ್ಷವಾದ ಕಾರಣ ವಿರೋಧಪಕ್ಷಗಳು ಇವುಗಳನ್ನೇ ವೈಭವೀಕರಿಸಿ ಮಾತನಾಡುತ್ತಿವೆ. ಘಟನೆಗಳಿಗೆ ರಾಜಕೀಯದ ಬಣ್ಣ ಕಟ್ಟುತ್ತಿವೆ. ಈ ಎಲ್ಲ ಬೆಳವಣಿಗೆಗಳ ಬಗ್ಗೆ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಈ ಬಗ್ಗೆ ಗಮನ ಹರಿಸಿದ್ದು, ಸರ್ಕಾರ ಕಣ್ಣು ಮುಚ್ಚಿಕೊಂಡು ಕೂರುವ ಪ್ರಶ್ನೆಯೇ ಇಲ್ಲ’ ಎಂದರು.

ಬೆಂಗಳೂರಿನಲ್ಲಿ ಚಂದ್ರು ಹತ್ಯೆ ಪ್ರಕರಣ ಕುರಿತು ಪ್ರತಿಕ್ರಿಯಿಸಿ ‘ಈ ವಿಚಾರದಲ್ಲಿ ಸಾಕಷ್ಟು ಗೊಂದಲಗಳು ಇವೆ. ಕೊಲೆಗೆ ಸಂಬಂಧಿಸಿದ್ದಂತೆ ಈಗಾಗಲೇ ಕಮಿಷನರ್ ಕಮಲ್‌ಪಂತ್ ಸ್ಪಷ್ಟನೆ ನೀಡಿದ್ದಾರೆ. ಆದರೆ ಅಲ್ಲೊಬ್ಬ ವ್ಯಕ್ತಿ ಬೇರೆ ಹೇಳಿಕೆ ಕೊಟ್ಟಿದ್ದಾನೆ. ಸರ್ಕಾರ ಈಗಾಗಲೇ ಸಿಐಡಿ ತನಿಖೆಗೆ ಆದೇಶ ಕೂಡ ನೀಡಿದೆ. ಮುಂದಿನ ದಿನಗಳಲ್ಲಿ ಸತ್ಯಾಸತ್ಯತೆ ತಿಳಿಯಲಿದೆ’ ಎಂದರು.

‘ಹತ್ಯೆ ಮೂಲ ಹುಡುಕಬೇಕು’

ಚಿಕ್ಕಮಗಳೂರು: ‘ಚಂದ್ರು ಹತ್ಯೆ ಮೂಲವನ್ನು ಹುಡುಕುವ ಕೆಲಸ ಆಗಬೇಕಿದೆ. ಹತ್ಯೆ ಮಾಡುವ ಮನಸ್ಥಿತಿ ಏಕೆ ಬಂತು ಎಂಬುದನ್ನು ಪತ್ತೆ ಮಾಡಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಚಂದ್ರು ತಾಯಿಯೇ ಹೇಳಿಕೆ ನೀಡಿದ್ದಾರೆ. ಹತ್ಯೆಯ ಮೂಲ ಬಿಟ್ಟು ಬೇರೆಯದರ ಬಗ್ಗೆ ಯೋಚಿಸುವುದು ಸರಿಯಲ್ಲ. ಅಖಂಡ ಶ್ರೀನಿವಾಸ ಅವರ ಮನೆ, ಕೆ.ಜಿ ಹಳ್ಳಿ, ಡಿ.ಜಿ. ಹಳ್ಳಿಯಲ್ಲಿ ಹಲವು ಮನೆಗಳಿಗೆ ಬೆಂಕಿ ಯಾಕೆ ಹಾಕಿದರು? ಎಂಬ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿದರೆ ಸತ್ಯ ಗೊತ್ತಾಗುತ್ತದೆ’ ಎಂದರು.

‘ಸಿದ್ದರಾಮಯ್ಯ ಮತ್ತು ಎಚ್‌.ಡಿ.ಕುಮಾರಸ್ವಾಮಿ ಹೇಳಿಕೆಗಳನ್ನು ಗಮನಿಸಿದ್ದೇನೆ. ಧಾರವಾಡದ ನುಗ್ಗಿಕೇರಿಯಲ್ಲಿ ಕಲ್ಲಂಗಡಿ ಹಣ್ಣು ಬೀದಿಗೆ ಚೆಲ್ಲಿರುವುದಕ್ಕೆ ಸಂಕಟವನ್ನು ತೋರಿಸುವುದನ್ನು ತಲೆ ಹೊಡೆದಾಗಲೂ ಅವರು ತೋರಿಸಬೇಕು’ ಎಂದು ಉತ್ತರಿಸಿದರು.

ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಪ್ರತಿಕ್ರಿಯಿಸಿ, ‘ಸಾಮರಸ್ಯ ಕದಡುವ ಕೆಲಸವನ್ನು ಯಾರೂ ಮಾಡಬಾರದು. ಧಾರವಾಡದಲ್ಲಿ ಅಂಗಡಿಗಳಿಗೆ ನುಗ್ಗಿ ಕಲ್ಲಂಗಡಿ ಹಣ್ಣು ಬೀದಿಗೆ ಚೆಲ್ಲಿರುವುದು ಸರಿಯಲ್ಲ’ ಎಂದರು.

ಅನ್ನ ಕಸಿಯುವ ಕೆಲಸದ ವಿರುದ್ಧ ದನಿ: ಎಚ್‌.ವಿಶ್ವನಾಥ್ ಕರೆ

ಮೈಸೂರು: ‘ರಾಜ್ಯದಲ್ಲಿ ಈಗ ಅನ್ನ ಕಸಿಯುವ ಕೆಲಸ ನಡೆಯುತ್ತಿದೆ. ಸಾಹಿತಿಗಳು ಇದರ ವಿರುದ್ಧ ದನಿ ಎತ್ತಬೇಕು’ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಕರೆ ನೀಡಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಸಂವಹನ ಪ್ರಕಾಶನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬಂದೂಕಿಗಿಂತ ಲೇಖನಿ ಶಕ್ತಿಶಾಲಿ. ಸಾಹಿತಿಗಳು ಪ್ರಸಕ್ತ ವಿದ್ಯಮಾನಗಳನ್ನು ಕುರಿತು ಬಹಿರಂಗವಾಗಿಯೇ ಬರೆಯಬೇಕು. ಇಂದು ನಡೆಯುತ್ತಿರುವ ಅನ್ನ ಕಸಿಯುವಂತಹ ಕೃತ್ಯಗಳಿಂದ ಬಹಳ ನೊಂದಿದ್ದೇನೆ’ ಎಂದರು.

ಬೋರಿಸ್ ಜಾನ್ಸನ್ ಅವರಿಂದ ನೆರವಿನ ಮಹಾಪೂರ • ಉಕ್ರೇನ್ ಏಕಾಂಗಿಯಲ್ಲ ಎಂದು ಜಗತ್ತಿಗೆ ಸ್ಪಷ್ಟ ಸಂದೇಶ

ಕೀವ್ ಯುದ್ಧಭೂಮಿಯಲ್ಲಿ ಬ್ರಿಟನ್ ಪ್ರಧಾನಿ

ಲಂಡನ್ (ಪಿಟಿಐ/ಎಪಿ): ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಯುದ್ಧಪೀಡಿತ ಉಕ್ರೇನ್ ರಾಜಧಾನಿ ಕೀವ್‌ಗೆ ಭೇಟಿ ನೀಡಿ ಸೇನಾ ನೆರವಿನ ಭರವಸೆ ನೀಡಿರುವಂತೆಯೇ, ರಷ್ಯಾ ಮತ್ತು ಉಕ್ರೇನ್‌ನ ಯುದ್ಧಕೈದಿಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಗೆ ವೇಗ ದೊರಕಿದೆ.

ರಷ್ಯಾವು ಉಕ್ರೇನ್ ಮೇಲೆ ಯುದ್ಧ ಆರಂಭಿಸಿದ ಬಳಿಕ ಕೀವ್‌ಗೆ ಭೇಟಿ ನೀಡಿದ ಪ್ರಮುಖ ನಾಯಕ ಜಾನ್ಸನ್ ಅವರಾಗಿದ್ದು, ಬ್ರಿಟನ್ ಸರ್ಕಾರವು ಉಕ್ರೇನ್ ಪರ ದೃಢವಾಗಿ ನಿಲ್ಲಲಿದೆ ಎಂಬ ಸಂದೇಶವನ್ನು ರವಾನಿಸಿದರು.

ಜಾನ್ಸನ್ ಅವರು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರ ಜೊತೆ ಸೇನೆ ಮತ್ತು ಆರ್ಥಿಕ ನೆರವುಗಳ ಕುರಿತು ಮಹತ್ವದ ಮಾತುಕತೆ ನಡೆಸಿದರು.ಅಲ್ಲದೆರಷ್ಯಾವಿರುದ್ಧದಹೋರಾಟಕ್ಕಾಗಿ ಉಕ್ರೇನ್‌ಗೆ 120 ಸಶಸ್ತ್ರ ವಾಹನಗಳು, ಹಡಗು ಪ್ರತಿರೋಧಕ ಕ್ಷಿಪಣಿ ವ್ಯವಸ್ಥೆ ಹಾಗೂ ಹಣಕಾಸು ನೆರವುಗಳನ್ನು ಘೋಷಿಸಿದರು.

ಉಕ್ರೇನ್‌ಗೆ ವಿಶ್ವ ಬ್ಯಾಂಕ್‌ನಿಂದ ಹೆಚ್ಚುವರಿ ₹3,750 ಕೋಟಿ (500 ಮಿಲಿಯನ್ ಡಾಲರ್) ಸಾಲದ ಖಾತ್ರಿ ನೀಡಿದರು. ತನ್ಮೂಲಕ ಒಟ್ಟಾರೆ ₹7,500 ಕೋಟಿ ಸಾಲದ ಖಾತ್ರಿಯನ್ನು ಬ್ರಿಟನ್ ಖಚಿತಪಡಿಸಿದಂತಾಗಿದೆ.



ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜತೆ ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಅವರು ರಾಜಧಾನಿ ಕೀವ್‌ನ ಕೇಂದ್ರ ಭಾಗಕ್ಕೆ ಶನಿವಾರ ಭೇಟಿ ನೀಡಿದರು —ಎಪಿ ಚಿತ್ರ

'ಅಧ್ಯಕ್ಷ ಝೆಲೆನ್‌ಸ್ಕಿ ಅವರ ನಾಯಕತ್ವ, ಉಕ್ರೇನ್ ಜನತೆಯ ಧೈರ್ಯ ಮತ್ತು ಸಾಹಸಗಳ ಪರಿಣಾಮದಿಂದ ರಷ್ಯಾದ ದಾಳಿಯನ್ನು ಉಕ್ರೇನ್ ಹಿಮ್ಮೆಟ್ಟಿಸಿದೆ' ಎಂದು ಬೋರಿಸ್ ಜಾನ್ಸನ್ ಕೊಂಡಾಡಿದರು.

ರಷ್ಯಾಕ್ಕೆ ಉಕ್ರೇನ್ ಅಷ್ಟೇ ಅಲ್ಲ, ಯುರೋಪ್ ಗುರಿ: ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಉಕ್ರೇನ್ ಅನ್ನು ಮಾತ್ರ ಗುರಿಯಾಗಿಸಿಕೊಂಡಿಲ್ಲ. ಬದಲಾಗಿ ಯುರೋಪ್‌ನ ಎಲ್ಲಾ ದೇಶಗಳನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಹೇಳಿದ್ದಾರೆ. ಅಲ್ಲದೆ ರಷ್ಯಾದ ಈ ಯುದ್ಧವನ್ನು ತಡೆಯುವುದು ಎಲ್ಲಾ ಪ್ರಜಾಪ್ರಭುತ್ವ ದೇಶಗಳಿಗೆ ಅತ್ಯಗತ್ಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

ಶನಿವಾರ ತಡರಾತ್ರಿ ದೇಶವನ್ನುದ್ದೇಶಿಸಿ ಮಾತನಾಡಿದ ಅವರು, ರಷ್ಯಾದ ಪಡೆಗಳು ಉಕ್ರೇನ್‌ನಲ್ಲಿ ನಾಗರಿಕರ ಮೇಲೆ ಭೀಕರ ದಾಳಿ ನಡೆಸುತ್ತಿರುವ ಹೊರತಾಗಿಯೂ, ಶಾಂತಿಗೆ ಬದ್ಧವಾಗಿರುತ್ತೇವೆ ಎಂದರು.

'ದೇಶಕ್ಕೆ ಚಿತ್ರಹಿಂಸೆ ನೀಡಿದ ವ್ಯಕ್ತಿಯ ಜೊತೆಗೆ ಒಪ್ಪಂದ ಮಾಡಿಕೊಳ್ಳುವುದು ಯಾರಿಗೂ ಬೇಡವಾಗಿದೆ. ಒಬ್ಬ ವ್ಯಕ್ತಿಯಾಗಿ, ತಂದೆಯಾಗಿ ಇದನ್ನು ನಾನು ಚೆನ್ನಾಗಿ ಅರ್ಥೈಸಿಕೊಂಡಿದ್ದೇನೆ. ಆದರೆ, ಸಮಸ್ಯೆಗೆ ರಾಜತಾಂತ್ರಿಕ ಪರಿಹಾರ ಸಿಗುವುದಾದರೆ, ಅಂಥದ್ದನ್ನು ಕಳೆದುಕೊಳ್ಳಲು ಇಚ್ಚಿಸುವುದಿಲ್ಲ. ನಾವು ಹೋರಾಡಬೇಕಿದೆ, ಆದರೆ ಇದು ಜೀವನಕ್ಕಾಗಿ ಹೋರಾಟ. ಯಾವುದೇ ವ್ಯಕ್ತಿಗಳಿಲ್ಲದಿದ್ದರೆ, ಕೇವಲ ದೂಳಿಗಾಗಿ ಹೋರಾಟ ಮಾಡಲಾಗದು. ಇದಕ್ಕಾಗಿ ಯುದ್ಧವನ್ನು ನಿಲ್ಲಿಸುವುದು ಮುಖ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಈ ಮಧ್ಯೆ, ಪೂರ್ವ ಭಾಗದಲ್ಲಿ ರಷ್ಯಾ ಭಾರಿ ಪ್ರಯತ್ನ: ಉಕ್ರೇನ್‌ನ ಪೂರ್ವ ಭಾಗದ ಡಾನ್‌ಬಾಸ್, ಮರಿಯುಪೋಲ್ ಪ್ರದೇಶಗಳನ್ನು ತನ್ನ ವಶಕ್ಕೆ ಪಡೆದುಕೊಳ್ಳಲು ರಷ್ಯಾ ಭಾರಿ ಪ್ರಯತ್ನ ನಡೆಸುತ್ತಿದ್ದು, ಸೇನಾಪಡೆಗಳನ್ನು ಮತ್ತೆ ಮರುಸಂಘಟಿಸುವ ಕೆಲಸದಲ್ಲಿ ತೊಡಗಿದೆ. ಇಲ್ಲಿ ಉಕ್ರೇನ್ ಸೈನಿಕರು ಸಹ ತಾಯ್ನಾಡನ್ನು ಉಳಿಸಿಕೊಳ್ಳಲು ಉಗ್ರ ಪ್ರತಿರೋಧ ತೋರುತ್ತಿದ್ದಾರೆ.

ಉಕ್ರೇನ್-ರಷ್ಯಾ ಯುದ್ಧ ಕೈದಿಗಳ ವಿನಿಮಯ

ಮಾಸ್ಕೊ(ರಾಯಿಟರ್ಸ್): ರಷ್ಯಾ ಮತ್ತು ಉಕ್ರೇನ್ ದೇಶಗಳ ಮಧ್ಯೆ ಶನಿವಾರ ಯುದ್ಧ ಕೈದಿಗಳ ವಿನಿಮಯ ನಡೆದಿದೆ ಎಂದು ರಷ್ಯಾದ ಮಾನವ ಹಕ್ಕುಗಳ ಆಯುಕ್ತ ಟಾಟ್ಯನಾ ಮೊಸ್ಕಲ್ಕೊವಾ ಅವರು ಖಚಿತಪಡಿಸಿದ್ದಾರೆ. ಇದರಿಂದಾಗಿ ರಷ್ಯಾ ಬಂಧಿಸಿದ್ದ ಉಕ್ರೇನಿನ 12 ಯೋಧರು ಹಾಗೂ 14 ಪ್ರಜೆಗಳು, ಉಕ್ರೇನ್ ಬಂಧಿಸಿದ್ದ ರಷ್ಯಾದ ಹಲವು ಯೋಧರು ಮತ್ತು ನಾಗರಿಕರು ಬಂಧಮುಕ್ತರಾಗಿದ್ದಾರೆ.

ಈ ಪ್ರಕಾರ ಉಕ್ರೇನ್‌ನಿಂದ ಯುದ್ಧ ಕೈದಿಗಳಾಗಿ ಬಂಧಿತರಾಗಿದ್ದ ಪರಮಾಣು ವಿದ್ಯುತ್ ನಿಗಮದ (ರೋಸಾಟೋಮ್) ನಾಲ್ವರು ಸಿಬ್ಬಂದಿ, ಯೋಧರು ಹಾಗೂ ನಾಗರಿಕರು ಬಂಧಮುಕ್ತರಾಗಿ, ಭಾನುವಾರ ರಷ್ಯಾಕ್ಕೆ ಬಂದಿದ್ದಾರೆ ಎಂದು ತಿಳಿಸಿದರು.

ರಷ್ಯಾದ 32 ಟ್ರಕ್ ಚಾಲಕರು, ಉಕ್ರೇನ್‌ನ 20 ಟ್ರಕ್ ಚಾಲಕರು ಮತ್ತು ಬೆಲರೂಸ್ ಪ್ರಜೆಗಳನ್ನು ಸಹ ಪರಸ್ಪರ ವಿನಿಮಯ ಮಾಡಿಕೊಳ್ಳಲಾಗಿದೆ. ರಷ್ಯಾ ಬಂಧಿಸಿದ್ದ ಉಕ್ರೇನ್‌ನ 12 ಯೋಧರು ಮತ್ತು 14 ನಾಗರಿಕರನ್ನು ರಷ್ಯಾ ಬಿಡುಗಡೆ ಮಾಡಿ ಹಸ್ತಾಂತರಿಸಿದೆ ಎಂದು ಉಕ್ರೇನ್ ಉಪ ಪ್ರಧಾನಿ ತಿಳಿಸಿದ್ದಾರೆ. ಯುದ್ಧ ಆರಂಭವಾದ ಬಳಿಕ ಉಭಯ ದೇಶಗಳು 3 ಬಾರಿ ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಂಡಿವೆ.

46ನೇ ದಿನದ ಬೆಳವಣಿಗೆಗಳು

- ಪವಿತ್ರ ಈಸ್ಟರ್ ಭಾನುವಾರದಂದು ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರು ಯುದ್ಧ ನಿಲ್ಲಿಸುವಂತೆ ಉಕ್ರೇನ್ ಮತ್ತು ರಷ್ಯಾ ನಾಯಕರಿಗೆ ಕರೆ ನೀಡಿದ್ದಾರೆ. ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕು, ಮತ್ತೆ ಯುದ್ಧದಲ್ಲಿ ತೊಡಗುವುದು ಬೇಡ. ನಿಜವಾದ ಒಪ್ಪಂದಗಳ ಮೂಲಕ ಶಾಂತಿ ಪುನರ್ ಸ್ಥಾಪಿಸಬೇಕು. ಜನರ ಒಳಿತಿಗಾಗಿ ನಾಯಕರು ಕೆಲವು ತ್ಯಾಗಗಳನ್ನು ಮಾಡಬೇಕು ಎಂದು ಸಲಹೆ ನೀಡಿದ್ದಾರೆ.
- ರಷ್ಯಾದ ದಾಳಿ ಆರಂಭವಾದ ಬಳಿಕ ಉಕ್ರೇನ್‌ನಿಂದ ಇತರೆ ಪ್ರದೇಶಗಳಿಗೆ ವಲಸೆ ಹೋಗುವವರ ಸಂಖ್ಯೆ 45 ಲಕ್ಷಕ್ಕೆ ಏರಿಕೆ: ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ ಮಾಹಿತಿ. ಈ ಪೈಕಿ ಕನಿಷ್ಠ 26 ಲಕ್ಷ ಮಂದಿ ಪೋಲೆಂಡ್‌ಗೆ ಹಾಗೂ 6.86 ಲಕ್ಷ ಮಂದಿ ರೊಮೇನಿಯಾಕ್ಕೆ ವಲಸೆ ಹೋಗಿದ್ದಾರೆ.
- ಉಕ್ರೇನ್ ರಾಜಧಾನಿ ಕೀವ್ ಆಕ್ರಮಿಸಿಕೊಳ್ಳಲು ವಿಫಲವಾಗಿರುವ ರಷ್ಯಾ ಈಗ ಆಗ್ನೇಯ ಹಾರ್ಕೀವ್‌ನ ಪ್ರದೇಶವೊಂದರ ಮೇಲೆ ದಾಳಿಗೆ ಯತ್ನಿಸಿದೆ ಎಂದು ಉಕ್ರೇನ್ ಭದ್ರತಾ ಕಮಾಂಡ್ ತಿಳಿಸಿದೆ.
- ರಷ್ಯಾದ ಮ್ಯೂಸಿಯಂನಿಂದ ತರಿಸಿಕೊಳ್ಳಲಾಗಿದ್ದ ಕಲಾಕೃತಿಗಳನ್ನು ಫಿನ್ಲೆಂಡ್ ರಷ್ಯಾಕ್ಕೆ ವಾಪಸ್ ಕಳುಹಿಸಿದೆ.
- ಉಕ್ರೇನ್ ರಾಜಧಾನಿ ಕೀವ್ ನಗರದ ಪಶ್ಚಿಮ ಭಾಗದ ಪೆಟ್ರೋಲ್ ಪಂಪ್ ಬಳಿಯಿರುವ ಚರಂಡಿ ಗುಂಡಿಯಲ್ಲಿ ಇಬ್ಬರ ಮೃತ ದೇಹಗಳು ಪತ್ತೆ. ಇದರಲ್ಲಿ ನಾಗರಿಕ ಮತ್ತು ಸೇನಾ ಸಿಬ್ಬಂದಿ.
- 40ರಿಂದ 50 ಕಿ.ಮೀ ದೂರದ ಗುರಿ ತಲುಪಬಲ್ಲ ಹೋವಿಟ್ಜರ್ ಫಿರಂಗಿಗಳನ್ನು ಉಕ್ರೇನ್‌ಗೆ ಮಾರಾಟ ಮಾಡಲು ಸ್ಲೊವೇಕಿಯಾ ನಿರ್ಧಾರ.
- 2012ರಿಂದ ಸೇನೆಯಿಂದ ಬಿಡುಗಡೆಯಾದ ಸಿಬ್ಬಂದಿಯೊಂದಿಗೆ ಸೈನಿಕರ ಸಂಖ್ಯೆ ಹೆಚ್ಚಿಸಿಕೊಳ್ಳುತ್ತಿರುವ ರಷ್ಯಾ: ಬ್ರಿಟನ್ ರಕ್ಷಣಾ ಸಚಿವಾಲಯ ಹೇಳಿಕೆ
- ರಷ್ಯಾ ಸಾರಿದ ಯುದ್ಧದಿಂದಾಗಿ ದೇಶದಾದ್ಯಂತ ಹೇರಲಾದ ತುರ್ತು ಪರಿಸ್ಥಿತಿ ಕಾನೂನು ಉಲ್ಲಂಘಿಸಿ ದೇಶ ತೊರೆಯಲು ಯತ್ನಿಸಿದ್ದ 2,200 ಮಂದಿಯನ್ನು ಬಂಧಿಸಲಾಗಿದೆ: ಉಕ್ರೇನ್ ಗಡಿ ಭದ್ರತಾ ಏಜೆನ್ಸಿ
- ಉಕ್ರೇನ್ ಯುದ್ಧದ ಹಿನ್ನೆಲೆ: ಅಮೆರಿಕದೊಂದಿಗೆ 2 + 2 ಸಚಿವ ಮಟ್ಟದ ಸಭೆಯಲ್ಲಿ ಪಾಲ್ಗೊಳ್ಳಲು ವಾಷಿಂಗ್ಟನ್‌ಗೆ ಬಂದಿಳಿದ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮತ್ತು ವಿದೇಶಾಂಗ ಸಚಿವ ಎಸ್.ಜೈಶಂಕರ್
- ರಷ್ಯಾದ ವಿರುದ್ಧ ಹೋರಾಟಕ್ಕೆ ಉಕ್ರೇನ್‌ಗೆ ಅಗತ್ಯವಿರುವಷ್ಟು ಶಸ್ತ್ರಾಸ್ತ್ರಗಳನ್ನು ಪೂರೈಸಲು ಬದ್ಧರಾಗಿದ್ದೇವೆ: ಅಮೆರಿಕ
- ಉಕ್ರೇನ್‌ನ ನಾಲ್ಕನೇ ದೊಡ್ಡ ನಗರ ಡಿನಿಪ್ರೊದ ವಿಮಾನನಿಲ್ದಾಣದ ಮೇಲೆ ರಷ್ಯಾದಿಂದ ಎರಡು ಕ್ಷಿಪಣಿ ದಾಳಿ, ಹಾರ್ಕಿವ್ ಮೇಲೂ ಮುಂದುವರಿದ ಶೆಲ್ ದಾಳಿ

ಭಾರತದ ಜತೆ ಮಾತುಕತೆಗೆ ಶಾಹಬಾಝ್ ಒಲವು?

ಇಸ್ಲಾಮಾಬಾದ್ (ಪಿಟಿಐ): ಶಾಹಬಾಝ್ ಷರೀಫ್ ಅವರು ಪಾಕಿಸ್ತಾನದ ಮುಂದಿನ ಪ್ರಧಾನಿಯಾದರೆ, ಕಾಶ್ಮೀರದ ವಿಚಾರವಾಗಿ ಭಾರತದೊಂದಿಗೆ ಮಾತುಕತೆ ಮತ್ತೆ ಆರಂಭವಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಕಠಿಣ ಮತ್ತು ನಿಷ್ಠುರ ನಿರ್ಧಾರಗಳನ್ನು ತೆಗೆದುಕೊಳ್ಳುವುದಕ್ಕೆ ಹೆಸರಾಗಿರುವ ಶಾಹಬಾಝ್ ಅವರು, ಪಾಕಿಸ್ತಾನದ ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಸೋದರ. ನವಾಜ್ ಷರೀಫ್ ಅವರು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜತೆಯಲ್ಲಿ ಉತ್ತಮ ಸ್ನೇಹ ಹೊಂದಿದ್ದರು. ಹೀಗಾಗಿ ಶಾಹಬಾಝ್ ಸಹ, ಪ್ರಧಾನಿ ಮೋದಿ ಅವರೊಂದಿಗೆ ಉತ್ತಮ ಸಂಬಂಧ ಮುಂದುವರಿಸಬಹುದು. ಇದರಿಂದ ಎರಡೂ ದೇಶಗಳ ಮಧ್ಯೆ ಮಾತುಕತೆ ಆರಂಭವಾಗಬಹುದು ಎಂದು ನಿರೀಕ್ಷಿಸಲಾಗಿದೆ.

ಭಾರತದಲ್ಲಿ, 2014ರಲ್ಲಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ಕೆಲವೇ ತಿಂಗಳಲ್ಲಿ ಭಯೋತ್ಪಾದನಾ ದಾಳಿಗಳ ಕಾರಣ ಪಾಕಿಸ್ತಾನದ ಜತೆಗೆ ಮಾತುಕತೆಯನ್ನು ನಿಲ್ಲಿಸಲಾಗಿತ್ತು.

ಮುಖ್ಯಾಂಶಗಳು

- 2014ರಲ್ಲಿ ಸ್ಥಗಿತವಾಗಿದ್ದ ದ್ವಿಪಕ್ಷೀಯ ಮಾತುಕತೆ
- ಮರು ಆರಂಭಕ್ಕೆ ಶಾಹಬಾಝ್ ಷರೀಫ್ ಒತ್ತು ನೀಡುವ ಸಾಧ್ಯತೆ
- ಸಂಬಂಧ ಸುಧಾರಣೆ: ರಾಜಕೀಯ ತಜ್ಞರ ನಿರೀಕ್ಷೆ

2018ರಲ್ಲಿ ಇಮ್ರಾನ್ ಖಾನ್ ಅವರು ಪ್ರಧಾನಿಯಾದಾಗ, ಭಾರತದೊಂದಿಗೆ ಸಂಬಂಧ ಸುಧಾರಿಸುವ ಮಾತುಗಳನ್ನಾಡಿದ್ದರು. ಆದರೆ, ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಯೋಧರ ಮೇಲೆ ಉಗ್ರರ ದಾಳಿ ನಡೆದ ನಂತರ ಮಾತುಕತೆಯ ಯತ್ನಗಳನ್ನು ಕೈಬಿಡಲಾಗಿತ್ತು. 2019ರಲ್ಲಿ ಕಾಶ್ಮೀರದ ವಿಶೇಷ ಸ್ಥಾನವನ್ನು ವಾಪಸ್ ಪಡೆದ ನಂತರ, ಮಾತುಕತೆ ಸಾಧ್ಯವೇ ಇಲ್ಲ ಎಂದು ಇಮ್ರಾನ್ ಹೇಳಿದ್ದರು.

'ಇಮ್ರಾನ್, ಪಾಕಿಸ್ತಾನದ ವಿದೇಶಾಂಗ ನೀತಿಯನ್ನು ಹಾಳು ಮಾಡಿದ್ದಾರೆ. ನಾವು ಇದನ್ನು ಸರಿಪಡಿಸುತ್ತೇವೆ' ಎಂದು ಶಾಹಬಾಝ್ ಹಲವು ಬಾರಿ ಹೇಳಿದ್ದಾರೆ. ಹೀಗಾಗಿ ಭಾರತದ ಜತೆಗೂ ಅವರು ಮಾತುಕತೆ ಪುನರಾರಂಭಕ್ಕೆ ಒತ್ತು ನೀಡುವ ಸಾಧ್ಯತೆಗಳು ಅತ್ಯಧಿಕವಾಗಿವೆ ಎಂದು ಪಾಕಿಸ್ತಾನದ ರಾಜಕೀಯ ವಿಶ್ಲೇಷಕರು ಹೇಳಿದ್ದಾರೆ. ಆದರೆ ನವಾಜ್ ಷರೀಫ್ ಅವರನ್ನು ಕರೆಯುತ್ತಿದ್ದ ರೀತಿಯಲ್ಲೇ ಶಾಹಬಾಝ್ ಅವರನ್ನೂ, 'ಮೋದಿ ಕಿ ಯಾರ್ (ಮೋದಿಯ ಗೆಳೆಯ)' ಎಂದು ಹೀಯಾಳಿಸುವ ಸಾಧ್ಯತೆಯೂ ಇದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

'ಭಾರತದ ವಿಚಾರದಲ್ಲಿ ಇಮ್ರಾನ್ ಖಾನ್‌ಅವರುಯಾವುದೇನೀತಿಹೊಂದಿರಲಿಲ್ಲ. ಆದರೆ ಶಾಹಬಾಝ್ ಅವರು ಇದಕ್ಕಾಗಿ ಒಂದು ಸ್ಪಷ್ಟ ನೀತಿಯನ್ನು ರೂಪಿಸಲಿದ್ದಾರೆ' ಎಂದು ಪಿಎಂಎಲ್–ಎನ್ ನಾಯಕ ಸಮೀಉಲ್ಲಾ ಖಾನ್ ಹೇಳಿದ್ದಾರೆ.

2014ರಲ್ಲಿ ಮಾತುಕತೆ ಸ್ಥಗಿತವಾದ ನಂತರ, ಅದನ್ನು ಮತ್ತೆ ಆರಂಭಿಸಲು ಎರಡೂ ದೇಶಗಳು ಮುಂದಾಗಲಿಲ್ಲ. ಮಾತುಕತೆ ಸ್ಥಗಿತಗೊಳಿಸಿದ್ದ ಭಾರತವೇ, ಮಾತುಕತೆ ಆರಂಭಕ್ಕೆ ಮುಂದಾಗಬೇಕಿತ್ತು. ಪಾಕಿಸ್ತಾನ ಯಾವತ್ತೂ ಮಾತುಕತೆಯನ್ನು ವಿರೋಧಿಸಿಲ್ಲ. ಈಗ ಇಮ್ರಾನ್ ಖಾನ್ ಅವರ ಸರ್ಕಾರ ಪತನದ ವಿಚಾರದಲ್ಲಿ ಭಾರತ, 'ಅದು ಅವರ ಆಂತರಿಕ ವಿಚಾರ' ಎಂದಷ್ಟೇ ಹೇಳಿದೆ. ಇದು ಎರಡೂ ದೇಶಗಳ ಮಧ್ಯೆ ಮತ್ತೆ ಮಾತುಕತೆ ಆರಂಭಕ್ಕೆ ಸೂಕ್ತ ವೇದಿಕೆ ನಿರ್ಮಿಸುವ ವಾತಾವರಣಕ್ಕೆ ಕಾರಣವಾಗಿದೆ ಎಂದು ರಾಜಕೀಯ ತಜ್ಞ ಡಾ. ಹಸ್ಸಾನ್ ಅಸ್ಕಾರಿ ಹೇಳಿದ್ದಾರೆ.

ಶಹಬಾಝ್ ವಿರುದ್ಧ ತನಿಖೆ: ಅಧಿಕಾರಿಗೆ ಅನಿರ್ದಿಷ್ಟಾವಧಿ ರಜೆ

ಲಾಹೋರ್ (ಪಿಟಿಐ): ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಆಗುತ್ತಿದ್ದಂತೆಯೇ, ಪ್ರಧಾನಿ ಅಭ್ಯರ್ಥಿ ಶಾಹಬಾಝ್ ಷರೀಫ್ ಅವರ ವಿರುದ್ಧ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ನಡೆಸುತ್ತಿದ್ದ ಉನ್ನತ ಅಧಿಕಾರಿ ಅನಿರ್ದಿಷ್ಟಾವಧಿಗೆ ರಜೆ ತೆಗೆದುಕೊಂಡಿದ್ದಾರೆ.

ಪಾಕಿಸ್ತಾನದ ಉನ್ನತ ತನಿಖಾ ಸಂಸ್ಥೆಯಾದ ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿಯ (ಎಫ್‌ಐಎ) ಮುಖ್ಯಸ್ಥ ಮೊಹಮ್ಮದ್ ರಿಜ್ವಾನ್ ಅವರು ಶಾಹಬಾಝ್ ವಿರುದ್ಧದ 1,400 ಕೋಟಿ ಪಾಕಿಸ್ತಾನಿ ರೂಪಾಯಿ ವಂಚನೆ ಆರೋಪದ ಬಗ್ಗೆ ತನಿಖೆ ನಡೆಸುತ್ತಿದ್ದರು.

ರಿಜ್ವಾನ್ ಅವರ ರಜಾ ಅರ್ಜಿ ಸ್ವೀಕೃತವಾಗಿರುವ ಕುರಿತು ಭಾನುವಾರ ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ.

ಏಪ್ರಿಲ್ 4ರಂದು ಎಫ್‌ಐಎಯ ವಿಶೇಷ ನ್ಯಾಯಾಲಯ ಶಾಹಬಾಝ್ ಮತ್ತು ಅವರ ಮಗ ಹಂಝಾ ಅವರಿಗೆ ಸಮನ್ಸ್ ನೀಡಿ ಏಪ್ರಿಲ್ 11ಕ್ಕೆ ನ್ಯಾಯಾಲಯದ ಎದುರು ಹಾಜರಾಗಲು ಹೇಳಿತ್ತು. ಈ ವೇಳೆ ಅವರ ವಿರುದ್ಧ ದೋಷಾರೋಪ ಹೊರಿಸುವುದಾಗಿ ಹೇಳಿತ್ತು. ಅವರಿಬ್ಬರು ಕೋರ್ಟ್‌ಗೆ ಹಾಜರಾಗುವ ಮೊದಲೇ ರಿಜ್ವಾನ್ ರಜೆ ತೆಗೆದುಕೊಂಡಿದ್ದಾರೆ.

ಇಮ್ರಾನ್ ಆಪ್ತರ ಮನೆ ಮೇಲೆ ದಾಳಿ

ಇಮ್ರಾನ್ ಖಾನ್ ಅವರು ವಿಶ್ವಾಸ ಮತ ಸೋಲುತ್ತಿದ್ದಂತೆಯೇ ಅವರ ಆಪ್ತರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಪಾಕಿಸ್ತಾನ ತೆಹ್ರೀಕ್ ಎ ಇನ್ಸಾಫ್ ಆರೋಪಿಸಿದೆ.

'2019ರಿಂದ ಇಮ್ರಾನ್ ಖಾನ್ ಅವರ ಸಾಮಾಜಿಕ ಜಾಲತಾಣ ತಂಡದ ಮುಖ್ಯಸ್ಥರಾಗಿರುವ ಡಾ. ಅರ್ಸಲನ್ ಖಾಲಿದ್ ಅವರ ಮನೆ ಮೇಲೆ ದಾಳಿ ನಡೆಸಲಾಗಿದೆ ಮತ್ತು ಅವರ ಕುಟುಂಬದವರ ಮೊಬೈಲ್ ಫೋನ್‌ಗಳನ್ನು ಕಸಿದುಕೊಳ್ಳಲಾಗಿದೆ' ಎಂದು ಪಿಟಿಐ ಟ್ವೀಟ್ ಮಾಡಿದೆ.

'ಡಾ. ಅರ್ಸಲನ್ ಖಾಲಿದ್ ಅವರು ಸಾಮಾಜಿಕ ಜಾಲತಾಣಗಳಲ್ಲಿ ಯಾರನ್ನೂ ನಿಂದಿಸಿಲ್ಲ ಮತ್ತು ಯಾವುದೇ ಸಂಸ್ಥೆ ಮೇಲೆ ದಾಳಿ ನಡೆಸಿಲ್ಲ' ಎಂದು ಮತ್ತೊಂದು ಟ್ವೀಟ್‌ನಲ್ಲಿ ಹೇಳಲಾಗಿದೆ.

ಈ ಘಟನೆ ಕುರಿತು ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿ ತನಿಖೆ ನಡೆಸಬೇಕು ಎಂದು ಪಿಟಿಐ ಒತ್ತಾಯಿಸಿದೆ.

ಹಿಂದಿ ಕಡ್ಡಾಯ ವಿಷಯ: ಅಸ್ಸಾಂ ಸಾಹಿತ್ಯ ಸಭಾ ಆಕ್ಷೇಪ

ಗುವಾಹಟಿ (ಪಿಟಿಐ): ಈಶಾನ್ಯ ರಾಜ್ಯಗಳಲ್ಲಿ 10ನೇ ತರಗತಿಯವರೆಗೆ ಹಿಂದಿಯನ್ನು ಕಡ್ಡಾಯ ವಿಷಯವನ್ನಾಗಿ ಮಾಡಲು ಹೊರಟಿರುವ ಕೇಂದ್ರ ಸರ್ಕಾರದ ನಡೆಯನ್ನು ಶತಮಾನದ ಹಳೆಯ ಸಾಹಿತ್ಯ–ಸಾಂಸ್ಕೃತಿಕ ಸಂಸ್ಥೆ ಅಸ್ಸಾಂ ಸಾಹಿತ್ಯ ಸಭಾ ಮತ್ತು ಆಲ್ ಅಸ್ಸಾಂ ವಿದ್ಯಾರ್ಥಿ ಸಂಘ (ಎಎಎಸ್‌ಯು) ಟೀಕಿಸಿವೆ.

ಸ್ಥಳೀಯ ಭಾಷೆಗಳ ಸಂರಕ್ಷಣೆ ಮತ್ತು ಉತ್ತೇಜನಕ್ಕೆ ಸರ್ಕಾರ ಗಮನ ಹರಿಸಬೇಕು ಎಂದು ಎಎಎಸ್‌ಯು ಒತ್ತಾಯಿಸಿದೆ.

ಹಿಂದಿ ಭಾಷೆಯನ್ನು ಕಡ್ಡಾಯಗೊಳಿಸಿದರೆ ಭವಿಷ್ಯದಲ್ಲಿ ಅಸ್ಸಾಂನ ಸ್ಥಳೀಯ ಭಾಷೆಗಳು ಅಪಾಯದ ಅಂಚಿಗೆ ಸರಿಯುತ್ತವೆ ಎಂದು ಅಸ್ಸಾಂ ಸಾಹಿತ್ಯ ಸಭಾದ ಪ್ರಧಾನ ಕಾರ್ಯದರ್ಶಿ ಜಾದವ್ ಚಂದ್ರ ಶರ್ಮಾ ಅವರು ಆತಂಕ ವ್ಯಕ್ತಪಡಿಸಿದರು.

'ಕೇಂದ್ರ ಸರ್ಕಾರದ ಈ ಕ್ರಮವು ಭವಿಷ್ಯದಲ್ಲಿ ಅಸ್ಸಾಂ ಪ್ರದೇಶದ ಸ್ಥಳೀಯ ಭಾಷೆಗಳ ಉಳಿವಿಗೆ ಮಾರಕವಾಗಿವೆ. ಆದ್ದರಿಂದ ಅಸ್ಸಾಂ ಮತ್ತು ಇತರ ಮಾತೃ ಭಾಷೆಗಳ ಪರ್ಯಾಯವಾಗಿ ಹಿಂದಿಯನ್ನು ಕಡ್ಡಾಯಗೊಳಿಸುವುದನ್ನು ನಾವು ಬಲವಾಗಿ ಖಂಡಿಸುತ್ತೇವೆ' ಎಂದು ಎಎಎಸ್‌ಯು ಮುಖ್ಯ ಸಲಹೆಗಾರ ಸಮುಜ್ಜಲ್ ಕುಮಾರ್ ಭಟ್ಟಾಚಾರ್ಯ ಅವರು ಟ್ವೀಟ್ ಮಾಡಿದ್ದಾರೆ.

ಹಿಂದಿ ಹೇರಿಕೆ ವಿರುದ್ಧ ಡಿಎಂಕೆ ಅಸಮಾಧಾನ

ಚೆನ್ನೈ(ಪಿಟಿಐ): ಡಿಎಂಕೆ ಪಕ್ಷದ ಹಿರಿಯ ನಾಯಕ ದಿ. ಕರುಣಾನಿಧಿ ಅವರ ಹಿಂದಿ ವಿರೋಧಿ ಆಂದೋಲನವನ್ನು ತಮಿಳನಾಡಿನ ಜನತೆ ಇನ್ನೂ ನೆನಪಿಟ್ಟುಕೊಂಡಿದ್ದಾರೆ ಎಂದು ಹೇಳುವ ಮೂಲಕ ರಾಜ್ಯದಲ್ಲಿ ಹೇರಿಕೆಗೆ ಅವಕಾಶ ನೀಡಲ್ಲ ಎಂಬ ಸಂದೇಶವನ್ನು ಕೇಂದ್ರ ಸರ್ಕಾರಕ್ಕೆ ಡಿಎಂಕೆ ನೀಡಿದೆ.

ತಮಿಳುನಾಡಿನ ಆಡಳಿತಾರೂಢ ಡಿಎಂಕೆಯ ಮುಖವಾಣಿ 'ಮುರಸೋಲಿ'ಯಲ್ಲಿ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ಎಂಬ ಶೀರ್ಷಿಕೆಯಡಿ ಕರುಣಾನಿಧಿ ಅವರ ಹಿಂದಿ ಹೇರಿಕೆ ವಿರುದ್ಧದ ಘೋಷಣೆಯನ್ನು ಪ್ರಕಟಿಸಲಾಗಿದೆ.

1938ರಲ್ಲಿ ಕರುಣಾನಿಧಿ ಅವರು ವಿದ್ಯಾರ್ಥಿಗಳನ್ನು ಜೊತೆಗೂಡಿಸಿಕೊಂಡು ತಮ್ಮ ಹುಟ್ಟೂರು ತಿರುವಾರೂರು ಬೀದಿಗಳಲ್ಲಿ ಹಿಂದಿ ಹೇರಿಕೆ ವಿರುದ್ಧ ಘೋಷಣೆಗಳನ್ನು ಮೊಳಗಿಸಿದ್ದರು. ಇದೇ ವಿಚಾರವನ್ನು ಇದೀಗ ಪ್ರಸ್ತಾಪಿಸಿರುವ ಡಿಎಂಕೆ, ತಮಿಳುನಾಡಿನ ಜನತೆ ಈ ಘಟನೆಯನ್ನು ಇನ್ನೂ ನೆನಪಿನಲ್ಲಿಟ್ಟುಕೊಂಡಿದ್ದಾರೆ ಎಂಬುದನ್ನು ಮರೆಯಬೇಡಿ. ತಮಿಳುನಾಡಿನಲ್ಲಿ ಹಿಂದಿ ಹೇರಿಕೆಗೆ ಅವಕಾಶವಿಲ್ಲ ಎಂದು ಉಲ್ಲೇಖಿಸಿದೆ.

ರಾಜ್ಯಗಳು ಇಂಗ್ಲಿಷ್ ಭಾಷೆಗೆ ಪರ್ಯಾಯವಾಗಿ ಹಿಂದಿ ಬಳಸಬೇಕು ಎಂಬ ಗೃಹ ಸಚಿವ ಶಾ ಹೇಳಿಕೆಗೆ ವಿರೋಧ ವ್ಯಕ್ತವಾಗಿದೆ.

ಸೇನಾ ಮುಖ್ಯಸ್ಥರ ಬದಲಾವಣೆ • ಕೊನೆ ಕ್ಷಣದಲ್ಲಿ ಇಮ್ರಾನ್ ಖಾನ್ ವಿಫಲ ಯತ್ನ • ಮಾಧ್ಯಮ ವರದಿ

ಬಾಜ್ವಾ ಕಿತ್ತೊಗೆಯಲು ನಡೆಯಿತೇ ಕಸರತ್ತು?

ಇಸ್ಲಾಮಾಬಾದ್ (ಪಿಟಿಐ): ಅವಿಶ್ವಾಸ ನಿರ್ಣಯದಲ್ಲಿ ಸೋಲುವುದಕ್ಕೂ ಮುನ್ನ, ಪ್ರಧಾನಿ ಇಮ್ರಾನ್ ಖಾನ್ ಅವರು ಸೇನಾ ಮುಖ್ಯಸ್ಥ ಖಮರ್ ಜಾವೇದ್ ಬಾಜ್ವಾ ಅವರನ್ನು ಬದಲಿಸಲು ತಡರಾತ್ರಿ ಭಾರಿ ಯತ್ನ ನಡೆಸಿದ್ದರು ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

ತಮಗೆ ವಿಧೇಯರಾಗಿರುವ ಹಾಗೂ ತಮ್ಮ ಪದಚ್ಯುತಿಗೆ ವಿದೇಶಿ ಕೈವಾಡ ನಡೆದಿದೆ ಎಂದು ನಂಬಿರುವ ವ್ಯಕ್ತಿಯನ್ನು ಸೇನಾ ಮುಖ್ಯಸ್ಥ ಹುದ್ದೆಗೆ ತರುವ ಯತ್ನ ಮಾಡಿದ್ದರು ಎನ್ನಲಾಗಿದೆ. ಆದರೆ, ತಡರಾತ್ರಿ ಅವರು ರಾಜೀನಾಮೆ ಸಲ್ಲಿಸುವುದರೊಂದಿಗೆ, ಸರ್ಕಾರ ಹಾಗೂ ಸೇನೆಯ ನಡುವಣ ಸಂಭಾವ್ಯ ಸಂಘರ್ಷ ತಪ್ಪಿತು.

'ಆಹ್ವಾನಿತರಲ್ಲದ ಇಬ್ಬರು ಅತಿಥಿಗಳನ್ನು ಹೊತ್ತ ಹೆಲಿಕಾಪ್ಟರ್‌ವೊಂದು ಭಾನುವಾರ ರಾತ್ರಿ ಪ್ರಧಾನಿ ನಿವಾಸದಲ್ಲಿ ಇಳಿಯಿತು. ಇವರು ಸೇನಾ ಬೆಂಗಾವಲಿನಲ್ಲಿ ಬಂದಿಳಿದರು. ಇಮ್ರಾನ್ ಖಾನ್ ಅವರ ಜೊತೆ ಇವರು 45 ನಿಮಿಷ ಮಾತುಕತೆ ನಡೆಸಿದರು'



ಪಾಕಿಸ್ತಾನ ಸಂಸತ್ ಭವನದ ಮುಂಭಾಗದಲ್ಲಿ ಇಮ್ರಾನ್ ಖಾನ್ ಪರವಾಗಿ ಅವರ ಬೆಂಬಲಿಗರು ಭಾನುವಾರ ಘೋಷಣೆಗಳನ್ನು ಕೂಗಿದರು —ಎಪಿ/ಪಿಟಿಐ ಚಿತ್ರ

ಎಂದು ಬಿಬಿಸಿ ಉರ್ದು ಸುದ್ದಿವಾಹಿನಿ ವರದಿ ಮಾಡಿದೆ. ಆದರೆ ಈ ಸಭೆಯ ಬಗ್ಗೆ ಅಧಿಕೃತ ಮಾಹಿತಿ ಪ್ರಕಟವಾಗಿಲ್ಲ.

ಉನ್ನತ ಅಧಿಕಾರಿಗಳ ಪೈಕಿ ಒಬ್ಬರನ್ನು ತೆಗೆದುಹಾಕಿದ್ದ ಇಮ್ರಾನ್, ಹೊಸಬರನ್ನು ನೇಮಿಸಿದ್ದರು. ಆ ಅಧಿಕಾರಿ ತಮ್ಮನ್ನು ಭೇಟಿ ಮಾಡಲು ಹೆಲಿಕಾಪ್ಟರ್‌ನಲ್ಲಿ ಬರಲಿದ್ದಾರೆ ಎಂದು ಇಮ್ರಾನ್ ನಿರೀಕ್ಷಿಸಿದ್ದರು. ಆದರೆ ಹೆಲಿಕಾಪ್ಟರ್‌ನಲ್ಲಿ ಬಂದವರು, ಇಮ್ರಾನ್ ನಿರೀಕ್ಷಿಸಿದ್ದ ವ್ಯಕ್ತಿ ಆಗಿರಲಿಲ್ಲ ಎಂದು ವರದಿ ತಿಳಿಸಿದೆ.

ಪ್ರಸಕ್ತ ರಾಜಕೀಯ ಗೊಂದಲವನ್ನು ತಗ್ಗಿಸುವ ಸಮರ್ಥ ವ್ಯಕ್ತಿಯನ್ನು ಇಮ್ರಾನ್ ನೇಮಿಸಿದ್ದರು ಎನ್ನಲಾಗಿದ್ದು, ಅವರ ಬರುವಿಕೆಗಾಗಿ ಕಾಯುತ್ತಿದ್ದರು. ಆದರೆ ಇಮ್ರಾನ್ ಅವರ ನೇಮಕವನ್ನು ರಕ್ಷಣಾ ಸಚಿವಾಲಯ ಅನುಮೋದಿಸಿ ಅಧಿಸೂಚನೆ ಹೊರಡಿಸದ ಕಾರಣ, ಇಮ್ರಾನ್ ಅವರು ಬಯಸಿದ್ದ 'ಬದಲಾವಣೆ' ಸಾಧ್ಯವಾಗಲಿಲ್ಲ.

ಆಹ್ವಾನಿತರಲ್ಲದ ಆ ಇಬ್ಬರು ಅತಿಥಿಗಳು ಯಾರು ಎಂದು ಬಿಬಿಸಿ ವರದಿ ನೇರವಾಗಿ ಎಲ್ಲಿಯೂ ಉಲ್ಲೇಖಿಸಿಲ್ಲ.

ಆದರೆ ವರದಿಯ ಧಾಟಿಯನ್ನು ಗಮನಿಸಿದರೆ, ಒಬ್ಬರು ಸೇನಾ ಮುಖ್ಯಸ್ಥ ಜನರಲ್ ಬಾಜ್ವಾ ಹಾಗೂ ಐಎಸ್‌ಐ ಮುಖ್ಯಸ್ಥ ಲೆ.ಜ. ನದೀಮ್ ಅಹ್ಮದ್ ಅಂಜುಮ್ ಎನ್ನಲಾಗಿದೆ.

ಆದರೆ ಈ ವರದಿಯನ್ನು ಐಎಸ್‌ಐ ಮಾಧ್ಯಮ ವಿಭಾಗ ಅಲ್ಲಗಳೆದಿದೆ. ವರದಿಯು ಸಂಪೂರ್ಣ ಆಧಾರರಹಿತ ಹಾಗೂ ಸುಳ್ಳಿನಿಂದ ಕೂಡಿದೆ ಎಂದು ಅಭಿಪ್ರಾಯಪಟ್ಟಿದೆ.

ಬಾಜ್ವಾ ಉಳಿಸಲು ಕೋರ್ಟ್ ಮೊರೆ

ಇಸ್ಲಾಮಾಬಾದ್ ಹೈಕೋರ್ಟ್‌ನಲ್ಲಿ ಶನಿವಾರ ರಾತ್ರಿ ತುರ್ತು ಅರ್ಜಿಯೊಂದು ಸಲ್ಲಿಕೆಯಾಗಿದ್ದು, ಬಾಜ್ವಾ ಅವರನ್ನು ಪದಚ್ಯುತಿ ಮಾಡುವುದರಿಂದ ಇಮ್ರಾನ್ ಅವರನ್ನು ತಡೆಯಬೇಕು ಎಂದು ಅದರಲ್ಲಿ ಮನವಿ ಮಾಡಲಾಗಿದೆ. ಮತ್ತೊಂದೆಡೆ, ಜಾಬ್ವಾ ಅವರ ಸಂಭಾವ್ಯ ಪದಚ್ಯುತಿ ಯತ್ನ ಪ್ರಶ್ನಿಸಿ ವಕೀಲ ಅದ್ನಾನ್ ಇಕ್ಬಾಲ್ ಎಂಬುವರು ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸಿದ್ಧತೆ ನಡೆಸುತ್ತಿದ್ದಾರೆ ಎಂದು ವರದಿಯಾಗಿದೆ.

ಬಾಜ್ವಾ ಅವರನ್ನು ತೆಗೆದುಹಾಕಲು ಕೆಲವೊಂದು ತಾಂತ್ರಿಕ ಅಡಚಣೆಗಳಿವೆ. ಸೇನಾ ಮುಖ್ಯಸ್ಥರನ್ನು ಹುದ್ದೆಯಿಂದ ತೆಗೆಯಲು ಅಧಿಕೃತ ಪ್ರಕಟಣೆಗಳು ಮುಖ್ಯ ಆಧಾರ. ಹೀಗಾಗಿ ಅರ್ಜಿ ಸಿದ್ಧವಾಗಿದ್ದರೂ ಇನ್ನೂ ಸಲ್ಲಿಸಲಾಗಿಲ್ಲ. ತಮ್ಮ ಮೆಚ್ಚಿನ ಪತ್ರಕರ್ತರ ತಂಡದ ಜೊತೆ ಮಾತನಾಡಿರುವ ಇಮ್ರಾನ್, ಬಾಜ್ವಾ ಅವರನ್ನು ಬದಲಿಸುವ ಉದ್ದೇಶ ತಮಗಿಲ್ಲ ಎಂದು ತಿಳಿಸಿದ್ದಾರೆ ಎನ್ನಲಾಗಿದೆ.

ಕೋವಿಡ್ ಬಹುರೂಪಿಯಾಗಿದೆ, ಜನರು ಎಚ್ಚರದಿಂದಿರಬೇಕು: ಪ್ರಧಾನಿ ಸಲಹೆ

'ಕೋವಿಡ್ ರೂಪ ಬದಲಾಯಿಸಿ ಮರುಕಳಿಸುತ್ತಿದೆ'

ಅಹಮದಾಬಾದ್ (ಪಿಟಿಐ): 'ಕೊರೊನಾ ವೈರಸ್ ಹೋಗಿಲ್ಲ, ಅದು ತನ್ನ ರೂಪ ಬದಲಾಯಿಸುತ್ತಾ ಮತ್ತೆ ಮರುಕಳಿಸುತ್ತಿದೆ. ಹಾಗಾಗಿ, ಜನರು ಸಾಂಕ್ರಾಮಿಕ ರೋಗದ ವಿರುದ್ಧದ ತಮ್ಮ ಹೋರಾಟವನ್ನು ಕೈಬಿಡದೇ ಮುಂದುವರಿಸಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

ಕೋವಿಡ್ ಎನ್ನುವ 'ಬಹುರೂಪಿ' (ಪದೇಪದೇ ರೂಪ ಬದಲಾಯಿಸುವುದು) ಯಾವಾಗ ತನ್ನರೂಪ ಬದಲಿಸಿ, ಮತ್ತೆ ಮರುಕಳಿಸುವುದೋ ಎಂಬುದು ಯಾರಿಗೂ ತಿಳಿಯದು' ಎಂದು ತಿಳಿಸಿದ್ದಾರೆ.

ಗುಜರಾತ್‌ನ ಜುನಾಗಢ್ ಜಿಲ್ಲೆಯ ವಂಥಲಿಯಲ್ಲಿ 'ಮಾ ಉಮಿಯಾ ಧಾಮ್‌ನ ಮಹಾಪಾಟೋತ್ಸವ ಕಾರ್ಯಕ್ರಮವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ದೇಶಿಸಿ ಮಾತನಾಡಿದರು. 'ಭಾರತದ ಸ್ವಾತಂತ್ರ್ಯದ 75ನೇ ವರ್ಷವನ್ನು ಆಚರಿಸಲು ಆಯೋಜಿಸಲಾಗುತ್ತಿರುವ ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಪ್ರತಿಜಿಲ್ಲೆಯಲ್ಲಿ 75 ಅಮೃತ ಸರೋವರಗಳನ್ನು (ಕೆರೆಗಳನ್ನು) ರಚಿಸುವ ಪ್ರತಿಜ್ಞೆಯನ್ನು ಕೈಗೊಳ್ಳೋಣ' ಎಂದರು.

ಸಮೃದ್ಧ ನವಭಾರತ (ನವದೆಹಲಿ): 'ರೈತರು ಸಬಲರಾದಷ್ಟು ನವಭಾರತವು ಸಮೃದ್ಧಿಯಿಂದ ಕೂಡಿರುತ್ತದೆ' ಎಂದು ಭಾನುವಾರ ಪ್ರಧಾನಿ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಶಾಂಘೈನಲ್ಲಿ ಒಂದೇ ದಿನ 24,944 ಮಂದಿಗೆ ಕೋವಿಡ್

ಬೀಜಿಂಗ್ (ಪಿಟಿಐ): ಚೀನಾದ ವಾಣಿಜ್ಯ ರಾಜಧಾನಿ ಶಾಂಘೈನಲ್ಲಿ ಕೋವಿಡ್ ದೃಢ ಪ್ರಕರಣಗಳು ಏರುಗತಿಯಲ್ಲೇ ಇದ್ದು, ಭಾನುವಾರ 24,944 ಮಂದಿಗೆ ಸೋಂಕು ದೃಢಪಟ್ಟಿದೆ. ಸುಮಾರು 11 ಸಾವಿರ ಕೋವಿಡ್ ಸೋಂಕಿತರು ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

ಶಾಂಘೈನಲ್ಲಿ ಸತತ ಒಂಬತ್ತು ದಿನಗಳಿಂದ ಕೋವಿಡ್ ಪ್ರಕರಣಗಳು ಏರುಗತಿಯಲ್ಲೇ ಸಾಗಿದೆ.

ಸುಮಾರು 5,400 ಜನರಿಗೆ ಸೌಮ್ಯ ಲಕ್ಷಣಗಳಿವೆ. ಉಳಿದ ಪ್ರಕರಣಗಳೆಲ್ಲ ಲಕ್ಷಣ ರಹಿತವಾಗಿವೆ. ಮಾರ್ಚ್ 1ರಂದು ಇಲ್ಲಿ ಮೊದಲ ಓಮೈಕ್ರಾನ್ ಪ್ರಕರಣ ದಾಖಲಾಗಿತ್ತು. ಅಲ್ಲಿಂದೀಚೆಗೆ ಇಲ್ಲಿ ಸೋಂಕು ದೃಢಪಟ್ಟವರ ಸಂಖ್ಯೆ 1.79 ಲಕ್ಷಕ್ಕೆ ಏರಿದೆ.

ಇಂಗ್ಲೆಂಡ್: ಪ್ರಕರಣ ಹೆಚ್ಚಳ



ಲಂಡನ್ (ಎಪಿ): ಬ್ರಿಟನ್‌ನಲ್ಲಿ ಮತ್ತೆ ಕೋವಿಡ್ ಪ್ರಕರಣಗಳು ಉಲ್ಬಣಗೊಳ್ಳತೊಡಗಿದ್ದು, ಕೋವಿಡ್ ನಿರ್ಬಂಧಗಳನ್ನು ಸಡಿಲಿಸಿದ್ದೇ ಇದಕ್ಕೆ ಕಾರಣ ಎಂದು ಶಂಕಿಸಲಾಗಿದೆ.

ಇಂಗ್ಲೆಂಡ್‌ನಲ್ಲಿ ಎಲ್ಲರೂ ಮಾಸ್ಕ್ ಹಾಕುವುದನ್ನು ನಿಲ್ಲಿಸಿದ್ದಾರೆ. ಸಾಮೂಹಿಕ ಕೋವಿಡ್ ಪರೀಕ್ಷೆಯೂ ಇಲ್ಲವಾಗಿದೆ. ಮಾರ್ಚ್‌ನಲ್ಲಿ ಸೋಂಕು ಪ್ರಕರಣ ಹೆಚ್ಚಾದಾಗಲೂ ಯಾವುದೇ ನಿಯಂತ್ರಣ ಕೈಗೊಂಡಿರಲಿಲ್ಲ.

ಈ ಮಧ್ಯೆ, ಅಮೆರಿಕ, ಫ್ರಾನ್ಸ್, ಜರ್ಮನಿಗಳಲ್ಲೂ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗತೊಡಗಿವೆ.

ಕೋವಿಡ್ ಲಸಿಕೆ ಮುನ್ನೆಚ್ಚರಿಕೆ ಡೋಸ್: ದೇಶದಾದ್ಯಂತ ಚಾಲನೆ

ನವದೆಹಲಿ (ಪಿಟಿಐ): 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆಯ ಮುನ್ನೆಚ್ಚರಿಕೆ ಡೋಸ್‌ಅನ್ನು ಖಾಸಗಿ ಕೇಂದ್ರಗಳಲ್ಲಿ ನೀಡುವ ಕಾರ್ಯಕ್ರಮಕ್ಕೆ ದೇಶದಾದ್ಯಂತ ಭಾನುವಾರ ಚಾಲನೆ ನೀಡಲಾಯಿತು.

ಲಸಿಕೆಯ ಎರಡನೇ ಡೋಸ್‌ಅನ್ನು ಪಡೆದು 9 ತಿಂಗಳು ಅವಧಿ ಪೂರ್ಣಗೊಂಡವರಿಗೆ ಈ ಮುನ್ನೆಚ್ಚರಿಕೆ ಡೋಸ್ ನೀಡಲಾಗುತ್ತದೆ. ಈ ಡೋಸ್ ಪಡೆಯಲು ಹಣ ಪಾವತಿಸಬೇಕು.

ಲಸಿಕೆಯ ಮೂರನೇ ಡೋಸ್‌ನ ದರವಲ್ಲದೇ, ಸೇವಾ ಶುಲ್ಕವಾಗಿ ಗರಿಷ್ಠ ₹ 150 ವಿಧಿಸಬಹುದು ಎಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚನೆ ನೀಡಿದೆ.

'ಮೊದಲ ಹಾಗೂ ಎರಡನೇ ಡೋಸ್ ಪಡೆದವರಿಗೆ ಅದೇ ಲಸಿಕೆಯ ಮೂರನೇ ಡೋಸ್ ನೀಡಲಾಗುವುದು. ಈ ಡೋಸ್ ಪಡೆಯುವ ಸಂಬಂಧ ಆನ್‌ಲೈನ್ ಮೂಲಕ ಅಥವಾ ನೇರವಾಗಿ ಲಸಿಕಾ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದು' ಎಂದು ಕೇಂದ್ರ ಆರೋಗ್ಯ ಸಚಿವಾಲಯ ಕಾರ್ಯದರ್ಶಿ ರಾಜೇಶಭೂಷಣ್ ಹೇಳಿದ್ದಾರೆ.

ಉಚಿತ ವಯಲ್ ಪೂರೈಕೆ– ಎಸ್‌ಐಐ: ಖಾಸಗಿ ಲಸಿಕಾ ಕೇಂದ್ರಗಳಲ್ಲಿ ಅವಧಿ ಮುಗಿಯದ ಲಸಿಕೆಯ ದಾಸ್ತಾನಿದ್ದರೆ, ಅದಕ್ಕೆ ಬದಲಾಗಿ ಉಚಿತವಾಗಿ ಲಸಿಕೆಯ ಹೊಸ ವಯಲ್‌ಗಳನ್ನು ಪೂರೈಕೆ ಮಾಡುವುದಾಗಿ ಕೇಂದ್ರ ಸರ್ಕಾರಕ್ಕೆ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ತಿಳಿಸಿದೆ.

ಕೇಂದ್ರ ಸರ್ಕಾರ ಪ್ರತಿ ಮುನ್ನೆಚ್ಚರಿಕೆ ಡೋಸ್‌ನ ದರವನ್ನು ₹225 ಕ್ಕೆ ಇಳಿಕೆ ಮಾಡಿರುವ ಹಿನ್ನೆಲೆಯಲ್ಲಿ ದರದಲ್ಲಾಗುವ ವ್ಯತ್ಯಾಸವನ್ನು ಸರಿದೂಗಿಸಲು ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಸಂಸ್ಥೆ ತಿಳಿಸಿದೆ.

ಜಗನ್ ಸಂಪುಟಕ್ಕೆ ಇಂದು ಹೊಸಬರ ಸೇರ್ಪಡೆ

ಅಮರಾವತಿ(ಪಿಟಿಐ): ಆಂಧ್ರಪ್ರದೇಶ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರು ಸೋಮವಾರ ತಮ್ಮ ಸಚಿವ ಸಂಪುಟ ಪುನರ್ ರಚನೆ ಮಾಡಲಿದ್ದಾರೆ. ಸಂಪುಟ ಪುನರ್ ರಚನೆಗೆ ಅವಕಾಶ ಮಾಡಿಕೊಡಲು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದವರ ಪೈಕಿ 11 ಮಂದಿ ಹಾಗೂ 13 ಹೊಸಬರು ಸಚಿವರಾಗಿ ಜಗನ್ ಅವರ ಸಂಪುಟ ಸೇರಲಿದ್ದಾರೆ. ಅಧಿಕಾರದಿಂದ ದೂರವೇ ಇರುವ ಪಕ್ಷದ ಹಿರಿಯ ನಾಯಕರಿಗೂ ಸಂಪುಟದಲ್ಲಿ ಅವಕಾಶ ಮಾಡಿಕೊಡಲು ಜಗನ್ ಅವರು ನಿರ್ಧರಿಸಿದ್ದಾರೆ.

ಮುಖ್ಯಮಂತ್ರಿ ಸೇರಿ 25 ಮಂದಿ ಸಚಿವರಾಗಲು ಅವಕಾಶವಿದೆ. ಬೆಳಗ್ಗೆ 11.31ಕ್ಕೆ ಆರಂಭವಾಗಲಿರುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಬಿ. ಭೂಷಣ್ ಹರಿಚಂದನ್ ಅವರು ಪ್ರಮಾಣ ವಚನ ಬೋಧಿಸಲಿದ್ದಾರೆ.

ವನ್ಯಜೀವಿ ಸಂರಕ್ಷಣಾ ಕ್ಷೇತ್ರ

ವಿವಿಧ ಕೋರ್ಸ್ ವಿಪುಲ ಉದ್ಯೋಗ



ಸಾಂದರ್ಭಿಕ ಚಿತ್ರ

ವನ್ಯಜೀವಿ ಸಂರಕ್ಷಣಾ ವಿಷಯಗಳ ಅಧ್ಯಯನಕ್ಕಾಗಿ ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ವಿವಿಧ ವಿಷಯ ಮತ್ತು ಕೋರ್ಸ್ ಗಳಿವೆ. ಅವುಗಳ ಕುರಿತು ಸಂಕ್ಷಿಪ್ತ ವಿವರ ಇಲ್ಲಿದೆ.

ರಾಜಗುರು

ಅದು 2004 - 05ನೇ ವರ್ಷ. ರಾಜಸ್ಥಾನದ ಅಳ್ವಾರ್ ಜಿಲ್ಲೆಯ ಸರಿಸ್ಕಾ ಅರಣ್ಯದಲ್ಲಿ ಒಂದೇ ಒಂದು ಹುಲಿ ಇಲ್ಲ ಎಂಬ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಆಗ, ವಿಶ್ವದ ಎಲ್ಲಾ ಹುಲಿ ಸಂರಕ್ಷಣಾ ತಜ್ಞರು ಬೇರೆ ಒಂದು ಕಾಡಿನಿಂದ ಹುಲಿಯನ್ನು ಸ್ಥಳಾಂತರಿಸಲು (ಟ್ರಾನ್ಸ್ ಲೋಕೇಶನ್) ಸಲಹೆ ನೀಡಿದ್ದರು. ಅದರಂತೆ 2008ರಲ್ಲಿ ಪಕ್ಕದ ರಣಥಂಬೋರ್‌ನಿಂದ ಒಂದು ಗಂಡು ಮತ್ತು ಒಂದು ಹೆಣ್ಣು ಹುಲಿಯನ್ನು ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ನ್ಯಾಷನಲ್ ಟೈಗರ್ ಕನ್ಸರ್ವೇಷನ್ ಅಥಾರಿಟಿ ನೇತೃತ್ವದಲ್ಲಿ ಸರಿಸ್ಕಾಗೆ ಸ್ಥಳಾಂತರಿಸಲಾಯಿತು. ಈ ಯೋಜನೆ ಯಶಸ್ವಿಯಾಯಿತು. ಈಗ ಅಲ್ಲಿ 27 ಹುಲಿಗಳಿವೆ. ವನ್ಯಜೀವಿ ಸಂರಕ್ಷಣಾ ಇತಿಹಾಸದಲ್ಲೇ ಅತ್ಯಂತ ವಿನೂತನ ಹಾಗೂ ಮೊದಲ ಪ್ರಯತ್ನ ಫಲ ನೀಡಿದೆ. ಸ್ಥಳಾಂತರ ಪ್ರಕ್ರಿಯೆ ಯಶಸ್ವಿಯಾದದ್ದನ್ನು ಕಂಡ ತಜ್ಞರು ಈ ಕ್ರಮದ ಕುರಿತು ಹೆಚ್ಚಿನ ಅಧ್ಯಯನ ಆಗಬೇಕು ಎಂದಿದ್ದಾರೆ.

ಇಂಥ ಪರಿಸರ ಸಮತೋಲನದ ಬಗ್ಗೆ ಹೆಚ್ಚು ಹೆಚ್ಚು ಅಧ್ಯಯನ ನಡೆಸಲು, ಅದಕ್ಕೆ ಬೇಕಾದ ಮಾನವ ಸಂಪನ್ಮೂಲವನ್ನು ರೂಪಿಸಲು ಹಲವು ವಿಶ್ವವಿದ್ಯಾಲಯಗಳು, ವಿಜ್ಞಾನ ಕೇಂದ್ರ ಗಳು ವನ್ಯಜೀವಿ ಸಂರಕ್ಷಣೆ ಕುರಿತು ವಿವಿಧ ಕೋರ್ಸ್ ಗಳನ್ನು ನಡೆಸುತ್ತಿವೆ. ಡಿಪ್ಲೊಮಾ, ಸರ್ಟಿಫಿಕೇಟ್ ಕೋರ್ಸ್‌ನಿಂದ ಹಿಡಿದು ಪದವಿ, ಸ್ನಾತಕೋತ್ತರ ಪದವಿ ಮತ್ತು ಡಾಕ್ಟರೇಟ್‌ವರೆಗೆ ಅಧ್ಯಯನಕ್ಕೆ ಅನುಕೂಲ ಕಲ್ಪಿಸಿವೆ. ಈ ಕೋರ್ಸ್‌ಗಳಲ್ಲಿ ಅಧ್ಯಯನ, ತರಬೇತಿ, ಸಂಶೋಧನೆ, ಕ್ಷೇತ್ರ ಕಾರ್ಯ ಎಲ್ಲಕ್ಕೂ ಆದ್ಯತೆ ನೀಡಲಾಗಿದೆ. ಕೋರ್ಸ್ ಪೂರ್ಯೈಸಿದವರಿಗೆ ವಿವಿಧ ಕಡೆಗಳಲ್ಲಿ ಉದ್ಯೋಗಗಳು ಲಭ್ಯವಿವೆ.

ಯಾವ ಯಾವ ಕೋರ್ಸ್

ವನ್ಯಜೀವಿ ಸಂರಕ್ಷಣೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ನಡೆಸಲು ವಿಜ್ಞಾನ ವಿಷಯದಲ್ಲಿ ಪಿಯುಸಿ ಪಾಸಾಗಿರಬೇಕು. ಅದನ್ನು ಆಧರಿಸಿ ಜೀವಶಾಸ್ತ್ರ ವಿಷಯದ ಪದವಿ ಅಧ್ಯಯನದ ನಂತರ ವನ್ಯಜೀವಿ ಸಂರಕ್ಷಣೆಯ ಸ್ನಾತಕೋತ್ತರ ಪದವಿ ಪಡೆಯಬಹುದು. ಇಲ್ಲವೆ ಪಿಯುಸಿ ನಂತರ ಪಶುಸಂಗೋಪನೆ, ಬೇಸಾಯ, ಅರಣ್ಯ, ತೋಟಗಾರಿಕೆ, ಪರಿಸರ ವಿಜ್ಞಾನಗಳು, ಪ್ರಾಣಿ ವಿಜ್ಞಾನ , ಸಸ್ಯ ವಿಜ್ಞಾನ , ಪಿ ಜಿ ಡಿಪ್ಲೊಮಾ ಇನ್ ಅಡ್ವಾನ್ಸ್ಡ್ ವೈಲ್ಡ್‌ಲೈಫ್ ಮ್ಯಾನೇಜ್‌ಮೆಂಟ್, ಅರಣ್ಯ ಕುರಿತ ವಿಷಯಗಳಲ್ಲಿ ಪದವಿ ಪಡೆಯ ಬಹುದು. ಅಲ್ಲದೇ, ವೈಲ್ಡ್‌ಲೈಫ್ ಸೈನ್ಸ್, ಫಾರೆಸ್ಟ್ ಪ್ರಾಡಕ್ಟ್ ಅಂಡ್ ಯುಟಿಲೈಜೇಶನ್, ಡಿಪ್ಲೊಮಾ ಇನ್ ಲಾ ಅಂಡ್ ಅನಿಮಲ್ ಹೆಲ್ತ್, ಪಿಜಿ ಡಿಪ್ಲೊಮಾ ಇನ್ ವೈಲ್ಡ್ ಅನಿಮಲ್ ಡಿಸೀಸ್ ಮ್ಯಾನೇಜ್‌ಮೆಂಟ್, ಸರ್ಟಿಫಿಕೇಟ್ ಕೋರ್ಸ್ ಇನ್ ವೈಲ್ಡ್‌ಲೈಫ್ ಮ್ಯಾನೇಜ್‌ಮೆಂಟ್, ಸರ್ಟಿಫಿಕೇಟ್ ಇನ್ ಪಾರ್ಟಿಸಿಪೇಟರಿ ಫಾರೆಸ್ಟ್ ಮ್ಯಾನೇಜ್‌ಮೆಂಟ್, ಅರಣ್ಯ ಪರಿಸರ ನಿರ್ವಹಣೆಯಲ್ಲಿ ಎಂ.ಬಿ.ಎ, ಎಂ.ಎಸ್ಸಿಯಲ್ಲಿ ವೈಲ್ಡ್‌ಲೈಫ್ ಬಯಾಲಜಿ ಅಂಡ್ ಕನ್ಸರ್ವೇಶನ್, ಎಂ.ಎಸ್ಸಿಯಲ್ಲಿ ಫಾರೆಸ್ಟ್ರಿ, ವೈಲ್ಡ್ ಲೈಫ್ ಸೈನ್ಸಸ್, ವೈಲ್ಡ್‌ಲೈಫ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ವಿಷಯಗಳಲ್ಲೂ ಪದವಿ ಪಡೆದು ಉದ್ಯೋಗಗಳಿಸಬಹುದು. ಹೆಚ್ಚಿನ ಅಧ್ಯಯನವಾಗಿ ಸಂಶೋಧನೆ ಮಾಡಿ ಪಿ.ಎಚ್‌ಡಿ ಪದವಿ ಪಡೆಯಬಹುದು. ನಂತರ ಹಲವು ಹಂತಗಳಲ್ಲಿ ಉನ್ನತಮಟ್ಟದ ಉದ್ಯೋಗ ಪಡೆಯಬಹುದು.

ಎಲ್ಲೆಲ್ಲಿವೆ ಕೋರ್ಸ್‌ಗಳು ?

ಬೆಂಗಳೂರಿನ ನ್ಯಾಷನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸಸ್(ಎನ್‌ಸಿಬಿಎಸ್), ಕೃಷಿ ವಿಶ್ವವಿದ್ಯಾಲಯ(ಜಿಕೆವಿಕೆ), ಸೆಂಟರ್ ಫಾರ್ ವೈಲ್ಡ್ ಲೈಫ್ ಸ್ಟಡೀಸ್, ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ, ಮೈಸೂರು ವಿವಿ, ರಾಜಸ್ಥಾನದ ನೀಮ್ರಾನಾ ಯೂನಿವರ್ಸಿಟಿ, ಅಸ್ಸಾಂನ ದಿಗ್ಬೋಯಿ ಕಾಲೇಜು , ತಮಿಳುನಾಡಿನ ಕೃಷಿ ವಿವಿ, ಕೇರಳದ ವೆಟರ್ನರಿ ಅಂಡ್ ಅನಿಮಲ್ ಸೈನ್ಸ್ ಯುನಿವರ್ಸಿಟಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ರಿಮೋಟ್ ಸೆನ್ಸಿಂಗ್, ಭಾರತೀದಾಸನ್ ವಿವಿ, ಡೆಹ್ರಾಡೂನ್‌ನಲ್ಲಿರುವ ಭಾರತೀಯ ವನ್ಯಜೀವಿ ಸಂಸ್ಥೆ, ಕೋಟಾದ ಯೂನಿವರ್ಸಿಟಿ ಆಫ್ ಕೋಟಾ, ಮುಂಬೈನ ಟಾಟಾ ಮೆಮೋರಿಯಲ್ ಹಾಸ್ಪಿಟಲ್, ಪುಣೆಯ ಫರ್ಗ್ಯುಸನ್ ಕಾಲೇಜು, ಜಾಧವ್‌ಪುರ ವಿವಿ, ಜೆಎನ್‌ಯು ಮತ್ತು ದೆಹಲಿ ವಿವಿಯ ಹಲವು ಪ್ರಮುಖ ಕಾಲೇಜುಗಳು ವನ್ಯಜೀವಿ ಸಂರಕ್ಷಣೆಯ ಕೋರ್ಸ್ ಅಧ್ಯಯನಕ್ಕೆ ಅವಕಾಶ ಕಲ್ಪಿಸಿವೆ. ಭಾರತವಷ್ಟೇ ಅಲ್ಲದೆ ಇಂಗ್ಲೆಂಡ್, ನ್ಯೂಜಿಲೆಂಡ್, ಅಮೆರಿಕದಂತಹ ದೇಶಗಳಲ್ಲೂ ವನ್ಯಜೀವಿಸಂರಕ್ಷಣೆಗೆ ಸಂಬಂಧಿಸಿದ ಹಲವು ಕೋರ್ಸ್‌ಗಳಿವೆ.

ಯಾವ ಯಾವ ಕೆಲಸ?

ವೈಲ್ಡ್‌ಲೈಫ್ ಮ್ಯಾನೇಜರ್, ವೈಲ್ಡ್‌ಲೈಫ್ ಬಯಾಲಜಿಸ್ಟ್(ವನ್ಯಜೀವಿ ಜೀವಶಾಸ್ತ್ರಜ್ಞ), ವೈಲ್ಡ್‌ಲೈಫ್ ಎಜುಕೇಟರ್, ಕನ್ಸರ್ವೇಷನ್ ಬಯಾಲಜಿಸ್ಟ್, ಪಬ್ಲಿಕ್ ಎಜುಕೇಟರ್ ಅಂಡ್ ಔಟ್‌ರೀಚ್ ಸ್ಪೆಷಲಿಸ್ಟ್, ವನ್ಯಜೀವಿ ಕಾನೂನು ಮತ್ತು ಜಾರಿ ಅಧಿಕಾರಿ(ಲಾ ಎನ್‌ಫೋರ್ಸ್‌ಮೆಂಟ್ ಆಫೀಸರ್), ವೈಲ್ಡ್‌ಲೈಫ್ ಟೆಕ್ನೀಶಿಯನ್, ವೈಲ್ಡ್‌ಲೈಫ್ ಇನ್‌ಸ್ಪೆಕ್ಟರ್ ಅಂಡ್ ಫೊರೆನ್ಸಿಕ್ ಸ್ಪೆಷಲಿಸ್ಟ್, ವನ್ಯಜೀವಿ ನೀತಿ ವಿಶ್ಲೇಷಕರು, ವೈಲ್ಡ್‌ಲೈಫ್ ಎಕಾನಾಮಿಸ್ಟ್, ವೈಲ್ಡ್‌ಲೈಫ್ ಅಡ್ಮಿನಿಸ್ಟ್ರೇಟರ್, ಜಿಐಎಸ್ ಸ್ಪೆಷಲಿಸ್ಟ್ ಸೇರಿದಂತೆ ಹತ್ತಾರು ಉದ್ಯೋಗಗಳಿಗೆ ಸೇರಬಹುದು.

ಆದರೆ ಬೇರೆ ಉದ್ಯೋಗಗಳಿಗೆ ಹೋಲಿಸಿದರೆ ಸಂರಕ್ಷಣೆಯ ಕೆಲಸ ತುಸು ಸವಾಲಿನದ್ದೇ. ಪ್ರಾಣಿಗಳ ಆವಾಸಕ್ಕೆ ಹತ್ತಿರವಿದ್ದೇ ಕೆಲಸ ಮಾಡಬೇಕಾದ ಅನಿವಾರ್ಯತೆಯ ಜೊತೆಗೆ ಹಗಲಿರುಳೆನ್ನದೆ ಕೆಲಸ ಮಾಡಬೇಕಾಗುತ್ತದೆ. ಕೆಲಸದ ನಡುವೆ ಪ್ರಾಣಿದಾಳಿ, ನೈಸರ್ಗಿಕ ವಿಕೋಪಗಳಿಗೂ ಈಡಾಗುವ ಸಂದರ್ಭಗಳಿರುತ್ತವೆ. ಪ್ರಾಣಿಗಳಿಂದ ಹಬ್ಬುವ ವೈರಸ್‌ಗಳಿಂದ ರಕ್ಷಣೆ ಪಡೆದು ಅವುಗಳನ್ನು ರಕ್ಷಿಸಬೇಕಾದ ಅಗತ್ಯವಿರುತ್ತದೆ. ಹಾಗೆಯೇ ವಿಸ್ತೃತ ಅಧ್ಯಯನ, ಕ್ಷೇತ್ರಕಾರ್ಯ, ನೀತಿನಿರೂಪಣೆ, ಅನುಷ್ಠಾನಗಳಿಂದ ಜಗತ್ತಿಗೇ ಮಾದರಿಯಾಗಿ ನಿಲ್ಲುವ ಮುಕ್ತ ಅವಕಾಶವಿರುತ್ತದೆ. ಕೋರ್ಸ್ ಕುರಿತ ಹೆಚ್ಚಿನ ಮಾಹಿತಿಗಾಗಿ http://www.wii.gov.in http://www.icfre.org/, http://www.ignou.ac.in, http://gbpihed.gov.in/ ಜಾಲತಾಣಗಳನ್ನು ನೋಡಬಹುದು.

ಪ್ರವೇಶಾವಕಾಶದ ವಿವರ

- ಎನ್‌ಸಿಬಿಎಸ್‌ನಲ್ಲಿ ಎಂಎಸ್ಸಿ ಇನ್ ವೈಲ್ಡ್‌ಲೈಫ್ ಕೋರ್ಸ್ ಸೇರುವವರು ಪ್ರವೇಶ ಪರೀಕ್ಷೆ ಎದುರಿಸಬೇಕಾಗುತ್ತದೆ. ಪದವಿಯಲ್ಲಿ ಶೇ 50ರಷ್ಟು ಅಂಕಗಳಿಸಿದವರು ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಪ್ರವೇಶ ಪರೀಕ್ಷೆಗೆ ಹಾಜರಾಗಬಹುದು.
- ಪಿಯುಸಿ ಹಂತದಲ್ಲಿ ಜೀವವಿಜ್ಞಾನ ವಿಷಯದೊಂದಿಗೆ ಶೇ 60 ಅಂಕ ಗಳಿಸಿದವರು ಪದವಿ ಕೋರ್ಸ್‌ಗೆ, ಪದವಿಯಲ್ಲಿ ಶೇ 50 ಅಂಕ ಪಡೆದವರು ಸ್ನಾತಕೋತ್ತರ ಪದವಿಯ ಪ್ರವೇಶ ಪರೀಕ್ಷೆಗಳಿಗೆ ಅರ್ಹರಾಗುತ್ತಾರೆ. ಎಸ್.ಸಿ, ಎಸ್.ಟಿ ಅಭ್ಯರ್ಥಿಗಳಿಗೆ ಪದವಿಗೆ ಶೇ 50 ಮತ್ತು ಸ್ನಾತಕೋತ್ತರ ಪದವಿಗೆ ಶೇ 45ರಷ್ಟು ಅಂಕಗಳನ್ನು ನಿಗದಿಪಡಿಸಲಾಗಿದೆ.
- ಸ್ನಾತಕೋತ್ತರ ಶಿಕ್ಷಣ ನೀಡುವ ಬಹುತೇಕ ವಿವಿಗಳು ಪ್ರವೇಶ ಪರೀಕ್ಷೆ ನಡೆಸುತ್ತವೆ.
- ಕೆಲವು ವಿವಿಗಳು ಪದವಿಯಲ್ಲಿ ಪಡೆದ ಅಂಕ ಗಳನ್ನು ಆಧರಿಸಿ ಕೌನ್ಸಿಲಿಂಗ್ ಮೂಲಕ ಪ್ರವೇಶ ನೀಡುತ್ತವೆ.
- ಡೆಹ್ರಾಡೂನ್‌ನಲ್ಲಿರುವ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದವರು ಪದವಿ ಅಧ್ಯಯನಕ್ಕೆ ಮೆರಿಟ್ ಆಧರಿಸಿ ಪ್ರವೇಶ ನೀಡುತ್ತಾರೆ.
- ಈ ವರ್ಷ ಜುಲೈ – ಆಗಸ್ಟ್‌ನಲ್ಲಿ ಪ್ರವೇಶ ಪ್ರಕ್ರಿಯೆ ಆರಂಭವಾಗುತ್ತದೆ.



ಹಲೋ... ನಿಮ್ಮ ಧ್ವನಿಗೂ ಬೆಲೆಯಿದೆ

ಶರತ್ ಹೆಗ್ಡೆ

ಉದ್ಯೋಗವನ್ನು ಎಲ್ಲೆಲ್ಲೋ ಹುಡುಕುತ್ತಿದ್ದೀರಾ? ನಿಮ್ಮ ಧ್ವನಿಯೇ ನಿಮಗೆ ದುಡಿಮೆ ಕೊಡಬಹುದು.

ಹೌದು, ಹಾಗೆಂದ ಮಾತ್ರಕ್ಕೆ ರೇಡಿಯೊ, ಟಿವಿ ಕಾರ್ಯಕ್ರಮಗಳು, ನಿರೂಪಕ ವೃತ್ತಿ ಬಗೆಗಷ್ಟೇ ಹೇಳುತ್ತಿಲ್ಲ. ಅವುಗಳ ಜೊತೆಗೆ ಧ್ವನಿಯೊಂದು ಬದುಕಿನುದ್ದಕ್ಕೂ ಬಂಡವಾಳವಾಗಬಹುದಾದ ಸಾಧ್ಯತೆಯಿದೆ.

ಸಿನಿಮಾಗಳಲ್ಲಿ ಕಂಠದಾನ ಕಲಾವಿದರ ಬಗ್ಗೆ ಕೇಳಿದ್ದೀರಿ. ಜಾಹೀರಾತುಗಳಲ್ಲಿ ಕೇಳಿಸುವ ಮಧುರ ಅಥವಾ ಗಡಸು ಧ್ವನಿಯನ್ನೂ ಆಲಿಸಿದ್ದೀರಿ. ಇವರೆಲ್ಲರೂ ಧ್ವನಿಯನ್ನೇ ಬದುಕಾಗಿಸಿಕೊಂಡವರು. ಆದರೆ ಇವು ಇಷ್ಟಕ್ಕೇ ಸೀಮಿತ ಅಲ್ಲ.

ಇತ್ತೀಚೆಗೆ ಕೋವಿಡ್ ಜಾಗೃತಿಯ ಕಾಲರ್ ಟ್ಯೂನ್ ಕೇಳಿರಬಹುದು. ಅದರ ಮೊದಲ ಆವೃತ್ತಿಗೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಧ್ವನಿ ಕೊಟ್ಟವರು ಮಂಗಳೂರಿನ ಡೇರೆಲ್ ಜೆಸ್ಸಿಕಾ ಫೆರ್ನಾಂಡಿಸ್. ನಂತರ ವಿದ್ಯಾ ಭಟ್ ಅವರ ಧ್ವನಿಯೂ ಮೂಡಿಬಂತು. ದೆಹಲಿಯ ಜಾಸ್ಲಿನ್ ಭಲ್ಲಾ, ಮೇರುನಟ ಅಮಿತಾಬ್ ಬಚ್ಚನ್ ಕೂಡಾ ಈ ಸಂದೇಶಕ್ಕೆ ಧ್ವನಿಯಾದರು.

ಬಸ್, ರೈಲು, ಮೆಟ್ರೊ ನಿಲ್ದಾಣಗಳಲ್ಲಿ ಕೇಳಿಬರುವ ಸಂದೇಶಗಳು, ಲಿಫ್ಟ್‌ನಲ್ಲಿ ಕೇಳಿಸುವ ಮಾಹಿತಿ, ಟೆಲಿಫೋನ್ ಕರೆಗಳಲ್ಲಿ ಕೇಳಿಬರುವ ಸಂವಹನಾತ್ಮಕ ಪ್ರತಿಕ್ರಿಯೆಯ ಧ್ವನಿ (ಇಂಟರ್‍ಯಾಕ್ಟಿವ್ ವಾಯ್ಸ್ ರೆಸ್ಪಾನ್ಸ್ ಸಿಸ್ಟಂ) ಇಲ್ಲೆಲ್ಲಾ ಕಂಠದಾನ ಕಲಾವಿದರು ಸದ್ದಿಲ್ಲದೆ ತೊಡಗಿಕೊಂಡಿದ್ದಾರೆ. ನೆನಪಿಡಿ, ಕಂಠದಾನ ಎಂದರೆ ಬರೆದದ್ದನ್ನು ಓದಿ ಧ್ವನಿಮುದ್ರಿಸುವುದಷ್ಟೇ ಅಲ್ಲ. ಸೃಜನಶೀಲತೆ ಬೇಕು. ಕೃತಿಗೆ ಜೀವ ತುಂಬುವ ಕೌಶಲವಿರಬೇಕು.

ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ ಈಗ ಬಂದಿರುವ ಕೃತಕ ಬುದ್ಧಿಮತ್ತೆಯ (ಆರ್ಟಿಫಿಷಿಯಲ್ ಇಂಟಲಿಜೆನ್ಸ್) ಎಲ್ಲ ಸಾಧನಗಳಲ್ಲಿ ಧ್ವನಿ ಪ್ರತಿಕ್ರಿಯೆಯ ಆಯ್ಕೆಯಲ್ಲಿ ಪೂರ್ವಮುದ್ರಿತ ಧ್ವನಿ ಬೇಕಾಗುತ್ತದೆ. ಅದಕ್ಕಾಗಿ ಈ ಕ್ಷೇತ್ರದಲ್ಲಿ ಹೊಸ ಧ್ವನಿಗಳಿಗೆ ಬೇಡಿಕೆ ಮತ್ತು ಅವಕಾಶ ಇದ್ದೇ ಇದೆ. ಆ್ಯಪಲ್‌ನ 'ಸಿರಿ'ಗೆ ಧ್ವನಿ ನೀಡಿದ ಸೂಸನ್ ಬೆನೆಟ್, ಅಮೆಜಾನ್‌ನ 'ಅಲೆಕ್ಸಾ'ಗೆ ಧ್ವನಿ ನೀಡಿದ ನಿನಾ ರೋಲ್ ಅವರ ಧ್ವನಿ ಕೇಳಿರಬಹು ದಲ್ವಾ. ಹಾಗೇ 'ಸಿರಿ', 'ಅಲೆಕ್ಸಾ' ಸ್ಥಳೀಯ ಭಾಷೆಗಳಲ್ಲೂ ಬರುವ ದಿನಗಳು ದೂರವಿಲ್ಲ.

ಎರಡು ದಶಕಗಳಿಂದ ಈ ಕ್ಷೇತ್ರದಲ್ಲಿ ತೊಡಗಿರುವ ಅನಿತಾ ರಂಗಸ್ವಾಮಿ ಹೇಳುವಂತೆ, 'ಪ್ರತಿಯೊಂದು ಧ್ವನಿಯನ್ನು ನಾವು ಶ್ರದ್ಧೆಯಿಂದ ಹೊರತರಬೇಕಾಗುತ್ತದೆ. ಮೈಕ್ ಮುಂದೆ, ನಿಶ್ಶಬ್ದದ ಕೊಠಡಿಯಲ್ಲಿ ನಾವೇ ಒಂದು ಪ್ರಪಂಚ ಸೃಷ್ಟಿಸಿಕೊಂಡು ರಾಜ, ರಾಣಿಯರಾಗುತ್ತೇವೆ. ಪ್ರತಿ ಪಾತ್ರಕ್ಕೆ ಧ್ವನಿಯ ಮೂಲಕ ಭಾವ, ಜೀವ ತುಂಬುತ್ತೇವೆ. ಹಾಗಾಗಿ ಇದು ಖುಷಿಯಿಂದ ಮಾಡುವ ವೃತ್ತಿ' ಎನ್ನುತ್ತಾರೆ. ಅನಿತಾ ಅವರು ಈವರೆಗೆ ಸುಮಾರು 8 ಸಾವಿರಕ್ಕೂ ಅಧಿಕ ರೇಡಿಯೊ ಜಿಂಗಲ್, ಸಾಕ್ಷ್ಯಚಿತ್ರ, ಆಲ್ಬಂಗಳಿಗೆ ಧ್ವನಿ ನೀಡಿದ್ದಾರೆ. ಪ್ರಮುಖ ದೂರವಾಣಿ ಕಂಪನಿಗಳ ಐವಿಆರ್‌ಎಸ್‌ನಲ್ಲೂ ಅನಿತಾ ಅವರ ಧ್ವನಿ ಇದೆ.

ದೆಹಲಿಯಲ್ಲಿರುವ ಕನ್ನಡಿತಿ ಸವಿತಾ ಇನಾಂದಾರ್ ಅವರೂ ಇದೇ ಕ್ಷೇತ್ರದಲ್ಲಿ ಸಕ್ರಿಯರು. ಟೆಲಿಫೋನ್ ಐವಿಆರ್‌ಎಸ್, ರೇಡಿಯೊ ಕಾರ್ಯಕ್ರಮಗಳಲ್ಲಿ ಸವಿತಾ ಅವರ ಧ್ವನಿ ಆಗಾಗ ಕೇಳಿಸುತ್ತಿರುತ್ತದೆ.

ಉದ್ಯೋಗ ಹೇಗೆ?

ಹೆಚ್ಚಿನ ಕಂಠದಾನ ಕಲಾವಿದರು ಸ್ವತಂತ್ರ ವೃತ್ತಿಯನ್ನೇ (ಫ್ರೀಲಾನ್ಸರ್) ಮಾಡುತ್ತಿರುತ್ತಾರೆ. ಹಾಗಾಗಿ ಅವಕಾಶ ಗಳೂ ವಿಶಾಲವಾಗಿರುತ್ತವೆ. ಆಯಾ ಯೋಜನೆಯ ಸ್ವರೂಪಕ್ಕೆ (ಜಿಂಗಲ್ ಅಥವಾ ನಿರೂಪಣೆ, ಚಿತ್ರಕ್ಕೆ ಕಂಠದಾನ) ಅನುಗುಣವಾಗಿ ಸಂಭಾವನೆ ನಿಗದಿಯಾಗುತ್ತದೆ. ಬಹುತೇಕವು ಒಂದೊಂದು ಯೋಜನೆಗೂ ಕನಿಷ್ಠ ಐದಂಕಿ ಮೀರಿದ ಸಂಭಾವನೆ ಇರುತ್ತದೆ ಎಂಬುದು ಆ ಕ್ಷೇತ್ರದವರ ಮಾತು.

ಕಂಠದಾನದ ಜೊತೆಗೆ ಸ್ಕ್ರಿಪ್ಟ್ ಬರೆಯುವುದು, ಧ್ವನಿ ಸಂಯೋಜನೆ ಮತ್ತಿತರ ತಾಂತ್ರಿಕ ಕೆಲಸ ಗೊತ್ತಿದ್ದರೆ ಅದು ಪೂರಕ ಅಂಶವಾಗಿ ಆದಾಯದ ದಾರಿ ತೆರೆಯುತ್ತವೆ.

ಏನು ಅರ್ಹತೆ?


ಆಸಕ್ತಿ ಮತ್ತು ಧ್ವನಿ ಶುದ್ಧತೆ, ಸ್ಪಷ್ಟತೆ ಕಾಯ್ದುಕೊಳ್ಳುವುದು ಮುಖ್ಯ. ಹೆಚ್ಚು ಭಾಷೆ ತಿಳಿದಷ್ಟೂ ಅವಕಾಶಗಳು ಹೆಚ್ಚು. ಕೆಲವು ತರಬೇತಿ ಶಾಲೆಗಳು ಇವೆಯಾದರೂ ಪರಿಪೂರ್ಣತೆಯ ಖಾತ್ರಿ ಇಲ್ಲ. ರಂಗಭೂಮಿ, ರೇಡಿಯೊ, ಸಂಗೀತ ಸೇರಿದಂತೆ ಪ್ರದರ್ಶಕ ಕಲೆಗಳಲ್ಲಿ ನಿರಂತರ ತೊಡಗಿಕೊಂಡಿರುವವರಿಗೆ ಈ ಕಲೆ ತಾನಾಗಿಯೇ ಒಲಿಯುತ್ತದೆ. ಅದೇ ಕಲಿಕೆ ಮೈಕ್ ಮುಂದೆ ಬರಬೇಕು ಅಷ್ಟೇ.

ನೆನಪಿಡಿ, ಇಲ್ಲಿಯೂ ತೀವ್ರ ಸ್ಪರ್ಧೆ ಇದೆ. ಗೆದ್ದವನೇ ಜಾಣ.

ಹೆಚ್ಚಿನ ಮಾಹಿತಿಗೆ: vocalcorddecibels@gmail.com, anitha1848@gmail.com ಗೆ ಸಂಪರ್ಕಿಸಬಹುದು.

ಎಂಬಿಎ ಕೋರ್ಸ್‌ಗೆ ತಯಾರಿ ಹೇಗೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್

1. ನಾನು ಎರಡನೇ ವರ್ಷದ ಬಿಕಾಂ ವಿದ್ಯಾರ್ಥಿ. ಮುಂದೆ ಎಂಬಿಎ ಮಾಡಬೇಕೆಂಬ ಆಸೆ ಇದೆ. ಯಾವ ರೀತಿ ತಯಾರಿ ನಡೆಸಬೇಕು?

ಪ್ರತ್ಯೂಷ, ಮೈಸೂರು.

ಬಿಕಾಂ ನಂತರ ಎಂಬಿಎ ಮಾಡುವುದು ಉತ್ತಮ ಆಯ್ಕೆ. ಎಂಬಿಎ ಕೋರ್ಸ್ ಅನ್ನು ಮಾರ್ಕೆಟಿಂಗ್, ಎಚ್‌ಆರ್, ಪ್ರೊಡಕ್ಷನ್, ಫೈನಾನ್ಸ್, ಲಾಜಿಸ್ಟಿಕ್ಸ್ ಇತ್ಯಾದಿ ವಿಭಾಗಗಳಲ್ಲಿ ಮಾಡಬಹುದು. ನಿಮ್ಮ ಆಸಕ್ತಿ, ಅಭಿರುಚಿಯಂತೆ ಯಾವ ವಿಭಾಗದಲ್ಲಿ ಎಂಬಿಎ ಮಾಡಬೇಕು ಎಂದು ನಿರ್ಧರಿಸಿ, ಅದರಂತೆ ದೀರ್ಘಾವಧಿ ವೃತ್ತಿ ಜೀವನದ ಯೋಜನೆಯನ್ನು ಮಾಡಬೇಕು.

ಎಲ್ಲಾ ಎಂಬಿಎ ಕಾಲೇಜು/ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪರೀಕ್ಷೆಯಿರುತ್ತದೆ; ಉದಾಹರಣೆಗೆ ಕಾಮನ್ ಅಡ್ಮಿಷನ್ ಟೆಸ್ಟ್ (ಕ್ಯಾಟ್), ಮ್ಯಾನೇಜ್‌ಮೆಂಟ್ ಅಡ್ಮಿಷನ್ ಟೆಸ್ಟ್ (ಮ್ಯಾಟ್), ಗ್ರಾಜುಯೇಟ್ ಮ್ಯಾನೇಜ್‌ಮೆಂಟ್ ಅಡ್ಮಿಷನ್ ಟೆಸ್ಟ್ (ಜಿಮ್ಯಾಟ್), ಬಿಸಿನೆಸ್ ಅನಲಿಟಿಕ್ಸ್ ಆಪ್ಟಿಟ್ಯೂಡ್ ಟೆಸ್ಟ್ (ಬ್ಯಾಟ್), ಪಿಜಿಸಿಇಟಿ, ಕೆಲವು ಪ್ರತಿಷ್ಠಿತ ಸಂಸ್ಥೆಗಳಲ್ಲಿ ಎಂಬಿಎ ಪ್ರವೇಶದ ಅರ್ಹತೆಯನ್ನು ನಿರ್ಧರಿಸುವ ಪರೀಕ್ಷೆಗಳು. ಈ ಪರೀಕ್ಷೆಗಳ ಪ್ರಾಮುಖ್ಯ, ಕಠಿಣತೆಯ ಮಟ್ಟ, ನಿಮ್ಮ ಧ್ಯೇಯ ಮತ್ತು ಸಾಮರ್ಥ್ಯದ ಆಧಾರದ ಮೇಲೆ ಸೂಕ್ತ ಕಾರ್ಯ ತಂತ್ರವನ್ನು ರೂಪಿಸಿ, ನಿಮ್ಮ ಆದ್ಯತೆಯಂತೆ ಪ್ರವೇಶ ಪರೀಕ್ಷೆಗಳ ಮೂಲಕ ಎಂಬಿಎ ಕೋರ್ಸ್‌ಗೆ ಸೇರಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಗಮನಿಸಿ: https://collegedunia.com/mba/karnataka-colleges

2. ಎಷ್ಟು ಓದಿದರೂ ಎಲ್ಲವೂ ಮರೆತುಹೋಗುತ್ತದೆ. ನೆನಪಿನಲ್ಲಿ ಉಳಿಯುವಂತೆ ಓದುವುದಕ್ಕೆ ಏನಾದರೂ ವಿಧಾನವಿದೆಯೇ ?

ಹೆಸರು, ಊರು ತಿಳಿಸಿಲ್ಲ.

ಓದಿದ ವಿಷಯ ಮರೆತುಹೋಗುವುದು ಒಂದು ಸಾಮಾನ್ಯ ಹಾಗೂ ಗಂಭೀರವಾದ ಸಮಸ್ಯೆ. ಓದುವಿಕೆಯಲ್ಲಿ ಪರಿಣಾಮಕಾರಿ ಕಾರ್ಯತಂತ್ರಗಳನ್ನು ಅಳವಡಿಸದಿರುವುದರಿಂದ ಓದಿದ ವಿಷಯಗಳು ನಿಮ್ಮ ಅಲ್ಪಾವಧಿ ಸ್ಮರಣೆಯಲ್ಲಿ ಮಾತ್ರ ಇರುತ್ತದೆ. ಹಾಗಾಗಿ, ಪರೀಕ್ಷೆ/ಟೆಸ್ಟ್‌ಗಳಲ್ಲಿ ಓದಿದ ವಿಷಯ ಜ್ಞಾಪಕಕ್ಕೆ ಬರುವುದಿಲ್ಲ. ಓದಿದ ವಿಷಯಗಳು ದೀರ್ಘಾವಧಿ ಸ್ಮರಣೆಯಲ್ಲಿರಬೇಕಾದರೆ, ಓದುವಿಕೆ ಪರಿಣಾಮಕಾರಿಯಾಗಿರಬೇಕು. ಓದುವ ಪ್ರಕ್ರಿಯೆಯ ಜೊತೆ ಸಮೀಕ್ಷೆ, ಪ್ರಶ್ನಿಸುವಿಕೆ, ಪುನರುಚ್ಚಾರಣೆ ಮತ್ತು ಪುನರಾವರ್ತನೆ ಇರಬೇಕು.

ಇದಲ್ಲದೆ ತರಗತಿಗಳಲ್ಲಿ, ನೀಡುವ ಉಪನ್ಯಾಸದ ಟಿಪ್ಪಣಿಯನ್ನು(ನೋಟ್ಸ್) ಸರಿಯಾದ ಕ್ರಮದಲ್ಲಿ, ಓದುವಿಕೆಗೆ ಪೂರಕವಾಗುವಂತೆ ಬರೆದಿಟ್ಟುಕೊಳ್ಳಬೇಕು. ಆದರೆ, ಹೆಚ್ಚಿನ ಶಾಲಾ/ ಕಾಲೇಜುಗಳಲ್ಲಿ ಪರಿಣಾಮಕಾರಿ ಓದುವಿಕೆಯ ಈ ಕಾರ್ಯತಂತ್ರಗಳ ಕುರಿತು ತರಬೇತಿ ನೀಡಿರುವುದಿಲ್ಲ. ಈ ಕಾರ್ಯತಂತ್ರಗಳು ಮತ್ತು ನೋಟ್ಸ್ ಬರೆಯುವ ಕ್ರಮ.. ಇತ್ಯಾದಿ ವಿಷಯಗಳ ಕುರಿತ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ https://www.youtube.com/c/EducationalExpertManagementCareerConsultant

3. ನನ್ನ ತಂದೆ, ತಾಯಿ ಹೆಸರುಗಳು, ಅವರ ಮತ್ತು ನನ್ನ ದಾಖಲೆಗಳಲ್ಲಿ ವ್ಯತ್ಯಾಸವಾಗಿದೆ. ಇದನ್ನು ಸರಿಪಡಿಸುವುದು ಹೇಗೆ?

ಸಂದೀಪ್, ಹೊಸದುರ್ಗ.

ನಿಮ್ಮ ದಾಖಲೆಗಳಲ್ಲಿ ತಿದ್ದುಪಡಿ ಮಾಡಬೇಕೆಂದರೆ ಸಂಬಂಧಿಸಿದ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಿಗೆ ನಿಗದಿತ ಅರ್ಜಿಯ ಪ್ರಕಾರ, ಸೂಕ್ತ ದಾಖಲೆಗಳೊಂದಿಗೆ ಪ್ರಮಾಣಪತ್ರ ಸಲ್ಲಿಸಬೇಕು. ನ್ಯಾಯಾಧೀಶರ ಅನುಮೋದನೆಯ ನಂತರ ಪ್ರಮಾಣಪತ್ರ ಮತ್ತು ಇನ್ನಿತರ ದಾಖಲೆಗಳೊಂದಿಗೆ ನಿಮ್ಮ ಶಾಲೆಯ/ಕಾಲೇಜಿನ ಮೂಲಕ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ/ವಿಶ್ವವಿದ್ಯಾಲಯಕ್ಕೆ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿ.

ಇನ್ನಷ್ಟು ಪ್ರಶ್ನೋತ್ತರಕ್ಕಾಗಿ prajavani.net ನೋಡಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಸ್‌ಬಿಐ ಯೂತ್ ಫಾರ್ ಇಂಡಿಯಾ ಫೆಲೋಶಿಪ್ 2022

ವಿವರ: ಎಸ್‌ಬಿಐ ಯೂತ್ ಫಾರ್ ಇಂಡಿಯಾ ಫೆಲೋಶಿಪ್ 2022, ಪದವಿ ಮುಗಿಸಿದವರಿಗೆ ವಿವಿಧ ಎನ್‌ಜಿಒಗಳ ಸಹಭಾಗಿತ್ವದಲ್ಲಿ ನೀಡುವ ವಿದ್ಯಾರ್ಥಿವೇತನವಾಗಿದೆ.

ಅರ್ಹತೆ: ಪದವಿ ಮುಗಿಸಿದ 21 ರಿಂದ 32 ವರ್ಷದ ಒಳಗಿನ ಭಾರತೀಯ ವಿದ್ಯಾರ್ಥಿಗಳು ಈ ವಿದ್ಯಾರ್ಥಿವೇತನಕ್ಕೆ ಅರ್ಹರು.

ಆರ್ಥಿಕ ನೆರವು: ₹50,000 ರದವರೆಗೆ ಹಾಗೂ ಇತರ ಪ್ರಯೋಜನಗಳು.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 30, 2022

ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ

ಹೆಚ್ಚಿನ ಮಾಹಿತಿಗೆ: www.b4s.in/praja/YFI7

ವಿದ್ಯಾರ್ಥಿ ವೇತನ

ಶಾಲಾ ಮಕ್ಕಳಿಗೆ ಸಿಎಸ್‌ಐಆರ್ ಇನ್ನೊವೇಷನ್ ಅವಾರ್ಡ್ 2021

ವಿವರ: 18 ವರ್ಷ ಒಳಗಿನವರಿಗಾಗಿ ಕೌನ್ಸಿಲ್ ಆಫ್ ಸೈಂಟಿಫಿಕ್ ಆ್ಯಂಡ್ ಇಂಡಸ್ಟ್ರಿಯಲ್ ರಿಸರ್ಚ್ ಸಂಸ್ಥೆ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹತೆ: 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಿದ್ಯಾರ್ಥಿ ಅಥವಾ ವಿದ್ಯಾರ್ಥಿಗಳ ಗುಂಪು ಅರ್ಜಿಗಳನ್ನು ಸಲ್ಲಿಸಬಹುದು.

ಒಮ್ಮೆ ಒಬ್ಬರಿಗೆ ಅಥವಾ ಒಂದು ಗುಂಪಿಗೆ ಮಾತ್ರ ಅವಕಾಶ.

ಆರ್ಥಿಕ ಸಹಾಯ: ₹ 1 ಲಕ್ಷದವರೆಗೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30 ಏಪ್ರಿಲ್, 2022

ಅರ್ಜಿ ಸಲ್ಲಿಕೆ ವಿಧಾನ: ಅಂಚೆ ಮೂಲಕ

ವಿಳಾಸ: ಹೆಡ್, ಸಿಎಸ್‌ಐಆರ್ ಇನ್ನೊವೇಷನ್ ಪ್ರೊಟೆಕ್ಷನ್ ಯೂನಿಟ್, ಎಸ್‌ಐಎಸ್‌ಸಿಎಐಆರ್ ಬಿಲ್ಡಿಂಗ್, 3 ಫ್ಲೋರ್, 14 ಸತ್‌ಸಂಗ್ ವಿಹಾರ್ ಮಾರ್ಗ್, ನವದೆಹಲಿ– 110067

ಹೆಚ್ಚಿನ ವಿವರಗಳಿಗೆ: www.b4s.in/praja/ASC5

ಪಿಯುಸಿ ಪರೀಕ್ಷೆ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ

ದ್ಯುತಿ ವಿದ್ಯುತ್ ಪರಿಣಾಮ

ಭೌತಶಾಸ್ತ್ರ


50) ದ್ಯುತಿ ವಿದ್ಯುತ್ ಪರಿಣಾಮ ಕುರಿತು ಹಾಲ್‌ವಾಕ್ ಮತ್ತು ಲಿನಾರ್ಡ್‌ನ ಅವಲೋಕನಗಳ ಬಗ್ಗೆ ಬರೆಯಿರಿ

ಉತ್ತರ:- 1888ರಲ್ಲಿ ಹಾಲ್‌ವಾಕನು ನಿರಂತರ ಅಧ್ಯಯನದೊಂದಿಗೆ ಋಣವಿದ್ಯುದಾವೇಶದ ಸತುವಿನ ತಟ್ಟೆಯೊಂದಿಗೆ ವಿದ್ಯುತ್ ಧಾರಕವನ್ನು ಜೋಡಿಸಿದನು. ಸತುವಿನ ತಟ್ಟೆಯ ಮೇಲೆ ನೇರಾಳಾತೀತ ಕಿರಣಗಳು ಪತನಗೊಂಡಾಗ ತಟ್ಟೆಯು ಆವೇಶವನ್ನು ಕಳೆದುಕೊಳ್ಳುವುದನ್ನು ಅವಲೋಕಿಸಿದನು. ಅಂತೆಯೇ ತಟಸ್ಥ ಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳು ಪತನಗೊಂಡಾಗ ಅವುಗಳ ಧನಾತ್ಮಕ ವಿದ್ಯುದಾವೇಶ ಹೊಂದುವುದನ್ನು ಗಮನಿಸಿದನು. ಅದರಂತೆ ಧನ ವಿದ್ಯುದಾವೇಶದ ಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳೂ ಪತನಗೊಂಡಾಗ ಧನ ವಿದ್ಯುದಾವೇಶದ ವರ್ಧನೆಯನ್ನು ಗಮನಿಸಿದನು. ಸತುವಿನ ತಟ್ಟೆಯ ಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಋಣ ಆವೇಶಗಳು ಹೊರಸೂಸುವುದನ್ನು ಈ ಅಧ್ಯಯನದಿಂದ ಅವಲೋಕಿಸಿದನು.

1897ರಲ್ಲಿ ಎಲೆಕ್ಟ್ರಾನ್ ಆವಿಷ್ಕಾರದ ನಂತರ, ಉತ್ಸರ್ಜಕ ತಟ್ಟೆಯ ಮೇಲೆ ಬೆಳಕು ಬಿದ್ದಾಗ ಎಲೆಕ್ಟ್ರಾನ್‌ಗಳು ಹೊರಬರುತ್ತವೆ ಎಂಬ ವಿಚಾರವು ಸ್ಫುಟವಾಯಿತು. ಎಲೆಕ್ಟ್ರಾನ್‌ಗಳು ಋಣ ವಿದ್ಯುದಾವೇಶ ಹೊಂದಿರುವುದರಿಂದ ಅವುಗಳು ವಿದ್ಯುತ್ ಕ್ಷೇತ್ರದಲ್ಲಿ ಸಂಗ್ರಾಹಕ ತಟ್ಟೆಯ ಕಡೆಗೆ ತಳ್ಳಲ್ಪಡುತ್ತವೆ. ನೇರಳಾತೀತ ಕಿರಣಗಳು ಉತ್ಸರ್ಜಕ ಫಲಕದ ಮೇಲೆ ಬಿದ್ದಾಗ ಕಿರಣಗಳ ಆವೃತ್ತಿಯು ನಿರ್ದಿಷ್ಟವಾದ ಕನಿಷ್ಠ ಮೌಲ್ಯಕ್ಕಿಂತ ಕಡಿಮೆಯಿದ್ದರೆ ಎಲೆಕ್ಟ್ರಾನ್‌ಗಳು ಹೊರಬರಲಾರವು ಎಂದು ಹಾಲ್‌ವಾಕ್ ಮತ್ತು ಲಿನಾರ್ಡ್ ಅವರು ಅವಲೋಕಿಸಿದರು. ಈ ಕನಿಷ್ಠ ಆವೃತ್ತಿಯನ್ನು ನಿರ್ಣಾಯಕ ಆವೃತ್ತಿ ಎನ್ನುತ್ತಾರೆ. ಈ ಕನಿಷ್ಠ ಉತ್ಸರ್ಜಕ ಫಲಕದ ಸ್ವಭಾವದ ಮೇಲೆ ಅವಲಂಬಿತವಾಗಿದೆ. ಕೆಲವು ಲೋಹಗಳಾದ ಸತು, ಕ್ಯಾಡ್ಮಿಯಂ, ಮೆಗ್ನೀಷಿಯಂ ಇವುಗಳು ತಮ್ಮ ಮೇಲ್ಮೈಯಿಂದ ಎಲೆಕ್ಟ್ರಾನ್ ಉತ್ಸರ್ಜನ ಮಾಡಲು ಕಿರು ತರಂಗಾಂತರವುಳ್ಳ ನೇರಳಾತೀತ ಕಿರಣಗಳಿಗೆ ಮಾತ್ರ ಪ್ರತಿಕ್ರಿಯಿಸುತ್ತವೆ ಎಂದು ತಿಳಿದು ಬಂದಿತು. ಆದಾಗ್ಯೂ ಕೆಲವು ಆಲ್ಕಲೀ ಲೋಹಗಳಾದ ಲೀಥಿಯಂ, ಸೋಡಿಯಂ, ಪೊಟಾಷಿಯಂ, ಸೀಸಿಯಂ ಮತ್ತು ರುಬಿಡಿಯಮ್‌ಗಳು ಗೋಚರ ಬೆಳಕಿಗೆ ಸ್ಪಂದಿಸುತ್ತವೆ. ಈ ಎಲ್ಲ ದ್ಯುತಿ ಸೂಕ್ಷ್ಮ ಲೋಹಗಳ, ಅವುಗಳ ಮೇಲೆ ಆವಿಷ್ಕಾರದ ನಂತರ ಈ ಎಲೆಕ್ಟ್ರಾನ್‌ಗಳನ್ನು ದ್ಯುತಿ ಎಲೆಕ್ಟ್ರಾನ್‌ಗಳೆಂದು ಕರೆದರು. ಈ ತತ್ವವನ್ನು ದ್ಯುತಿ ವಿದ್ಯುತ್ ಪರಿಣಾಮ ಎನ್ನುತ್ತೇವೆ.

51) ಎಲೆಕ್ಟ್ರಾನ್‌ಗಳ ತರಂಗ ಸ್ವಭಾವ ಸಂಬಂಧಿಸಿದಂತೆ ಡೇವಿಸನ್ ಹಾಗೂ ಜರ್ಮರ್ ಪ್ರಯೋಗದ ಕುರಿತು ಬರೆಯಿರಿ

ಉತ್ತರ:- ಎಲೆಕ್ಟ್ರಾನ್‌ಗಳ ತರಂಗ ಸ್ವಭಾವವನ್ನು ಪ್ರಪ್ರಥಮವಾಗಿ ಸಿ.ಜೆ. ಡೇವಿಸನ್ ಹಾಗೂ ಎಲ್.ಎಚ್. ಜರ್ಮರ್‌ರವರು 1927ರಲ್ಲಿ ಮತ್ತು ಸ್ವತಂತ್ರವಾಗಿ ಜಿ. ಪಿ. ಥಾಮ್ಸನ್‌ರವರು 1928ರಲ್ಲಿ ಪ್ರಯೋಗಿಕವಾಗಿ ಪರಿಶೀಲಿಸಿದರು. ಥಾಮ್ಸನ್‌ರವರು ಸ್ಫಟಿಕದಿಂದ ಚದುರಿದ ಎಲೆಕ್ಟ್ರಾನ್ ಗುಚ್ಛದ ವಿವರ್ತನೆ ಪರಿಣಾಮವನ್ನು ವೀಕ್ಷಿಸಿದರು. ಡೇವಿಸನ್ ಹಾಗೂ ಜರ್ಮರ್ ಬಳಸಿದ ಪ್ರಯೋಗಿಕ ವ್ಯವಸ್ಥೆಯನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ



ಇದು ಬೇರಿಯಂ ಆಕ್ಸೈಡ್ ಲೇಪಿತ ಹಾಗೂ ಕಡಿಮೆ ವಿದ್ಯುತ್ ವಿಭವ ಪೂರೈಕೆಯಿಂದ (L.T ಅಥವಾ ಬ್ಯಾಟರಿ) ಬಿಸಿಮಾಡಿದ ಟಂಗ್‌ಸ್ಟನ್ ತಂತಿ F ಒಳಗೊಂಡಿರುವ ಎಲೆಕ್ಟ್ರಾನ್‌ಗಳನ್ನು ಹೊಂದಿದೆ ಯಾವುದೇ ಅಧಿಕ ವಿಭವ ಸಾಮರ್ಥ್ಯದ ವಿದ್ಯುತ್ ಸಂಗ್ರಹ ಸಾಧನದಿಂದ (H.T ಅಥವಾ ಬ್ಯಾಟರಿ) ಸೂಕ್ತ ವಿಭವವನ್ನು ಅಳವಡಿಸಿವ ಮೂಲಕ ತಂತಿಗಳಿಂದ ಉತ್ಸರ್ಜಿತ ಎಲೆಕ್ಟ್ರಾನ್‌ಗಳನ್ನು ಅಪೇಕ್ಷಿತ ಜವಕ್ಕೆ ವೇಗವರ್ಧಿಸಲಾಯಿತು. ಅಕ್ಷದ ಉದ್ದಕ್ಕೂ ರಂಧ್ರಗಳಿರುವ ಸಿಲಿಂಡರ್‌ನ ಮೂಲಕ ಹಾದು ಹೋಗುವಂತೆ ಮಾಡಿ ಉತ್ತಮವಾಗಿ ಸಮಾಂತರೀಣಿಸಿದ (Collimated) ಕಿರಣಗುಚ್ಛವನ್ನು ಉತ್ಪಾದಿಸಲಾಗಿದೆ.


ಈ ಕಿರಣ ಗುಚ್ಛವನ್ನು ನಿಕ್ಕಲ್ ಸ್ಫಟಿಕದ ಮೇಲೆ ಬೀಳುವಂತೆ ಮಾಡಲಾಗಿದೆ. ಈ ಎಲೆಕ್ಟ್ರಾನ್‌ಗಳು ಸ್ಫಟಿಕದ ಪರಮಾಣುಗಳಿಂದ ಎಲ್ಲಾದಿಕ್ಕಿನಲ್ಲೂ ಚದುರಿವೆ.

ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಚದುರಿದ ಎಲೆಕ್ಟ್ರಾನ್ ಕಿರಣ ಗುಚ್ಛದ ತೀವ್ರತೆಯನ್ನು ಎಲೆಕ್ಟ್ರಾನ್ ಶೋಧಕ (ಸಂಗ್ರಾಹಕ)ದ ಮೂಲಕ ಅಳೆಯಲಾಗುತ್ತದೆ. ಶೋಧಕವನ್ನು ವೃತ್ತಾಕಾರದ ಮಾಪಕ ಪಟ್ಟಿಯ ಮೂಲಕ ಸರಿಸುವಂತೆ ಮಾಡಿ ಅದನ್ನು ಸೂಕ್ಷ್ಮವಾದ ಗ್ಯಾಲ್ವನೋ ಮಾಪಕಕ್ಕೆ ಸಂಪರ್ಕಿಸಲಾಗಿದೆ. ಅದು ವಿದ್ಯುತ್ ಪ್ರವಾಹವನ್ನು ಪ್ರವೇಶಿಸುವ ಎಲೆಕ್ಟ್ರಾನ್ ಕಿರಣ ಗುಚ್ಛದ ತೀವ್ರತೆಗೆ ನೇರ ಅನುಪಾತದಲ್ಲಿರುತ್ತದೆ. ಈ ಉಪಕರಣವನ್ನು ಒಂದು ನಿರ್ವಾತ ಕೊಠಡಿಯಲ್ಲಿ ಅಳವಡಿಸಲಾಗಿದೆ. ಶೋಧಕವನ್ನು ವೃತ್ತಾಕಾರದ ಮಾಪಕ ಪಟ್ಟಿಯ ವಿವಿಧ ಸ್ಥಾನಗಳಲ್ಲಿ ಚಲಿಸುವಂತೆ ಮಾಡುವ ಮೂಲಕ ಚದುರುವಿಕೆಯ ಕೋನ 'θ' ಕ್ಕೆ, ಚದುರಿದ ಎಲೆಕ್ಟ್ರಾನ್ ಕಿರಣಗುಚ್ಛದ ತೀವ್ರತೆಯನ್ನು ಅಳೆಯಲಾಗಿದೆ ('θ' ವು ಪತನಗೊಂಡ ಹಾಗೂ ಚದುರಿದ ಎಲೆಕ್ಟ್ರಾನ್ ಕಿರಣಗುಚ್ಛದ ನಡುವಿನ ಕೋನ) ವಿವಿಧ ವೇಗವರ್ಧಕ ವಿಭವಕ್ಕೆ ಚದುರುವಿಕೆಯ ಕೋನ 'θ' ಹೊಂದಿರುವ ಚದುರಿದ ಎಲೆಕ್ಟ್ರಾನ್‌ಗಳ ತೀವ್ರತೆಯ (I) ಬದಲಾವಣೆಯನ್ನು ಪಡೆಯಬಹುದಾಗಿದೆ.

ವೇಗವರ್ಧಕ ವಿಭವವನ್ನು 44V ನಿಂದ 68V ಗೆ ಬದಲಾಯಿಸಿ ಪ್ರಯೋಗವನ್ನು ನಡೆಸಲಾಯಿತು. ಚದುರುವಿಕೆಯ ಕೋನ 'θ' = 50^0 ಯಲ್ಲಿ 54V ನ ವಿಭವದಲ್ಲಿ ಚದುರಿದ ಎಲೆಕ್ಟ್ರಾನ್‌ಗಳ ತೀವ್ರತೆಗೆ (I) ಪ್ರಬಲವಾದ ಶೃಂಗವು ಕಾಣಿಸಿಕೊಂಡಿರುವುದನ್ನು ಗಮನಿಸಲಾಯಿತು.

ಬಿಂದು ನಿರ್ದಿಷ್ಟ ದಿಕ್ಕಿನಲ್ಲಿ ಶೃಂಗದ ತೋರಿಕೆಯು ಸ್ಫಟಿಕ ಒಂದರ ವಿವಿಧ ಪದರಗಳಲ್ಲಿ ಕ್ರಮವಾಗಿ ಜೋಡಿಸಿದ ಪರಮಾಣುಗಳಿಂದ ಚದುರಿದ ಎಲೆಕ್ಟ್ರಾನ್‌ಗಳ ರಚನಾತ್ಮಕ ವ್ಯತೀಕರಣದ ಕಾರಣದಿಂದಾಗಿರುತ್ತದೆ. ಎಲೆಕ್ಟ್ರಾನ್ ವಿವರ್ತನೆ ಯಾಗುವುದರಿಂದ ದ್ರವ್ಯ ತರಂಗದ ತರಂಗಾತರವು 0.165 nm ಎಂದು ಕಂಡು ಬಂದಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಎಲ್ಲರೂ ಕೇಳಿಸಿಕೊಳ್ಳಬಹುದು, ಆದರೆ ಸಂವೇದನಾಶೀಲತೆ ಇರುವವರು ಮಾತ್ರ ಅರ್ಥಮಾಡಿಕೊಳ್ಳಬಲ್ಲರು.
-ಖಲೀಲ್ ಗಿಬ್ರಾನ್

ಹಿಂದಿ ಹೇರಿಕೆ ಪ್ರಯತ್ನ ನಿಲ್ಲಲಿ ಎಲ್ಲ ಭಾಷೆಗಳು ಬಲಗೊಳ್ಳಲಿ

ಇಂಗ್ಲಿಷ್‌ಗೆ ಪರ್ಯಾಯವಾಗಿ ಹಿಂದಿಯನ್ನು ಒಪ್ಪಿಕೊಳ್ಳುವಂತೆ ಹಾಗೂ ಎಲ್ಲ ರಾಜ್ಯಗಳ ಜನರು ಹಿಂದಿಯನ್ನು ಸಂಪರ್ಕ ಭಾಷೆಯನ್ನಾಗಿ ಬಳಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ನೀಡಿರುವ ಕರೆ ಅನಗತ್ಯ ಗೊಂದಲ, ವಿವಾದ ಹಾಗೂ ಆತಂಕಕ್ಕೆ ಆಸ್ಪದ ಕಲ್ಪಿಸುವಂತಹದ್ದು. ಭಾಷಾ ಸಂಸದೀಯ ಸಮಿತಿಯ 37ನೇ ಸಭೆಯಲ್ಲಿ ಮಾತನಾಡಿರುವ ಅವರು, ದೇಶದೆಲ್ಲೆಡೆ ಸಂಪರ್ಕ ಭಾಷೆಯಾಗಿ ಹಿಂದಿಯನ್ನು ಬಳಸಬೇಕೇ ಹೊರತು ವಿದೇಶಿ ಭಾಷೆಯಾದ ಇಂಗ್ಲಿಷ್ ಅನ್ನು ಅಲ್ಲ ಎಂದು ಹೇಳಿದ್ದಾರೆ. ಹಿಂದಿಯು ಇಂಗ್ಲಿಷ್‌ಗೆ ಪರ್ಯಾಯವೇ ಹೊರತು ಪ್ರಾದೇಶಿಕ ಭಾಷೆಗಳಿಗಲ್ಲ ಎನ್ನುವ ಜಾಣತನದ ಮಾತನ್ನು ಅವರು ಆಡಿದ್ದಾರಾದರೂ, ಅವರ ಒಟ್ಟಾರೆ ಹೇಳಿಕೆಯಲ್ಲಿ ದೇಶಭಾಷೆಗಳ ಹಿತಾಸಕ್ತಿಗೆ ಪೂರಕ ಆಗುವಂತಹದ್ದೇನೂ ಇಲ್ಲ. ಹಿಂದಿಯ ಸಾಧ್ಯತೆಗಳ ಕುರಿತಂತೆ ಕಳೆದ ಐದಾರು ವರ್ಷಗಳಲ್ಲಿ ಗೃಹ ಸಚಿವರು ಆಡಿರುವ ಮಾತುಗಳನ್ನು ಗಮನಿಸಿದರೆ, ಇಂಗ್ಲಿಷ್ ಜೊತೆಗೆ ಹಿಂದಿಯೇತರ ಭಾಷೆಗಳೆಲ್ಲವೂ ಅವರ ಕಣ್ಣಿಗೆ ಪರಕೀಯ ನುಡಿಗಳಂತೆಯೇ ಕಾಣಿಸುತ್ತಿರುವಂತಿದೆ. ಕೇಂದ್ರ ಸಚಿವ ಸಂಪುಟದ ಶೇಕಡ 70ರಷ್ಟು ಕಾರ್ಯಸೂಚಿಗಳನ್ನು ಪ್ರಸ್ತುತ ಹಿಂದಿಯಲ್ಲೇ ಸಿದ್ಧಪಡಿಸಲಾಗುತ್ತಿದ್ದು, ಶಾಲಾ ಹಂತದಲ್ಲಿ ಹಿಂದಿ ಕಲಿಕೆಗೆ ಹೆಚ್ಚಿನ ಒತ್ತು ನೀಡಲು ಕೈಗೊಂಡಿರುವ ಕ್ರಮಗಳನ್ನು ಅಮಿತ್ ಶಾ ವಿವರಿಸಿದ್ದಾರೆ. ದೇಶವನ್ನು ಒಗ್ಗೂಡಿಸುವ ಸಾಧನವನ್ನಾಗಿ ಹಿಂದಿಯನ್ನು ಮಾಡುವ ಸಮಯ ಈಗ ಬಂದಿದೆ ಎನ್ನುವ ಅವರ ಮಾತಿನಲ್ಲಿ, ಹಿಂದಿಯೇತರ ದೇಶಭಾಷೆಗಳಿಂದ ದೇಶದ ಸಮಗ್ರತೆ ಸಾಧ್ಯವಿಲ್ಲ ಎನ್ನುವ ಧ್ವನಿಯೂ ಇರುವಂತಿದೆ. ಅಧಿಕೃತ ಭಾಷೆಯೇ ಸರ್ಕಾರ ನಡೆಸುವ ಮಾಧ್ಯಮವಾಗಿರಬೇಕು ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರ ಹೇಳಿಕೆಯು ಹಿಂದಿಯ ಪ್ರಾಮುಖ್ಯವನ್ನು ಹೆಚ್ಚಿಸುತ್ತದೆ ಎಂದೂ ಅಮಿತ್ ಶಾ ಹೇಳಿದ್ದಾರೆ. ಮೋದಿ ಮತ್ತು ಅಮಿತ್ ಶಾ ಅವರು ಮಾತ್ರವಲ್ಲ, ದೇಶ ಸ್ವಾತಂತ್ರ್ಯಗೊಂಡಾಗಿನಿಂದ ಈವರೆಗೆ ಕೇಂದ್ರದಲ್ಲಿ ಅಧಿಕಾರ ನಡೆಸಿರುವ ಬಹುಪಾಲು ನಾಯಕರು ಪಕ್ಷಭೇದವಿಲ್ಲದೆ ಹಿಂದಿಯನ್ನು ಮುನ್ನೆಲೆಗೆ ತರುವ ಪ್ರಯತ್ನವನ್ನು ಮಾಡುತ್ತಲೇ ಬಂದಿದ್ದಾರೆ. ಬಹುಭಾಷೆಗಳು ಭಾರತದ ಬಹುತ್ವದ ಪ್ರಮುಖ ಲಕ್ಷಣಗಳಾಗಿವೆ ಹಾಗೂ ಈ ಭಾಷೆಗಳು ರಾಷ್ಟ್ರೀಯತೆಗೆ ತಮ್ಮದೇ ಆದ ಕೊಡುಗೆ ನೀಡಿವೆ ಎನ್ನುವುದನ್ನು ಕೇಂದ್ರದ ನಾಯಕರು ಉದ್ದೇಶಪೂರ್ವಕವಾಗಿ ನಿರ್ಲಕ್ಷಿಸುತ್ತಿರುವಂತಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಸಂವಿಧಾನವು ಮಾನ್ಯತೆ ನೀಡಿರುವ ಎಲ್ಲ ರಾಜ್ಯಭಾಷೆಗಳಿಗೂ ಸಮಾನ ಅವಕಾಶ, ಗೌರವ ದೊರೆಯಬೇಕು. ಆದರೆ, ಪ್ರಾದೇಶಿಕ ಭಾಷೆಗಳ ಮೇಲೆ ಹಿಂದಿ ಹೇರುವ ಪ್ರಯತ್ನ ನಿರಂತರವಾಗಿ ನಡೆಯುತ್ತಲೇ ಇದೆ. ದ್ರಾವಿಡ ಭಾಷೆಗಳ ಅಸ್ಮಿತೆಗೆ ಸವಾಲು ಎಸೆಯುವ ರೀತಿಯಲ್ಲಿ ಹಿಂದಿ ಬಳಕೆಯನ್ನು ಉತ್ತೇಜಿಸುವ ಹತ್ತಾರು ಕಾರ್ಯಕ್ರಮಗಳನ್ನು ವರ್ಷಪೂರ್ತಿ ನಡೆಸಲಾಗುತ್ತಿದೆ.



ಇಂಗ್ಲಿಷ್‌ಗೆ ಪರ್ಯಾಯವಾಗಿ ಹಿಂದಿಯನ್ನು ಬಳಸಬೇಕು ಎನ್ನುವ ವಾದ ಪ್ರಾದೇಶಿಕ ಭಾಷೆಗಳ ಹಿತಾಸಕ್ತಿಗೆ ವಿರುದ್ಧವಾದುದಷ್ಟೇ ಅಲ್ಲ, ಪ್ರಾಯೋಗಿಕವಾಗಿಯೂ ದುರ್ಬಲವಾದುದು

ಹಿಂದಿಯನ್ನು ಹೇರುವ ಕೇಂದ್ರ ಸರ್ಕಾರದ ಪ್ರಯತ್ನಗಳು ಇತ್ತೀಚಿನ ವರ್ಷಗಳಲ್ಲಿ ತೀವ್ರಗೊಂಡಿವೆ. ‘ಒಂದು ದೇಶ, ಒಂದು ಭಾಷೆ’ ಎನ್ನುವ ಮಾತನ್ನು ಅಮಿತ್ ಶಾ ಅನೇಕ ಸಂದರ್ಭಗಳಲ್ಲಿ ಆಡಿದ್ದಾರೆ. ಹಿಂದಿ ಹೇರಿಕೆಯ ಪ್ರಯತ್ನಗಳ ವಿರುದ್ಧ ದಕ್ಷಿಣ ಭಾರತ ಮೊದಲಿನಿಂದಲೂ ಪ್ರಬಲ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದೆ. ಈಗಲೂ ಗೃಹ ಸಚಿವರ ಹೇಳಿಕೆಗೆ ಕರ್ನಾಟಕವೂ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ. ಇಂಗ್ಲಿಷ್‌ಗೆ ಪರ್ಯಾಯವಾಗಿ ಹಿಂದಿಯನ್ನು ಬಳಸಬೇಕು ಎನ್ನುವ ವಾದ ಪ್ರಾದೇಶಿಕ ಭಾಷೆಗಳ ಹಿತಾಸಕ್ತಿಗೆ ವಿರುದ್ಧವಾದುದಷ್ಟೇ ಅಲ್ಲ, ಪ್ರಾಯೋಗಿಕವಾಗಿಯೂ ದುರ್ಬಲವಾದುದು. ಸ್ವಾತಂತ್ರ್ಯಾನಂತರದ ಏಳೂವರೆ ದಶಕಗಳಲ್ಲಿ ಇಂಗ್ಲಿಷ್ ಎಷ್ಟರ ಮಟ್ಟಿಗೆ ಭಾರತೀಯರಿಗೆ ಒಗ್ಗಿಹೋಗಿದೆಯೆಂದರೆ, ಈಗದು ಭಾರತೀಯ ಸ್ವರೂಪವನ್ನೇ ಪಡೆದುಕೊಂಡಿದೆ. ದೇಶದ ಎಲ್ಲ ಭಾಷೆಗಳಲ್ಲೂ ಬೆರೆತಿರುವ ಇಂಗ್ಲಿಷ್, ಶಿಕ್ಷಣ ಮಾಧ್ಯಮ ಭಾಷೆಯೂ ಆಗಿದೆ. ಭಾರತದ ಯುವಕ ಯುವತಿಯರು ಜಾಗತಿಕವಾಗಿ ಹೆಚ್ಚಿನ ಅವಕಾಶಗಳನ್ನು ಪಡೆಯುವುದಕ್ಕೆ ಇಂಗ್ಲಿಷ್ ಕೂಡ ಕಾರಣವಾಗಿದೆ. ಈಗ ಒಮ್ಮಿಂದೊಮ್ಮೆಗೆ ಇಂಗ್ಲಿಷ್‌ನ ಜಾಗದಲ್ಲಿ ಹಿಂದಿಯನ್ನು ತರಬೇಕೆಂದರೆ ಇಡೀ ಶಿಕ್ಷಣ ವ್ಯವಸ್ಥೆಯನ್ನು ಬದಲಿಸಬೇಕಾಗುತ್ತದೆ. ಮಕ್ಕಳು ಮತ್ತು ಪೋಷಕರ ಮನಃಸ್ಥಿತಿಯೊಂದಿಗೆ ಆಟವಾಡುವ ಈ ಕಸರತ್ತಿನಿಂದ ಉಪಯೋಗಕ್ಕಿಂತ ಅನನುಕೂಲಗಳೇ ಹೆಚ್ಚು. ಭಾವನಾತ್ಮಕವಾಗಿ ಇಂಗ್ಲಿಷಿಗಿಂತಲೂ ಹಿಂದಿ ಭಾರತೀಯರಿಗೆ ಸಮೀಪವಾದುದು ಎನ್ನುವುದು ನಿಜ. ಪ್ರಾಯೋಗಿಕವಾಗಿ ನೋಡುವುದಾದರೆ, ಹಿಂದಿಯೇತರ ಭಾಷಿಕರಿಗೆ ಇಂಗ್ಲಿಷ್ ಹೆಚ್ಚು ಸಮೀಪವಾದುದು ಹಾಗೂ ಸಂವಹನಕ್ಕೆ ಸುಲಭವಾದುದು. ಇಂಗ್ಲಿಷನ್ನು ದೂರವಿಡುವ ಪ್ರಯತ್ನ, ವಿಶ್ವಮಟ್ಟದಲ್ಲಿ ಉದ್ಯೋಗ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಭಾರತೀಯರು ಹಿಂದುಳಿಯುವಂತಾಗಲು ಕಾರಣವಾಗಬಹುದು. ಹಿಂದಿ ಹೇರಿಕೆಯ ಹಿಂದೆ ಭಾಷಿಕ ಸಾಧ್ಯತೆಗಿಂತಲೂ ಹೆಚ್ಚಾಗಿ ರಾಜಕೀಯ ಅಜೆಂಡಾ ಇರುವಂತಿದೆ. ‘ಒಂದು ರಾಷ್ಟ್ರ, ಒಂದು ಚುನಾವಣೆ’ ಎನ್ನುವ ಘೋಷಣೆಯ ಜೊತೆಗೆ ಒಂದೇ ಭಾಷೆಯೂ ಸೇರಿಕೊಳ್ಳುತ್ತಿದೆ. ಇಂಥ ಧ್ರುವೀಕೃತ ಪ್ರಯತ್ನಗಳು ದೇಶದ ಸಾಂಸ್ಕೃತಿಕ ವೈವಿಧ್ಯಕ್ಕೆ ಹಾನಿಕರ. ಪ್ರಾದೇಶಿಕ ಭಾಷೆಗಳು ಬಹುತ್ವ ಭಾರತದ ಜೀವಕೋಶಗಳು. ಅವುಗಳನ್ನು ಬಲಪಡಿಸುವ ಕೆಲಸಕ್ಕೆ ರಾಜ್ಯಗಳೊಂದಿಗೆ ಕೇಂದ್ರ ಸರ್ಕಾರ ಕೈಗೂಡಿಸಬೇಕು. ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಹಿಂದಿಯನ್ನು ಹೇರುವ ಮೂಲಕ ಇತರ ದೇಶಭಾಷೆಗಳನ್ನು ಗಾಸಿಗೊಳಿಸುವ ಪ್ರಯತ್ನವನ್ನು ನಿಲ್ಲಿಸಬೇಕು.

ದಿನದ ಟ್ವೀಟ್

ಅನಗತ್ಯ ಪ್ರಾಮುಖ್ಯತೆ ಏಕೆ?



ಇಂಗ್ಲಿಷ್ ಭಾರತದ ಭಾಷೆಯಲ್ಲ ಎನ್ನುವುದಾದರೆ ಹಿಂದಿಯೂ ಅಲ್ಲ. ಹಿಂದಿಯು ಕೇವಲ 1,300 ವರ್ಷಗಳಷ್ಟು ಹಳೆಯದು; ಅಲ್ಲದೆ ಇದು, ಏನಿಲ್ಲವೆಂದರೂ 1,500ರಿಂದ 2,000 ವರ್ಷಗಳಷ್ಟು ಹಳೆಯದಾದ ಕನ್ನಡ, ತಮಿಳು, ಸಂಸ್ಕೃತ, ತೆಲುಗು, ಮಲಯಾಳಂ ಅಥವಾ ಒಡಿಯಾದಂತಹ ಶಾಸ್ತ್ರೀಯ ಭಾಷೆ ಸಹ ಅಲ್ಲ.

ಅಶೋಕ್ ಸ್ವೈನ್, ಪ್ರಾಧ್ಯಾಪಕ

ಕಿಡಿನುಡಿ



ಯಾವುದೇ ಭಾಷಣ ಕೇಳಲು ಜನರಿಗೆ ಸಮಯವಿರಬಾರದು, ಅದು ನಿಜವಾಗಿ ದೇಶ ಮುಂದುವರಿಯುವುದರ ಸಂಕೇತ. ಅಮೆರಿಕದಲ್ಲಿ ಅಧ್ಯಕ್ಷರ ಚುನಾವಣೆ ಸಮಯದಲ್ಲಿ ಮಾತ್ರ ಸೀಮಿತ ಅವಧಿಯ ಭಾಷಣ ಅಭ್ಯರ್ಥಿಗಳಿಂದ ಇರುತ್ತದೆ. ಇಲ್ಲಿ ಭಾಷಣದಿಂದಲೇ ಸಂಪಾದನೆ ಮಾಡುವವರಿದ್ದಾರೆ ಮತ್ತು ಬಿಟ್ಟಿದ್ದೆಲ್ಲಾ ಸುತ್ತಿಕೊಳ್ಳಲು ಸಾಕಷ್ಟು ಜನರು ಕಡಲೆಕಾಯಿ ತಿನ್ನುತ್ತಾ ಕುಳಿತಿರುತ್ತಾರೆ.

ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಶುಕ್ರವಾರ, 11-4-1997

• ಗೌಡರ ಬದಲಾವಣೆಗೆ ಕಾಂಗ್ರೆಸ್ ಪಟ್ಟು: ರಂಗದ ನಕಾರ

ನವದೆಹಲಿ, ಏ. 10– ಕಾಂಗ್ರೆಸ್ ಮತ್ತು ಸಂಯುಕ್ತ ರಂಗದ ನಡುವೆ ಉದ್ಭವಿಸಿರುವ ಬಿಕ್ಕಟ್ಟಿನ ಪರಿಹಾರಕ್ಕೆ ಇಂದು ನಡೆದ ಎರಡನೇ ಸುತ್ತಿನ ಮಾತುಕತೆಯೂ ವಿಫಲವಾಯಿತು. ಉಭಯ ಬಣಗಳೂ ತಮ್ಮ ನಿಲುವಿಗೆ ಬದ್ಧವಾಗಿದ್ದರಿಂದ ಬಿಕ್ಕಟ್ಟು ಬಗೆಹರಿಯಲಿಲ್ಲ. ಇದರಿಂದಾಗಿ ನಾಳೆ ಸೇರಲಿರುವ ಸಂಸತ್ ವೇದಿಕೆಯೇ ಸರ್ಕಾರದ ಹಣೆಬರಹವನ್ನು ನಿರ್ಧರಿಸಲಿದೆ.

ಸಂಯುಕ್ತ ರಂಗವು ತನ್ನ ನಾಯಕತ್ವವನ್ನು ಬದಲಾಯಿಸಿಕೊಳ್ಳಬೇಕು ಮತ್ತು ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡಬೇಕೆಂದು ಕಾಂಗ್ರೆಸ್ ತನ್ನ ಹಳೆಯ ನಿಲುವಿಗೇ ಬದ್ಧವಾಗಿದ್ದರೆ, ಸಂಯುಕ್ತ ರಂಗವು ಈ ಎರಡೂ ಬೇಡಿಕೆಗಳನ್ನು ಸ್ಪಷ್ಟವಾಗಿ ತಳ್ಳಿಹಾಕಿದೆ.

ತಾನು ಈಗಿನ ಏಕತೆಯನ್ನು ಉಳಿಸಿಕೊಂಡೇ ಸಂಸತ್ ಮತ್ತು ಜನತೆಯನ್ನು ಎದುರಿಸಲು ದೃಢ ನಿಲುವನ್ನು ತೆಗೆದುಕೊಂಡಿರುವುದಾಗಿ ಸಂಯುಕ್ತ ರಂಗ ಹೇಳಿದೆ.

50 ವರ್ಷಗಳ ಹಿಂದೆ

ಮಂಗಳವಾರ, 11-4-1972

• ಬಹುಮತದಿಂದ ಸಭಾಪತಿಯಾಗಿ ಗಾಂವ್‌ಕರ್ ಆಯ್ಕೆ

ಬೆಂಗಳೂರು, ಏ. 10– ಬಹುಮತ ಪಡೆದ 45 ವರ್ಷದ ಸಂಸ್ಥಾ ಕಾಂಗ್ರೆಸ್ಸಿನ ಸ್ಪರ್ಧಿ ಮಾಜಿ ಉಪಸಭಾಪತಿ ಎಸ್.ಡಿ. ಗಾಂವ್‌ಕರ್ ಅವರು ಇಂದು ವಿಧಾನ ಪರಿಷತ್ತಿನ ಸಭಾಪತಿಯಾಗಿ ಬಹುಮತದಿಂದ ಚುನಾಯಿತರಾದರು.

ಅವರ ಹೆಸರನ್ನು ಸೂಚಿಸಿದ ನಿರ್ಣಯವನ್ನು ಸಭಾಧ್ಯಕ್ಷತೆಯನ್ನು ವಹಿಸಿ, ಚುನಾವಣೆ ನಡೆಸಿದ ಉಪಸಭಾಪತಿ ಎಸ್.ಪಿ. ರಾಜಣ್ಣ ಅವರು ಮತಕ್ಕೆ ಹಾಕಲಾಗಿ ಅವರ ಪರವಾಗಿ 32 ಮತಗಳೂ, ವಿರುದ್ಧವಾಗಿ 24 ಮತಗಳೂ ಬಂದವು. ಕಾಂಗ್ರೆಸ್ ಬೆಂಬಲದೊಡನೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಎಂ.ವಿ. ರಾಮರಾಯರ ಹೆಸರನ್ನು ಸೂಚಿಸಿದ ನಿರ್ಣಯವನ್ನು ಮತಕ್ಕೆ ಹಾಕಲಿಲ್ಲ.

• ಗುರುವಿಗೆ ಪರಮಾನಂದ

ಬೆಂಗಳೂರು, ಏ. 10– ಶಿಷ್ಯ ಉನ್ನತ ಸ್ಥಾನವನ್ನಲಂಕರಿಸಿದ್ದನ್ನು ಕಂಡ ಗುರುವಿಗೆ ಪರಮಾನಂದ.

ಎಸ್.ಡಿ. ಗಾಂವ್‌ಕರ್ ನೂತನ ಸಭಾಪತಿಯಾಗಿ ಆಯ್ಕೆ ಆಗಿ ಆ ಸ್ಥಾನವನ್ನು ಅಲಂಕರಿಸಿದಾಗ, ವಿದ್ಯಾಗುರು ಎಂ.ಜಿ. ಹಂದ್ರಾಳ ಅವರಿಂದ ಆಶೀರ್ವಾದ.

ಗಾಂವ್‌ಕರ್ ಅವರು 10 ವರ್ಷದವರಿದ್ದಾಗ ಹಂದ್ರಾಳ ಅವರು ವಿದ್ಯಾಗುರುವಾಗಿದ್ದರು. ವಿದ್ಯಾರ್ಥಿ ತಮ್ಮ ಮುಂದೆಯೇ ಉನ್ನತ ಸ್ಥಾನಕ್ಕೆ ಏರಿರುವುದರಿಂದ ತಮಗೆ ಅಭಿಮಾನ, ಆನಂದ ಉಂಟಾಗಿದೆ ಎಂದರು.

ರಾಜ್ಯದಲ್ಲಿ ಪ್ರಮುಖ ರಾಜಕೀಯ ಪಕ್ಷವಾಗಿ ಹೊರಹೊಮ್ಮಲು ಎಎಪಿಗೆ ಸಾಧ್ಯವೇ?

ಚುನಾವಣೆಗೆ ವರ್ಷ ಮೊದಲು...



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ನಾವು ಒಂದು ವರ್ಷದ ನಂತರದಲ್ಲಿ, ರಾಜ್ಯ ವಿಧಾನಸಭೆಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲು ನಡೆಯುವ ತುರುಸಿನ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಇರಲಿದ್ದೇವೆ. ರಾಜ್ಯದ ಮೂರೂ ಪ್ರಮುಖ ರಾಜಕೀಯ ಪಕ್ಷಗಳಲ್ಲಿ ಚುನಾವಣೆಗೆ ಅಗತ್ಯವಿರುವ ತಂತ್ರಗಾರಿಕೆಗಳು ಹಾಗೂ ಸಿದ್ಧತೆಗಳು ಸ್ಪಷ್ಟವಾಗಿ ಗೋಚರಿಸುತ್ತಿವೆ. ಬರಲಿರುವ ರಾಜ್ಯ ವಿಧಾನಸಭಾ ಚುನಾವಣೆಯನ್ನು ನಿರ್ದಿಷ್ಟ ಪರಿಪ್ರೇಕ್ಷ್ಯದಲ್ಲಿ ಇಟ್ಟು ನೋಡೋಣ.

ಸರಿಸುಮಾರು ನಾಲ್ಕು ದಶಕಗಳ ಅವಧಿಯಲ್ಲಿ (1985ರ ನಂತರ) ರಾಜ್ಯದ ಮತದಾರರು ಆಡಳಿತದಲ್ಲಿ ಇದ್ದ ಪಕ್ಷಕ್ಕೆ ಮತ್ತೆ ಸ್ಪಷ್ಟ ಬಹುಮತವನ್ನು ನೀಡಿಲ್ಲ. 2004 ಹಾಗೂ 2018ರ ಚುನಾವಣಾ ಫಲಿತಾಂಶವನ್ನು ಉಲ್ಲೇಖಿಸಿ ಕೆಲವರು ಈ ವಾದವನ್ನು ಪ್ರಶ್ನಿಸಬಹುದು. 2004ರಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟಾಗಿ ಸರ್ಕಾರ ರಚಿಸಿದವು. 1999ರಿಂದ 2004ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ಸಿಗೆ ಬಹುಮತ ಸಿಗಲಿಲ್ಲ. ಅತಿದೊಡ್ಡ ಪಕ್ಷದ ಸ್ಥಾನವೂ ಅದಕ್ಕೆ ಸಿಗಲಿಲ್ಲ. ಆದರೆ, ಚುನಾವಣೆಯ ನಂತರ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಅಧಿಕಾರಕ್ಕೆ ಮರಳಿತು.

ಇದೇ ಬಗೆಯ ಪರಿಸ್ಥಿತಿ 2018ರ ಚುನಾವಣೆಯ ನಂತರವೂ ಸೃಷ್ಟಿಯಾಯಿತು. ಆಗ ಬಿಜೆಪಿಯು ಅತಿ ದೊಡ್ಡ ಪಕ್ಷವಾಗಿತ್ತು. ಆದರೆ ಸದನದಲ್ಲಿ ಬಹುಮತ ಸಾಬೀತು ಮಾಡಲು ಸಾಧ್ಯವಾಗದ ಕಾರಣ ಬಿಜೆಪಿ ನೇತೃತ್ವದ ಸರ್ಕಾರ ಉರುಳಿತು. ಕಾಂಗ್ರೆಸ್ ಮತ್ತು ಜೆಡಿಎಸ್ ಒಟ್ಟಾಗಿ ಮೈತ್ರಿ ಸರ್ಕಾರ ರಚಿಸಿದವು. ಇಂದಿನ ವಿಧಾನಸಭೆಯ ಹಲವು ಶಾಸಕರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ, ಉಪಚುನಾವಣೆಯಲ್ಲಿ ಇನ್ನೊಂದು ಪಕ್ಷದಿಂದ ಸ್ಪರ್ಧಿಸಿ ಗೆದ್ದಿರುವುದು ಚುನಾಯಿತ ಪ್ರತಿನಿಧಿಗಳು ಯಾವ ಪಕ್ಷಕ್ಕೆ ಸೇರಿದವರು ಎಂಬುದರ ಹಿಂದೆ ಎಷ್ಟೆಲ್ಲ ಸಂಕೀರ್ಣತೆಗಳು ಇವೆ ಎನ್ನುವುದನ್ನು ಹೇಳುತ್ತದೆ. 2023ರಲ್ಲಿ ಕೂಡ 2004 ಹಾಗೂ 2018ರಲ್ಲಿ ಆಗಿದ್ದು ಮರುಕಳಿಸುತ್ತದೆಯೇ ಎಂಬುದು ರಾಜಕೀಯ ಊಹೆಗೆ ಸಂಬಂಧಿಸಿದ ವಿಚಾರ.

ಈ ಬಾರಿಯ ಚುನಾವಣೆಯಲ್ಲಿ ಪ್ರಮುಖ ಪಾಲುದಾರರು ಯಾರಾಗಿರುತ್ತಾರೆ? ಬಿಜೆಪಿ ಮತ್ತು ಕಾಂಗ್ರೆಸ್ ಪ್ರಮುಖ ಎದುರಾಳಿಗಳಾಗಿ, ಜೆಡಿಎಸ್ ಮೂರನೆಯ ಸ್ಪರ್ಧಿ ಆಗಿರುತ್ತದೆ. ದೆಹಲಿ ಮತ್ತು ಪಂಜಾಬ್‌ನಲ್ಲಿ ಯಶಸ್ಸು ಕಂಡಿರುವ ಎಎಪಿ ಕರ್ನಾಟಕದಲ್ಲಿ ಅಸ್ತಿತ್ವ ದಾಖಲಿಸುವ ಯತ್ನದಲ್ಲಿದೆ. ಪ್ರಮುಖ ರಾಜಕೀಯ ಪಕ್ಷಗಳ ತಂತ್ರಗಾರಿಕೆ ಏನಿರುತ್ತದೆ ಎಂಬುದನ್ನು ಗಮನಿಸುವುದು ಕೂಡ ಇಲ್ಲಿ ಮುಖ್ಯ.

ಆಡಳಿತ ಪಕ್ಷ ಬಿಜೆಪಿಯು ತನ್ನ ಕೆಲಸಗಳಿಗೆ ಅನುಮೋದನೆ ನೀಡಿ, ಇನ್ನೊಂದು ಅವಧಿಗೆ ಅವಕಾಶ ಕೊಡಿ ಎಂದು ಜನರ ಮುಂದೆ ತೆರಳಲಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ಸಿಗೆ ಸವಾಲು ಒಡ್ಡುವಲ್ಲಿ ಬಿಜೆಪಿ ಯಶಸ್ಸು ಕಂಡಿದೆ, ತನ್ನ ಕೆಲಸಗಳನ್ನು ಸಮರ್ಥಿಸಿಕೊಳ್ಳುವಲ್ಲಿ ಸೀಮಿತ ಯಶಸ್ಸನ್ನೂ ಕಂಡಿದೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಛಾಯೆ ಪಕ್ಷದಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಾಗ ಯಡಿಯೂರಪ್ಪ ಅವರು, 2023ರಲ್ಲಿ ಸ್ಪಷ್ಟ ಬಹುಮತದೊಂದಿಗೆ ಬಿಜೆಪಿಯನ್ನು ಅಧಿಕಾರಕ್ಕೆ ತರುವುದು ತಮ್ಮ ರಾಜಕೀಯ ಗುರಿ ಎಂದಿದ್ದರು.

ಇಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಕ್ಷ ಮತ್ತು ಸರ್ಕಾರದ ಮೇಲೆ ತಮ್ಮ ರಾಜಕೀಯ ಅಸ್ತಿತ್ವ ಹಾಗೂ ನಿಯಂತ್ರಣವನ್ನು ಇನ್ನಷ್ಟೇ ಗಟ್ಟಿ ಮಾಡಿಕೊಳ್ಳಬೇಕಿದೆ. ಸರ್ಕಾರ ಮಾಡಿದ ಒಳ್ಳೆಯ ಕೆಲಸಗಳನ್ನು ಮತದಾರರು ಯಾವ ರೀತಿಯಲ್ಲಿ ಸ್ವೀಕರಿಸಿದ್ದಾರೆ ಎಂಬುದರ ಆಧಾರದಲ್ಲಿ ಆಡಳಿತಾರೂಢ ಪಕ್ಷಗಳು ಜನಾದೇಶ ಪಡೆಯುತ್ತವೆ. ಉತ್ತರಪ್ರದೇಶ ಮತ್ತು ಮಣಿಪುರದಲ್ಲಿನ ಫಲಿತಾಂಶ ಇದಕ್ಕೆ ಒಂದು ಉದಾಹರಣೆ. ಹಾಗೆಯೇ, ಉತ್ತರಾಖಂಡ ಮತ್ತು ಗೋವಾದಲ್ಲಿ ಆದಂತೆ ರಾಜ್ಯ ಸರ್ಕಾರಗಳ ಕುರಿತಾಗಿನ ಅತೃಪ್ತಿಯನ್ನು ಕೇಂದ್ರ ಸರ್ಕಾರದ ಸಾಧನೆ ತೋರಿಸಿ (ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿದ್ದರೆ) ಮೆತ್ತಗಾಗಿಸಲೂ ಸಾಧ್ಯ ವಿದೆ. ಬಿಜೆಪಿಯು ಮೊದಲ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳುತ್ತದೆಯೋ ಎರಡನೆಯ ದಾರಿಯನ್ನೋ ಎಂಬುದು ಕುತೂಹಲಕರ.

ಮೊದಲ ಹಾದಿ ಆಯ್ಕೆ ಮಾಡಿಕೊಳ್ಳುತ್ತದೆ ಎಂದಾದರೆ, ಮುಂದಿನ ತಿಂಗಳುಗಳಲ್ಲಿ ಸರ್ಕಾರದ ಕೆಲಸಗಳ ಪ್ರಯೋಜನ ಜನರಿಗೆ ತಲುಪುವುದು ಅನುಭವಕ್ಕೆ ಬರುತ್ತದೆ. ಪಕ್ಷದಲ್ಲಿ ಕಾರ್ಯತಂತ್ರ ರೂಪಿಸುವವರು ಚುನಾವಣಾ ಅಜೆಂಡಾವನ್ನು ಅಭಿವೃದ್ಧಿಯಿಂದ ಜಾತಿ ಮತ್ತು ಧರ್ಮ ಆಧಾರಿತ ಧ್ರುವೀಕರಣದ ಕಡೆ ತಿರುಗಿಸಲು ಬಯಸುವರೇ ಎಂಬುದನ್ನು ಕೂಡ ಸೂಕ್ಷ್ಮವಾಗಿ ಅವಲೋಕಿಸಲಾಗುತ್ತದೆ.

ಕಾಂಗ್ರೆಸ್ಸಿಗೆ ಇದು ಅಸ್ತಿತ್ವದ ಹೋರಾಟವಾಗಲಿದೆ. ಈಚೆಗೆ ಕೊನೆಗೊಂಡ ಐದು ರಾಜ್ಯಗಳ ವಿಧಾನಸಭಾ ಚುನಾವಣೆ ನಂತರದಲ್ಲಿ ಸ್ಪಷ್ಟವಾದಂತಿರುವ ಪಕ್ಷದ ಕುಸಿತವನ್ನು ತಡೆಯುವುದಕ್ಕಾಗಿನ ಹೋರಾಟ ಇದಾಗಿರಲಿದೆ. ಪಕ್ಷದ ಪುನರುತ್ಥಾನಕ್ಕೆ ಕರ್ನಾಟಕವು ಪ್ರಮುಖವಾಗಲಿದೆ. ಇಲ್ಲಿ ಮೂರು ಅಂಶಗಳು ಮುಖ್ಯವಾಗಿವೆ. ಚುನಾವಣೆ ವೇಳೆ ಪಕ್ಷವು ಎಷ್ಟು ಪರಿಣಾಮಕಾರಿಯಾಗಿ ತನ್ನ ಅಜೆಂಡಾವನ್ನು ಜನರ ಮುಂದಿಡಲಿದೆ ಎಂಬುದು ಮುಖ್ಯ. ಇದುವರೆಗೆ ಪಕ್ಷವು ರಾಜ್ಯ ಮಟ್ಟದಲ್ಲಿ ಸಾರ್ವಜನಿಕ ಚರ್ಚೆಗಳು ನಡೆದಾಗ ಅದಕ್ಕೆ ಪ್ರತಿಕ್ರಿಯೆ ಮಾತ್ರ ನೀಡುತ್ತಿದೆಯೇ ವಿನಾ ತಾನೇ ಮುಂದಾಗಿ ಒಂದು ಚರ್ಚೆಯನ್ನು ಹುಟ್ಟುಹಾಕಿಲ್ಲ. ಪ್ರಮುಖ ವಿರೋಧ ಪಕ್ಷವಾಗಿ ಕಾಂಗ್ರೆಸ್ಸಿಗೆ ಆಡಳಿತಾರೂಢ ಪಕ್ಷದ ಸಾಧನೆಯ ಮೇಲೆ ಗಮನ ನೀಡಲು ಸಾಧ್ಯವಿದೆಯೇ?



ಎರಡನೆಯದಾಗಿ, ಪಕ್ಷವು ತನ್ನ ನಾಯಕರ ಮಟ್ಟದಲ್ಲಿ ತೋರಿಸಿರುವ ಒಗ್ಗಟ್ಟನ್ನು ಉಳಿಸಿಕೊಳ್ಳಲಿದೆಯೇ? ಈ ಒಗ್ಗಟ್ಟು ಪಕ್ಷದ ಎಲ್ಲ ಹಂತಗಳಿಗೆ ತಲುಪಬೇಕಿದೆ. ಪ್ರಮುಖ ವಿಚಾರಗಳ ಬಗ್ಗೆ ಪಕ್ಷವು ಒಂದಾಗಿ ಕಾರ್ಯತಂತ್ರ ಹೆಣೆಯಬೇಕಾಗುತ್ತದೆ, ಅದರ ಬಗ್ಗೆ ಒಂದೇ ದನಿಯಲ್ಲಿ ಮಾತನಾಡಬೇಕಾಗುತ್ತದೆ. ಮೂರನೆಯ ಅಂಶವೆಂದರೆ, ಪಕ್ಷದೊಳಗೆ ರಾಷ್ಟ್ರಮಟ್ಟದಲ್ಲಿ ನಿರ್ಮಾಣವಾಗಿರುವ ಅನಿಶ್ಚಿತ ಸ್ಥಿತಿಯು ಬೇಗನೆ ಬಗೆಹರಿದು, ದೃಢ ಹಾಗೂ ನಿರ್ಣಾಯಕ ನಾಯಕತ್ವ ಅಲ್ಲಿ ಮೂಡಲಿದೆಯೇ? ಕಾಂಗ್ರೆಸ್ ಪಕ್ಷವು ಬಿಜೆಪಿ ವಿರುದ್ಧ ಬಲವಾದ ಪ್ರಚಾರ ನಡೆಸಬೇಕು ಎಂದಾದರೆ ಇದು ಮುಖ್ಯವಾಗುತ್ತದೆ.

ಜೆಡಿಎಸ್ ಪಕ್ಷಕ್ಕೆ ತನ್ನ ಚುನಾವಣಾ ಕಾರ್ಯತಂತ್ರ ಏನಿರಬೇಕು ಎಂಬ ವಿಚಾರವಾಗಿ ಸ್ಪಷ್ಟತೆ ಇದ್ದಂತಿಲ್ಲ. ಪಕ್ಷವು ತನ್ನ ನಾಯಕರನ್ನು ಕಳೆದುಕೊಳ್ಳುತ್ತಿದೆ, ನಾಯಕರು ಕಾಂಗ್ರೆಸ್ ಅಥವಾ ಬಿಜೆಪಿ ಕಡೆ ಸಾಗುತ್ತಿದ್ದಾರೆ (ಕೆಲವರು ಎಎಪಿ ಕಡೆಗೂ ಹೆಜ್ಜೆ ಹಾಕಬಹುದು). ವಿಧಾನಸಭಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಾರದೆ ಇರಲಿ ಎಂಬುದು ಜೆಡಿಎಸ್‌ನ ಆಸೆ ಇದ್ದಿರಬಹುದು. ಆಗ ಜೆಡಿಎಸ್‌ಗೆ ಕಿಂಗ್‌ಮೇಕರ್ ಪಾತ್ರ ನಿಭಾಯಿಸಲು ಸಾಧ್ಯವಾಗುತ್ತದೆ.

ರಾಜಕೀಯದ ದಿಗಂತದಲ್ಲಿ ಮೂಡುತ್ತಿರುವ ನಾಲ್ಕನೆಯ ಪಕ್ಷದ ಕಡೆ ಈಗ ಗಮನ ಹರಿಸೋಣ. ಅದು ಆಮ್ ಆದ್ಮಿ ಪಕ್ಷ. ಪಂಜಾಬ್‌ನಲ್ಲಿ ಸಿಕ್ಕ ಯಶಸ್ಸಿನಿಂದ ಉತ್ತೇಜಿತವಾಗಿರುವ ಎಎಪಿ, ಅದೇ ರೀತಿ ಕರ್ನಾಟಕದಲ್ಲಿಯೂ ಯಶಸ್ಸು ಕಾಣಬಹುದು ಎಂಬ ನಿರೀಕ್ಷೆಯಲ್ಲಿದೆ. ಬಿಬಿಎಂಪಿ ಚುನಾವಣೆಯಲ್ಲಿ ಪಕ್ಷವು ಅದೃಷ್ಟ ಪರೀಕ್ಷೆಗೆ ಇಳಿಯಲಿದೆ. ನಗರದಲ್ಲಿ ಬಿಜೆಪಿ ನಂತರ ತಮ್ಮ ಪಕ್ಷವೇ ಮತದಾರರ ನೆಚ್ಚಿನ ಆಯ್ಕೆ ಎಂಬುದನ್ನು ಸಮೀಕ್ಷೆಯೊಂದು ಹೇಳಿದೆ ಎಂದು ಎಎಪಿ ನಾಯಕರು ಹೇಳುತ್ತಿದ್ದಾರೆ.

ಎಎಪಿ ಪಂಜಾಬ್‌ನಲ್ಲಿ ಗೆದ್ದಿದ್ದಕ್ಕೆ ಕಾರಣ ಎಂಟು ವರ್ಷ ತಳಮಟ್ಟದಲ್ಲಿ ನಡೆಸಿದ ಕೆಲಸಗಳು ಎಂಬುದನ್ನು ಮರೆಯಬಾರದು. 2014ರಲ್ಲಿ ಎಎಪಿ ಪಕ್ಷದಿಂದ ಸ್ಪರ್ಧಿಸಿ, ಲೋಕಸಭೆ ಪ್ರವೇಶಿಸಿದ ಮೊದಲ ನಾಲ್ಕು ಜನ ಪಂಜಾಬ್‌ನವರು ಎಂಬುದನ್ನೂ ಗಮನಿಸಬೇಕು. ಪಂಜಾಬ್‌ನಲ್ಲಿ 2017ರ ವಿಧಾನಸಭಾ ಚುನಾವಣೆ ವೇಳೆ ಪಕ್ಷವು ಜನರ ಗಮನ ಸೆಳೆದಿತ್ತು. ಕರ್ನಾಟಕದಲ್ಲಿ ಇಂತಹ ಬೆಳವಣಿಗೆಗಳು ಕಂಡುಬಂದಿವೆಯೇ? ಪಂಜಾಬ್‌ನಲ್ಲಿ (ಮತ್ತು ದೆಹಲಿಯಲ್ಲಿ) ಕಂಡ ಯಶಸ್ಸನ್ನು ಮಾತ್ರವೇ ಆಧರಿಸಿ ಕರ್ನಾಟಕದಲ್ಲಿಯೂ ಯಶಸ್ಸು ಪಡೆಯುವ ಭರವಸೆಯನ್ನು ಅವರು ಇರಿಸಿಕೊಳ್ಳಬಹುದೇ? ರಾಜ್ಯದಲ್ಲಿ ಅವರಿಗೆ ಕೆಲವು ನಾಯಕರು ಇದ್ದಾರಾದರೂ, ಅವರು ನಾಗರಿಕರ ಪರ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರಾದರೂ, ರಾಜ್ಯದ ರಾಜಕೀಯದಲ್ಲಿ ಪ್ರಮುಖ ಪಕ್ಷವಾಗಿ ಹೊರಹೊಮ್ಮಲು ಅಷ್ಟು ಸಾಕಾಗುತ್ತದೆಯೇ?

ಮುಂದಿನ ಒಂದು ವರ್ಷದಲ್ಲಿ ಇವೆಲ್ಲ ಅಂಶಗಳು ಪ್ರಧಾನವಾಗಿ ಗೋಚರಿಸಲಿವೆ. ಕರ್ನಾಟಕದ ರಾಜಕೀಯದಲ್ಲಿ ಇದು ಆಕರ್ಷಕ ಕಾಲಘಟ್ಟವಾಗಲಿದೆ.

ಚುರುಮುರಿ



ಸೇತುವೆ ಕಳ್ಳರು

• ಆನಂದ

ಲಂಚತಂತ್ರದ ಒಂದು ಕತೆ ಹೇಳ್ತೀನಿ ಕೇಳಿ ಎಂದಳು ಹೆಂಡತಿ. ಪಂಚತಂತ್ರ ಅಲ್ವಾ? ಎಂದೆ. ಅಲ್ಲಾರಿ, ಲಂಚತಂತ್ರಾನೆ ಎಂದು ಶುರು ಮಾಡಿದಳು.

ವಿದೇಶದಿಂದ ದೆಹಲಿಗೆ ಬಂದಿದ್ದ ಮಿನಿಸ್ಟರ್, ನಮ್ಮ ಮಂತ್ರಿಗಳ ಮನೆಗೆ ಔತಣಕೂಟಕ್ಕೆ ಹೋಗಿದ್ದರು. ಮಂತ್ರಿಗಳ ಮನೆ ನೋಡಿ ಮಿನಿಸ್ಟರ್ ಬೆರಗಾದರು. ಕಣ್ಣು ಕೋರೈಸುವಂತಿತ್ತು. ‘ಇದನ್ನು ಹೇಗೆ ಕಟ್ಟಿಸಲು ಸಾಧ್ಯವಾಯಿತು?’ ಎಂದು ಮಿನಿಸ್ಟರ್ ತಡೆಯಲಾಗದೆ ಕೇಳೇಬಿಟ್ಟರು. ಅದಕ್ಕೆ ಮಂತ್ರಿಗಳು ಏನೂ ಉತ್ತರಿಸದೆ ಅವರನ್ನು ಬೆಡ್‌ರೂಂಗೆ ಕರೆದೊಯ್ದು ಕಿಟಕಿ ಬಳಿ ನಿಲ್ಲಿಸಿ, ‘ಅಲ್ಲೊಂದು 35 ಅಂತಸ್ತಿನ ಕಟ್ಟಡ ಕಾಣುತ್ತದೆಯೇ?’ ಎಂದರು. ‘ಹೌದು’ ಎಂದರು ಮಿನಿಸ್ಟರ್. ‘20 ಪರ್ಸೆಂಟ್’ ಎಂದರು ಮಂತ್ರಿ. ಅವರನ್ನು ಇನ್ನೊಂದು ಬೆಡ್‌ರೂಂಗೆ ಕರೆದೊಯ್ದು ಕಿಟಕಿಯಿಂದ ಭವ್ಯ ಮಾಲ್ ತೋರಿಸಿ ‘ಅದರಿಂದ 15 ಪರ್ಸೆಂಟ್’ ಎಂದರು. ಮತ್ತೊಂದು ಬೆಡ್‌ರೂಂಗೆ ಕರೆದೊಯ್ದು ದೂರದಲ್ಲಿದ್ದ ಕಾರ್ಖಾನೆಯ ಕಟ್ಟಡ ತೋರಿಸಿ ‘20 ಪರ್ಸೆಂಟ್’ ಎಂದರು.

ಮಿನಿಸ್ಟರ್‌ಗೆ ಅರ್ಥವಾಯಿತೇ? ನಾನು ಕೇಳಿದೆ.

ಅರ್ಥವಾದಂತೆ ತಲೆ ಆಡಿಸಿ ಔತಣ ಮುಗಿಸಿ ಹೋದರು. ಕೆಲವು ವರ್ಷಗಳ ನಂತರ ನಮ್ಮ ಮಂತ್ರಿಗಳು ಅವರ ದೇಶಕ್ಕೆ ಹೋದಾಗ, ಇದೇ ಮಿನಿಸ್ಟರ್ ತಮ್ಮ ಮನೆಯಲ್ಲಿ ಔತಣಕೂಟ ಏರ್ಪಡಿಸಿದ್ದರು. ಮನೆ ನೋಡಿ ಮಂತ್ರಿಗಳು ಹುಬ್ಬೇರಿಸಿದಾಗ ಮಿನಿಸ್ಟರ್ ಸದ್ದಿಲ್ಲದೆ ಅವರನ್ನು ಬೆಡ್‌ರೂಂಗೆ ಕರೆದೊಯ್ದು ‘ಅಲ್ಲೊಂದು ದೊಡ್ಡ ಸೇತುವೆ ಕಾಣಿಸುತ್ತಿದೆಯೇ ನಿಮಗೆ?’ ಎಂದು ಕೇಳಿದರು. ‘ಇಲ್ಲವಲ್ಲ!’ ಎಂದರು ಮಂತ್ರಿಗಳು. ‘100 ಪರ್ಸೆಂಟ್’ ಎಂದರು ಮಿನಿಸ್ಟರ್. ಅಷ್ಟೇ ಕತೆ ಎಂದಳು ಹೆಂಡತಿ.

ಅದು ಈಗ್ಯಾಕೆ? ಎಂದೆ ಅರ್ಥವಾಗದೆ.

ಬಿಹಾರದಲ್ಲಿ ಕಳ್ಳರು ಉಕ್ಕಿನ ಸೇತುವೆಯನ್ನೇ ಬಿಚ್ಚಿಕೊಂಡು ಹೋದ ಸುದ್ದಿ ಪೇಪರ್‌ನಲ್ಲಿ ಓದಿದಾಗ ಆ ಕತೆ ನೆನಪಿಗೆ ಬಂತು ಎಂದಳು.

ಆ ಗ್ಯಾಂಗ್ ಲೀಡರ್ ಶಾಸಕ ಆಗ್ತಾನೆ ಎಂದೆ.

ಇನ್ನೂ ಆಗಿಲ್ಲ ಅಂತೀರಾ?

ಇಂದಿನ ಶಾಸಕನೇ ನಾಳಿನ ಮಂತ್ರಿ ಎಂದು ಮಾತು ಮುಗಿಸಿದೆ.

ಸಂಗತ

ಮರಳಬೇಕಿದೆ ಕಲಿಕೆಯ ಹಳಿಗೆ

ಕೋವಿಡ್ ನಂತರದ ತರಗತಿಯು ಸವಾಲಿನದ್ದಾಗಿರುವುದರಿಂದ ತರಗತಿಯ ವಾತಾವರಣವನ್ನು ಹೆಚ್ಚು ಚಲನಶೀಲವೂ ನಮ್ಯವೂ ಆಗುವಂತೆ ರೂಪಿಸಬೇಕಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಕೋವಿಡ್ ಕಾರಣದಿಂದ ವಿವಿಧ ಉದ್ಯಮಗಳಲ್ಲಿ ಉಂಟಾಗಿರುವ ನಷ್ಟದಿಂದ ಚೇತರಿಸಿಕೊಳ್ಳಲು ಅನೇಕ ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ. ಭವಿಷ್ಯದ ಜನಾಂಗವನ್ನು ರೂಪಿಸುವ ಶಿಕ್ಷಣ ಕ್ಷೇತ್ರದಲ್ಲಿ ಉಂಟಾಗಿರುವ ಸಮಸ್ಯೆಯ ನಿವಾರಣೆಗಾಗಿ ರಾಜ್ಯದಲ್ಲಿ ‘ಕಲಿಕಾ ಚೇತರಿಕೆ’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕೋವಿಡ್ ಕಾಲದ ಎರಡು ವರ್ಷಗಳಲ್ಲಿ ಬೋಧನಾ- ಕಲಿಕಾ ಚಟುವಟಿಕೆಗಳು ಆನ್‌ಲೈನ್ ಮೂಲಕ ಹೆಚ್ಚಿನ ಅವಧಿಯಲ್ಲಿ ಹಾಗೂ ಸ್ವಲ್ಪ ಕಾಲ ನೇರವಾಗಿ ನಡೆದಿದ್ದವು. ವಿದ್ಯಾರ್ಥಿಗಳಲ್ಲಿ ಕಲಿಕೆಯ ನಷ್ಟವು ತೀವ್ರ ಸ್ವರೂಪದಲ್ಲಿ ಆಗಿರುವುದನ್ನು ಅನೇಕ ಸಮೀಕ್ಷೆಗಳು ತಿಳಿಸಿವೆ. ಪೋಷಕರು ಮತ್ತು ಶಿಕ್ಷಕರು ಮಕ್ಕಳನ್ನು ಕಲಿಕೆಯ ಹಳಿಗೆ ಮರಳಿಸುವ ಬಗೆ ಹೇಗೆ ಎಂಬುದು ತಿಳಿಯದೆ ಕಂಗಾಲಾಗಿದ್ದಾರೆ.

ಹೆಚ್ಚಿನ ಮಕ್ಕಳಲ್ಲಿ ಓದುವ, ಬರೆಯುವ ಅಭ್ಯಾಸ ತಪ್ಪಿಹೋಗಿದೆ. ಶಿಕ್ಷಕರು ಆನ್‌ಲೈನ್ ಮೂಲಕ ಪಾಠದ ಟಿಪ್ಪಣಿ, ವಿಡಿಯೊ ಕಳುಹಿಸುವ ಕಾರಣ ‘ನಾನು ಬರೆಯುವ ಅಗತ್ಯವಿದೆಯೇ? ಅದರಿಂದೇನು ಪ್ರಯೋಜನ?’ ಎಂಬಂಥ ಪ್ರಶ್ನೆಗಳನ್ನು ನಗರ ಪ್ರದೇಶದ ಅನೇಕ ಮಕ್ಕಳು ಕೇಳುತ್ತಿರುವುದು ಪೋಷಕರಲ್ಲಿ ಗಾಬರಿ, ಆತಂಕಗಳನ್ನು ಹೆಚ್ಚಿಸುತ್ತಿದೆ. ಇನ್ನು ಗ್ರಾಮೀಣ ಪ್ರದೇಶದ ಅವಕಾಶವಂಚಿತ ಮಕ್ಕಳಿಗೆ ಆನ್‌ಲೈನ್ ಮೂಲಕ ಕಲಿಯುವ ಸಂಪನ್ಮೂಲಗಳ ಅಲಭ್ಯತೆ ಮತ್ತು ಪೋಷಕರ ಶೈಕ್ಷಣಿಕ ಬೆಂಬಲವಿಲ್ಲದ ಕಾರಣ ಕಲಿಕಾ ಅಂತರ ಇನ್ನಷ್ಟು ಹೆಚ್ಚಾಗಿದೆ.

ಸಾಮಾನ್ಯವಾಗಿ ಬೇಸಿಗೆ ರಜೆಯ ಬಿಡುವಿನ ಅವಧಿಯಲ್ಲಿ ವಿದ್ಯಾರ್ಥಿಗಳಲ್ಲಿ ಉಂಟಾಗಿರಬಹುದಾದ ಕಲಿಕಾ ನಷ್ಟವನ್ನು ಸರಿದೂಗಿಸಲು ಜೂನ್‌ನಲ್ಲಿ ಹಿಂದಿನ ತರಗತಿಯ ಮೂಲ ಕಲಿಕಾಂಶಗಳನ್ನು ಒಳಗೊಂಡಂತೆ ಸೇತುಬಂಧ ಕಾರ್ಯಕ್ರಮವನ್ನು ಮಾಡಲಾಗುತ್ತಿತ್ತು. ಆದರೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ತೀವ್ರ ಸ್ವರೂಪದ ಕಲಿಕಾ ನಷ್ಟವನ್ನು ಸರಿದೂಗಿಸಲು ಒಂದು ತಿಂಗಳ ಸೇತುಬಂಧ ಪರಿಣಾಮಕಾರಿಯಾಗುವುದಿಲ್ಲ.

ಓದು, ಬರಹ, ಲೆಕ್ಕಾಚಾರದ ಮೂಲ ಕೌಶಲಗಳು ಮತ್ತು ಹಿಂದಿನ ಎರಡು ವರ್ಷಗಳ ಕಲಿಕೆಯ ಪ್ರಮುಖ ಅಂಶಗಳ ಜೊತೆ ಆಯಾ ತರಗತಿಯ ಕಲಿಕಾಂಶಗಳನ್ನು ಬೆಸೆದು ರಾಜ್ಯದಲ್ಲಿ ‘ಕಲಿಕಾ ಚೇತರಿಕೆ’ ಕಾರ್ಯಕ್ರಮವನ್ನು ವಿಶಿಷ್ಟವಾಗಿ ರೂಪಿಸಲಾಗಿದೆ. ಕಲಿಕೆಯ ತೊಂದರೆಗಳನ್ನು ನಿವಾರಿಸಿಕೊಂಡು ಎಲ್ಲಾ ವಿದ್ಯಾರ್ಥಿಗಳು ಬಹಳಷ್ಟು ಸಮಯ ವಿನಿಯೋಗಿಸಿ ಇಡೀ ವರ್ಷ ಆರಾಮಾಗಿ ಕಲಿಯುವಂತೆ ಸಿದ್ಧಪಡಿಸಲಾಗಿದೆ. ಉದಾಹರಣೆಗಳು, ಚಿತ್ರಗಳು ಹಾಗೂ ಪ್ರಾಯೋಗಿಕ ಚಟುವಟಿಕೆಗಳನ್ನು ಹೊಂದಿದ ಕಲಿಕಾ ಹಾಳೆಗಳನ್ನು ವಿನ್ಯಾಸಗೊಳಿಸಲಾಗಿದೆ.

ಸಾಮಾನ್ಯವಾಗಿ ವಿದ್ಯಾರ್ಥಿಗಳು ಪಠ್ಯದ ಮಾಹಿತಿಯನ್ನು ನೆನಪಿನಲ್ಲಿರಿಸಿಕೊಂಡು, ಪರೀಕ್ಷೆಯಲ್ಲಿ ಬರೆದು ‘ಯಶ’ ಸಾಧಿಸುವ ರೀತಿಯಲ್ಲಿ ಶಿಕ್ಷಣ ವ್ಯವಸ್ಥೆ ರೂಪುಗೊಂಡಿದೆ. ಆದರೆ ಕಲಿಕಾ ಚೇತರಿಕೆ ಕಾರ್ಯಕ್ರಮದಲ್ಲಿ ಕಲಿಕಾಂಶಗಳನ್ನು ಮಾಹಿತಿಯ ರೂಪದಲ್ಲಿ ಕಲಿಸದೆ ಹಿಂದಿನ ತರಗತಿಗಳ ಕಲಿಕಾಂಶಗಳ ಜೊತೆ ಆಯಾ ತರಗತಿಯ ಕಲಿಕಾಂಶವನ್ನು ಸೇರಿಸಿಕೊಂಡು ವಿದ್ಯಾರ್ಥಿಗಳಲ್ಲಿ ಅನ್ವಯಿಕ ಕಲಿಕೆ ಆಗುವಂತೆ ಕಲಿಕಾ ಸಂಪನ್ಮೂಲಗಳನ್ನು ವಿನ್ಯಾಸಗೊಳಿಸಲಾಗಿದೆ. ಉದಾಹರಣೆಗೆ, 7, 6 ಮತ್ತು 5ನೇ ತರಗತಿಯ ಗಣಿತ ಪಠ್ಯಪುಸ್ತಕದಲ್ಲಿ ಕ್ರಮವಾಗಿ 15, 14 ಮತ್ತು 20 ಅಧ್ಯಾಯಗಳಿವೆ. ಮುಂದಿನ ಶೈಕ್ಷಣಿಕ ವರ್ಷದಲ್ಲಿ 7ನೇ ತರಗತಿಯಲ್ಲಿ ಕಲಿಯುವ ವಿದ್ಯಾರ್ಥಿಯು ಮೂರೂ ತರಗತಿಗಳ ಗಣಿತ ಪಠ್ಯಪುಸ್ತಕಗಳ 49 ಅಧ್ಯಾಯಗಳನ್ನು ಕಲಿಯಲು ಸಾಧ್ಯವಿಲ್ಲ. ಈ ಕಾರಣದಿಂದ ಮೂರೂ ತರಗತಿಗಳಲ್ಲಿನ ಸಾಮಾನ್ಯ ಪರಿಕಲ್ಪನೆಗಳನ್ನು ಬೆಸೆದು, ಗಣಿತದ ಮೂಲ ಕೌಶಲಗಳನ್ನು ಅನ್ವಯಿಕವಾಗಿ ಕಲಿಸುವ ಯೋಜನೆ ರೂಪಿಸಲಾಗಿದೆ.

ಈ ರೀತಿ ಆದಲ್ಲಿ 7ನೇ ತರಗತಿಯಲ್ಲಿನ ಎಲ್ಲಾ ಅಧ್ಯಾಯಗಳನ್ನು ವಿದ್ಯಾರ್ಥಿ ಕಲಿಯುವುದು ಹೇಗೆ ಎಂಬ ಪ್ರಶ್ನೆ ಸಹಜ. ಆಯಾ ತರಗತಿಯ ಪಠ್ಯಪುಸ್ತಕದ ಮಾಹಿತಿಯನ್ನು ಕಲಿಸಬೇಕೆಂದರೆ ಹಿಂದಿನ ತರಗತಿಗಳ ಮೂಲಪರಿಕಲ್ಪನೆಗಳ ಸ್ಪಷ್ಟತೆ ಇಲ್ಲದೆ ಯಾವುದನ್ನೂ ವಿದ್ಯಾರ್ಥಿ ಕಲಿಯಲಾರ. ಆಯಾ ತರಗತಿಗಳ ಪಠ್ಯಪುಸ್ತಕಗಳು ಪೂರಕ ಮತ್ತು ಹೆಚ್ಚುವರಿ ಸಂಪನ್ಮೂಲಗಳಾಗಿ ವಿದ್ಯಾರ್ಥಿಗಳ ಉಪಯೋಗಕ್ಕೆ ಬರಲಿವೆ.



ಶಿಕ್ಷಕರ ಕೈಪಿಡಿ ಹಾಗೂ ಕಲಿಕಾ ಹಾಳೆಗಳನ್ನು ಮುದ್ರಿಸಿ, ವಿತರಿಸಲಾಗುತ್ತಿದೆ. ಕಲಿಕಾ ಚೇತರಿಕೆ ಕುರಿತು ಒಂದೂವರೆ ಲಕ್ಷಕ್ಕೂ ಅಧಿಕ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ರಾಜ್ಯದ ಈ ವಿನೂತನ ಮತ್ತು ಬೃಹತ್ ಪ್ರಯೋಗವು ಕೇಂದ್ರದ ಗಮನ ಸೆಳೆದಿದ್ದು, ಈ ಮಾದರಿಯನ್ನು ಇತರ ರಾಜ್ಯಗಳೂ ಅಳವಡಿಸಿಕೊಳ್ಳುವ ಬಗ್ಗೆ ಚರ್ಚೆ, ಚಿಂತನೆ ನಡೆದಿದೆ.

ಸಾಮಾನ್ಯವಾಗಿ ವಿವಿಧ ಕಲಿಕಾ ಹಂತಗಳು ಹಾಗೂ ವಿವಿಧ ಶೈಲಿಗಳಲ್ಲಿ ಕಲಿಯುವ ವಿದ್ಯಾರ್ಥಿಗಳು ಒಂದು ತರಗತಿಯಲ್ಲಿ ಇರುತ್ತಾರೆ. ಕೋವಿಡ್ ನಂತರದ ಸನ್ನಿವೇಶದಲ್ಲಿನ ತರಗತಿಯಲ್ಲಿ ಈ ವೈವಿಧ್ಯ ಇನ್ನಷ್ಟು ಹೆಚ್ಚಾಗಿರುವ ಕಾರಣ ಶಿಕ್ಷಕರ ಪಾತ್ರವು ಮತ್ತಷ್ಟು ಸವಾಲಿನದ್ದಾಗಿರಲಿದೆ. ಈ ಹಿನ್ನೆಲೆಯಲ್ಲಿ ತರಗತಿಯ ವಾತಾವರಣವು ಹೆಚ್ಚು ಚಲನಶೀಲವೂ ಮತ್ತು ನಮ್ಯವೂ ಆಗುವಂತೆ ರೂಪಿಸಬೇಕಿದೆ.

ಶಿಕ್ಷಕರು ಮಕ್ಕಳಲ್ಲಿ ಕಲಿಕೆಯ ಕುರಿತಂತೆ ಆತುರ ತೋರದೆ ಅವರೆಡೆ ಪ್ರೀತಿ, ವಿಶ್ವಾಸ, ಅನುಭೂತಿ ತೋರಬೇಕು. ಪೋಷಕರೂ ಇದಕ್ಕೆ ಸಹಕರಿಸಬೇಕು. ವಿದ್ಯಾರ್ಥಿಗಳು ಕಲಿಕಾ ಚೇತರಿಕೆಯ ಹಾದಿಯಲ್ಲಿ ಸಾಗಲು ಶಿಕ್ಷಕರು ಮತ್ತು ಪೋಷಕರ ಜೊತೆ ಶಿಕ್ಷಣಾಸಕ್ತರು, ಸ್ವಯಂಸೇವಾ ಸಂಸ್ಥೆಗಳನ್ನೂ ತೊಡಗಿಸಿಕೊಂಡು, ಶಾಲೆಗಳು ಯೋಜಿಸಿ, ಕಾರ್ಯಪ್ರವೃತ್ತ ಆದಲ್ಲಿ ಪರಿಣಾಮಕಾರಿಯಾಗುತ್ತದೆ.

ವಾಚಕರ ವಾಣಿ

ಪ್ರತ್ಯೇಕತಾ ಸಿದ್ಧಾಂತದ ಸ್ಪಷ್ಟ ಉಲ್ಲಂಘನೆ

‘ಪವಿತ್ರ ಬಂಧಕ್ಕೆ ಅತ್ಯಾಚಾರ ಆರೋಪದ ನರಳಿಕೆ ಏಕೆ?’ ಎಂಬ ವಕೀಲ ಸಿ.ಎಚ್.ಹನುಮಂತರಾಯ ಅವರ ಅಭಿಪ್ರಾಯ (ಪ್ರ.ವಾ., ಏ. 9) ಪ್ರಸ್ತುತತೆಗೆ ಸ್ಪಂದಿಸುವಂತಿದೆ. ವೈವಾಹಿಕ ಅತ್ಯಾಚಾರವನ್ನು ಶಿಕ್ಷಾರ್ಹವಾಗಿಸಬೇಕೆಂಬ ನ್ಯಾಯಾಲಯದ ಮಾತು ನಿಸ್ಸಂದೇಹವಾಗಿ ಭಾರತೀಯ ಕೌಟುಂಬಿಕ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಪಾಶ್ಚಾತ್ಯ ಸಾಮಾಜಿಕ ಮೌಲ್ಯಗಳತ್ತ ವಾಲುತ್ತಿರುವ ನಮ್ಮ ಯುವಜನತೆ, ಈ ರೀತಿಯ ಆದೇಶಗಳು ಒಂದು ವೇಳೆ ಶಾಸನಗಳಾದರೆ ಅವುಗಳ ಅಡಿಯಲ್ಲಿ ಸಾಂಸಾರಿಕ ಬದುಕನ್ನು ವಿಘಟನೆಯತ್ತ ಕೊಂಡೊಯ್ಯಲು ಹಿಂಜರಿಯುವುದಿಲ್ಲ.

ನಿಜ, ಮಹಿಳೆಯು ಗಂಡನ ಸ್ವತ್ತಲ್ಲ ಮತ್ತು ದಾಸಿಯೂ ಅಲ್ಲ. ಆದರೆ ಕುಟುಂಬದೊಳಗಿನ ಖಾಸಗಿ ಕ್ಷಣಗಳನ್ನು ನ್ಯಾಯಾಲಯದ ಮುಂದೆ ಸಾದರಪಡಿಸುವುದು ಎಷ್ಟರಮಟ್ಟಿಗೆ ಸರಿ ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ. ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ರುಜುವಾತುಪಡಿಸಲು ಸಾಧ್ಯವಾಗದ ಇಂತಹ ಸನ್ನಿವೇಶದಲ್ಲಿ ಪುರುಷರೇ ನ್ಯಾಯದ ಕಟಕಟೆಯಲ್ಲಿ ಅಪರಾಧಿಗಳಾಗುವ ಸಂಭವ ಅಧಿಕವಾಗಿರುತ್ತದೆ. ವೈವಾಹಿಕ ಬದುಕಿನ ಪಾವಿತ್ರ್ಯವನ್ನು ಕಾಪಾಡುವ ದೃಷ್ಟಿಯಿಂದ ಮತ್ತು ನಾಗರಿಕರ ಖಾಸಗಿತನದೊಳಗೆ ಹಸ್ತಕ್ಷೇಪ ಮಾಡದಿರುವ ಉದ್ದೇಶದಿಂದ ಶಾಸಕಾಂಗವು ತರದಿರುವ ತಿದ್ದುಪಡಿಯನ್ನು ನ್ಯಾಯಾಂಗವು ಅಪೇಕ್ಷಿಸುತ್ತಿರುವುದು ಅಧಿಕಾರ ಪ್ರತ್ಯೇಕತಾ ಸಿದ್ಧಾಂತದ ಸ್ಪಷ್ಟ ಉಲ್ಲಂಘನೆ ಆಗುತ್ತದೆ.

ಸಮಾನತೆಯ ಹಕ್ಕು ಮಹಿಳೆ ಮತ್ತು ಪುರುಷರಿಬ್ಬರಿಗೂ ಅನ್ವಯವಾಗುತ್ತದೆ. ಈಗಾಗಲೇ ಹಗುರವಾದ ಕಾರಣಗಳಿಗೇ ವಿಚ್ಛೇದನದ ಮೊರೆ ಹೋಗುತ್ತಿರುವ ಕುಟುಂಬಗಳು ಮುಂದೆ ಕ್ರಮಿಸಲಿರುವ ದಾರಿಯನ್ನು ನೆನೆದರೆ ಭಯವಾಗುತ್ತದೆ. ‘ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ’ ಎಂಬ ಶರಣರ ನುಡಿ ದಾರಿದೀಪವಾಗಬೇಕಿದೆ.

ಮೋದೂರು ಮಹೇಶಾರಾಧ್ಯ, ಹುಣಸೂರು

ಭಾಷೆ ಜೊತೆ ಚೆಲ್ಲಾಟ ಸಲ್ಲದು

ಹಿಂದಿ ಬಳಕೆ ಕುರಿತಂತೆ ಕೇಂದ್ರ ಗೃಹ ಸಚಿವರ ಹೇಳಿಕೆ ಆಶ್ಚರ್ಯಕರವೇನಲ್ಲ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಒಳಗಡೆಯೇ ಹಿಂದಿ ಹೊರತುಪಡಿಸಿ ಇತರ ದೇಶಿ ಭಾಷೆಗಳನ್ನು ನಿರ್ಲಕ್ಷಿಸುವ ಹುನ್ನಾರ ಅಡಗಿತ್ತು. ಅದರಲ್ಲಿ ಪ್ರಾಥಮಿಕ ಹಂತದಲ್ಲಿ ಮಾತೃಭಾಷೆ, ರಾಜ್ಯಭಾಷೆ ಅಥವಾ ಸ್ಥಳೀಯ ಭಾಷೆಗಳಲ್ಲಿ ಶಿಕ್ಷಣ ಆಗಬೇಕು ಅನ್ನುವುದನ್ನು ಕಡ್ಡಾಯಗೊಳಿಸದೇ ಐಚ್ಛಿಕವಾಗಿರಿಸಿ ದೇಶಿ ಭಾಷೆಗಳಿಗೆ ಬರೆ ಎಳೆಯಲಾಗಿದೆ.

ಇತ್ತೀಚೆಗೆ ಹೈಕೋರ್ಟ್ ಮುಂದೆ ಕಾಲೇಜುಗಳಲ್ಲಿ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸಿದುದರ ವಿರುದ್ಧ ಸಂಸ್ಕೃತ ಸಂಸ್ಥೆಯವರು ಸಲ್ಲಿಸಿದ ರಿಟ್ ಅರ್ಜಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಕೂಡಾ ದೇಶಿ ಭಾಷೆಗಳ ಕುರಿತು ಕೇಂದ್ರದ ಉಪೇಕ್ಷೆಯ ಮನೋಭಾವ ವ್ಯಕ್ತವಾಗಿದೆ.

ಕಲಿಕಾ ಮಾಧ್ಯಮ ಕುರಿತ 2014ರ ಸುಪ್ರೀಂ ಕೋರ್ಟ್ ತೀರ್ಪಿನ ನಂತರ ಸಂವಿಧಾನ ತಿದ್ದುಪಡಿ ಮೂಲಕ ಪ್ರಾಥಮಿಕ ಹಂತದಲ್ಲಿ ಆಯಾ ರಾಜ್ಯಭಾಷೆ, ಮಾತೃಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಕಲಿಕೆಯನ್ನು ಕಡ್ಡಾಯ ಮಾಡಲು ಕೇಂದ್ರಕ್ಕೆ ಬಹಳಷ್ಟು ಕಾಲಾವಕಾಶ ಇತ್ತು. ಹಾಗೆ ಮಾಡದಿರುವುದರ ಹಿಂದೆ, ಹಿಂದಿ ಭಾಷೆಯನ್ನು ಮುನ್ನೆಲೆಗೆ ತರುವ ಸಂಚು ಇದ್ದುದಾಗಿ ಕಂಡುಬರುತ್ತದೆ. ಇದನ್ನು ಎಲ್ಲ ಹಿಂದಿಯೇತರ ರಾಜ್ಯಗಳು ಸಾಮೂಹಿಕವಾಗಿ ವಿರೋಧಿಸಿ, ಎದುರಿಸದಿದ್ದರೆ ಇತರ ಭಾಷೆಗಳಿಗೆ ಉಳಿಗಾಲವಿಲ್ಲ. ಭಾಷೆಯಂಥ ಜನರ ಭಾವನಾತ್ಮಕ ವಿಷಯದೊಂದಿಗೆ ಸರ್ಕಾರಗಳು ಚೆಲ್ಲಾಟವಾಡುವುದನ್ನು ನಿಲ್ಲಿಸಬೇಕು. ಎಲ್ಲ ಭಾಷೆಗಳಿಗೆ ಸಮಾನ ಗೌರವ ನೀಡುವುದನ್ನು ಕಲಿಯಬೇಕು. ಅಗತ್ಯಕ್ಕೆ ತಕ್ಕಂತೆ ಜನ ಬೇರೆ ಭಾಷೆಗಳನ್ನು ಕಲಿತೇ ಕಲಿಯುತ್ತಾರೆ.

ವೆಂಕಟೇಶ ಮಾಚಕನೂರ, ಧಾರವಾಡ

ಇಲ್ಲೊಂದು ಜವಾಬ್ದಾರಿಯುತ ಸರ್ಕಾರವಿದ್ದರೆ...

ಧಾರವಾಡದ ಆಂಜನೇಯನ ದೇವಸ್ಥಾನದ ಆವರಣದಲ್ಲಿದ್ದ ಮುಸ್ಲಿಮರ ಅಂಗಡಿಗಳ ಮೇಲೆ ಶ್ರೀರಾಮ ಸೇನೆ ಎಂಬ ಸಂಘಟನೆಯೊಂದರ ಕಾರ್ಯಕರ್ತರು ದಾಳಿ ಮಾಡಿ ಅವನ್ನು ಧ್ವಂಸ ಮಾಡಿದ ಸುದ್ದಿ ಪ್ರಕಟವಾಗಿದೆ (ಪ್ರ.ವಾ., ಏ. 10). ಇದರ ಹಿಂದಿನ ಕಾರಣಗಳು ಮತ್ತು ಮುಂದಿನ ಪರಿಣಾಮಗಳ ಬಗ್ಗೆ ನಿರಂತರ ಚರ್ಚೆ ಮಾಡುತ್ತಾ ಹೋಗಬಹುದು. ಅದಕ್ಕೆ ಬೇಕಾದ ಬುದ್ಧಿ- ಕೌಶಲವುಳ್ಳವರು ನಮ್ಮಲ್ಲಿ ಬೇಕಾದಷ್ಟು ಜನರಿದ್ದಾರೆ. ಇಂತಹ ದಾಳಿ- ಧ್ವಂಸಗಳು ಧೈರ್ಯದಿಂದ ನಡೆಯುವುದು ಬಹುಶಃ ಇವರ ಈ ಕೌಶಲವನ್ನು ನಂಬಿಯೇ. ಆದರೆ ಅದು ಇಲ್ಲೊಂದು ಕಾನೂನು ಮತ್ತು ಸುವ್ಯವಸ್ಥೆಯ ಪಾಲನೆಗೆ ಸಂವಿಧಾನಾತ್ಮಕವಾಗಿ ಬದ್ಧವಾದ ಸರ್ಕಾರವಿದೆ ಎಂಬುದನ್ನು ಮರೆತು, ಕರ್ನಾಟಕವೀಗ ತನ್ನ ಹಿತಕ್ಕಾಗಿ ಸಂವಿಧಾನಾತ್ಮಕ ಆಡಳಿತದಿಂದ ಹೊರಬಂದು ಅರಾಜಕ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ ಎಂದು ಭಾವಿಸಿ ಮಾಡಬಹುದಾದ ಬೇಜವಾಬ್ದಾರಿ ವಾದ ಮಾತ್ರವಾಗಿರುತ್ತದೆ.

ಆದ್ದರಿಂದ ಈ ರಾಜ್ಯದ ಜನರು ಮೊದಲು ಖಚಿತಪಡಿಸಿಕೊಳ್ಳಬೇಕಾದ ಸಂಗತಿ ಎಂದರೆ, ಇದು ಇನ್ನೂ ಸಂವಿಧಾನಬದ್ಧ ಆಡಳಿತದಲ್ಲೇ ಇರುವ ರಾಜ್ಯವಾಗಿದೆಯೇ ಮತ್ತು ಇಲ್ಲೊಂದು ಕಾನೂನು ಮತ್ತು ಸುವ್ಯವಸ್ಥೆ ಪಾಲನೆಗೆ ಬದ್ಧವಾದ ಸರ್ಕಾರವಿದೆಯೇ ಎಂಬುದು. ಏಕೆಂದರೆ ಸ್ವಯಂಘೋಷಿತ ಬಿಡಿ ಗುಂಪುಗಳು ಸಾರ್ವಜನಿಕ ಜೀವನದ ಸರಿ ತಪ್ಪುಗಳನ್ನು ನಿರ್ಧರಿಸಿ, ಅದರಂತೆ ಕಾರ್ಯಾಚರಣೆಗಳನ್ನು ಕೈಗೊಳ್ಳುತ್ತಾ ಸಾರ್ವಜನಿಕ ಬದುಕನ್ನು ನಿರ್ಭಯವಾಗಿ ಆಳುವ ಬೆಳವಣಿಗೆ ಈಗ ಅನಿಯಂತ್ರಿತವಾಗಿ ನಡೆದಿದೆ. ಮೊನ್ನೆ ಹುಬ್ಬಳ್ಳಿಯಲ್ಲಿ ನಡೆದ ಘಟನೆ ಇತ್ತೀಚಿನ ಉದಾಹರಣೆಯಷ್ಟೆ. ಆದ್ದರಿಂದ ಈ ರಾಜ್ಯದಲ್ಲೊಂದು ಜವಾಬ್ದಾರಿಯುತ ಸರ್ಕಾರವಿದ್ದರೆ ಅದರ ಮುಖ್ಯಸ್ಥರೋ ಅಥವಾ ವಕ್ತಾರರೋ ತಾವು ಅಧಿಕಾರಕ್ಕೆ ಬಂದಾಗ ಜನತೆಗೆ ಪ್ರಮಾಣ ಮಾಡಿ ಹೇಳಿದಂತೆ, ಸಂವಿಧಾನಬದ್ಧವಾದ ಸಾರ್ವಭೌಮತೆಯೊಂದಿಗೆ ತಾವಿನ್ನೂ ಹೇಗೆ ಸಕ್ರಿಯವಾಗಿದ್ದೇವೆ ಎಂಬುದನ್ನು ಪ್ರಜೆಗಳಿಗೆ ಸಾಬೀತುಪಡಿಸಬೇಕಾದ ಸಮಯವೀಗ ಬಂದಿದೆ.

ಡಿ.ಎಸ್.ನಾಗಭೂಷಣ, ಶಿವಮೊಗ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇಮ್ರಾನ್ ಪದಚ್ಯುತಿ



ಇಮ್ರಾನ್

ಶಾಹಬಾಝ್

ಪಾಕಿಸ್ತಾನದಲ್ಲಿ ಇಮ್ರಾನ್ ಖಾನ್ ನೇತೃತ್ವದ ತೆಹ್ರೀಕ್ ಎ ಇನ್ಸಾಫ್ ನೇತೃತ್ವದ ಮೈತ್ರಿ ಸರ್ಕಾರವು ಪತನವಾಗಿದೆ. ಪಿಎಂಎಲ್ ನೇತೃತ್ವದ ಮೈತ್ರಿ ಸರ್ಕಾರ ಇನ್ನೇನು ಅಸ್ತಿತ್ವಕ್ಕೆ ಬರಲಿದೆ. ಆದರೆ ಯಾವುದೇ ಸರ್ಕಾರ ಅಸ್ತಿತ್ವಕ್ಕೆ ಬಂದರೂ ಅದರ ಮುಂದೆ ಬೆಟ್ಟದಷ್ಟು ಸವಾಲುಗಳು ಇವೆ. ಇಮ್ರಾನ್ ಸರ್ಕಾರದ ಅವಧಿಯಲ್ಲಿ ಇದ್ದ ಸವಾಲುಗಳ ಜತೆಗೆ, ಕಳೆದ ಒಂದು ತಿಂಗಳಲ್ಲಿ ಇಮ್ರಾನ್ ಅವರ ಸರ್ಕಾರದ ವಿದೇಶಾಂಗ ನೀತಿಗಳ ಕಾರಣದಿಂದ ಹೊಸ ಸರ್ಕಾರವು ಮತ್ತಷ್ಟು ಸವಾಲುಗಳನ್ನು ಎದುರಿಸಬೇಕಾದ ಪರಿಸ್ಥಿತಿ ಬಂದೊದಗಿದೆ.

ಇಮ್ರಾನ್ ಅವರ ಸರ್ಕಾರದ ಅವಧಿಯಲ್ಲಿ ದೇಶವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಗುರಿಯಾಗಿತ್ತು. ಈಗ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. ಇಮ್ರಾನ್ ಅಧಿಕಾರಕ್ಕೆ ಬಂದಾಗ 'ನಯಾ ಪಾಕಿಸ್ತಾನ' ನಿರ್ಮಿಸುವ ಭರವಸೆ ನೀಡಿದ್ದರು. ಆದರೆ ಸುಧಾರಿಸದ ಆರ್ಥಿಕ ನೀತಿ ಮತ್ತು ಕೋವಿಡ್ ಸಾಂಕ್ರಾಮಿಕದ ಪರಿಣಾಮವಾಗಿ ದೇಶವು ಸಂಕಷ್ಟಕ್ಕೆ ಸಿಲುಕಿತು.

ಹಿನ್ನೆಲೆ ಮುನ್ನೆಲೆ

ಪಾಕಿಸ್ತಾನದಲ್ಲಿ ಹಣದುಬ್ಬರ ಶೇ 12ರ ಗಡಿಯನ್ನು ದಾಟಿದೆ. ವಿದೇಶಿ ಸಾಲದ ಮೊತ್ತವು 13,000 ಕೋಟಿ ಡಾಲರ್‌ಗಿಂತಲೂ ಹೆಚ್ಚಿದೆ (ಅಂದಾಜು 24.2 ಲಕ್ಷ ಕೋಟಿ ಪಾಕಿಸ್ತಾನ ರೂಪಾಯಿಗಳು). ಇದು ದೇಶದ ಒಟ್ಟು ಉತ್ಪನ್ನದ ಶೇ 43ರಷ್ಟಾಗುತ್ತದೆ. ಇದರ ಮಧ್ಯೆಯೇ, ಅಮೆರಿಕನ್ ಡಾಲರ್ ಎದುರು ಪಾಕಿಸ್ತಾನದ ರೂಪಾಯಿಯ ಮೌಲ್ಯ ಪಾತಾಳಕ್ಕೆ ಕುಸಿದಿದೆ. ಒಂದು ಅಮೆರಿಕನ್ ಡಾಲರ್ ವಿನಿಮಯಕ್ಕೆ ಪಾಕಿಸ್ತಾನೀಯರು 190 ರೂಗಳನ್ನು ವ್ಯಯಿಸಬೇಕಾದ ಸ್ಥಿತಿ ಇದೆ.

'ಪಾಕಿಸ್ತಾನದ ಮುಂದೆ ಯಾವುದೇ ದಾರಿ ಇಲ್ಲ. ಈ ಬಿಕ್ಕಟ್ಟಿನಿಂದ ಹೊರಬರಲು, ದೇಶದ ಆರ್ಥಿಕ ನೀತಿಯಲ್ಲಿ ಆಮೂಲಾಗ್ರ ಬದಲಾವಣೆ ಅನಿವಾರ್ಯವಾಗಿದೆ' ಎನ್ನುತ್ತಾರೆ ಪಾಕಿಸ್ತಾನ್ ಇನ್‌ಸ್ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಎಕನಾಮಿಕ್ಸ್‌ನ ಕುಲಪತಿ ನದೀಂ ಉಲ್ ಹಕ್.

ಇಮ್ರಾನ್ ಖಾನ್ ಆಡಳಿತದ ಅವಧಿಯಲ್ಲಿ ದೇಶದಲ್ಲಿ ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚಾಗಿದ್ದವು. ತಾಲಿಬಾನ್‌ನ ಪಾಕಿಸ್ತಾನದ ಘಟಕವನ್ನು ಮುಖ್ಯವಾಹಿನಿ ರಾಜಕಾರಣಕ್ಕೆ ತರಲು ಮತ್ತು ಆ ಮೂಲಕ ಭಯೋತ್ಪಾದನಾ ಚಟುವಟಿಕೆಗೆ ಕಡಿವಾಣ ಹಾಕಲು ಇಮ್ರಾನ್ ಯತ್ನಿಸಿದ್ದರು. ಇದಕ್ಕಾಗಿ ಅವರು ತಾಲಿಬಾನ್ ಜತೆಗೆ 10 ತಿಂಗಳಿಗೂ ಹೆಚ್ಚು ಕಾಲ ಮಾತುಕತೆ ನಡೆಸಿದ್ದರು. ಆದರೆ, ಮಾತುಕತೆ ಮುರಿದು ಬಿದ್ದಿತ್ತು. ಪಾಕಿಸ್ತಾನದ ವಿರುದ್ಧ ಉಗ್ರರು ತಮ್ಮ ನೆಲವನ್ನು ಬಳಸಿಕೊಳ್ಳಲು ಬಿಡುವುದಿಲ್ಲ ಎಂದು ಅಫ್ಗಾನಿಸ್ತಾನದ ತಾಲಿಬಾನ್ ಹೇಳಿದೆ. ಆದರೆ, ಪಾಕಿಸ್ತಾನದ ತಾಲಿಬಾನಿಗಳಿಗೆ ಅಫ್ಗಾನಿಸ್ತಾನದಲ್ಲಿ ಆಶ್ರಯ ನೀಡಲಾಗಿದೆಯೇ ಅಥವಾ ಅವರನ್ನು ಅಲ್ಲಿಂದ ಹೊರಗಟ್ಟಲಾಗಿದೆಯೇ ಎಂಬುದನ್ನು ತಾಲಿಬಾನ್ ಸ್ಪಷ್ಟಪಡಿಸಿಲ್ಲ. ಈ ಎಲ್ಲಾ ಸಂಗತಿಗಳನ್ನು ಸ್ಪಷ್ಟಪಡಿಸಿಕೊಳ್ಳಲು ನೂತನ ಸರ್ಕಾರವು, ತಾಲಿಬಾನಿನ ಜೊತೆ ಮತ್ತೆ ಹೊಸದಾಗಿ ಮಾತುಕತೆ ಆರಂಭಿಸಬೇಕಾಗುತ್ತದೆ.

ಪಾಕಿಸ್ತಾನದಲ್ಲಿ ಖನಿಜ ಸಂಪನ್ಮೂಲ ಹೇರಳವಾಗಿರುವ ಬಲೂಚಿಸ್ತಾನ ಪ್ರದೇಶವು ಇನ್ನೂ ಪೂರ್ಣ ಪ್ರಮಾಣದಲ್ಲಿ ಸರ್ಕಾರದ ನಿಯಂತ್ರಣಕ್ಕೆ ಬಂದಿಲ್ಲ. ಬಂಡುಕೋರ ಸಂಘಟನೆಗಳು ಈ ಪ್ರದೇಶದ ಮೇಲಿನ ತಮ್ಮ ಹಿಡಿತವನ್ನು ಬಿಟ್ಟುಕೊಡುತ್ತಿಲ್ಲ. ಈ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ದೊಡ್ಡ ಸವಾಲು ನೂತನ ಸರ್ಕಾರದ ಮುಂದೆಯೂ ಇದೆ.

ಪಾಕಿಸ್ತಾನದ ದೀರ್ಘಕಾಲದ ಮಿತ್ರ ಅಮೆರಿಕದ ಜತೆಗೂ ಇಮ್ರಾನ್ ಸಂಬಂಧ ಕೆಡಿಸಿಕೊಂಡಿದ್ದಾರೆ. ತಮ್ಮ ಸರ್ಕಾರವನ್ನು ಉರುಳಿಸಲು ಅಮೆರಿಕವು ಸಂಚು ರೂಪಿಸಿದೆ ಎಂದು ಅವರು ನೇರವಾಗಿ ಆರೋಪಿಸಿದ್ದಾರೆ. ಇದು ಅಮೆರಿಕದ ಕಣ್ಣನ್ನು ಕೆಂಪಾಗಿಸಿದೆ. ನೂತನ ಸರ್ಕಾರವು ಈ ಬಿಸಿಯನ್ನು ತಣ್ಣಗಾಗಿಸುವ ದೊಡ್ಡ ಸವಾಲನ್ನು ಎದುರಿಸುತ್ತಿದೆ. ಉಕ್ರೇನ್ ಮೇಲೆ ರಷ್ಯಾ ಅತಿಕ್ರಮಣ ನಡೆಸಿದ ವಿಚಾರದಲ್ಲಿ ಇಮ್ರಾನ್ ಅವರ ನಿಲುವು, ಪಾಶ್ಚಾತ್ಯ ದೇಶಗಳೊಂದಿಗೆ ಪಾಕಿಸ್ತಾನದ ಸಂಬಂಧವನ್ನು ಹಾಳು ಮಾಡಿದೆ. ಉಕ್ರೇನ್ ಮೇಲೆ ರಷ್ಯಾ ದಾಳಿ ನಡೆಸಿದ ದಿನ ಇಮ್ರಾನ್ ಅವರು ಮಾಸ್ಕೋದಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಜತೆಗೆ ವೇದಿಕೆ ಹಂಚಿಕೊಂಡಿದ್ದರು. ರಷ್ಯಾ ದಾಳಿಯನ್ನು ಖಂಡಿಸಿ ಬೀಜಿಂಗ್ ಚಳಿಗಾಲದ ಒಲಿಂಪಿಕ್ಸ್ ಅನ್ನು ಐರೋಪ್ಯ ದೇಶಗಳು ಬಹಿಷ್ಕರಿಸಿದ್ದವು. ಬೇರೆ ದೇಶಗಳೂ ಬಹಿಷ್ಕರಿಸುವಂತೆ ಕರೆ ನೀಡಿದ್ದವು. ಇದನ್ನು ಕಡೆಗಣಿಸಿ, ಪಾಕಿಸ್ತಾನವು ಕ್ರೀಡಾಕೂಟದಲ್ಲಿ ಭಾಗಿಯಾಯಿತು. ಇದರಿಂದ ಪಾಕಿಸ್ತಾನವು ಈ ದೇಶಗಳ ವಿಶ್ವಾಸವನ್ನು ಕಳೆದುಕೊಂಡಿದೆ. ಈ ಎಲ್ಲಾ ದೇಶಗಳನ್ನು ಮರಳಿ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕಾರ್ಯಕ್ಕೆ ನೂತನ ಸರ್ಕಾರ ಕೈಹಾಕಬೇಕಿದೆ.

ಕ್ರಿಕೆಟ್ ವರ್ಚಸ್ಸಿಗೆ ಮಸಿ ಬಳಿದ ರಾಜಕಾರಣ

1992ರ ಕ್ರಿಕೆಟ್ ವಿಶ್ವಕಪ್‌ನಲ್ಲಿ ತಮ್ಮ ಚಂಚಲ ತಂಡವು ಚಾಂಪಿಯನ್‌ಶಿಪ್ ಗೆಲ್ಲುವಂತೆ ಮಾಡುವಲ್ಲಿ ಇಮ್ರಾನ್ ಖಾನ್ ಯಶಸ್ವಿಯಾಗಿದ್ದರು. ಆದರೆ, ಅದೇ ಚಾಕಚಕ್ಯತೆಯನ್ನು ರಾಜಕೀಯದಲ್ಲಿ ತೋರಲು ಅವರಿಗೆ ಸಾಧ್ಯವಾಗಿಲ್ಲ. ಮೊದಲ ಇನಿಂಗ್ಸ್‌ನ ಮಧ್ಯದಲ್ಲಿಯೇ ವಿರೋಧ ಪಕ್ಷಗಳ ಒಗ್ಗಟ್ಟು ಇಮ್ರಾನ್ ಅವರನ್ನು ರನ್‌ಔಟ್ ಮಾಡಿದೆ.

2018ರಲ್ಲಿ ಪ್ರಧಾನಿ ಹುದ್ದೆಗೆ ಏರುವ ಸಂದರ್ಭದಲ್ಲಿ ಇಮ್ರಾನ್ ಅವರಿಗೆ ಎಲ್ಲವೂ ಪೂರಕವಾಗಿಯೇ ಇದ್ದವು. ಕ್ರಿಕೆಟ್ ಕ್ರೀಡಾಂಗಣದಲ್ಲಿ ಸಿಕ್ಕ ಯಶಸ್ಸು ತಂದುಕೊಟ್ಟ ತಾರಾ ಪಟ್ಟ ಇತ್ತು. 1996ರಲ್ಲಿಯೇ ಪಕ್ಷ ಕಟ್ಟಿದ್ದ ಅವರು, ಪ್ರಧಾನಿ ಹುದ್ದೆಗೆ ಏರುವ ಹೊತ್ತಿಗೆ, ಪಾಕಿಸ್ತಾನದ ಇತರ ರಾಜಕಾರಣಿಗಳಿಗೆ ಹೋಲಿಸಿದರೆ ಪಕ್ವವಾದಂತೆ ಕಾಣುತ್ತಿದ್ದರು.

ಸುದೀರ್ಘ ಕಾಲದಿಂದ ಪಾಕಿಸ್ತಾನ ರಾಜಕಾರಣವನ್ನು ಬಿಗಿ ಹಿಡಿತದಲ್ಲಿ ಇರಿಸಿಕೊಂಡಿದ್ದ ಎರಡೂ ಕುಟುಂಬಗಳನ್ನು (ನವಾಜ್ ಷರೀಫ್ ಪರಿವಾರ ಮತ್ತು ಬೆನಜೀರ್ ಭುಟ್ಟೊ ಪರಿವಾರ) ಅಧಿಕಾರದಿಂದ ದೂರ ಇರಿಸುವುದು ಇಮ್ರಾನ್‌ಗೆ ಸಾಧ್ಯವಾಗಿತ್ತು. ಚುನಾವಣೆ ಸಂದರ್ಭದಲ್ಲಿ ಅವರ ರ‍್ಯಾಲಿಗಳಿಗೆ ಭಾರಿ ಸಂಖ್ಯೆಯಲ್ಲಿ ಜನರು ಸೇರುತ್ತಿದ್ದರು. ಭ್ರಷ್ಟಾಚಾರದ ವಿರುದ್ಧ ಇಮ್ರಾನ್ ಆಡಿದ್ದ ಮಾತುಗಳು ಜನರಿಗೆ ಮೋಡಿ ಮಾಡಿದ್ದವು. ಇಮ್ರಾನ್ ಅಧಿಕಾರಕ್ಕೆ ಬಂದರೆ ಹೊಸ ಯುಗವೊಂದು ತೆರೆದುಕೊಳ್ಳಲಿದೆ ಎಂದು ಪಾಕಿಸ್ತಾನದ ಜನರು ಭಾವಿಸಿದ್ದರಲ್ಲಿ ಆಶ್ಚರ್ಯ ಏನೂ ಇರಲಿಲ್ಲ.

ಜನಪ್ರಿಯತೆಯ ಜತೆಗೆ ಪಾಕಿಸ್ತಾನದ ಪ್ರಬಲ ಸೇನೆಯ ಬೆಂಬಲವೂ ಇಮ್ರಾನ್ ಬೆನ್ನಿಗಿತ್ತು. ಹಾಗಾಗಿ, ಅಧಿಕಾರಕ್ಕೆ ಏರುವುದು ಅವರಿಗೆ ಸುಲಲಿತವಾಯಿತು.

ಆದರೆ, 2021ರ ಡಿಸೆಂಬರ್ ಹೊತ್ತಿಗೆ ಪರಿಸ್ಥಿತಿ ಭಿನ್ನವಾಯಿತು. ಪಾಕಿಸ್ತಾನದ ಪ್ರಭಾವಿ ಗುಪ್ತಚರ ಸಂಸ್ಥೆ ಐಎಸ್‌ಐನ ಮುಖ್ಯಸ್ಥರಾಗಿ ಲೆ. ಜ. ಹಮೀದ್ ಫೈಝ್ ಅವರನ್ನು ಮುಂದುವರಿಸಬೇಕು ಎಂಬುದು ಇಮ್ರಾನ್ ಅವರ ಆಗ್ರಹವಾಗಿತ್ತು. ಆದರೆ, ಸೇನಾ ಮುಖ್ಯಸ್ಥ ಜ. ಖಮರ್ ಜಾವೇದ್ ಬಾಜ್ವಾ ಅವರಿಗೆ ಇದು ಇಷ್ಟ ಇರಲಿಲ್ಲ. ಫೈಝ್ ಅವರನ್ನು ವರ್ಗಾಯಿಸಿ ಐಎಸ್‌ಐ ಮುಖ್ಯಸ್ಥ ಹುದ್ದೆಗೆ ನದೀಮ್ ಅಹ್ಮದ್ ಅಂಜುಮ್ ಅವರನ್ನು ಬಾಜ್ವಾ 2021ರ ನವೆಂಬರ್‌ನಲ್ಲಿ ನೇಮಿಸಿದರು.


ಇಮ್ರಾನ್ ಮತ್ತು ಸೇನೆಯ ನಡುವಣ ಸಂಬಂಧ ಕದಡಿದೆ ಎಂಬುದನ್ನು ಈ ನೇಮಕವು ಬಹಿರಂಗಪಡಿಸಿತ್ತು. ಏರುತ್ತಲೇ ಇದ್ದ ಹಣದುಬ್ಬರ ಮತ್ತು ಭ್ರಷ್ಟಾಚಾರವನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಲು ಇಮ್ರಾನ್‌ಗೆ ಸಾಧ್ಯವಾಗಲಿಲ್ಲ.

ವಿರೋಧ ಪಕ್ಷಗಳಾದ ಪಾಕಿಸ್ತಾನ್ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ಮತ್ತು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಗಳ ನಾಯಕರ ಬಗ್ಗೆ ಇಮ್ರಾನ್ ತೀವ್ರ ತಾತ್ಸಾರ ಪ್ರಕಟಿಸಿದ್ದರು. ಇಮ್ರಾನ್ ಅವರು ತೋರಿದ್ದ ಅಸಡ್ಡೆಯೇ, ಬದ್ಧ ಪ್ರತಿಸ್ಪರ್ಧಿಗಳಾಗಿದ್ದ ಈ ಎರಡೂ ಪಕ್ಷಗಳ ಮುಖಂಡರನ್ನು ಹತ್ತಿರ ತಂದಿತು. ಇದುವೇ ಇಮ್ರಾನ್ ಅವರ ಪದಚ್ಯುತಿಗೆ ಮುಖ್ಯ ಕಾರಣವಾಯಿತು. ಇಮ್ರಾನ್ ಅವರ ಪ್ರಖರ ಕ್ರಿಕೆಟ್ ಜೀವನದ ಮೇಲೆ ರಾಜಕೀಯ ಜೀವನದ ವೈಫಲ್ಯಗಳು ಕರಿಛಾಯೆ ಬೀರಿದ್ದು ಸುಳ್ಳಲ್ಲ.

ಅವಿಶ್ವಾಸದ ಸೂತ್ರಧಾರರು ಯಾರು?

ಪಾಕಿಸ್ತಾನ ತೆಹ್ರೀಕ್ ಎ ಇನ್ಸಾಫ್ ಪಕ್ಷವನ್ನು ಕೇಂದ್ರವಾಗಿಸಿಕೊಂಡು ಇಮ್ರಾನ್ ಕಟ್ಟಿದ್ದ ಅತ್ಯಂತ ನಾಜೂಕು ಮೈತ್ರಿಕೂಟವನ್ನು ಒಡೆದದ್ದರ ಹಿಂದೆ ಕೆಲವು ವಾರಗಳ ಶ್ರಮವಿದೆ. ಇಮ್ರಾನ್ ಅವರ ನಡವಳಿಕೆಯಿಂದ ಬೇಸತ್ತಿದ್ದ ಅವರದ್ದೇ ಪಕ್ಷದ ಹಲವು ಸಂಸದರನ್ನೂ ವಿರೋಧ ಪಕ್ಷಗಳು ಜತೆಗೆ ಸೇರಿಸಿಕೊಂಡವು. ಈ ಎಲ್ಲವುಗಳು ಇಮ್ರಾನ್ ಪದಚ್ಯುತಿಗೆ ಕಾರಣಗಳಾದವು. ಈ ಪದಚ್ಯುತಿ ವಿದ್ಯಮಾನದ ಮುಖ್ಯ ಸೂತ್ರಧಾರರು ಇವರು:

ಶಾಹಬಾಝ್ ಷರೀಫ್: ಪ್ರಧಾನಿ ಹುದ್ದೆಗೆ ನಾಮಪತ್ರ ಸಲ್ಲಿಸಿರುವ 70 ವರ್ಷದ ಶಾಹಬಾಝ್ ಷರೀಫ್, ಪಾಕಿಸ್ತಾನದ ಪ್ರಭಾವಿ ರಾಜಕಾರಣಿಗಳಲ್ಲಿ ಒಬ್ಬರು. ಮೂರು ಬಾರಿ ಪ್ರಧಾನಿಯಾಗಿದ್ದ ನವಾಜ್ ಷರೀಫ್ ಅವರ ತಮ್ಮ. ಷರೀಫ್ ಕುಟುಂಬದ ರಾಜಕೀಯ ನೆಲೆಯಾದ ಪಂಜಾಬ್‌ನ ಮುಖ್ಯಮಂತ್ರಿಯಾಗಿ ಶಾಹಬಾಝ್ ಕೆಲಸ ಮಾಡಿದ್ದಾರೆ. ಸದ್ಯಕ್ಕೆ ಅವರು ಪಾಕಿಸ್ತಾನ ಮುಸ್ಲಿಂ ಲೀಗ್-ಎನ್‌ನ ಅಧ್ಯಕ್ಷ. ಉತ್ತಮ ಆಡಳಿತಗಾರ ಎಂಬ ಹೆಸರು ಅವರಿಗೆ ಇದೆ. ಹೇಳಿಕೆಗಳ ಮೂಲಕ ಹಲವು ಬಾರಿ ವಿವಾದ ಸೃಷ್ಟಿಸಿದ್ದಾರೆ. ಹಲವು ಬಾರಿ ಮದುವೆಯಾಗಿದ್ದಾರೆ, ಲಂಡನ್ ಮತ್ತು ದುಬೈ ಸೇರಿಸಿ ವಿವಿಧೆಡೆ ಐಷಾರಾಮಿ ಬಂಗ್ಲೆಗಳು ಮತ್ತು ಆಸ್ತಿ ಹೊಂದಿದ್ದಾರೆ ಎಂಬ ವರದಿಗಳು ಅವರ ಬಗ್ಗೆ ಪ್ರಕಟವಾಗಿವೆ.




ಆಸಿಫ್ ಅಲಿ ಝರ್ದಾರಿ: ಸಿಂಧ್‌ನ ಶ್ರೀಮಂತ ಕುಟುಂಬದ ಝರ್ದಾರಿ, ಮದುವೆಗೆ ಮುನ್ನ ಭೋಗಜೀವಿಯಾಗಿದ್ದವರು ಎಂಬುದು ಅವರ ಬಗ್ಗೆ ಕೇಳಿ ಬರುತ್ತಿರುವ ಮಾತು. ಬೆನಜೀರ್ ಭುಟ್ಟೊ ಅವರು ಪಾಕಿಸ್ತಾನದ ಪ್ರಧಾನಿಯಾಗಿ ಮೊದಲ ಬಾರಿಗೆ ಅಧಿಕಾರ ವಹಿಸಿಕೊಳ್ಳುವ ಸ್ವಲ್ಪ ಮೊದಲು ಭುಟ್ಟೊ-ಝರ್ದಾರಿ ಮದುವೆ ನಡೆಯಿತು. ಭಾರಿ ಹುಮ್ಮಸ್ಸಿನಿಂದಲೇ ರಾಜಕಾರಣಕ್ಕೆ ಬಂದ ಝರ್ದಾರಿಗೆ '10 ಪರ್ಸೆಂಟ್ ರಾಜಕಾರಣಿ' ಎಂಬ ಅಡ್ಡ ಹೆಸರು ಇದೆ. ಸರ್ಕಾರಿ ಗುತ್ತಿಗೆಗಳಲ್ಲಿ ಅವರು ಶೇ 10ರಷ್ಟು ಲಂಚ ಪಡೆದಿದ್ದರು ಎಂಬ ಆರೋಪದ ಕಾರಣಕ್ಕೆ ಈ ಹೆಸರು ಬಂದಿದೆ. ಭ್ರಷ್ಟಾಚಾರ, ಡ್ರಗ್ಸ್ ಕಳ್ಳ ಸಾಗಾಟ ಮತ್ತು ಕೊಲೆ ಪ್ರಕರಣಗಳಲ್ಲಿ ಎರಡು ಬಾರಿ ಅವರು ಜೈಲು ಸೇರಿದ್ದರು. ಆದರೆ, ವಿಚಾರಣೆ ನಡೆದಿಲ್ಲ. ಪಿಎಂಎಲ್-ಎನ್ ಪಕ್ಷದ ಜತೆಗಿನ ಅಧಿಕಾರ ಹಂಚಿಕೆ ಒಪ್ಪಂದದ ಮೂಲಕ ಅವರು ಒಮ್ಮೆ ಪಾಕಿಸ್ತಾನದ ಅಧ್ಯಕ್ಷರೂ ಆಗಿದ್ದರು. 2007ರಲ್ಲಿ ಭುಟ್ಟೊ ಹತ್ಯೆ ಬಳಿಕ ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಸಹ ಅಧ್ಯಕ್ಷರಾದರು.

ಬಿಲಾವಲ್ ಭುಟ್ಟೊ: ಭುಟ್ಟೊ-ಝರ್ದಾರಿ ಮಗ ಬಿಲಾವಲ್ ಭುಟ್ಟೊ ಅವರು ಪಿಪಿಪಿಯ ಅಧ್ಯಕ್ಷ. ತಾಯಿಯ ಹತ್ಯೆಯ ಬಳಿಕ 19 ವರ್ಷ ವಯಸ್ಸಿನಲ್ಲಿಯೇ ಪಕ್ಷದ ಅಧ್ಯಕ್ಷ ಹುದ್ದೆ ಅವರಿಗೆ ಒಲಿದು ಬಂದಿತ್ತು. ಬಿಲಾವಲ್ ಆಕ್ಸ್‌ಫರ್ಡ್‌ನಲ್ಲಿ ಕಲಿತವರು. ಪ್ರಗತಿಪರ ಎಂಬ ವರ್ಚಸ್ಸು ಅವರಿಗೆ ಇದೆ. ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ಬಗ್ಗೆ ಹಲವು ಬಾರಿ ಮಾತನಾಡಿದ್ದಾರೆ. ಬಿಲಾವಲ್ ಅವರು ಸಾಮಾಜಿಕ ಜಾಲ ತಾಣಗಳಲ್ಲಿ ದೊಡ್ಡ ಸಂಖ್ಯೆಯ ಫಾಲೋವರ್‌ಗಳನ್ನು ಹೊಂದಿದ್ದಾರೆ. ಪಾಕಿಸ್ತಾನದ ಜನಸಂಖ್ಯೆಯ ಅರ್ಧಕ್ಕೂ ಹೆಚ್ಚು ಜನರು 22ರ ಒಳಗಿನ ವಯಸ್ಸಿನವರು. ಹಾಗಾಗಿ, ಬಿಲಾವಲ್‌ಗೆ ಹೆಚ್ಚಿನ ಜನಪ್ರಿಯತೆ ಇದೆ. ಉರ್ದು ಭಾಷೆಯನ್ನು ಸರಿಯಾಗಿ ಮಾತನಾಡಲು ಬಾರದು ಎಂಬ ಕಾರಣಕ್ಕೆ ಅವರ ಹಂಗಿಸುವವರೂ ಇದ್ದಾರೆ.



ಫಝ್ಲುಲ್ ಉರ್ ರಹಮಾನ್: ಮೂಲಭೂತವಾದಿ ರಾಜಕಾರಣಿ ಫಝ್ಲುಲ್ ಅವರು ಜಮೀಯತ್ ಉಲ್ ಉಲೇಮಾ ಎ ಇಸ್ಲಾಂ (ಎಫ್) ಪಕ್ಷದ ಅಧ್ಯಕ್ಷ. ಇತ್ತೀಚಿನ ದಿನಗಳಲ್ಲಿ ಅವರು ಹೊಂದಾಣಿಕೆಯ ಮನೋಭಾವ ತೋರಿದ್ದಾರೆ. ಜಾತ್ಯತೀತ, ಎಡಪಂಥೀಯ, ಬಲಪಂಥೀಯ ಪಕ್ಷಗಳ ಜತೆಗೆಲ್ಲ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ, ಸರ್ಕಾರ ರಚನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರೂ ಅಧಿಕಾರಕ್ಕೆ ಏರುವಷ್ಟು ಸ್ಥಾನಗಳನ್ನು ಎಂದೂ ಪಡೆದಿಲ್ಲ. ಇಮ್ರಾನ್ ಅವರ ಕಡು ಟೀಕಾಕಾರರಲ್ಲಿ ಫಝ್ಲುಲ್ ಅವರೂ ಒಬ್ಬರು. ಬ್ರಿಟನ್‌ನ ಜೆಮಿಮಾ ಗೋಲ್ಡ್‌ಸ್ಮಿತ್ ಅವರನ್ನು ಇಮ್ರಾನ್ ಮದುವೆಯಾದ ಕಾರಣಕ್ಕೆ ಇಮ್ರಾನ್‌ರನ್ನು 'ಯೆಹೂದಿ' ಎಂದು ಕರೆದಿದ್ದರು. ಪೆಟ್ರೋಲ್ ಬಂಕ್ ಪರವಾನಗಿ ಭ್ರಷ್ಟಾಚಾರ ಪ್ರಕರಣದಲ್ಲಿ ಫಝ್ಲುಲ್ ಭಾಗಿಯಾಗಿದ್ದಾರೆ ಎಂಬ ಆರೋಪವಿದೆ. ಹಾಗಾಗಿ, ಅವರನ್ನು 'ಮುಲ್ಲಾ ಡೀಸೆಲ್' ಎಂದು ಇಮ್ರಾನ್ ಕರೆದಿದ್ದಾರೆ.



ಆಧಾರ: ಎಎಫ್‌ಪಿ, ರಾಯಿಟರ್ಸ್, ಬಿಬಿಸಿ

ಯಾರಿಗೂ ಇಲ್ಲ ಪೂರ್ಣಾವಧಿ ಅಧಿಕಾರ

75 ವರ್ಷದ ಪಾಕಿಸ್ತಾನದ ಇತಿಹಾಸದಲ್ಲಿ ಯಾವ ಪ್ರಧಾನಿಯೂ 5 ವರ್ಷಗಳ ಅವಧಿ ಪೂರ್ಣಗೊಳಿಸಿಲ್ಲ. ಹಲವು ಬಾರಿ ಸೇನಾಡಳಿತಕ್ಕೆ ಸಾಕ್ಷಿಯಾಗಿರುವ ಪಾಕಿಸ್ತಾನವು, 1947ರಿಂದ ಇಲ್ಲಿಯವರೆಗೆ 29 ಪ್ರಧಾನಿಗಳನ್ನು ಕಂಡಿದೆ. ಸೇನಾದಂಗೆ, ಭ್ರಷ್ಟಾಚಾರ ಆರೋಪ, ಆಡಳಿತ ಪಕ್ಷದೊಳಗಿನ ಒತ್ತಡ, ಹತ್ಯೆ ಮೊದಲಾದ ವಿವಿಧ ಕಾರಣಗಳಿಂದ ಯಾವ ಪ್ರಧಾನಿಗೂ ಪೂರ್ಣಾವಧಿ ಆಳ್ವಿಕೆ ಸಾಧ್ಯವಾಗಿಲ್ಲ. 2 ವಾರಗಳ ಅತಿ ಕಡಿಮೆ ಅವಧಿಗೆ ಪ್ರಧಾನಿಯಾಗಿದ್ದವರೂ ಇದ್ದಾರೆ, 4 ವರ್ಷ 2 ತಿಂಗಳಷ್ಟು ದೀರ್ಘ ಅವಧಿಗೆ ಪ್ರಧಾನಿ ಆಗಿದ್ದವರೂ ಇದ್ದಾರೆ. ನವಾಜ್ ಷರೀಫ್ ಮಾತ್ರ ಮೂರು ಬಾರಿ ಪ್ರಧಾನಿಯಾಗಿದ್ದರು.

ಸೇನೆಯ ಆಡಳಿತ: ಪಾಕಿಸ್ತಾನದಲ್ಲಿ 1958ರಲ್ಲಿ ಮೊದಲ ಬಾರಿಗೆ ಸೇನಾ ಆಡಳಿತ ಶುರುವಾಯಿತು. ಜನರಲ್ ಅಯೂಬ್ ಖಾನ್ ಅವರು 44 ತಿಂಗಳು ದೇಶದ ಚುಕ್ಕಾಣಿ ಹಿಡಿದಿದ್ದರು. 1977ರಲ್ಲಿ ಜಿಯಾ ಉಲ್ ಹಕ್ ಅವರು ಸಂಸತ್ತನ್ನು ವಿಸರ್ಜಿಸಿ 2ನೇ ಬಾರಿ ಪಾಕಿಸ್ತಾವನ್ನು ಸೇನಾಡಳಿತಕ್ಕೆ ತಳ್ಳಿದರು. 199ರಲ್ಲಿ ಜನರಲ್ ಪರ್ವೇಜ್ ಮುಷರಫ್ ಅವರು ನವಾಜ್ ಷರೀಫ್ ಅವರನ್ನು ಪದಚ್ಯುತಿ ಮಾಡಿ ಅಧಿಕಾರ ವಹಿಸಿಕೊಂಡಿದ್ದರು.

ಪ್ರಧಾನಿ	ಅಧಿಕಾರದ ಅವಧಿ	ಕಾರಣ
ಲಿಯಾಕತ್ ಅಲಿ ಖಾನ್	1947 ಆ.–1951 ಅ. (4 ವರ್ಷ 2 ತಿಂಗಳು)	ರಾಜಕೀಯ ರ‍್ಯಾಲಿಯಲ್ಲಿ ಹತ್ಯೆ
ಖ್ವಾಜಾ ನಿಜಾಮುದ್ದೀನ್	1951 ಅ.–1953 ಏ. (1 ವರ್ಷ ಆರು ತಿಂಗಳು)	ಧಾರ್ಮಿಕ ದಂಗೆ ನಿರ್ವಹಣೆ ವೈಫಲ್ಯ
ಮೊಹಮ್ಮದ್ ಅಲಿ ಬೊಗ್ರಾ	1953 ಏ.–1955 ಆ. (2 ವರ್ಷ 3 ತಿಂಗಳು)	ಗವರ್ನರ್ ಜನರಲ್ ಜತೆ ಭಿನ್ನಾಭಿಪ್ರಾಯ
ಚೌಧರಿ ಮೊಹಮ್ಮದ್ ಅಲಿ	1955 ಆ.–1956 ಸೆ. (1 ವರ್ಷ 1 ತಿಂಗಳು)	ರಾಜೀನಾಮೆ
ಹುಸೈನ್ ಶಹೀದ್ ಸುಹರವರ್ದಿ	1956 ಸೆ.–1957 ಅ. (1 ವರ್ಷ 1 ತಿಂಗಳು)	ರಾಜಕೀಯ ಒತ್ತಡ
ಇಬ್ರಾಹಿಂ ಇಸ್ಮಾಯಿಲ್ ಚುದರೀಗರ್	1957 ಅ.–1957 ಡಿ. (2 ತಿಂಗಳಿಗಿಂತ ಕಡಿಮೆ)	ರಾಜೀನಾಮೆ
ಮಲಿಕ್ ಫಿರೋಜ್ ಖಾನ್ ನೂನ್	1957 ಡಿ.–1958 ಅ. (10 ತಿಂಗಳಿಗಿಂತ ಕಡಿಮೆ)	ಸೇನಾಡಳಿತ ಜಾರಿ ಮಾಡಿದ್ದರಿಂದ ವಜಾ
ನೂರುಲ್ ಅಮೀನ್	1971 ಡಿ.7-1971 ಡಿ.20 (2 ವಾರಕ್ಕಿಂತ ಕಡಿಮೆ)	ಪಾಕಿಸ್ತಾನ ವಿಭಜನೆಯಾಗಿ ಬಾಂಗ್ಲಾದೇಶ ಉದಯ
ಜುಲ್ಫೀಕರ್ ಅಲಿ ಭುಟ್ಟೊ	1973 ಆ.–1977 ಜು. (3 ವರ್ಷ 11 ತಿಂಗಳು)	ಜೈಲುವಾಸ
ಮುಹಮ್ಮದ್ ಖಾನ್ ಜುನೆಜೊ	1985 ಮಾ.–1988 ಮೇ (3 ವರ್ಷ 2 ತಿಂಗಳು)	ಸರ್ಕಾರವನ್ನು ವಜಾಗೊಳಿಸಿದ ಸೇನೆ
ಬೆನಜೀರ್ ಭುಟ್ಟೊ	1988 ಡಿ.–1990 ಆ. (1 ವರ್ಷ 8 ತಿಂಗಳು)	ಭ್ರಷ್ಟಾಚಾರ
ನವಾಜ್ ಷರೀಫ್	1990 ನ.–1993 ಏ. (2 ವರ್ಷ 7 ತಿಂಗಳು)	ಸೇನೆ ಜತೆ ಭಿನ್ನಾಭಿಪ್ರಾಯ
ಬೆನಜೀರ್ ಭುಟ್ಟೊ	1993 ಅ.–1996 ನ. (3 ವರ್ಷಕ್ಕಿಂತ ಹೆಚ್ಚು)	ಅಧ್ಯಕ್ಷರಿಂದ ವಜಾ
ನವಾಜ್ ಷರೀಫ್	1997 ಫೆ.–1999 ಅ. (2 ವರ್ಷ 8 ತಿಂಗಳು)	ಸೇನಾದಂಗೆ
ಮೀರ್ ಜಫರುಲ್ಲಾ ಖಾನ್ ಜಮಾಲಿ	2002 ನ.–2004 ಜ. (1 ವರ್ಷ 7 ತಿಂಗಳು)	ಸೇನೆಯಿಂದ ವಜಾ
ಯೂಸುಫ್ ರಜಾ ಗಿಲಾನಿ	2008-2012 (4 ವರ್ಷ 1 ತಿಂಗಳು)	ನ್ಯಾಯಾಂಗ ನಿಂದನೆ ಆರೋಪದಡಿ ಸುಪ್ರೀಂ ಕೋರ್ಟ್‌ನಿಂದ ಪದಚ್ಯುತಿ
ನವಾಜ್ ಷರೀಫ್	2013 ಜೂ.–2017 ಜು. (4 ವರ್ಷ 2 ತಿಂಗಳು)	ಅಕ್ರಮ ಆಸ್ತಿ ಸಂಪಾದನೆ ಆರೋಪದಡಿ ಸುಪ್ರೀಂ ಕೋರ್ಟ್‌ನಿಂದ ಪದಚ್ಯುತಿ
ಇಮ್ರಾನ್ ಖಾನ್	2018 ಆ.14–2022 ಏ.10 (3 ವರ್ಷ 7 ತಿಂಗಳು)	ಅವಿಶ್ವಾಸ ಗೊತ್ತುವಳಿಯಲ್ಲಿ ಸೋಲು

(ಸಂಸತ್ತಿನ ಅವಧಿ ಪೂರ್ಣಗೊಳ್ಳುವ ಮೊದಲು ಪದಚ್ಯುತಿಗೊಂಡವರ ಉಲ್ಲೇಖ ಮಾತ್ರ ಇದೆ)



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 91

ತ್ರಿದೇವಿಯರು ಉಮೆಯ ಅಂಶ

ಬ್ರಹ್ಮ-ವಿಷ್ಣುವಿಗೆ ಅವರ ಕರ್ತವ್ಯಗಳೇನು ಎಂಬುದನ್ನು ಮಹೇಶ್ವರ ಮುಂದುವರೆದು ಹೀಗೆ ಹೇಳುತ್ತಾನೆ:

'ಮೂಲಪ್ರಕೃತಿಯೆನಿಸಿದ ಉಮಾ ಎಂಬ ಹೆಸರಿನಿಂದ ಬೆಳಗುತ್ತಿರುವ, ಈ ಪರಮೇಶ್ವರಿಯ ಒಂದು ಶಕ್ತಿಯೇ ಮೂರು ಶಕ್ತಿಯಾಗುವುದು. ಈ ಪ್ರಕೃತಿಮಾತೆಯಾದ ಉಮೆಯಿಂದ ಉದಯಿಸಿದ ಒಂದು ಶಕ್ತಿ ವಾಗ್ದೇವಿಯಾದ ಸರಸ್ವತಿ ಎನಿಸಿಕೊಂಡು, ಬ್ರಹ್ಮನನ್ನು ವರಿಸುವಳು. ಉಮೆಯಿಂದ ಉದಯಿಸಿದ ಮತ್ತೊಂದು ಶಕ್ತಿಯು ಲಕ್ಷ್ಮಿಯ ರೂಪವನ್ನು ತಳೆದು ವಿಷ್ಣುವನ್ನು ಆಶ್ರಯಿಸುವಳು. ಮತ್ತೆ ಆ ಪ್ರಕೃತಿಯೇ ಕಾಳಿ ಎಂಬ ಹೆಸರಿನಿಂದ ನನ್ನಂಶವಾದ ಹರನನ್ನು ಹೊಂದುವಳು.'

'ನಿಮ್ಮೀರ್ವರಿಗೆ ಪರಮಶುಭಕರವಾದ ದೇವಿಯ ಶಕ್ತಿಗಳನ್ನು ಹೇಳಿದುದಾಯಿತು. ಈ ಮೂವರೂ ಸೃಷ್ಟಿ-ಸ್ಥಿತಿ-ಸಂಹಾರಕಾರ್ಯಗಳಲ್ಲಿ ನಿಮಗೆ ನೆರವಾಗುವರು. ಓ ಸುರಶ್ರೇಷ್ಠ, ನನ್ನ ಪ್ರಿಯೆಯಾದ ಈ ಪ್ರಕೃತಿಯ ಅಂಶಗಳೇ ತ್ರಿದೇವಿಯರೆಂದು ತಿಳಿ' ಎಂದ ಶಿವ, ಮತ್ತೆ ಬ್ರಹ್ಮ ಮತ್ತು ವಿಷ್ಣುವಿನ ಕಾರ್ಯವನ್ನು ಹೀಗೆ ತಿಳಿಸಿದ.

'ವಿಷ್ಣು ನೀನು ಪ್ರಕೃತಿಯ ಅಂಶಭೂತಳಾದ ಲಕ್ಷ್ಮಿಯನ್ನು ಆಶ್ರಯಿಸಿ, ನಿನ್ನ ಪಾಲನಾಕೆಲಸವನ್ನು ಮಾಡು. ಎಲೈ ಬ್ರಹ್ಮನೇ, ನೀನು ಪ್ರಕೃತ್ಯಂಶಳಾದ ಸರಸ್ವತಿಯನ್ನು ಹೊಂದಿ, ನಿನ್ನ ಸೃಷ್ಟಿಕಾರ್ಯವನ್ನು ನೆರವೇರಿಸು. ನಾನು ನನ್ನ ಪ್ರಿಯೆಯ ಅಂಶಭೂತಳೂ, ಪರಾತತ್ಪರಳೂ ಆದ ಕಾಳಿಯ ಸಹಾಯದೊಡನೆ, ರುದ್ರರೂಪದಿಂದ ಉತ್ತಮವಾದ ಪ್ರಳಯ ಕಾರ್ಯವನ್ನೆಸಗುವೆ.

'ಈ ಪ್ರಪಂಚವು ನಾಲ್ಕು ಬಗೆಯ ವರ್ಣಗಳಿಂದ ಕೂಡಿದೆ. ಬ್ರಹ್ಮಚರ್ಯ, ಗೃಹಸ್ಥ ಮೊದಲಾದ ನಾಲ್ಕು ಆಶ್ರಮಗಳಿಂದಲೂ ಕೂಡಿದೆ. ಇದಲ್ಲದೆ ಇನ್ನೂ ವಿಧವಿಧವಾದ ಕೆಲಸಗಳಿಂದ ನೀವು ಸುಖವನ್ನು ಪಡೆಯುವಿರಿ. ವಿಷ್ಣು ನೀನು ನನ್ನ ಅಪ್ಪಣೆಯಂತೆ ಜ್ಞಾನವಿಜ್ಞಾನಗಳನ್ನುಳ್ಳವನಾಗಿ ಪ್ರಪಂಚಕ್ಕೆ ಹಿತವನ್ನೆಸಗುತ್ತಾ ಎಲ್ಲರಿಗೂ ಮುಕ್ತಿಯನ್ನು ನೀಡುವವನಾಗು. ನನ್ನನ್ನು ದರ್ಶನಮಾಡಿದರೆ ಯಾವ ಫಲ ಲಭಿಸುವುದೋ, ನಿನ್ನನ್ನು ದರ್ಶಿಸಿದರೂ ಅದೇ ಫಲ ಲಭಿಸಲಿ. ಹೀಗೆಂದು ನಿನಗೆ ವರವನ್ನು ಕೊಟ್ಟಿದ್ದೇನೆ. ಇದು ನಿಜ, ಸಂಶಯವಿಲ್ಲ. ಈ ಮಾತು ಸತ್ಯವಾದುದು.

'ನನ್ನ ಹೃದಯದಲ್ಲಿಯೇ ವಿಷ್ಣು ಇರುವನು. ವಿಷ್ಣುವಿನ ಹೃದಯದಲ್ಲಿ ನಾನಿರುವೆನು. ನಮ್ಮೀರ್ವರಲ್ಲಿ ಯಾರು ಭೇದವೆಣಿಸುವರೊ, ಅವರು ನನ್ನ ಹೃದಯ ಅರಿಯಲಾರರು. ಹರಿ ನನ್ನ ಎಡಭಾಗದಿಂದ ಹುಟ್ಟಿದರೆ, ಬ್ರಹ್ಮ ಬಲಭಾಗದಿಂದ ಹುಟ್ಟಿದ. ಮಹಾಪ್ರಳಯಕರ್ತನೂ ವಿಶ್ವಾತ್ಮಕನೂ ಆದ ರುದ್ರನು ನನ್ನ ಹೃದಯದಿಂದ ಹುಟ್ಟಿದವನು.

'ಎಲೈ ವಿಷ್ಣುವೇ, ಸತ್ವ-ರಜಸ್-ತಮಸ್ಸುಗಳೆಂಬ ಮೂರು ಗುಣಗಳನ್ನು ಅವಲಂಬಿಸಿ, ಸೃಷ್ಟಿ-ಸ್ಥಿತಿ-ಸಂಹಾರ ಕೃತ್ಯಗಳನ್ನೆಸಗುತ್ತೇನೆ. ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಹೆಸರಿನಿಂದ ನಾನೇ ನಿಮ್ಮ ರೂಪದಲ್ಲಿ ಮಾಯವಾಗಿ ತೋರುತ್ತೇನೆ. ಗುಣಗಳಿಗೆ ಸಿಲುಕದ ಸಾಕ್ಷಾತ್ ಶಿವನೇ, ಪ್ರಕೃತಿಗೂ ಪುರುಷನಿಗೂ ಮೇಲಾದವನು. ಆತನೇ ಪರಬ್ರಹ್ಮವು-ಅಭಿನ್ನನು-ಅನಂತನು-ಪೂರ್ಣನು-ನಿರ್ಲೇಪನು.

'ಮೂರು ಲೋಕಗಳಿಗೂ ಪಾಲಕನಾದ ಹರಿಯು ಒಳಗೆ ತಮೋಗುಣವುಳ್ಳವನೂ, ಬಾಹ್ಯದಲ್ಲಿ ಸತ್ತ್ವಗುಣವುಳ್ಳವನೂ ಆಗಿರುವನು. ಲಯಕರ್ತೃನಾದ ಹರನು, ಅಂತಃಸ್ಸತ್ವಗುಣವುಳ್ಳವನೂ, ಹೊರಗೆ ತಮೋಗುಣವುಳ್ಳವನೂ, ಆಗಿರುವನು. ಮೂರು ಜಗತ್ತುಗಳನ್ನೂ ಸೃಷ್ಟಿಸುವ ಬ್ರಹ್ಮನು ಒಳಗೂ ಹೊರಗೂ, ರಜೋಗುಣವುಳ್ಳವನು. ಹೀಗೆ ತ್ರಿಮೂರ್ತಿಗಳಲ್ಲಿ ಭಿನ್ನ ಗುಣಗಳಿದ್ದರೆ, ಶಿವನೊಬ್ಬನೇ ಗುಣಗಳಿಗೆ ಅತೀತನಾದವನು.

'ಎಲೈ ವಿಷ್ಣುವೇ, ನೀನು ಈ ಸೃಷ್ಟಿಕರ್ತನಾದ ಪಿತಾಮಹನನ್ನು ಪ್ರೀತಿಯಿಂದ ಪರಿಪಾಲಿಸು. ನನ್ನ ಅಪ್ಪಣೆಯಂತೆ ಮೂರು ಲೋಕಗಳಲ್ಲಿಯೂ ನೀನು ಪೂಜಿಸಲ್ಪಡುತ್ತೀಯೆ. ನಿನಗೂ ಮತ್ತು ಬ್ರಹ್ಮನಿಗೂ ರುದ್ರನೇ ಪೂಜ್ಯನು. ಮೂರು ಲೋಕಗಳಿಗೂ ಲಯಕಾರಕನಾದ ರುದ್ರನು, ಶಿವನ ಪೂರ್ಣಾವತಾರವಾಗಿರುತ್ತಾನೆ' ಎನ್ನುತ್ತಾನೆ. ನಂತರ ವಿಷ್ಣುವನ್ನುದ್ದೇಶಿಸಿ 'ಈ ಪಿತಾಮಹನಾದ ಬ್ರಹ್ಮನು ಮುಂಬರುವ ಪದ್ಮಕಲ್ಪದಲ್ಲಿ ನಿನಗೆ ಮಗನಾಗುವನು. ಆಗ ನೀನೂ ಮತ್ತು ಈ ಬ್ರಹ್ಮನೂ ನನ್ನನ್ನು ಕಾಣುವಿರಿ' ಎಂದು ತಿಳಿಸುತ್ತಾನೆ.

ಹೀಗೆ ಪುತ್ರ ನಾರದನ ಕೋರಿಕೆ ಮೇರೆಗೆ ಶಿವತತ್ವ ಬೋಧಿಸುವಾಗ ಬ್ರಹ್ಮನು 'ಮಹೇಶ್ವರನಾದ ಆ ಶಿವನು, ಅಸದಳವಾದ ಕೃಪೆಯನ್ನಿಟ್ಟು ನಮ್ಮ ಹುಟ್ಟು-ಕಾರ್ಯ ಭಾರಗಳನ್ನೆಲ್ಲಾ ಪ್ರೀತಿಯಿಂದ ತಿಳಿಸಿದ' ಎಂದು ಪರಮೇಶ್ವರನ ಗುಣಗಾನ ಮಾಡುತ್ತಾನೆ. ಇಲ್ಲಿಗೆ ಸೃಷ್ಟಿಖಂಡದ ಶಿವತತ್ವವರ್ಣನ'ಎಂಬ ಒಂಬತ್ತನೆಯ ಅಧ್ಯಾಯ ಮುಗಿಯುತ್ತದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಸಂಸಾರ ಕಲ್ಮಷಹಾರಕ

ಧರಣಿಗೋಳವು ಮೂಸೆ; ಜೀವಗಳನದರೊಳಗೆ |
ಪರಿಶುದ್ಧಿಗೊಳಿಸುವುದು ಸಂಸಾರತಾಪ ||
ಪರಿಪರಿಯ ಬಂಧು ಧರ್ಮದಿನ್ ಅಹಂಮತಿ ಕರಗೆ|
ಹರಡಿ ಹಬ್ಬುವುದಾತ್ಮ – ಮಂಕುತಿಮ್ಮ || 603 ||

ಪದ-ಅರ್ಥ: ಧರಣಿಗೋಳ = ಜಗತ್ತು, ಮೂಸೆ = -ಲೋಹಗಳನ್ನು ಕರಗಿಸಲು ಬಳಸುವ ಪಾತ್ರೆ, ಜೀವಗಳನದರೊಳಗೆ = ಜೀವಗಳನು + ಅದರೊಳಗೆ, ಧರ್ಮದಿನ್ = ಧರ್ಮದಿಂದ, ಅಹಂಮತಿ = ಅಹಂಕಾರ ಬುದ್ಧಿ, ಹಬ್ಬುವುದಾತ್ಮ = ಹಬ್ಬುವುದು + ಆತ್ಮ.

ವಾಚ್ಯಾರ್ಥ: ಈ ಜಗತ್ತೊಂದು ಲೋಹವನ್ನು ಕಾಯಿಸಿ ಕರಗಿಸುವ ಪಾತ್ರೆ. ಸಂಸಾರತಾಪ, ಜೀವಗಳನು ಅದರೊಳಗೆ ಕಾಯಿಸಿ ಪರಿಶುದ್ಧಿಗೊಳಿಸುವುದು. ಅನೇಕ ಬಂಧುಗಳ ಸಹವಾಸದಿಂದ, ಧರ್ಮಪರಿಪಾಲನೆಯಿಂದ ಅಹಂಕಾರದ ಬುದ್ಧಿ ಕರಗಿದಾಗ ಆತ್ಮಭಾವ ಹರಡಿ ಹಬ್ಬುತ್ತದೆ.

ವಿವರಣೆ: ಕೆಲವು ಲೋಹಗಳು ಸುಲಭವಾಗಿ ಕರಗುವವಲ್ಲ. ಅವುಗಳನ್ನು ಸಾಧಾರಣವಾದ ಪಾತ್ರೆಗಳಲ್ಲಿ ಕರಗಿಸಲೂ ಸಾಧ್ಯವಿಲ್ಲ. ಕಬ್ಬಿಣ, ತಾಮ್ರ, ಮಿಶ್ರಲೋಹಗಳನ್ನು ಕರಗಿಸಲು ಬಳಸುವ ಪಾತ್ರೆಯನ್ನು ಅತ್ಯಂತ ಹೆಚ್ಚಿನ ಉಷ್ಣತೆಯಿಂದಲೂ ಕರಗದಿಹ ವಸ್ತುಗಳಿಂದ ಮಾಡಲಾಗುತ್ತದೆ. ಅದನ್ನು ಮೂಸೆ ಎನ್ನುತ್ತಾರೆ. ಅದರಲ್ಲಿ ಕರಗಿಸುವ ವಸ್ತುವನ್ನು ಹಾಕಿ ಹೆಚ್ಚಿನ ಉಷ್ಣತೆಯಲ್ಲಿ ಕಾಸಿದರೆ ಆ ಲೋಹ ಕರಗುತ್ತದೆ. ಇಲ್ಲಿ ಒಂದು ವಿಶೇಷವಿದೆ. ಕಬ್ಬಿಣದಲ್ಲಿ ಇಂಗಾಲದ ಅಂಶ ಹೆಚ್ಚಿದ್ದು ಆ ಕಬ್ಬಿಣವನ್ನು ಗಡಸು ಮಾಡುತ್ತದೆ. ಆದರೆ ಅದನ್ನು ಚೆನ್ನಾಗಿ ಮೂಸೆಯಲ್ಲಿ ಕರಗಿಸುತ್ತ ಬಂದರೆ, ಇಂಗಾಲದ ಅಂಶ ಕಡಿಮೆಯಾಗುತ್ತ, ಹೆಚ್ಚು ಶುದ್ಧವಾಗಿ ಮೆದುವಾಗುತ್ತದೆ. ಅದರಂತೆ ಬಂಗಾರವನ್ನು ಮೂಸೆಯಲ್ಲಿ ಕರಗಿಸಿದಂತೆ, ಬೆಂಕಿಯಲ್ಲಿ ಹಾಯ್ದು ಬಂದು, ಬಂಗಾರ ತನ್ನಲ್ಲಿರುವ ಅಶುದ್ಧತೆಯನ್ನು ಕಳೆದುಕೊಂಡು ಪರಿಶುದ್ಧವಾಗುತ್ತದೆ. ಹೌದು. ಬೆಂಕಿಯಲ್ಲಿ ಕಾಯಿಸಿಕೊಳ್ಳುವ, ಕರಗಿಸಿಕೊಳ್ಳುವ ಕ್ರಿಯೆ ಸುಲಭವಲ್ಲ, ಪರಿಶ್ರಮದ್ದು. ಆದರೆ ಲೋಹವನ್ನು ಪರಿಶುದ್ಧಗೊಳಿಸುವುದಕ್ಕೆ ಅದೊಂದೇ ದಾರಿ.

ಕಗ್ಗ ಲೋಹವನ್ನು ಶುದ್ಧಗೊಳಿಸುವ ಈ ಪ್ರಕ್ರಿಯೆಯನ್ನು ಬದುಕಿಗೆ ಹೋಲಿಸುತ್ತದೆ. ಈ ಪ್ರಪಂಚವೇ ಒಂದು ಮೂಸೆ ಇದ್ದಂತೆ. ಸಂಸಾರವೇ ತಾಪ, ಬೆಂಕಿ. ಅದು ಜೀವಗಳನ್ನು ಮೂಸೆಯೊಳಗೆ, ಅಂದರೆ, ಪ್ರಪಂಚದೊಳಗೆ ಚೆನ್ನಾಗಿ ಕಾಯಿಸಿ ಕರಗಿಸುತ್ತದೆ. ಇದರಿಂದ ಜೀವಗಳಿಗೆ ತೊಂದರೆ, ಕಷ್ಟ ಎನ್ನಿಸಿದರೂ, ಅದು ಅವುಗಳನ್ನು ಪರಿಶುದ್ಧಗೊಳಿಸುತ್ತದೆ. ಸಂಸಾರದಲ್ಲಿ ಮೋಹ ನಮ್ಮನ್ನು ಸೆಳೆಯುತ್ತದೆ. ಮೋಹ ಒಂದು ಬಂಧವೇ. ಎಷ್ಟು ನಾವು ಸಂಸಾರದಲ್ಲಿ ಆಳಕ್ಕಿಳಿಯುತ್ತೇವೋ ಅಷ್ಟು ಬಂಧು ಬಾಂಧವರು, ಎನ್ನುವ ಹಗ್ಗಗಳು ನಮ್ಮನ್ನು ಎಳೆದಾಡಿಬಿಡುತ್ತವೆ, ಗಾಸಿ ಮಾಡುತ್ತವೆ. ಅವು ನಮ್ಮನ್ನು ಕುಲುಗಾಡಿಸಿ ನಮ್ಮ ಅಹಂಕಾರಗಳನ್ನು, ತೋರಿಕೆಗಳನ್ನು ಕರಗಿಸುತ್ತವೆ. ಹಾಗೆಂದರೆ, ಸಂಸಾರವು ತಾಪಕಾರಕ ಹೇಗೋ, ಹಾಗೆಯೇ ಅದು ಕಲ್ಮಷಹಾರಕವೂ ಹೌದು. ಮನೆಯಲ್ಲಿ ಮಕ್ಕಳು, ಕಿರಿಯರು ತಿರುಗಿ ನಿಂತಾಗ, ಹಿರಿಯರು ಕಣ್ಮರೆಯಾದಾಗ, ಬದುಕಿನ ಸುತ್ತಿಗೆಯ ಪೆಟ್ಟುಗಳು ಬಿದ್ದು ಬಾಳು ಹದವಾಗುತ್ತದೆ. ಅದರೊಂದಿಗೆ ಬದುಕು ಮಾಗುತ್ತದೆ. ತಾರುಣ್ಯದಲ್ಲಿದ್ದ ಅಹಂಕಾರ, ಗರ್ವ ಮರೆಯಾಗಿ ಮಾರ್ದವತೆ ಮೂಡುತ್ತದೆ. ಇದರ ಜೊತೆಗೆ ಧರ್ಮದಂತೆ ನಡೆಯುವ ಬುದ್ಧಿ ಇದ್ದರಂತೂ, ಅದು ಸಂಸಾರ ತಾಪದ ಜೊತೆಗೆ ಸೇರಿ ಬದುಕನ್ನು ಇನ್ನೂ ಸುಂದರವಾಗಿಸುತ್ತದೆ. ಒಂದು ಬಾರಿ ಮನದ ಕಲ್ಮಷ ಕರಗಿದರೆ, ಆತ್ಮದ ಚಿಂತನೆ ಬರುತ್ತದೆ. ಅದು ನಿಧಾನವಾಗಿ ಹರಡಿ ಆತ್ಮಪ್ರಜ್ಞೆಯಾಗಿ ನಂತರ ವಿಶ್ವಾತ್ಮಪ್ರಜ್ಞೆಯಾಗಿ ಬೆಳೆಯುತ್ತದೆ. ಇದೆಲ್ಲ ಆಗುವುದು ಸಂಸಾರದ ಮತ್ತು ಧರ್ಮದ ಕಾವಿನಿಂದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಏಪ್ರಿಲ್ 11, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ - ವಸಂತ ಋತು - ಮೀನ ಮಾಸದ 28 ನೇ ದಿನ ತಿಥಿ: (ಚೈತ್ರ ಶುದ್ಧ) ದಶಮಿ ಗಂ. 28-31 ನಕ್ಷತ್ರ: ಪುಷ್ಯ ಗಂ. 06-51
ಯೋಗ: ಧೃತಿ ಗಂ. 12-18, **ಕರಣ:** ತೈತಿಲ ಗಂ. 15-59.
ರಾಹುಕಾಲ: ಬೆಳಿಗ್ಗೆ 07:30–09:00
ಸೂರ್ಯೋದಯ: 06-23 **ಸೂರ್ಯಾಸ್ತ:** 06-40
ಮುಸ್ಲಿಂ ದಿನಾಂಕ: 09 ರಂಜಾನ್
ಅದೃಷ್ಟ ಸಂಖ್ಯೆ: 2, 10

ಮೇಷ: ಅನವಶ್ಯಕವಾಗಿ ಋಣಾತ್ಮಕವಾಗಿ ಚಿಂತಿಸದಿರಿ. ಬಹಳ ದಿನಗಳ ಬಳಿಕ ಬಂಧು- ಮಿತ್ರರ ಜೊತೆಗಿನ ಒಡನಾಟ ಸಂತೋಷ ತರಲಿದೆ. ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಓಡಾಡುವ ಸಂದರ್ಭ ಎದುರಾಗುವುದು.

ವೃಷಭ: ನ್ಯಾಯಾಂಗ ಇಲಾಖೆಯವರಿಗೆ ಮುಂಬಡ್ತಿ ಅಥವಾ ದೂರದ ಊರಿಗೆ ವರ್ಗಾವಣೆಯಾಗುವ ಸಾಧ್ಯತೆಗಳಿವೆ. ಕಾನೂನು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದಲ್ಲಿ ಯಶಸ್ಸು. ಮನೆಯಲ್ಲಿ ಸಂತಾನದ ಶುಭ ಸುದ್ದಿಯನ್ನು ಕೇಳುವಿರಿ.

ಮಿಥುನ: ಬೇರೆಯವರ ಕೆಲಸವನ್ನು ನಿಮ್ಮ ಕೆಲಸವೆಂದೇ ತಿಳಿದು ಯಾವುದೇ ಬೇಧಭಾವವಿಲ್ಲದೆ ಅದನ್ನು ಯಶಸ್ವಿಯಾಗಿ ಮಾಡಿ ಮುಗಿಸುವಿರಿ. ಮಗನಿಗಾಗಿ ಹೊಸ ವ್ಯಾಪಾರ ಮಳಿಗೆಯನ್ನು ಆರಂಭಿಸಬಹುದು.

ಕರ್ಕಾಟಕ: ಚಾಲಕ ವೃತ್ತಿಯವರು ಸ್ವಂತ ವಾಹನ ಖರೀದಿಯ ದಾರಿಯನ್ನು ನೋಡಬಹುದು. ಎಲ್ಲಾ ಸಂದರ್ಭದಲ್ಲೂ ವಿವೇಚನೆಯಿಂದ ಆಲೋಚಿಸಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಉತ್ತಮ.

ಸಿಂಹ: ಈ ದಿನ ನೀವು ತುಂಬಾ ಭಾವುಕರಾಗಿರುವಿರಿ. ತಂದೆ- ತಾಯಿಯ ಆರೋಗ್ಯದಲ್ಲಿ ಅಧಿಕವಾದ ಗಮನವಿರಲಿ. ಮನೆಯಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಹೊಣೆಗಾರಿಕೆ ನಿಮ್ಮದಾಗಿರುತ್ತದೆ.

ಕನ್ಯಾ: ಹೊಸ ಮನೆಯನ್ನು ಕೊಳ್ಳುವ ಬಗ್ಗೆ ದಲ್ಲಾಳಿಗಳೊಂದಿಗೆ ಮಾತುಕತೆ ನಡೆಸಬಹುದು. ಕಚೇರಿಯಲ್ಲಿ ಸಹೋದ್ಯೋಗಿಗಳ ನಡುವೆ ಇದ್ದ ಮನಸ್ತಾಪವನ್ನು ನಿಮ್ಮ ಮುಕ್ತ ಹಾಗೂ ಸ್ಪಷ್ಟ ಮಾತುಕತೆಗಳಿಂದ ಬಗೆಹರಿಸುವಿರಿ.

ತುಲಾ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಈಗಿನ ಅಗತ್ಯಗಳನ್ನು ಪೂರೈಸಿಕೊಳ್ಳುವ ಕಡೆಗೆ ಗಮನಹರಿಸಿ. ಪೊಲೀಸ್ ವರಿಷ್ಠರಿಗೆ ವರ್ಗಾವಣೆಯ ಸಂಭವ. ತೀರ್ಥಯಾತ್ರೆಗೆ ಹೋಗುವ ಮನಸ್ಸಾಗುವುದು.

ವೃಶ್ಚಿಕ: ಕೆಲವು ಸಂದರ್ಭದಲ್ಲಿ ಅಧೈರ್ಯ ಮತ್ತು ಮಾನಸಿಕ ಜಿಗುಪ್ಸೆಯಂತಹ ಸ್ಥಿತಿಯನ್ನು ಹೊಂದುವಿರಿ. ದಿನಸಿ ವ್ಯಾಪಾರಿಗಳಿಗೆ ಅಲ್ಪ ಲಾಭವಾಗಲಿದೆ. ಆಕಸ್ಮಿಕವಾಗಿ ಹಳೆಯ ಗೆಳೆಯನ ಆಗಮನ ಅಥವಾ ಭೇಟಿಯಾಗಲಿದೆ.

ಧನು: ಈ ದಿನ ನಿಮ್ಮ ಸುತ್ತಮುತ್ತಲಲ್ಲಿ ನಡೆದ ಘಟನೆಗಳಿಂದ ನಿಮ್ಮ ಮನಸ್ಸು ಪರಿವರ್ತನೆಯಾಗಲಿದೆ. ಸರ್ಕಾರಿ ಸಂಬಂಧಿತ ಕೆಲಸಗಳು ಪ್ರಗತಿಯಾಗುವುದು. ಮನೆ , ಉದ್ಯೋಗ ಬದಲು ವಿಚಾರದಲ್ಲಿ ನಿರ್ದಿಷ್ಟ ತೀರ್ಮಾನ ಆಗಲಿದೆ.

ಮಕರ: ಕಾರ್ಮಿಕರಿಗೆ, ಕೃಷಿಕರಿಗೆ ಈ ದಿನ ಅಶುಭ ಫಲಗಳೇ ಅಧಿಕವಾಗಿದ್ದೂ, ಅಧಿಕ ಖರ್ಚು ಸಂಭವಿಸಬಹುದು. ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಈಶ್ವರನ ಸೇವೆಯು ಶುಭವನ್ನುಂಟು ಮಾಡುವುದು.

ಕುಂಭ: ನಿಮ್ಮ ಕಾರ್ಯವೈಖರಿಗೆ ಶ್ಲಾಘನೆ ಸಲ್ಲಲಿದೆ. ಆದಾಯದಲ್ಲಿ ಅಭಿವೃದ್ಧಿ ತೋರಿಬಂದು ಧಾರ್ಮಿಕ ಅಥವಾ ಪುಣ್ಯಕಾರ್ಯಗಳನ್ನು ಮಾಡುವುದರ ಬಗ್ಗೆ ಮನಸ್ಸಾಗುವುದು. ವಿವಾಹದ ಪ್ರಯತ್ನಗಳು ಯಶಸ್ಸನ್ನು ಹೊಂದಲಿದೆ.

ಮೀನ: ಕಬ್ಬಿಣದ ಕೆಲಸಗಾರರಿಗೆ ಲಾಭವಾಗಲಿದೆ. ಈ ದಿನ ನಿಮ್ಮಿಂದಾಗುವ ಹಲವು ಕಾರ್ಯದಲ್ಲಿ ದೇಹಾಯಾಸ ಮಾತ್ರ ನಿಮಗೆ ಸಿಗುವುದು. ಅನವಶ್ಯಕವಾಗಿ ಋಣಾತ್ಮಕ ಚಿಂತನೆಗಳನ್ನು ಮಾಡದಿರಿ.

ಪದಬಂಧ 4924

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಣವಂತನನ್ನು ಹೀಗೂ ಕರೆವರು (4)
3.ಕನ್ನಡಿಗ ಜೋಡಿಯ ಹನಿಮೂನ್! (4)
5.ಆನೆಯ ದಾಡೆ (3)
6.ಹಾಲು ಮೊಸರು ಮಾರುವವನು (4)
8.ನಯವಾಗಿ ಬಂದಿರುವ ನಮ್ರತೆ! (3)
10.ಈತ ಪರದೇಶದವನು (3)
12.ನಡುವೆ ಗರ ಬಡಿದದ್ದಕ್ಕೇ ಈ ಗೊಂದಲ! (4)
15.ಗರದಲ್ಲಿ ಗವಿಯಿದೆ! (3)
16.ಸಿದ್ಧತೆ ಅಥವಾ ಏರ್ಪಾಟು (4)
17.ಅಡೆತಡೆಯಿಲ್ಲದೆ ಸ್ವೇಚ್ಛೆಯಾದದು (4)

ಮೇಲಿಂದ ಕೆಳಕ್ಕೆ
1.ರಾಗಬದ್ಧವಾಗಿ ಕಾವ್ಯವನ್ನು ಓದುವಿಕೆ (3)
2.ವಿಷವಿಲ್ಲಿ ಉಲ್ಟಾ ಪಲ್ಟಾಆಗಿಬಿಟ್ಟಿದೆ (3)
3.ಮನದಿಂದ ಮಾಡಿಕೊಂಡಿರುವ ಅರಿಕೆ (3)
4.ಹರಿಯುವಂಥ ವಸ್ತು (2)
7.ಇದು ಕನ್ನಡಿಗನ ಲೈಬ್ರರಿ! (5)
9.ಈತ ಮೃತ್ಯು ದೇವತೆ ಆಳು (5)
11.ಕೈಯಲ್ಲಿರುವ ಹಣ (3)
12.ಹರನ ಬಳಿಯಿರಿಸಿದ ಮಣ್ಣಿನ ಬಾನಿ (3)
13.ಉಲ್ಟಾ ಕಾಣುತ್ತಿರುವ ಉಪ್ಪು (3)
14.ಮೂರು ಮಾತ್ರೆಗಳ ಕಾಲವನ್ನು ಹೊಂದಿರುವ ಅಕ್ಷರ (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
■		■	■	■	■	■		■
■		■	■	■	■	■		■
■	10		11	■	12			13
14	■	■	15			■	■	
16				■	17			

4923 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕಡಗ 3.ಸಂಗಾತಿ
5.ಮಾರ್ಗದರ್ಶಕ 6.ದನ
8.ಅಂಕ 9.ನಾರಿ
10.ಜನ 14.ರಾಸಾಯನಿಕ
15.ಟಗರು 16.ರಿಡಾಗ

ಮೇಲಿಂದ ಕೆಳಕ್ಕೆ:
1.ಕಲಾವಿದ 2.ಗಮಾರ
3.ಸಂಕರ 4.ತಿಲೋದಕ
7.ನಗಾರಿ 8.ಅಂಗಜ
9.ನಾಸಾಪುಟ 11.ನಟ್ಟವಿಗ
12.ಕರಾರು 13.ಮಂಕರಿ

ಸುಡೊಕು 5310

5				7		3		8
			2		4		1	
7		1		5		4		9
	9		5				7	
1				4				3
	6				8		5	
9		5			6	2		1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5309 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4



ಚಿನ್ನ ಆಮದು ಶೇ 33ರಷ್ಟು ಹೆಚ್ಚಳ



ನವದೆಹಲಿ (ಪಿಟಿಐ): ಚಿನ್ನದ ಆಮದು ಪ್ರಮಾಣವು 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2021–22ನೇ ಹಣಕಾಸು ವರ್ಷದಲ್ಲಿ ಶೇಕಡ 33.34ರಷ್ಟು ಏರಿಕೆ ಆಗಿದೆ.

ಮೌಲ್ಯದ ಲೆಕ್ಕದಲ್ಲಿ ₹ 2.63 ಲಕ್ಷ ಕೋಟಿಯಿಂದದ ₹ 3.50 ಲಕ್ಷ ಕೋಟಿಗೆ ಏರಿಕೆ ಆಗಿದೆ. ಬೇಡಿಕೆ ಹೆಚ್ಚಾಗಿರುವುದೇ ಆಮದು ಹೆಚ್ಚಳಕ್ಕೆ ಕಾರಣ.

ಚಿನ್ನದ ಆಮದು ಹೆಚ್ಚಾಗಿರುವುದರಿಂದ ದೇಶದ ವ್ಯಾಪಾರ ಕೊರತೆ ಅಂತರವು ₹ 7.79 ಲಕ್ಷ ಕೋಟಿಯಿಂದ ₹ 14.62 ಲಕ್ಷ ಕೋಟಿಗೆ ಏರಿಕೆ ಕಂಡಿದೆ.

ಅತಿ ಹೆಚ್ಚು ಚಿನ್ನ ಆಮದು ಮಾಡಿಕೊಳ್ಳುವ ದೇಶಗಳ ಸಾಲಿನಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. ಚೀನಾ ಮೊದಲ ಸ್ಥಾನದಲ್ಲಿದೆ. ದೇಶದ ಚಿನ್ನಾಭರಣ ಉದ್ಯಮವು ಹೆಚ್ಚಿನ ಪ್ರಮಾಣದಲ್ಲಿ ಚಿನ್ನವನ್ನು ಆಮದು ಮಾಡಿಕೊಳ್ಳುತ್ತಿದೆ. ರತ್ನ ಮತ್ತು ಚಿನ್ನಾಭರಣ ರಫ್ತು ಶೇ 30ರಷ್ಟು ಹೆಚ್ಚಾಗಿದ್ದು ₹ 2.96 ಲಕ್ಷ ಕೋಟಿಗೆ ತಲುಪಿದೆ.

2021ರ ಏಪ್ರಿಲ್‌ನಿಂದ 2022ರ ಫೆಬ್ರುವರಿ ಅವಧಿಯಲ್ಲಿ 842 ಟನ್ ಚಿನ್ನ ಆಮದಾಗಿದೆ.

ದೇಶದ ಚಾಲ್ತಿ ಖಾತೆ ಕೊರತೆಯು ಅಕ್ಟೋಬರ್–ಡಿಸೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯ ಶೇ 2.7ಕ್ಕೆ (₹ 1.74 ಲಕ್ಷ ಕೋಟಿಗೆ) ತಲುಪಿದೆ ಎಂದು ಆರ್‌ಬಿಐ ಮಾಹಿತಿ ನೀಡಿದೆ.

ಬಿಕ್ಕಟ್ಟಿನ ಸಂದರ್ಭದಲ್ಲಿ ಹೂಡಿಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಆರ್ಥಿಕ ಹಿಂಜರಿತ, ಹಣಕಾಸಿನ ಬಿಕ್ಕಟ್ಟು, ಆಹಾರ ಕೊರತೆ, ನಿರುದ್ಯೋಗ, ರಾಜಕೀಯ ಬಿಕ್ಕಟ್ಟು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿನ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಷೇರು ಮಾರುಕಟ್ಟೆಗಳು ತಮ್ಮದೇ ಆದ ರೀತಿಯಲ್ಲಿ ಪ್ರತಿಕ್ರಿಯೆ ನೀಡುತ್ತವೆ. ಸದ್ಯ ಷೇರುಪೇಟೆ ಹೂಡಿಕೆದಾರರ ತಲೆಬಿಸಿಗೆ ಕಾರಣವಾಗಿರುವ ವಿಚಾರ ಉಕ್ರೇನ್–ರಷ್ಯಾ ನಡುವಿನ ಯುದ್ಧ. ಯುದ್ಧವು ಆ ಎರಡು ದೇಶಗಳ ನಡುವೆ ನಡೆಯುತ್ತಿದ್ದರೂ ಅದರ ಪರಿಣಾಮ ಮಾತ್ರ ಎಲ್ಲ ಜಾಗತಿಕ ಮಾರುಕಟ್ಟೆಗಳ ಮೇಲೆ ಆಗುತ್ತಿದೆ.

ಸಾಮಾನ್ಯವಾಗಿ ಇಂತಹ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಸಣ್ಣ (ರಿಟೇಲ್) ಹೂಡಿಕೆದಾರರು ತಮ್ಮ ಹೂಡಿಕೆ ಮೊತ್ತ ಕರಗಿಹೋಗಬಹುದೆಂಬ ಆತಂಕಕ್ಕೆ ಬಿದ್ದು ಎಲ್ಲ ಷೇರುಗಳನ್ನು ಇದ್ದ ಬೆಲೆಗೆ ಮಾರಾಟ ಮಾಡಿ ನಷ್ಟ ಅನುಭವಿಸುವುದಿದೆ. ತಮ್ಮ ಬಳಿ ಇರುವ ಉತ್ತಮ ಕಂಪನಿಗಳ ಷೇರುಗಳು ಕೂಡ ಭಾರೀ ಕುಸಿತ ಕಾಣುವುದನ್ನು ಕಂಡು ಕಂಗಾಲಾಗುತ್ತಾರೆ. ಇಷ್ಟು ಪೀಠಿಕೆ ಓದಿದ ಮೇಲೆ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅನುಸರಿಸಬೇಕಾದ ಹೂಡಿಕೆ ತಂತ್ರ ಯಾವುದು ಎಂಬ ಪ್ರಶ್ನೆ ನಿಮಗೆ ಎದುರಾಗಿರುತ್ತದೆ. ಅದಕ್ಕೆ ಉತ್ತರ ಕಂಡುಕೊಳ್ಳುವ ಯತ್ನ ನಡೆಸೋಣ.

ಯುದ್ಧ ಮತ್ತು ಷೇರು ಹೂಡಿಕೆ: ಯುದ್ಧದ ಸಂದರ್ಭದಲ್ಲಿ ಕೆಲವು ವಲಯಗಳ ಕಂಪನಿಗಳು ಉತ್ತಮ ರೀತಿಯಲ್ಲಿ ಬೆಳವಣಿಗೆ ಸಾಧಿಸಿದರೆ, ಕೆಲವು ಕಂಪನಿಗಳು ಸಂಕಷ್ಟದ ಸನ್ನಿವೇಷ ಎದುರಿಸುತ್ತವೆ. ವ್ಯಾಪಾರ ವ್ಯವಹಾರಕ್ಕೆ ಅಡಚಣೆ, ಹಣದುಬ್ಬರ, ಕಚ್ಚಾ ವಸ್ತುಗಳ ಲಭ್ಯತೆ ಹೀಗೆ ಅನೇಕ ಅಂಶಗಳು ಕಂಪನಿಗಳ ಲಾಭಾಂಶದ ಮೇಲೆ ಪರಿಣಾಮ ಬೀರುತ್ತವೆ. ಉದಾಹರಣೆಗೆ ಕಮಾಡಿಟಿ ಮಾರುಕಟ್ಟೆಯಲ್ಲಿ ಉಕ್ರೇನ್ ಮತ್ತು ರಷ್ಯಾ ಪ್ರಮುಖ ಪಾತ್ರ ವಹಿಸುತ್ತವೆ. ಉಕ್ರೇನ್ ದೊಡ್ಡ ಪ್ರಮಾಣದಲ್ಲಿ ಗೋಧಿ ಮತ್ತು ಅಡುಗೆ ಎಣ್ಣೆ ಉತ್ಪಾದಿಸುವ ದೇಶ. ರಷ್ಯಾ ಅತಿಹೆಚ್ಚು ನಿಕಲ್ (ಬಿಳಿಲೋಹ) ಉತ್ಪಾದಿಸುತ್ತದೆ. ನೈಸರ್ಗಿಕ ಅನಿಲ ಉತ್ಪಾದನೆಯಲ್ಲಿ ರಷ್ಯಾ ಎರಡನೇ ಸ್ಥಾನದಲ್ಲಿದೆ. ತೈಲ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಯುದ್ಧದ ಕಾರಣದಿಂದ ಇವುಗಳ ಉತ್ಪಾದನೆ ಕುಂಠಿತವಾದಾಗ ಅದು ಬೆಲೆ ಏರಿಕೆಗೆ ದಾರಿ ಮಾಡಿಕೊಡುತ್ತದೆ.

ಈ ಬೆಳವಣಿಗೆಯಿಂದ ಷೇರುಪೇಟೆಯಲ್ಲಿರುವ ಕಮಾಡಿಟಿ ಆಧಾರಿತ ಕಂಪನಿಗಳಿಗೆ ಒಂದಿಷ್ಟು ಲಾಭವಾದರೂ ಬೆಲೆ ಏರಿಕೆಯಿಂದ ಬಹುಪಾಲು ಕಂಪನಿಗಳ ಲಾಭಾಂಶದಲ್ಲಿ ಇಳಿಕೆಯಾಗುತ್ತದೆ. ಪರಿಣಾಮವಾಗಿ ಷೇರುಪೇಟೆ ಸೂಚ್ಯಂಕಗಳು ಶೇಕಡ 30ರಿಂದ ಶೇ 50ರವರೆಗೆ ಏರಿಳಿತ ಕಾಣುವುದಿದೆ. ಆದರೆ ಬಿಕ್ಕಟ್ಟಿನ ಕಾರ್ಮೋಡ ಸರಿದ ಒಂದೇ ವರ್ಷದಲ್ಲಿ ಮಾರುಕಟ್ಟೆ ಸೂಚ್ಯಂಕಗಳು ಚೇತರಿಸಿಕೊಂಡಿರುವುದು ಕಂಡುಬಂದಿದೆ. ಇತಿಹಾಸದ ಪುಟಗಳನ್ನು ತೆರೆದು ನೋಡಿದಾಗ ದೊಡ್ಡ ಕುಸಿತದ ಬಳಿಕ ದೊಡ್ಡ ಪ್ರಮಾಣದ ಓಟವನ್ನು ಮಾರುಕಟ್ಟೆಗಳು ಕಂಡಿವೆ ಎಂಬುದು ಗೊತ್ತಾಗುತ್ತದೆ.

ಷೇರುಪೇಟೆ ಗಣನೀಯ ಕುಸಿತ ಕಂಡಾಗ ಏನು ಮಾಡಬೇಕು:? 'ಬೇರೆಯವರು ದುರಾಸೆಯಿಂದ ಹೂಡಿಕೆ ಮಾಡುವಾಗ ನೀವು ಸ್ವಲ್ಪ ಎಚ್ಚರಿಕೆಯಿಂದ ಇರಿ; ಬೇರೆಯವರು ಹೆದರಿಕೊಳ್ಳುವಾಗ ನೀವು ದುರಾಸೆಯಿಂದ ಹೂಡಿಕೆ ಮಾಡಿ' ಎಂದು ಹೂಡಿಕೆ ತಜ್ಞ ವಾರನ್ ಬಫೆಟ್ ಹೇಳುತ್ತಾರೆ. ಷೇರುಪೇಟೆ ಕುಸಿತ ಕಂಡಾಗ ಉತ್ತಮ ಕಂಪನಿಗಳ ಷೇರುಗಳನ್ನು ದೀರ್ಘಾವಧಿಗೆ ಖರೀದಿಸಲು ಒಳ್ಳೆಯ ಅವಕಾಶ ಸಿಕ್ಕಂತಾಗುತ್ತದೆ ಎನ್ನುವುದೇ ಈ ಮಾತಿನ ತಾತ್ಪರ್ಯ. ಆದರೆ ಒಳ್ಳೆಯ ಕಂಪನಿಗಳನ್ನು ಗುರುತಿಸುವಾಗ ಸಾಕಷ್ಟು ತಯಾರಿ ಮಾಡಿಕೊಳ್ಳಬೇಕು. ಅವುಗಳ ಹಣಕಾಸಿನ ಸ್ಥಿತಿಗತಿ. ಕಂಪನಿಯ ಆಡಳಿತ ಮಂಡಳಿಯಲ್ಲಿ ಯಾರಿದ್ದಾರೆ ಎನ್ನುವ ಮಾಹಿತಿ ಸೇರಿದಂತೆ ಭವಿಷ್ಯದ ಮುನ್ನೋಟದ ಅಂದಾಜು ನಿಮ್ಮಲ್ಲಿರಬೇಕು.

ಮಾರುಕಟ್ಟೆ ಕುಸಿತದ ಹಾದಿಯಲ್ಲಿರುವಾಗ ಹಣಕಾಸಿಗೆ ಸಂಬಂಧಿಸಿದ ಕಂಪನಿಗಳು, ಜ್ಯುವೆಲರಿ ಕಂಪನಿಗಳು, ಆಟೋಮೊಬೈಲ್ ಕಂಪನಿಗಳು, ಸಿನಿಮಾ ಥಿಯೇಟರ್ ನಡೆಸುವ ಕಂಪನಿಗಳು, ಟ್ರಾವೆಲ್ ಉದ್ಯಮದ ಕಂಪನಿಗಳನ್ನು ಹೂಡಿಕೆಗೆ ಹೆಚ್ಚು ಪರಿಗಣಿಸದಿರುವುದು ಒಳಿತು. ದಿನಬಳಕೆ ವಸ್ತುಗಳಾದ ಅಕ್ಕಿ, ಸೋಪು, ಪೇಸ್ಟ್, ಗೋಧಿ, ಔಷಧ ಮುಂತಾದ ಕಂಪನಿಗಳಲ್ಲಿ ಹೂಡಿಕೆ ಪರಿಗಣಿಸಬಹುದು.

ನಷ್ಟ ಸರಿದೂಗಿಸಿಕೊಳ್ಳಿ: ಬಿಕ್ಕಟ್ಟಿನ ಸಂದರ್ಭಗಳಲ್ಲಿ ಷೇರು ಹೂಡಿಕೆ ಮಾಡುವಾಗ ಬಳಸಿಕೊಳ್ಳಬೇಕಾದ ತಂತ್ರಗಳಲ್ಲಿ ಷೇರು ಹೂಡಿಕೆ ನಷ್ಟ ಸರಿದೂಗಿಸುವ ಪ್ರಕ್ರಿಯೆಯೂ ಒಂದು. ನಷ್ಟವನ್ನು ಸರಿದೂಗಿಸುವುದು (Set off of losses) ಅಂದರೆ ನಿರ್ದಿಷ್ಟ ವರ್ಷದಲ್ಲಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದಾಗ ಆದ ಲಾಭ ಮತ್ತು ನಷ್ಟವನ್ನು ಹೊಂದಾಣಿಕೆ ಮಾಡುವ ಪ್ರಕ್ರಿಯೆ. ಆದರೆ ನೆನಪಿರಲಿ ದೀರ್ಘಾವಧಿ ಬಂಡವಾಳ ನಷ್ಟ (LTCL- Long Term Capital Loss) ಆದಾಗ ಅದನ್ನು ದೀರ್ಘಾವಧಿ ಬಂಡವಾಳ ಗಳಿಕೆ (LTCG) ಜತೆ ಮಾತ್ರ ಸರಿದೂಗಿಸಬಹುದು. ಆದರೆ ಅಲ್ಪಾವಧಿ ಬಂಡವಾಳ ನಷ್ಟ (STCL – Short Term Capital Loss) ಉಂಟಾದಾಗ ಅದನ್ನು ಅಲ್ಪಾವಧಿ ಬಂಡವಾಳ ಗಳಿಕೆ (STCG) ಅಥವಾ ದೀರ್ಘಾವಧಿ ಬಂಡವಾಳ ಗಳಿಕೆ (LTCG) ಜತೆ ಹೊಂದಿಸಬಹುದು.

ಉದಾಹರಣೆ-1: ನೀವು ಒಂದು ವರ್ಷದಲ್ಲಿ 10 ಬಾರಿ ಷೇರುಗಳ ಮಾರಾಟ ಮಾಡಿದ್ದು, ಅದರಲ್ಲಿ ಎಂಟು ಬಾರಿ ಲಾಭ ಎರಡು ಬಾರಿ ನಷ್ಟ ಅನುಭವಿಸಿದ್ದೀರಿ ಎಂದಿಟ್ಟುಕೊಳ್ಳಿ. ಎಂಟು ಬಾರಿ ಷೇರುಗಳ ಮಾರಾಟ ಮಾಡಿದಾಗ ₹ 60 ಸಾವಿರ ಲಾಭವಾಗಿದೆ ಎಂದು ಭಾವಿಸೋಣ. ಇನ್ನುಳಿದ ಎರಡು ಬಾರಿ ಷೇರುಗಳನ್ನು ಮಾರಾಟ ಮಾಡಿದಾಗ ₹ 50 ಸಾವಿರ ನಷ್ಟವಾಗಿದೆ ಎಂದುಕೊಳ್ಳೋಣ. ಈ ಸಂದರ್ಭದಲ್ಲಿ ನೀವು ₹ 60 ಸಾವಿರ ಲಾಭದ ಮೇಲೆ ತೆರಿಗೆ ಕಟ್ಟಬೇಕಿಲ್ಲ. ₹ 60 ಸಾವಿರದಲ್ಲಿ ₹ 50 ಸಾವಿರವನ್ನು (ಅಂದರೆ, ನಷ್ಟದ ಮೊತ್ತ) ಕಳೆದು ₹ 10 ಸಾವಿರದ ಮೇಲೆ ಮಾತ್ರ ಶೇ 15ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅನಿಶ್ಚಿತತೆಯ ನಡುವೆ ಅಲ್ಪ ಏರಿಕೆ



ಏಪ್ರಿಲ್ 08ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಪ್ರಮಾಣದ ಏರಿಕೆ ದಾಖಲಿಸಿವೆ. 59,447 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.28ರಷ್ಟು ಗಳಿಸಿಕೊಂಡಿದೆ. 17,784 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.64ರಷ್ಟು ಗಳಿಕೆ ದಾಖಲಿಸಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 6,337.53 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ, ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,161.54 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.7ರಷ್ಟು ಜಿಗಿದಿದೆ, ಮಿಡ್ ಕ್ಯಾಪ್ ಸೂಚ್ಯಂಕ ಶೇ 3.5ರಷ್ಟು ಜಿಗಿದಿದೆ. ಮಿಡ್ ಕ್ಯಾಪ್‌ನಲ್ಲಿ ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್, ಟಾಟಾ ಪವರ್, ಭಾರತ್ ಎಲೆಕ್ಟ್ರಾನಿಕ್ಸ್, ವೋಡಾಫೋನ್ ಐಡಿಯಾ, ಜೆಎಸ್‌ಡಬ್ಲ್ಯು ಎನರ್ಜಿ, ಎನ್‌ಎಚ್‌ಪಿಸಿ ಉತ್ತಮ ಗಳಿಕೆ ಕಂಡಿವೆ. ಆರ್‌ಬಿಎಲ್ ಬ್ಯಾಂಕ್, ರಾಜೇಶ್ ಎಕ್ಸ್‌ಪೋರ್ಟ್ಸ್, ಎಂಫಸಿಸ್ ಮತ್ತು ಜೀ ಎಂಟರ್‌ಟೇನ್ಮೆಂಟ್ ಎಂಟರ್‌ಪ್ರೈಸಸ್ ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಜಿಗಿದಿದೆ. ಅದಾನಿ ಗ್ರೀನ್ ಎನರ್ಜಿ, ಅಂಬುಜಾ ಸಿಮೆಂಟ್ಸ್, ನೈಕಾ, ಟಾಟಾ ಮೋಟರ್ಸ್ – ಡಿವಿಆರ್, ಹ್ಯಾವೆಲ್ಸ್ ಇಂಡಿಯಾ ಗಳಿಸಿಕೊಂಡಿವೆ.

ಮುನ್ನೋಟ : ಭಾರತೀಯ ರಿಸರ್ವ್ ಬ್ಯಾಂಕ್ ಕಳೆದ ವಾರ ಬಡ್ಡಿ ದರ ಹೆಚ್ಚಳ ಮಾಡದಿರುವುದಕ್ಕೆ ಮಾರುಕಟ್ಟೆ ಸಕಾರಾತ್ಮಕವಾಗಿ ಸ್ಪಂದಿಸಿದೆ. ಈಗ ಹೂಡಿಕೆದಾರರ ಚಿತ್ತ ತ್ರೈಮಾಸಿಕ ಫಲಿತಾಂಶಗಳತ್ತ ನೆಟ್ಟಿದೆ. ಈ ವಾರ ಟಿಸಿಎಸ್, ಇನ್ಫೊಸಿಸ್, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಪ್ರೂಡೆನ್ಸಿಯಲ್ ಲೈಫ್ ಇನ್ಶೂರೆನ್ಸ್ ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ದೇಶಿ ವಿದ್ಯಮಾನಗಳು ಮತ್ತು ಜಾಗತಿಕ ವಿದ್ಯಮಾನಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಬೆಲೆ ಏರಿಕೆ: ವಿಮಾನದಲ್ಲಿ ಸಚಿವೆ ಸ್ಮೃತಿಗೆ ತರಾಟೆ

ನವದೆಹಲಿ(ಪಿಟಿಐ): ಕಾಂಗ್ರೆಸ್ ಮಹಿಳಾ ಘಟಕದ ಹಂಗಾಮಿ ಅಧ್ಯಕ್ಷೆ ನೆಟ್ಟಾ ಡಿಸೋಜಾ ಅವರು ಬೆಲೆ ಏರಿಕೆ ವಿಚಾರವಾಗಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಸ್ಮೃತಿ ಇರಾನಿ ಅವರನ್ನು ಇಂಡಿಗೊ ವಿಮಾನದಲ್ಲಿ ಭಾನುವಾರ ತರಾಟೆಗೆ ತೆಗೆದುಕೊಂಡಿದ್ದಾರೆ.

ದೆಹಲಿ– ಗುವಾಹಟಿ ವಿಮಾನದಲ್ಲಿ ಇಳಿಯುತ್ತಿದ್ದ ಸಂದರ್ಭದಲ್ಲಿ ನೆಟ್ಟಾ ಡಿಸೋಜಾ ಮತ್ತು ಸ್ಮೃತಿ ಇರಾನಿ ಮುಖಾಮುಖಿಯಾಗಿದ್ದರು. ಈ ವೇಳೆ ಅಡುಗೆ ಅನಿಲ ಮತ್ತು ಪೆಟ್ರೋಲ್ ಬೆಲೆ ಏರಿಕೆ ಕುರಿತು ಪ್ರಶ್ನಿಸುತ್ತಿರುವ ವಿಡಿಯೊವನ್ನು ನೆಟ್ಟಾ ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ವಿಮಾನದಿಂದ ಇಳಿಯುವ ಪ್ರಯಾಣಿಕರಿಗೆ ಅಡ್ಡ ನಿಲ್ಲಬೇಡಿ ಎಂದು ಸಚಿವೆ, ನೆಟ್ಟಾ ಡಿಸೋಜಾ ಅವರಿಗೆ ಹೇಳಿರುವುದೂ ವಿಡಿಯೊದಲ್ಲಿ ದಾಖಲಾಗಿದೆ. ಕಳೆದ 27 ತಿಂಗಳುಗಳಿಂದ ದೇಶದ 80 ಕೋಟಿ ಜನರು ಉಚಿತವಾಗಿ ಆಹಾರಧಾನ್ಯಗಳನ್ನು ಪಡೆಯುತ್ತಿದ್ದಾರೆ ಎಂದೂ ಸ್ಮೃತಿ ಇರಾನಿ ಅವರು ಉತ್ತರಿಸಿದ್ದಾರೆ.

ಕರ್ನಾಟಕದಿಂದ ಕಬ್ಬಿಣದ ಅದಿರು ರಫ್ತು: ಕೇಂದ್ರ ಬೆಂಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ಗಣಿಗಾರಿಕೆ ಮತ್ತು ಅರಣ್ಯ ಭೂಮಿ ಒತ್ತುವರಿಯಿಂದಾಗಿ ರಾಜ್ಯದಲ್ಲಿ ನಿಷೇಧ ಹೇರಿದ ನಂತರ ಪರಿಸ್ಥಿತಿ ಸುಧಾರಿಸಿದೆ. ಆದ್ದರಿಂದ ಕರ್ನಾಟಕದಿಂದ ಕಬ್ಬಿಣದ ಅದಿರನ್ನು ರಫ್ತು ಮಾಡಲು ಅವಕಾಶ ನೀಡುವಂತೆ ರಾಜ್ಯದ ಗಣಿ ಮಾಲೀಕರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಮನವಿಯನ್ನು ಕೇಂದ್ರವು ಬೆಂಬಲಿಸಿದೆ.

ದೇಶದ ಇತರ ಭಾಗಗಳಲ್ಲಿ ಕಬ್ಬಿಣದ ಅದಿರಿನ ರಫ್ತಿಗೆ ಯಾವುದೇ ನಿರ್ಬಂಧವಿಲ್ಲ. ಅಕ್ರಮ ಗಣಿಗಾರಿಕೆಯಿಂದಾಗಿ ಕರ್ನಾಟಕದಲ್ಲಿ ನಿರ್ಬಂಧ ವಿಧಿಸಲಾಗಿತ್ತು. ಈಗ ಪರಿಸ್ಥಿತಿ ಬದಲಾಗಿರುವುದರಿಂದ, ಈ ಗಣಿಗಳನ್ನು ಇತರ ರಾಜ್ಯಗಳಿಗೆ ಸರಿಸಮಾನವಾಗಿ ತರಲು ನ್ಯಾಯಾಲಯವು ರಫ್ತು ಮಾಡಲು ಅನುಮತಿಸಬಹುದು ಎಂದು ಕೇಂದ್ರ ಸರ್ಕಾರ ಹೇಳಿದೆ.

ಅದಿರು ರಫ್ತು ಮಾಡಲು ಅನುಮತಿ ನೀಡುವಂತೆ ಕೋರಿ ಸಲ್ಲಿಸಿದ್ದ ಮನವಿ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಪಡಿಸುವಂತೆ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಕೇಳಿತ್ತು. ಸೋಮವಾರ ಈ ವಿಷಯ ಪರಿಗಣನೆಗೆ ಬರಲಿದೆ.


'ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದಿದ್ದು ಹಿನ್ನಡೆ'

ನವದೆಹಲಿ (ಪಿಟಿಐ): ರೈತರು ಬೆಳೆದ ಬೆಳೆಗಳಿಗೆ ಹೆಚ್ಚಿನ ಬೆಲೆ ಬೇಕು ಎಂದಾದರೆ ಕೃಷಿ ವಲಯದಲ್ಲಿ ಸುಧಾರಣೆಗಳು ಆಗಬೇಕು ಎಂದು ನೀತಿ ಆಯೋಗದ ಸದಸ್ಯ ರಮೇಶ್ ಚಂದ್ ಹೇಳಿದ್ದಾರೆ.

ಈ ದಿಸೆಯಲ್ಲಿ, ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದಿರುವುದು ಹಿನ್ನಡೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. 'ಸುಧಾರಣೆಗಳು ಕೃಷಿ ವಲಯಕ್ಕೆ ಮುಖ್ಯ. ಕೃಷಿ ಕಾಯ್ದೆಗಳ ವಿಚಾರದಲ್ಲಿ ರಾಜ್ಯಗಳ ಜೊತೆ ತಕ್ಷಣವೇ ಸಮಾಲೋಚನೆ ಆರಂಭಿಸಬೇಕು' ಎಂದು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

ಭಾರತೀಯ ವಾಹನ ವಿತರಕರ ಒಕ್ಕೂಟದ ಮಾಹಿತಿ

ವಿದ್ಯುತ್ ಚಾಲಿತ ವಾಹನ ಮಾರಾಟ 3 ಪಟ್ಟು ಹೆಚ್ಚಳ



ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ರಿಟೇಲ್ ಮಾರಾಟವು 2020–21ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2021–22ನೇ ಹಣಕಾಸು ವರ್ಷದಲ್ಲಿ ಮೂರು ಪಟ್ಟು ಹೆಚ್ಚಾಗಿದೆ.

2020–21ರಲ್ಲಿ 1.34 ಲಕ್ಷ ವಾಹನಗಳು ಮಾರಾಟ ಆಗಿದ್ದವು. ಈ ಸಂಖ್ಯೆಯು 2021–22ರಲ್ಲಿ 4.29 ಲಕ್ಷಕ್ಕೆ ಏರಿಕೆ ಆಗಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟ (ಎಫ್‌ಎಡಿಎ) ತಿಳಿಸಿದೆ.

ವಿದ್ಯುತ್ ಚಾಲಿತ ಪ್ರಯಾಣಿಕ ವಾಹನಗಳ ರಿಟೇಲ್ ಮಾರಾಟ 4,984ರಿಂದ 17,802ಕ್ಕೆ ಏರಿಕೆ ಆಗಿದೆ.


ದೇಶಿ ಕಂಪನಿಯಾದ ಟಾಟಾ ಮೋಟರ್ಸ್ ವಿದ್ಯುತ್ ಚಾಲಿತ ಪ್ರಯಾಣಿಕ ವಾಹನಗಳ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿದೆ. ಇದು ಶೇಕಡ 85.37ರಷ್ಟು ಮಾರುಕಟ್ಟೆ ಪಾಲು ಹೊಂದಿದ್ದು, 15,198 ವಾಹನಗಳನ್ನು ಮಾರಾಟ ಮಾಡಿದೆ. 2020–21ರಲ್ಲಿ ಒಟ್ಟಾರೆ 3,523 ವಾಹನಗಳನ್ನು ಮಾರಾಟ ಮಾಡಿತ್ತು.

ಎಂ.ಜಿ. ಮೋಟರ್ ಇಂಡಿಯಾ ಕಂಪನಿಯು 2,045 ವಾಹನಗಳನ್ನು ಮಾರಾಟ ಮಾಡಿದ್ದು ಶೇ 11.49ರಷ್ಟು ಮಾರುಕಟ್ಟೆ ಪಾಲು ಹೊಂದಿದೆ.

ಮಹೀಂದ್ರ ಮತ್ತು ಹುಂಡೈ ಮೋಟರ್ ಕಂಪನಿ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ಮಹೀಂದ್ರ 156 ಮತ್ತು ಹುಂಡೈ 128 ವಾಹನಗಳನ್ನು ಮಾರಾಟ ಮಾಡಿವೆ.

ಇ.ವಿ. ದ್ವಿಚಕ್ರ ವಾಹನ: ದ್ವಿಚಕ್ರ ವಾಹನ ಮಾರಾಟ 41,046ರಿಂದ 2.31 ಲಕ್ಷಕ್ಕೆ ಭಾರಿ ಏರಿಕೆ ಕಂಡಿದೆ. ಹೀರೊ ಎಲೆಕ್ಟ್ರಿಕ್ ಕಂಪನಿ 65,303 ವಾಹನಗಳನ್ನು ಮಾರಾಟ ಮಾಡುವ ಮೂಲಕ ಮೊದಲ ಸ್ಥಾನದಲ್ಲಿದೆ. ಇದರ ಮಾರುಕಟ್ಟೆ ಪಾಲು ಶೇ 28.23ರಷ್ಟಿದೆ.

ಇ.ವಿ. ಪ್ರಯಾಣಿಕ ವಾಹನ ಮಾರುಕಟ್ಟೆ ಪಾಲು



ಒಕಿನೋವಾ ಆಟೋಟೆಕ್ ಮತ್ತು ಆಂಪೈರ್ ವೆಹಿಕಲ್ಸ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದುಕೊಂಡಿವೆ. ಬೆಂಗಳೂರಿನ ಓಲಾ ಎಲೆಕ್ಟ್ರಿಕ್ 14,371 ಸ್ಕೂಟರ್‌ಗಳನ್ನು ಮಾರಾಟ ಮಾಡಿದ್ದು, ಆರನೇ ಸ್ಥಾನದಲ್ಲಿದೆ. ಟಿವಿಎಸ್ ಕಂಪನಿ ಏಳನೇ ಸ್ಥಾನದಲ್ಲಿದೆ. ವಿದ್ಯುತ್ ಚಾಲಿತ ವಾಣಿಜ್ಯ ವಾಹನಗಳ ಮಾರಾಟ 400ರಿಂದ 2,203ಕ್ಕೆ ಏರಿಕೆ ಆಗಿದೆ ಎಂದು ಎಫ್‌ಎಡಿಎ ಮಾಹಿತಿ ನೀಡಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹220-685
ದ್ವಿತಳಿ (ಬಿ.ವಿ)	₹255-802



'ಮಣ್ಣು ಉಳಿಸಿ' ಕುರಿತು ಜಾಗೃತಿ ಮೂಡಿಸಲು ಬೈಕ್‌ನಲ್ಲಿ ಅಭಿಯಾನ ಕೈಗೊಂಡಿರುವ ಈಶಾ ಫೌಂಡೇಷನ್‌ನ ಸದ್ಗುರು ಜಗ್ಗಿ ವಾಸುದೇವ್ ಅವರು ಪ್ಯಾರಿಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಈ ವೇಳೆ ಮ್ಯಾಂಚೆಸ್ಟರ್ ಯುನೈಟೆಡ್ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಲೂಯಿಸ್ ಸಹಾ, ಫ್ರಾನ್ಸ್‌ನಲ್ಲಿ ಭಾರತದ ರಾಯಭಾರಿ ಜಾವೇದ್ ಅಶ್ರಫ್, ಮತ್ತು ಫ್ರಾನ್ಸ್‌ನ ಪತ್ರಕರ್ತ ಕ್ಸೇವಿಯರ್ ಡಿ. ಮೌಲಿನ್ಸ್ ಅವರು ಇದ್ದರು

ಎಸ್‌ಐಪಿ ಹೂಡಿಕೆ ಹೆಚ್ಚಳ, ಸಾಂಪ್ರದಾಯಿಕ ಹೂಡಿಕೆಗಳಲ್ಲಿ ಕಡಿಮೆಯಾದ ಗಳಿಕೆ

ಈಕ್ವಿಟಿ ಎಂಎಫ್: ₹ 1.64 ಲಕ್ಷ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳು 2021–22ನೇ ಹಣಕಾಸು ವರ್ಷದಲ್ಲಿ ₹ 1.64 ಲಕ್ಷ ಕೋಟಿ ಬಂಡವಾಳ ಆಕರ್ಷಿಸಿವೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ಹೂಡಿಕೆ ಹೆಚ್ಚಾಗಿರುವುದು ಮತ್ತು ಹೂಡಿಕೆಯ ಸಾಂಪ್ರದಾಯಿಕ ಮಾರ್ಗಗಳಲ್ಲಿ ಗಳಿಕೆ ಕಡಿಮೆ ಆಗಿರುವುದರಿಂದ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಈ ಪ್ರಮಾಣದಲ್ಲಿ ಹೂಡಿಕೆ ಆಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಹೇಳಿದೆ.



ಮಾರ್ಚ್‌ನಲ್ಲಿಯೇ ₹ 28,464 ಕೋಟಿಯಷ್ಟು ದಾಖಲೆಯ ಬಂಡವಾಳ ಹೂಡಿಕೆ ಆಗಿದೆ. 2020–21ನೇ ಹಣಕಾಸು ವರ್ಷದಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ₹ 25,966 ಕೋಟಿ ಬಂಡವಾಳ ಹೂಡಿಕೆ ಆಗಿತ್ತು.

ಮುಖ್ಯಾಂಶಗಳು

- ಈಕ್ವಿಟಿ ಎಂಎಫ್ ನಿರ್ವಹಣಾ ಸಂಪತ್ತು ಶೇ 38ರಷ್ಟು ಹೆಚ್ಚಳ
- ಮಾರ್ಚ್‌ನಲ್ಲಿ ದಾಖಲೆಯ ಹೂಡಿಕೆ

ಸದ್ಯದ ಆರ್ಥಿಕ ಮತ್ತು ಮಾರುಕಟ್ಟೆಯ ಸ್ಥಿತಿಯನ್ನು ಗಮನಿಸಿದರೆ ಬಂಡವಾಳ ಒಳಹರಿವು ಇದೇ ರೀತಿ ಮುಂದುವರಿಯುವ ನಿರೀಕ್ಷೆ ಇದೆ ಎಂದು ಜೆಡ್‌ಫಂಡ್ಸ್‌ನ ಸಹಸ್ಥಾಪಕ ಮನಿಷ್ ಕೊಠಾರಿ ಹೇಳಿದ್ದಾರೆ.

ರಷ್ಯಾ–ಉಕ್ರೇನ್ ಸಂಘರ್ಷ ಮತ್ತು ಕಚ್ಚಾ ತೈಲ ದರ ಏರಿಕೆಯಿಂದಾಗಿ ಜಾಗತಿಕ ಮಟ್ಟದಲ್ಲಿ ಬಿಕ್ಕಟ್ಟು ಉಂಟಾದ ಕಾರಣ ಫೆಬ್ರುವರಿ ಅಂತ್ಯದಲ್ಲಿ ಮತ್ತು ಮಾರ್ಚ್‌ನ ಆರಂಭದಲ್ಲಿ ಮಾರುಕಟ್ಟೆಯಲ್ಲಿ ಕುಸಿತ ಕಂಡುಬಂದಿತು. ಇದು ಹೂಡಿಕೆದಾರರಿಗೆ ಖರೀದಿ ಮಾಡಲು ಉತ್ತಮ ಅವಕಾಶ ಕಲ್ಪಿಸಿತು. ಈ ಅವಕಾಶವನ್ನು ಅವರು ಸದುಪಯೋಗಪಡಿಸಿಕೊಂಡಿದ್ದಾರೆ ಎಂದು ಕೊಠಾರಿ ತಿಳಿಸಿದ್ದಾರೆ.

ಹೂಡಿಕೆ ಹೆಚ್ಚಾಗಿರುವುದರಿಂದ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವು ಶೇ 38ರಷ್ಟು ಹೆಚ್ಚಾಗಿದ್ದು ₹ 13.65 ಲಕ್ಷ ಕೋಟಿಗೆ ತಲುಪಿದೆ.

ಈಕ್ವಿಟಿ ಫಂಡ್‌ಗಳಲ್ಲಿ ಹೂಡಿಕೆದಾರರ ಖಾತೆ ಸಂಖ್ಯೆಯು 2021ರ ಏಪ್ರಿಲ್‌ನಲ್ಲಿ 6.64 ಕೋಟಿ ಇದ್ದಿದ್ದು 2022ರ ಮಾರ್ಚ್‌ನಲ್ಲಿ 8.6 ಕೋಟಿಗೆ ಏರಿಕೆ ಆಗಿದೆ.

ಎಸ್‌ಐಪಿನಲ್ಲಿ ಒಟ್ಟಾರೆ ಹೂಡಿಕೆಯು ₹ 96,080 ಕೋಟಿಯಿಂದ ₹ 1.24 ಲಕ್ಷ ಕೋಟಿಗೆ ಏರಿಕೆ ಆಗಿದೆ. ಮ್ಯೂಚುವಲ್ ಫಂಡ್‌ನಲ್ಲಿ ಸದ್ಯ 5.28 ಕೋಟಿ ಎಸ್‌ಐಪಿ ಖಾತೆಗಳಿವೆ.



ಕುಲದೀಪ್ ಯಾದವ್ ಸ್ಪಿನ್ ಮೋಡಿ; ಖಲೀಲ್ ಸ್ವಿಂಗ್ ಬೌಲಿಂಗ್; ಡೆಲ್ಲಿ ಕ್ಯಾಪಿಟಲ್ಸ್‌ಗೆ ಗೆಲುವು

ಪೃಥ್ವಿ–ವಾರ್ನರ್ ಮಿಂಚಿನಾಟ

ಮುಂಬೈ (ಪಿಟಿಐ): ಪೃಥ್ವಿ ಶಾ ಮತ್ತು ಡೇವಿಡ್ ವಾರ್ನರ್ ಅಬ್ಬರದ ಜೊತೆಯಾಟ ಮತ್ತು ಕುಲದೀಪ್ ಯಾದವ್ ಸ್ಪಿನ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ಪೃಥ್ವಿ (51; 29ಎಸೆತ) ಮತ್ತು ವಾರ್ನರ್ (61; 45ಎ) ಮೊದಲ ವಿಕೆಟ್‌ಗೆ ಗಳಿಸಿದ 93 ರನ್‌ಗಳ ಬಲದಿಂದ ಡೆಲ್ಲಿ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 215 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಕೋಲ್ಕತ್ತಕ್ಕೆ ಚೈನಾಮನ್ ಬೌಲರ್ ಕುಲದೀಪ್ (35ಕ್ಕೆ4) ದುಃಸ್ವಪ್ನವಾಗಿ ಕಾಡಿದರು. ಅವರಿಗೆ ಎಡಗೈ ಮಧ್ಯಮವೇಗಿ ಖಲೀಲ್ ಅಹಮದ್ (25ಕ್ಕೆ3) ಉತ್ತಮ ಬೆಂಬಲ ನೀಡಿದರು. ಇದರಿಂದಾಗಿ ಕೋಲ್ಕತ್ತ ತಂಡವು 19.4 ಓವರ್‌ಗಳಲ್ಲಿ 171 ರನ್ ಗಳಿಸಿ ಆಲೌಟ್ ಆಯಿತು. ಡೆಲ್ಲಿಗೆ 44 ರನ್‌ಗಳ ಗೆಲುವು ಒಲಿಯಿತು .

ಗುರಿ ಬೆನ್ನತ್ತಿದ್ದ ಕೊಲ್ಕತ್ತ ತಂಡಕ್ಕೆ ಮೂರನೇ ಓವರ್‌ನಲ್ಲಿಯೇ ಪೆಟ್ಟುಬಿತ್ತು. ವೆಂಕಟೇಶ್ ಅಯ್ಯರ್ ವಿಕೆಟ್ ಗಳಿಸಿದ ಖಲೀಲ್ ಅಹಮದ್ ಸಂಭ್ರಮಿಸಿದರು.

ತಮ್ಮ ಇನ್ನೊಂದು ಓವರ್‌ನಲ್ಲಿ ಅಜಿಂಕ್ಯ ರಹಾನೆಗೂ ಡಗ್‌ಔಟ್ ದಾರಿ ತೋರುವಲ್ಲಿ ಖಲೀಲ್ ಯಶಸ್ವಿಯಾದರು. ಈ ಹಂತದಲ್ಲಿ ಜೊತೆಗೂಡಿದ ಶ್ರೇಯಸ್ ಮತ್ತು ನಿತೀಶ್ ರಾಣಾ 76 ರನ್‌ಗಳನ್ನು ಸೇರಿಸಿದರು. ಶ್ರೇಯಸ್ ಅಬ್ಬರದ ಆಟದಿಂದಾಗಿ ತಂಡದಲ್ಲಿ ಗೆಲುವಿನ ಆಸೆ ಚಿಗುರಿತ್ತು.

ಅದರೆ, ಬೌಲರ್ ಲಲಿತ್ ಯಾದವ್ ಇದಕ್ಕೆ ಅಡ್ಡಿಯಾದರು. ರನ್ ಗಳಿಕೆಯ ವೇಗ ಹೆಚ್ಚಿಸುವ ಪ್ರಯತ್ನದಲ್ಲಿದ್ದ ನಿತೀಶ್ ರಾಣಾ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು.

ಇದಾಗಿ ಎರಡು ಓವರ್‌ಗಳ ನಂತರ ಕುಲದೀಪ್ ಸ್ಪಿನ್ ಎಸೆತಕ್ಕೆ ಬೀಟ್ ಆದ ಶ್ರೇಯಸ್ ಅವರನ್ನು ಸ್ಟಂಪ್ ಮಾಡುವಲ್ಲಿ ರಿಷಭ್ ಪಂತ್ ಯಶಸ್ವಿಯಾದರು. ವಿಂಡೀಸ್ ದೈತ್ಯ ಆ್ಯಂಡ್ರೆ ರಸೆಲ್ ಎಂದಿನಂತೆ ತಮ್ಮ ಬೀಸಾಟದ ಮೂಲಕ ಜಯದ ಆಸೆ ಮೂಡಿಸಿದರು. ಆದರೆ ಶಾರ್ದೂಲ್ ಠಾಕೂರ್ ಎಸೆತದಲ್ಲಿ ಸರ್ಫರಾಜ್ ಖಾನ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಪ್ಯಾಟ್ ಕಮಿನ್ಸ್, ಸುನಿಲ್ ನಾರಾಯಣ ಮತ್ತು ಉಮೇಶ್ ಯಾದವ್ ವಿಕೆಟ್ ಕಬಳಿಸುವಲ್ಲಿ ಕುಲದೀಪ್ ಯಶಸ್ವಿಯಾದರು.

ಪೃಥ್ವಿ, ವಾರ್ನರ್ ಮಿಂಚು: ನಾಲ್ಕನೇ ಓವರ್‌ನಲ್ಲಿ ಲಭಿಸಿದ ಜೀವದಾನವನ್ನು ಸಮರ್ಥವಾಗಿ ಬಳಸಿಕೊಂಡ ಡೇವಿಡ್ ವಾರ್ನರ್ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ಉತ್ತಮ ಲಯದಲ್ಲಿರುವ ಪೃಥ್ವಿ ಶಾ ಜೊತೆಗೂಡಿ ಉತ್ತಮ ಅಡಿಪಾಯ ಹಾಕಿದರು. ವಾರ್ನರ್ 45 ಎಸೆತಗಳಲ್ಲಿ 61 ರನ್ ಗಳಿಸಿದರು. ಪೃಥ್ವಿ 27 ಎಸೆತಗಳಲ್ಲಿ ಅರ್ಧಶತಕ ದಾಟಿದರು. 9ನೇ ಓವರ್‌ನಲ್ಲಿ ಉಮೇಶ್ ಯಾದವ್ ಜೊತೆಯಾಟ ಮುರಿದರು. ಮೂರು ಓವರ್‌ಗಳ ನಂತರ ಪೃಥ್ವಿ ಶಾ ಅವರನ್ನು ಕ್ಲೀನ್‌ಬೌಲ್ಡ್ ಮಾಡುವಲ್ಲಿ ವರುಣ್ ಚಕ್ರವರ್ತಿ ಯಶಸ್ವಿಯಾದರು. ರಿಷಭ್ ಪಂತ್ , ಅಕ್ಷರ್ ಪಟೇಲ್ ಮತ್ತು ಶಾರ್ದೂಲ್ ಅವರ ಚುರುಕಿನ ಬ್ಯಾಟಿಂಗ್ ಬಲದಿಂದ ತಂಡವು ದ್ವಿಶತಕದ ಗಡಿ ದಾಟಿತು.


ಡೇವಿಡ್ ವಾರ್ನರ್ ಮತ್ತು ಪೃಥ್ವಿ ಶಾ –ಪಿಟಿಐ ಚಿತ್ರ

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಜೋಸ್ ಬಟ್ಲರ್	ರಾಜಸ್ಥಾನ	218
ಕ್ವಿಂಟನ್	ಲಖನೌ	188
ಶುಭಮನ್	ಗುಜರಾತ್	180

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಯಜುವೇಂದ್ರ	ರಾಜಸ್ಥಾನ	11
ಉಮೇಶ್	ಕೋಲ್ಕತ್ತ	10
ಕುಲದೀಪ್	ಡೆಲ್ಲಿ	10

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 5ಕ್ಕೆ 215 (20 ಓವರ್)
ಪೃಥ್ವಿ ಬಿ ವರುಣ್ 51 (29ಎ, 4X7, 6X2), ವಾರ್ನರ್ ಸಿ ಅಜಿಂಕ್ಯ ಬಿ ಉಮೇಶ್ 61 (45ಎ, 4X6, 6X2), ರಿಷಭ್ ಸಿ ಉಮೇಶ್ ಬಿ ರಸೆಲ್ 27 (14ಎ, 4X2, 6X2), ಲಲಿತ್ ಎಲ್‌ಬಿಡಬ್ಲ್ಯು ಸುನಿಲ್ 1 (4ಎ), ರೊವ್ಮನ್ ಸಿ ಆರ್.ಕೆ.ಸಿಂಗ್ (ಬದಲಿ) ಬಿ ಸುನಿಲ್ 8 (6ಎ, 6X1), ಅಕ್ಷರ್ ಔಟಾಗದೆ 22 (14ಎ, 4X2, 6X1), ಶಾರ್ದೂಲ್ ಔಟಾಗದೆ 29 (11ಎ, 4X1, 6X3)
ಇತರೆ (ಬೈ 4, ಲೆಗ್‌ಬೈ 7, ನೋಬಾಲ್ 3, ವೈಡ್ 2) 16
ವಿಕೆಟ್ ಪತನ: 1-93 (ಪೃಥ್ವಿ ಶಾ, 8.4), 2-148 (ರಿಷಭ್ ಪಂತ್, 12.5), 3-151 (ಲಲಿತ್ ಯಾದವ್, 13.5), 4-161 (ರೊವ್ಮನ್ ಪೊವೆಲ್, 15.1), 5-166 (ಡೇವಿಡ್ ವಾರ್ನರ್, 16.4)
ಬೌಲಿಂಗ್: ಉಮೇಶ್ ಯಾದವ್ 4–0–48–1, ರಸಿಕ್ ಸಲಾಮ್ 1–0–10–0, ಪ್ಯಾಟ್ ಕಮಿನ್ಸ್ 4–0–51–0, ವರುಣ್ ಚಕ್ರವರ್ತಿ 4–0–44–1, ಸುನಿಲ್ ನಾರಾಯಣ್ 4–0–21–2, ಆ್ಯಂಡ್ರೆ ರಸೆಲ್ 2–0–16–1, ವೆಂಕಟೇಶ್ ಅಯ್ಯರ್ 1–0–14–0

ಕೋಲ್ಕತ್ತ ನೈಟ್ ರೈಡರ್ಸ್ 171 (19.4 ಓವರ್)
ಅಜಿಂಕ್ಯ ಸಿ ಶಾರ್ದೂಲ್ ಬಿ ಖಲೀಲ್ 8 (14ಎ, 4X1), ವೆಂಕಟೇಶ್ ಸಿ ಅಕ್ಷರ್ ಬಿ ಖಲೀಲ್ 18 (8ಎ, 4X1, 6X2), ಶ್ರೇಯಸ್ ಸ್ಟಂಪ್ಡ್ ಪಂತ್ ಬಿ ಕುಲದೀಪ್ 54 (33ಎ, 4X5, 6X2), ನಿತೀಶ್ ಸಿ ಪೃಥ್ವಿ ಬಿ ಲಲಿತ್ 30 (20ಎ, 6X3), ರಸೆಲ್ ಸಿ ಸರ್ಫರಾಜ್ ಬಿ ಶಾರ್ದೂಲ್ 24 (21ಎ, 4X3), ಬಿಲಿಂಗ್ಸ್ ಸಿ ಲಲಿತ್ ಬಿ ಖಲೀಲ್ 15 (9ಎ, 4X1, 6X1), ಕಮಿನ್ಸ್ ಎಲ್‌ಬಿಡಬ್ಲ್ಯು ಕುಲದೀಪ್ 4 (3ಎ, 4X1), ಸುನಿಲ್ ಸಿ ರೊವ್ಮನ್ ಬಿ ಕುಲದೀಪ್ 4 (2ಎ, 4X1), ಉಮೇಶ್ ಸಿ ಮತ್ತು ಬಿ ಕುಲದೀಪ್ 0 (1ಎ), ರಸಿಕ್ ಸಿ ರೊವ್ಮನ್ ಬಿ ಶಾರ್ದೂಲ್ 7 (6ಎ, 4X1), ವರುಣ್ ಔಟಾಗದೆ 1 (1ಎ)
ಇತರೆ (ಲೆಗ್‌ಬೈ 3, ವೈಡ್ 3) 6
ವಿಕೆಟ್ ಪತನ: 21 (ವೆಂಕಟೇಶ್ ಅಯ್ಯರ್, 2.3), 2-38 (ಅಜಿಂಕ್ಯ ರಹಾನೆ, 4.4), 3-107 (ನಿತೀಶ್ ರಾಣಾ, 11.4), 4-117 (ಶ್ರೇಯಸ್ ಅಯ್ಯರ್, 12.5), 5-133 (ಸ್ಯಾಮ್ ಬಿಲಿಂಗ್ಸ್, 14.4), 6-139 (ಪ್ಯಾಟ್ ಕಮಿನ್ಸ್, 15.3), 7-143 (ಸುನಿಲ್ ನಾರಾಯಣ್, 15.5), 8-143 (ಉಮೇಶ್ ಯಾದವ್, 15.6), 9-170 (ಆ್ಯಂಡ್ರೆ ರಸೆಲ್, 19.2), 10-171 (ರಸಿಕ್ ಸಲಾಮ್, 19.4)
ಬೌಲಿಂಗ್: ಮುಸ್ತಫಿಜುರ್ ರೆಹಮಾನ್ 4–0–21–0, ಶಾರ್ದೂಲ್ ಠಾಕೂರ್ 2.4–0–30–2, ಖಲೀಲ್ ಅಹ್ಮದ್ 4–0–25–3, ಅಕ್ಷರ್ ಪಟೇಲ್ 3–0–32–0, ಕುಲದೀಪ್ ಯಾದವ್ 4–0–35–4, ರೊವ್ಮನ್ ಪೊವೆಲ್ 1–0–17–0, ಲಲಿತ್ ಯಾದವ್ 1–0–8–1

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 44 ರನ್‌ಗಳ ಜಯ

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	4	3	1	0	0	6
ಕೋಲ್ಕತ್ತ	5	3	2	0	0	6
ಗುಜರಾತ್	3	3	0	0	0	6
ಬೆಂಗಳೂರು	4	3	1	0	0	6
ಲಖನೌ	5	3	2	0	0	6
ಡೆಲ್ಲಿ	4	2	2	0	0	4
ಪಂಜಾಬ್	4	2	2	0	0	4
ಹೈದರಾಬಾದ್	3	1	2	0	0	2
ಮುಂಬೈ	4	0	4	0	0	0
ಚೆನ್ನೈ	4	0	4	0	0	0

*ಭಾನುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಬಯೋಬಬಲ್ ತೊರೆದ ಹರ್ಷಲ್

ಪುಣೆ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬೌಲರ್ ಹರ್ಷಲ್ ಪಟೇಲ್ ಕುಟುಂಬದ ಸದಸ್ಯರೊಬ್ಬರ ಸಾವಿನ ಹಿನ್ನೆಲೆಯಲ್ಲಿ ಟೂರ್ನಿಯ ಬಯೋಬಬಲ್ ತೊರೆದಿದ್ದಾರೆ.

‘ಶನಿವಾರ ನಡೆದ ಮುಂಬೈ ಇಂಡಿಯನ್ಸ್ ಪಂದ್ಯದ ಮುಕ್ತಾಯದ ಬಳಿಕ ಅವರಿಗೆ ಈ ವಿಷಯ ತಿಳಿಯಿತು. ಹೀಗಾಗಿ ಬಯೋಬಬಲ್‌ನಿಂದ ನಿರ್ಗಮಿಸಿದರು‘ ಎಂದು ಸುದ್ದಿಸಂಸ್ಥೆಗೆ ತಿಳಿದುಬಂದಿದೆ. ಆರ್‌ಸಿಬಿ ಪರ ಉತ್ತಮ ಸಾಮರ್ಥ್ಯ ತೋರುತ್ತಿರುವ ಹರ್ಷಲ್, ಶನಿವಾರದ ಪಂದ್ಯದಲ್ಲೂ ಎರಡು ವಿಕೆಟ್ ಕಬಳಿಸಿದ್ದರು.


ಬೆಳ್ಳಿ ಪದಕ ಗೆದ್ದ ಭಾರತ ತಂಡದ ಆಟಗಾರರು. (ಎಡದಿಂದ): ಸುಬ್ರತಾ ಸಹಾ, ಸುಕಮಲ್ ದಾಸ್, ಅಶೋಕ್ ಗೋಯೆಲ್, ಆರ್.ಕೃಷ್ಣನ್ (ನಾಯಕ), ಅನಿಲ್ ಪಾಧ್ಯೆ, ರಾಜೇಶ್ ದಲಾಲ್

ವಿಶ್ವ ಬ್ರಿಜ್ ಚಾಂಪಿಯನ್‌ಷಿಪ್: ಡಿ’ಆರ್ಸಿ ಟ್ರೋಫಿ ಟೂರ್ನಿ

ಭಾರತ ತಂಡಕ್ಕೆ ಐತಿಹಾಸಿಕ ಬೆಳ್ಳಿ

ಬೆಂಗಳೂರು: ಥರ್ಮಲ್ ಬಾತ್ ಮತ್ತು ಸ್ಪಾಗಳಿಗೆ ಹೆಸರು ಗಳಿಸಿರುವ ಇಟಲಿಯ ಸಾಲ್ಸೊಮಾಗೆಯೊರ್ ನಗರದಲ್ಲಿ ಭಾರತದ ಸೀನಿಯರ್ ಬ್ರಿಜ್ ಆಟಗಾರರು ಇತಿಹಾಸ ನಿರ್ಮಿಸಿದರು. ಎರಡು ವಾರ ನಡೆದ 45ನೇ ವಿಶ್ವ ಬ್ರಿಜ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಬೆಳ್ಳಿ ಪದಕ ಗೆದ್ದುಕೊಂಡಿತು.

ಭಾರತ ಸೀನಿಯರ್ ತಂಡದವರು ಡಿ’ಆರ್ಸಿ ಟ್ರೋಫಿಗಾಗಿ ಸ್ಪರ್ಧಿಸಿತ್ತು. ಆರ್.ಕೃಷ್ಣನ್ ನಾಯಕತ್ವದ ತಂಡದಲ್ಲಿ ಸುಬ್ರತಾ ಸಹಾ, ಸುಕಮಲ್ ದಾಸ್, ಅಶೋಕ್ ಗೋಯೆಲ್, ಅನಿಲ್ ಪಾಧ್ಯೆ ಮತ್ತು ರಾಜೇಶ್ ದಲಾಲ್ ಇದ್ದರು.

ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿದ ತಂಡ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಪೋಲೆಂಡ್ ಎದುರು ಸೋತಿತು.

ಐವರು ಮಾಜಿ ವಿಶ್ವ ಚಾಂಪಿಯನ್ನರನ್ನು ಒಳಗೊಂಡಿದ್ದ ಪೋಲೆಂಡ್ ಆರು ಸೆಟ್ ಮತ್ತು 96 ಡೀಲ್‌ಗಳಲ್ಲಿ 45 ಪಾಯಿಂಟ್‌ಗಳಿಂದ ಜಯ ಗಳಿಸಿತು.

ಬರ್ಮುಡಾ ಬೌಲ್ ಎಂದೇ ಕರೆಯಲಾಗುವ ವಿಶ್ವ ಬ್ರಿಜ್ ಚಾಂಪಿಯನ್‌ಷಿಪ್‌ನಲ್ಲಿ ನಾಲ್ಕು ಟ್ರೋಫಿಗಳಿಗಾಗಿ ಸ್ಪರ್ಧೆಗಳು ನಡೆಯುತ್ತವೆ. ಬರ್ಮುಡಾ ಬೌಲ್ ಓಪನ್ ಇದರಲ್ಲಿ ಅತಿ ಹಳೆಯ ಸ್ಪರ್ಧೆಯಾಗಿದ್ದು ಡಿ’ಆರ್ಸಿ ಟ್ರೋಫಿ ತಂಡ ಚಾಂಪಿಯನ್‌ಷಿಪ್ 60 ವರ್ಷ ಮೇಲಿನವರಿಗಾಗಿ ನಡೆಯುತ್ತದೆ. ಮಹಿಳೆಯರಿಗಾಗಿ ವೆನಿಸ್ ಕಪ್ ಮತ್ತು ಪುರುಷ–ಮಹಿಳೆಯರ ಮಿಶ್ರ ತಂಡಗಳಿಗಾಗಿ ವುಹಾನ್ ಕಪ್ ಟೂರ್ನಿ ನಡೆಯುತ್ತದೆ.

ಪ್ರತಿ ಟ್ರೋಫಿಗಾಗಿ ರೌಂಡ್ ರಾಬಿನ್ ಸುತ್ತಿನ ನಂತರ ತಲಾ ಎಂಟು ತಂಡಗಳು ನಾಕೌಟ್ ಹಂತಕ್ಕೆ ಅರ್ಹತೆ ಪಡೆಯುತ್ತವೆ.

ಭಾರತವು ರೌಂಡ್ ರಾಬಿನ್‌ನಲ್ಲಿ ಐದನೇ ಸ್ಥಾನ ಗಳಿಸಿತ್ತು. ಅಮೆರಿಕ–1, ಡೆನ್ಮಾರ್ಕ್, ಪೋಲೆಂಡ್ ಮತ್ತು ಫ್ರಾನ್ಸ್ ಕೂಡ ನಾಕೌಟ್‌ಗೆ ಲಗ್ಗೆ ಇರಿಸಿದ್ದವು. ಅಂತಿಮ ಪ್ಲೇ ಆಫ್ ಪಂದ್ಯದಲ್ಲಿ ಭಾರತವು ಪ್ರಬಲ ಅಮೆರಿಕ–1 ತಂಡವನ್ನು ಮಣಿಸಿತ್ತು.

ಕಳೆದ ವರ್ಷ ನಡೆಯಬೇಕಾಗಿದ್ದ ಟೂರ್ನಿಯನ್ನು ಕೋವಿಡ್–19ರಿಂದಾಗಿ ಈ ವರ್ಷಕ್ಕೆ ಮುಂದೂಡಲಾಗಿತ್ತು. ಟೂರ್ನಿಯಲ್ಲಿ 40 ದೇಶಗಳು ಪಾಲ್ಗೊಂಡಿದ್ದವು.

ರಾಜಸ್ಥಾನ್ ರಾಯಲ್ಸ್ ಜಯಭೇರಿ; ಹೋಲ್ಡರ್, ಗೌತಮ್ ಆಟ ವ್ಯರ್ಥ

ಹೆಟ್ಮೆಯರ್ ಅಬ್ಬರ; ಯಜುವೇಂದ್ರ ಕೈಚಳಕ

ಮುಂಬೈ (ಪಿಟಿಐ): ಅರ್ಧಡಜನ್ ಸಿಕ್ಸರ್‌ಗಳನ್ನು ಸಿಡಿಸಿದ ಶಿಮ್ರೊನ್ ಹೆಟ್ಮೆಯರ್ ಅಬ್ಬರದ ಬ್ಯಾಟಿಂಗ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರ ಕೈಚಳಕದಿಂದ ರಾಜಸ್ಥಾನ ರಾಯಲ್ಸ್ ತಂಡ ಜಯಭೇರಿ ಮೊಳಗಿಸಿತು.

ಭಾನುವಾರ ರಾತ್ರಿ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ರಾಜಸ್ಥಾನ್ 3 ರನ್‌ಗಳಿಂದ ಜಯ ಗಳಿಸಿತು.

166 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಖನೌ ತಂಡ 8 ವಿಕೆಟ್‌ಗಳಿಗೆ 162 ರನ್ ಗಳಿಸಿತು. ನಾಯಕ ಕೆ.ಎಲ್. ರಾಹುಲ್ ಸೇರಿದಂತೆ ಪ್ರಮುಖ ಬ್ಯಾಟರ್‌ಗಳು ವಿಫಲರಾದರು. ಕ್ವಿಂಟನ್ ಡಿ ಕಾಕ್ ಮತ್ತು ದೀಪಕ್ ಹೂಡಾ ಭರವಸೆ ತುಂಬಿದರು. ಕೊನೆಯ ಓವರ್‌ಗಳಲ್ಲಿ ಭರ್ಜರಿ ಸಿಕ್ಸರ್‌ಗಳನ್ನು ಸಿಡಿಸಿದ ಮಾರ್ಕಸ್ ಸ್ಟೋಯಿನಿಸ್ (ಔಟಾಗದೆ 38; 17 ಎಸೆತ, 2 ಬೌಂಡರಿ, 4 ಸಿಕ್ಸರ್) ಗೆಲುವಿನ ಆಸೆ ಚಿಗುರಿಸಿದರು. ಆದರೆ ಕೊನೆಯ ಓವರ್ ಹಾಕಿದ ಕುಲದೀಪ್ ಸೇನ್ ಸವಾಲು ಮೀರಿ ನಿಂತು ರಾಜಸ್ಥಾನ್ ತಂಡಕ್ಕೆ ಗೆಲುವು ತಂದುಕೊಟ್ಟರು.


ಶಿಮ್ರೊನ್ ಹೆಟ್ಮೆಯರ್ –ಪಿಟಿಐ ಚಿತ್ರ

ಮಿಂಚಿದ ಹೆಟ್ಮೆಯರ್: ಟಾಸ್ ಗೆದ್ದ ಲಖನೌ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಯಲ್ಸ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಜೇಸನ್ ಹೋಲ್ಡರ್ ಮತ್ತು ಕನ್ನಡಿಗ ಕೃಷ್ಣಪ್ಪ ಗೌತಮ್ ರಾಯಲ್ಸ್ ರನ್ ಗಳಿಕೆಯ ವೇಗಕ್ಕೆ ಕಡಿವಾಣ ಹಾಕಿದರು. ಆದರೆ ಹೆಟ್ಮೆಯರ್ (ಔಟಾಗದೆ 59; 36ಎ, 1 ಬೌಂ, 6 ಸಿ) ತಂಡಕ್ಕೆ ಆಸರೆಯಾದರು.

ಜೋಸ್ ಬಟ್ಲರ್ ಮತ್ತು ದೇವದತ್ತ ಪಡಿಕ್ಕಲ್ ಮೊದಲ ವಿಕೆಟ್‌ಗೆ 5 ಓವರ್‌ಗಳಲ್ಲಿ 42 ರನ್‌ಗಳನ್ನು ಕಲೆಹಾಕಿದರು. ಆವೇಶ್ ಖಾನ್ ಇನ್‌ಸ್ವಿಂಗರ್‌ಗೆ ಬಟ್ಲರ್ ವಿಕೆಟ್ ಉರುಳಿತು. ಸಂಜು ಸ್ಯಾಮ್ಸನ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಗೌತಮ್ ಒಂದೇ ಓವರ್‌ನಲ್ಲಿ ದೇವದತ್ತ ಮತ್ತು ವ್ಯಾನ್ ಡರ್ ಡಸೆನ್ ವಿಕೆಟ್ ಪಡೆದರು. ಈ ಹಂತದಲ್ಲಿ ಜೊತೆಗೂಡಿದ ಹೆಟ್ಮೆಯರ್ ಮತ್ತು ಅಶ್ವಿನ್ 68 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ್ ರಾಯಲ್ಸ್: 20 ಓವರ್‌ಗಳಲ್ಲಿ 6ಕ್ಕೆ 165 (ದೇವದತ್ತ ಪಡಿಕ್ಕಲ್ 29, ಶಿಮ್ರೊನ್ ಹೆಟ್ಮೆಯರ್ 59, ರವಿಚಂದ್ರನ್ ಅಶ್ವಿನ್ ನಿವೃತ್ತಿ 28; ಜೇಸನ್ ಹೋಲ್ಡರ್ 50ಕ್ಕೆ2, ಆವೇಶ್ ಖಾನ್ 31ಕ್ಕೆ1, ಕೃಷ್ಣಪ್ಪ ಗೌತಮ್ 30ಕ್ಕೆ1); **ಲಖನೌ ಸೂಪರ್ ಜೈಂಟ್ಸ್:** 20 ಓವರ್‌ಗಳಲ್ಲಿ 8ಕ್ಕೆ 162 (ಕ್ವಿಂಟನ್ ಡಿಕಾಕ್ 39, ದೀಪಕ್ ಹೂಡಾ 25, ಕೃಣಾಲ್ ಪಾಂಡ್ಯ 22, ಮಾರ್ಕಸ್ ಸ್ಟೋಯಿನಿಸ್ ಔಟಾಗದೆ 38; ಟ್ರೆಂಟ್ ಬೌಲ್ಟ್ 30ಕ್ಕೆ2, ಪ್ರಸಿದ್ಧ ಕೃಷ್ಣ 35ಕ್ಕೆ1, ಕುಲದೀಪ್ ಸೇನ್ 35ಕ್ಕೆ1, ಯಜುವೇಂದ್ರ ಚಾಹಲ್ 41ಕ್ಕೆ4). **ಫಲಿತಾಂಶ:** ರಾಜಸ್ಥಾನ್ ರಾಯಲ್ಸ್‌ಗೆ 3 ರನ್‌ಗಳ ಜಯ.

ಇಂದಿನ ಪಂದ್ಯ: ಗುಜರಾತ್ ಟೈಟನ್ಸ್– ಸನ್‌ರೈಸರ್ಸ್ ಹೈದರಾಬಾದ್
ಸ್ಥಳ: ಡಿ.ವೈ.ಪಾಟೀಲ ಕ್ರೀಡಾಂಗಣ, ನವಿ ಮುಂಬೈ
ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹಾಕಿ: ಭಾರತದ ಪಂದ್ಯಗಳು ರದ್ದು

ಭುವನೇಶ್ವರ: ಭಾರತ ಮಹಿಳಾ ತಂಡವು ಇಂಗ್ಲೆಂಡ್ ವಿರುದ್ಧ ಆಡಬೇಕಿದ್ದ ಎಫ್‌ಐಎಚ್ ಪ್ರೊ ಲೀಗ್‌ನ ಎರಡು ಪಂದ್ಯಗಳನ್ನು ಕೋವಿಡ್ ಕಾರಣದಿಂದ ರದ್ದು ಮಾಡಲಾಗಿದೆ.ಇದರೊಂದಿಗೆ ಭಾರತ ತಂಡವು ಲೀಗ್‌ನ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದೆ.

ಎರಡು ಪಂದ್ಯಗಳು ಈ ಮೊದಲು ಏಪ್ರಿಲ್ 2 ಮತ್ತು 3ರಂದು ಇಲ್ಲಿಯ ಕಳಿಂಗ ಕ್ರೀಡಾ ನಿಗದಿಯಾಗಿದ್ದವು. ಇಂಗ್ಲೆಂಡ್ ತಂಡದ ಆಟಗಾರ್ತಿಯರಲ್ಲಿ ಕೋವಿಡ್ ಮತ್ತು ಗಾಯದ ಪ್ರಕರಣಗಳು ವರದಿಯಾಗಿದ್ದರಿಂದ ಪಂದ್ಯಗಳನ್ನು ಮುಂದೂಡಲಾಗಿತ್ತು.

ಶ್ರೀಲಂಕಾದಿಂದ 19 ತಮಿಳರು ಭಾರತಕ್ಕೆ

ರಾಮೇಶ್ವರ (ಪಿಟಿಐ): ಐವರು ಮಕ್ಕಳು ಹಾಗೂ ಆರು ಮಂದಿ ಮಹಿಳೆಯರು ಸೇರಿದಂತೆ ಇನ್ನೂ 19 ಶ್ರೀಲಂಕಾ ತಮಿಳರು ದೋಣಿ ಮೂಲಕ ತಮ್ಮ ದೇಶವನ್ನು ತೊರೆದು ಭಾನುವಾರ ಬೆಳಿಗ್ಗೆ ಇಲ್ಲಿಗೆ ಬಂದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಂಕಾ ತಮಿಳರ ಗುಂಪೊಂದು ಇಲ್ಲಿಂದ ಸುಮಾರು 19 ಕಿಮೀ ದೂರದಲ್ಲಿರುವ ಧನುಷ್ಕೋಡಿಯಿಂದ ಅರಿಸಲ್ಮುನೈ ಪ್ರದೇಶವನ್ನು ಶನಿವಾರ ತಡರಾತ್ರಿ ತಲುಪಿದೆ ಎಂಬ ಮಾಹಿತಿ ಬಂದ ನಂತರ ಪೊಲೀಸ್ ಸಿಬ್ಬಂದಿ ಅವರನ್ನು ಪತ್ತೆ ಮಾಡಿ ಮಂಡಪಂನಲ್ಲಿರುವ ಪುನರ್ವಸತಿ ಶಿಬಿರಕ್ಕೆ ಕರೆದೊಯ್ದಿದ್ದಾರೆ.

‘ಶ್ರೀಲಂಕಾದ ಧನುಷ್ಕೋಡಿಯಿಂದ ದೋಣಿಯಲ್ಲಿ ಇಲ್ಲಿಗೆ ಬಂದಿದ್ದೇವೆ. ಆಹಾರ ಮತ್ತು ಅಗತ್ಯ ವಸ್ತುಗಳ ತೀವ್ರ ಕೊರತೆಯಿಂದಾಗಿ ಮನೆಗಳನ್ನು ತೊರೆದು ಇಲ್ಲಿಗೆ ಬಂದಿದ್ದೇವೆ. ಶ್ರೀಲಂಕಾದಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತು ಪ್ರಸ್ತುತ ರಾಜಕೀಯ ಅಸ್ಥಿರತೆಯಿಂದ ತಮ್ಮ ಜೀವನ ನಡೆಸುವುದು ಕಷ್ಟಸಾಧ್ಯ’ ಎಂದು ದೋಣಿಯಲ್ಲಿ ಪುನರ್ವಸತಿ ಬಯಸಿರುವ ತಮಿಳರು ಹೇಳಿದ್ದಾರೆ.

ಶ್ರೀಲಂಕಾದಿಂದ ತಮಿಳುನಾಡಿಗೆ ಈವರೆಗೆ ಒಟ್ಟು 29 ಮಂದಿ ತಮಿಳರು ಬಂದಿದ್ದಾರೆ.

ನೆರವು ವಿಸ್ತರಿಸಿ, ತಮಿಳು ಪಕ್ಷಗಳ ಮನವಿ: ‘ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಶ್ರೀಲಂಕಾದಲ್ಲಿ ಎಲ್ಲರೂ ಬಳಲುತ್ತಿದ್ದಾರೆ. ತಮಿಳುನಾಡಿನಿಂದ ಆಹಾರಧಾನ್ಯಗಳು ಮತ್ತು ಜೀವರಕ್ಷಕ ಔಷಧಿಗಳನ್ನು ತಮಿಳರಿಗೆ ಮಾತ್ರವಲ್ಲದೇ ಶ್ರೀಲಂಕಾದ ಎಲ್ಲ ಜನರಿಗೂ ಒದಗಿಸಬೇಕು’ ಎಂದು ತಮಿಳು ರಾಷ್ಟ್ರೀಯ ಒಕ್ಕೂಟ (ಟಿಎನ್‌ಎ) ಸೇರಿದಂತೆ ಅಲ್ಲಿನ ತಮಿಳು ರಾಜಕೀಯ ಪಕ್ಷಗಳು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರಿಗೆ ಭಾನುವಾರ ಮನವಿ ಮಾಡಿವೆ.

ಟಿಎನ್‌ಎ ವಕ್ತಾರ ಮತ್ತು ಸಂಸದ ಎಂ.ಎ. ಸುಮಂತ್ರನ್ ಅವರು ಕೊಲಂಬೊದಿಂದ ‘ಪ್ರಜಾವಾಣಿ’ ಜೊತೆ ದೂರವಾಣಿಯಲ್ಲಿ ಮಾತನಾಡಿ, ಗಡಿಯಾಚೆಗಿನ ತಮಿಳು ಸಹೋದರರಿಗೆ ಸಹಾಯ ಮಾಡಲು ತಮಿಳುನಾಡು ಸಿದ್ಧವಿರುವುದು ಒಳ್ಳೆಯ ಸಂಕೇತವಾಗಿದೆ. ಇದು ಶ್ರೀಲಂಕಾ ಮತ್ತು ಭಾರತದ ತಮಿಳರ ನಡುವಿನ ಐತಿಹಾಸಿಕ, ಸಾಂಸ್ಕೃತಿಕ ಸಂಬಂಧವನ್ನು ಬಲಪಡಿಸುತ್ತದೆ ಎಂದರು.

ಎಫ್‌ಐಎಚ್ ಜೂನಿಯರ್ ಮಹಿಳೆಯರ ವಿಶ್ವಕಪ್ ಹಾಕಿ

ಭಾರತ ತಂಡದ ಕನಸು ಭಗ್ನ

ಪೊಚೆಫ್‌ಸ್ಟ್ರೂಮ್ (ಪಿಟಿಐ): ಚೊಚ್ಚಲ ಫೈನಲ್ ಕನಸಿನೊಂದಿಗೆ ಕಣಕ್ಕೆ ಇಳಿದ ಭಾರತ ತಂಡ ಜೂನಿಯರ್ ಮಹಿಳೆಯರ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿದೆ. ಭಾನುವಾರ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತವನ್ನು 3–0 ಅಂತರದಿಂದ ನೆದರ್ಲೆಂಡ್ಸ್ ಮಣಿಸಿತು.

11ನೇ ನಿಮಿಷದಲ್ಲಿ ಬೀಟ್‌ಸ್ಮಾ ಟೀಸಾ ಗಳಿಸಿದ ಫೀಲ್ಡ್ ಗೋಲಿನ ಮೂಲಕ ನೆದರ್ಲೆಂಡ್ಸ್ ಮುನ್ನಡೆ ಸಾಧಿಸಿತು. ಎರಡು ಮತ್ತು ಮೂರನೇ ಕ್ವಾರ್ಟರ್ ವರೆಗೆ ಈ ಮುನ್ನಡೆಯನ್ನು ಉಳಿಸಿಕೊಂಡು ಮುನ್ನುಗ್ಗಿದ ತಂಡ ಕೊನೆಯ ಕ್ವಾರ್ಟರ್‌ನಲ್ಲಿ ಪ್ರಬಲ ಆಕ್ರಮಣಕ್ಕೆ ಮುಂದಾಯಿತು. ಈ ಹಂತದಲ್ಲಿ ಎರಡು ನಿಮಿಷಗಳಲ್ಲಿ ಎರಡು ಗೋಲುಗಳನ್ನು ಗಳಿಸಿ ಭಾರತಕ್ಕೆ ನಿರಾಸೆ ಮೂಡಿಸಿತು.

52ನೇ ನಿಮಿಷದಲ್ಲಿ ಫೋಕಿ ಲೂನಾ ಮತ್ತು 53ನೇ ನಿಮಿಷದಲ್ಲಿ ಡಿಕ್ ಜಿಪ್ ಚೆಂಡನ್ನು ಗುರಿ ಮುಟ್ಟಿಸಿ ಸಂಭ್ರಮಿಸಿದರು. ಮೂರು ಬಾರಿಯ ಚಾಂಪಿಯನ್ ನೆದರ್ಲೆಂಡ್ಸ್ ಕಳೆದ ಬಾರಿ ರನ್ನರ್ ಅಪ್ ಆಗಿತ್ತು.


ಚೆಂಡಿನ ಮೇಲೆ ಹಿಡಿತ ಸಾಧಿಸಲು ನೆದರ್ಲೆಂಡ್ಸ್ ಮತ್ತು ಭಾರತದ ಆಟಗಾರ್ತಿಯರು ಪ್ರಯತ್ನಿಸಿದರು –ಟ್ವಿಟರ್ ಚಿತ್ರ

ಸಲಿಮಾ ಟೆಟೆ ನಾಯಕತ್ವದ ತಂಡ ಈ ಬಾರಿ ಉತ್ತಮ ಲಯದಲ್ಲಿ ಆಡಿತ್ತು. ಗುಂಪು ಹಂತದ ಎಲ್ಲ ಪಂದ್ಯಗಳನ್ನು ಗೆದ್ದ ನಂತರ ಕ್ವಾರ್ಟರ್ ಫೈನಲ್‌ನಲ್ಲೂ ಮಿಂಚಿತ್ತು. ಒಟ್ಟಾರೆ 14 ಗೋಲುಗಳನ್ನು ಗಳಿಸಿದ್ದ ತಂಡ ಏಕೈಕ ಗೋಲು ಬಿಟ್ಟುಕೊಟ್ಟಿತ್ತು.

ಆದರೆ ಸೆಮಿಫೈನಲ್‌ನಲ್ಲಿ ಎಲ್ಲ ವಿಭಾಗವೂ ಸಪ್ಪೆಯಾಯಿತು. ಎದುರಾಳಿ ತಂಡ ನಾಲ್ಕೂ ಕ್ವಾರ್ಟರ್‌ಗಳಲ್ಲಿ ಆಧಿಪತ್ಯ ಸ್ಥಾಪಿಸಿತು. ನಾಲ್ಕು ಪಂದ್ಯಗಳಲ್ಲಿ ಗೋಡೆಯಂತೆ ಕಾರ್ಯನಿರ್ವಹಿಸಿ ತಂಡವನ್ನು ರಕ್ಷಿಸಿದ ಗೋಲ್‌ಕೀಪರ್ ಬಿಚ್ಚುದೇವಿ ಕರಿಬಂ ಈ ಪಂದ್ಯದಲ್ಲಿ ಮೂರು ಫೀಲ್ಡ್ ಗೋಲುಗಳನ್ನು ಬಿಟ್ಟುಕೊಟ್ಟರು. ಕಂಚಿನ ಪದಕ ಗೆದ್ದಿರುವುದು ಭಾರತದ ಈ ವರೆಗಿನ ಗರಿಷ್ಠ ಸಾಧನೆಯಾಗಿದೆ. ಜರ್ಮನಿಯಲ್ಲಿ 2013ರಲ್ಲಿ ನಡೆದ ಟೂರ್ನಿಯಲ್ಲಿ ಭಾರತ ಕಂಚಿನ ಪದಕ ಗಳಿಸಿತ್ತು. ಈ ಬಾರಿಯೂ ಕಂಚಿನ ಪದಕ ಗಳಿಸಲು ಅವಕಾಶವಿದೆ.

ಬ್ಯಾಸ್ಕೆಟ್‌ಬಾಲ್ ಕರ್ನಾಟಕಕ್ಕೆ ಕಂಚಿನ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದವರು ಚೆನ್ನೈನಲ್ಲಿ ಭಾನುವಾರ ಮುಕ್ತಾಯಗೊಂಡ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಮೂರು ಮತ್ತು ನಾಲ್ಕನೇ ಸ್ಥಾನ ನಿರ್ಣಯಿಸುವುದಕ್ಕಾಗಿ ನಡೆದ ಪಂದ್ಯದಲ್ಲಿ ಭಾರತೀಯ ರೈಲ್ವೆ ತಂಡವನ್ನು 96-79ರಲ್ಲಿ ಕರ್ನಾ ಟಕ ಮಣಿಸಿತು. ಆರಂಭದಲ್ಲಿ ರೈಲ್ವೆ ತಂಡ ಅಮೋಘ ಆಟವಾಡಿತು. ಹೀಗಾಗಿ ಮೊದಲ ಕ್ವಾರ್ಟರ್ ಮುಕ್ತಾಯಗೊಂಡಾಗ ತಂಡ 26–17ರ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು. ಎರಡನೇ ಕ್ವಾರ್ಟರ್‌ನಲ್ಲಿ ಕರ್ನಾಟಕ ಪ್ರಬಲ ತಿರುಗೇಟು ನೀಡಿತು.

ಅನಿಲ್ ಕುಮಾರ್ ಮತ್ತು ಅಭಿಷೇಕ್ ಗೌಡ ಅವರ ಅಮೋಘ ಆಟದಿಂದ ತಂಡ 35–34ರ ಮುನ್ನಡೆ ಸಾಧಿಸಿತು. ಇದೇ ಲಯವನ್ನು ಮುಂದು ವರಿಸಿದ ಕರ್ನಾಟಕ ದ್ವಿತೀಯಾರ್ಧದಲ್ಲೂ ಪಾಯಿಂಟ್ ಕಲೆ ಹಾಕುತ್ತ ಸಾಗಿತು. ಮೂರನೇ ಕ್ವಾರ್ಟರ್ ಮುಗಿ ದಾಗ 10 ಪಾಯಿಂಟ್‌ಗಳ ಮುನ್ನಡೆ ಗಳಿಸಲು ತಂಡಕ್ಕೆ ಸಾಧ್ಯವಾಯಿತು. ಜಿದ್ದಾಜಿದ್ದಿಯ ಹಣಾಹಣಿಗೆ ಸಾಕ್ಷಿ ಯಾದ ಕೊನೆಯ ಕ್ವಾರ್ಟರ್‌ನಲ್ಲಿ ಎದುರಾಳಿ ತಂಡ ತಿರುಗೇಟು ನೀಡಲು ಪ್ರಯತ್ನಿಸಿತು.

ಆದರೆ ಕರ್ನಾಟಕ ಪಟ್ಟು ಬಿಡಲಿಲ್ಲ. ಹೀಗಾಗಿ ಗೆಲುವು ತನ್ನದಾಗಿಸಿಕೊಂಡಿತು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕ ಐದನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡಿತು. ಪಂಜಾಬ್ ಎದುರಿನ ರೋಚಕ ಪಂದ್ಯದಲ್ಲಿ ತಂಡ 74–71ರಲ್ಲಿ ಜಯ ಸಾಧಿಸಿತು.

ಬಹುಮಾನ ಮೊತ್ತ: ತಂಡಗಳಿಗೆ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಬಹುಮಾನ ಘೋಷಿಸಿದೆ. ಪುರುಷರ ತಂಡಕ್ಕೆ ₹ 5 ಲಕ್ಷ ಮತ್ತು ಮಹಿಳೆಯರ ತಂಡಕ್ಕೆ ₹ 1 ಲಕ್ಷ ಬಹುಮಾನ ನೀಡುವುದಾಗಿ ಗೌರವ ಕಾರ್ಯದರ್ಶಿ ಕೆ.ಗೋವಿಂದರಾಜ್ ತಿಳಿಸಿದ್ದಾರೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿಯಾಗಿ ಯೆಚೂರಿ ಮರು ಆಯ್ಕೆ

ಕಣ್ಣೂರು(ಪಿಟಿಐ): ಸಿಪಿಎಂ ಹಿರಿಯ ನಾಯಕ ಸೀತಾರಾಂ ಯೆಚೂರಿ ಅವರು ಸತತ 3ನೇ ಬಾರಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆಯಾಗಿದ್ದಾರೆ.


ಸೀತಾರಾಮ್ ಯೆಚೂರಿ

ಭಾನುವಾರ ಇಲ್ಲಿ ನಡೆದ ಪಕ್ಷದ 23ನೇ ಸಮಾವೇಶದಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್‌ನ ಹಿಂದುತ್ವದ ಸಿದ್ಧಾಂತಗಳನ್ನು ಅನುಸರಿಸುತ್ತಿರುವ ಬಿಜೆಪಿಯನ್ನು ಏಕಾಂಗಿಯಾಗಿಸುವುದು ಮತ್ತು ಸೋಲಿಸುವುದು ಪಕ್ಷದ ಪ್ರಮುಖ ಕಾರ್ಯವಾಗಿದೆ. ಕೇಸರಿ ಪಕ್ಷವನ್ನು ಸೋಲಿಸುವುದು ಮತ್ತು ಏಕಾಂಗಿಯಾಗಿಸುವುದು ಮಾನವ ಸ್ವಾತಂತ್ರ್ಯವಷ್ಟೇ ಅಲ್ಲದೆ ಜಾತ್ಯತೀತ ಪ್ರಜಾಪ್ರಭುತ್ವದ ಭಾರತದ ಸುರಕ್ಷತೆಗೆ ಅತ್ಯಗತ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಇದೇ ವೇಳೆ ಮುಂದಿನ 3 ವರ್ಷಗಳಿಗಾಗಿ ಪಕ್ಷವನ್ನು ಮುನ್ನಡೆಸಲು 17 ಪಾಲಿಟ್ ಬ್ಯೂರೊ ಸದಸ್ಯರು ಮತ್ತು ಕೇಂದ್ರ ಸಮಿತಿಗೆ 85 ಸದಸ್ಯರನ್ನು ಆಯ್ಕೆ ಮಾಡಲಾಯಿತು.

ರಾಹುಲ್‌ಗೆ ಮಾಯಾವತಿ ತಿರುಗೇಟು

ಲಖನೌ (ಪಿಟಿಐ): ಉತ್ತರಪ್ರದೇಶ ವಿಧಾನಸಭಾ ಚುನಾವಣೆಯ ವೇಳೆ ಕಾಂಗ್ರೆಸ್‌ನಿಂದ ಬಂದ ಮೈತ್ರಿ ಪ್ರಸ್ತಾವವನ್ನು ಬಿಎಸ್‌ಪಿ ತಿರಸ್ಕರಿಸಿತ್ತು ಎಂಬ ರಾಹುಲ್ ಗಾಂಧಿ ಅವರ ಹೇಳಿಕೆಯನ್ನು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಭಾನುವಾರ ತಳ್ಳಿಹಾಕಿದ್ದು, ‘ಇತರ ಪಕ್ಷಗಳ ಬಗ್ಗೆ ಚಿಂತಿಸುವ ಬದಲು ರಾಹುಲ್ ತಮ್ಮ ಪಕ್ಷದ ಕಡೆಗೆ ಗಮನಹರಿಸಲಿ’ ಎಂದು ಸಲಹೆ ನೀಡಿದ್ದಾರೆ.

‘ಉತ್ತರಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಜಂಟಿಯಾಗಿ ಸ್ಪರ್ಧಿಸುವ ಹಾಗೂ ಮಾಯಾವತಿ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿಸುವ ಕೋರಿಕೆಯನ್ನು ಬಿಎಸ್‌ಪಿಗೆ ಕಾಂಗ್ರೆಸ್ ನೀಡಿತ್ತು’ ಎಂದು ರಾಹುಲ್ ಗಾಂಧಿ ಶನಿವಾರ ಹೇಳಿದ್ದರು. ಆದರೆ, ಇದಕ್ಕೆ ಮಾಯಾವತಿ ಪ್ರತಿಕ್ರಿಯೆ ನೀಡಿರಲಿಲ್ಲ.

ಈ ಕುರಿತು ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರು ನಮ್ಮ ಪಕ್ಷದ ಬಗ್ಗೆ ಮತ್ತು ವಿಶೇಷವಾಗಿ ಅದರ ಮುಖ್ಯಸ್ಥರ ಬಗ್ಗೆ ಕೆಲವು ಟೀಕೆಗಳನ್ನು ಮಾಡಿದ್ದಾರೆ. ಇದು ಜಾತಿವಾದಿ ಮನಸ್ಥಿತಿ ಮತ್ತು ಬಿಎಸ್‌ಪಿ ಮೇಲಿನ ಮೇಲಿನ ದ್ವೇಷದ ಭಾವನೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಇದು ಸಮಾಜದ ವಂಚಿತ ವರ್ಗಗಳ ಬಗ್ಗೆ, ವಿಶೇಷವಾಗಿ ದಲಿತರ ಬಗೆಗಿರುವ ಭಾವನೆಗಳನ್ನು ತೋರಿಸುತ್ತದೆ’ ಎಂದು ಹೇಳಿದ್ದಾರೆ.

‘ಬಿಎಸ್‌ಪಿ ವಿರುದ್ಧ ಯಾವುದೇ ಆರೋಪ ಮಾಡುವ ಮುನ್ನ ರಾಹುಲ್ ಗಾಂಧಿ ತಮ್ಮ ಆತ್ಮಾವಲೋಕನ ಮಾಡಿಕೊಳ್ಳಲಿ’ ಎಂದೂ ಮಾಯಾವತಿ ಸಲಹೆ ನೀಡಿದ್ದಾರೆ.

‘ತಮ್ಮ ಮುರಿದ ಮನೆಯನ್ನೇ ಸರಿಯಾಗಿ ನಿರ್ವಹಿಸಲು ಕಾಂಗ್ರೆಸ್ ನಾಯಕನಿಗೆ ಸಾಧ್ಯವಾಗುತ್ತಿಲ್ಲ. ಆದರೆ, ಅವರು ಬಿಎಸ್‌ಪಿಯ ಕಾರ್ಯಶೈಲಿಯ ಕುರಿತು ಬೆರಳು ತೋರಿಸುತ್ತಿದ್ದಾರೆ. ದಲಿತರು ಮತ್ತು ಸಮಾಜದ ಇತರ ವಂಚಿತ ವರ್ಗಗಳ ಸಾಮಾಜಿಕ, ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕಾಂಗ್ರೆಸ್ ತನ್ನ ಸುದೀರ್ಘ ಅಧಿಕಾರಾವಧಿಯಲ್ಲಿ ಯಾವುದೇ ದೃಢವಾದ ಹೆಜ್ಜೆಗಳನ್ನು ತೆಗೆದುಕೊಳ್ಳಲು ವಿಫಲವಾಗಿದೆ. ಮೀಸಲಾತಿ ಸೇರಿದಂತೆ ಇತರೆ ಸೌಲಭ್ಯಗಳ ಸಂಪೂರ್ಣ ಪ್ರಯೋಜನವನ್ನು ಸಮುದಾಯಕ್ಕೆ ನೀಡಿಲ್ಲ’ ಎಂದೂ ಆರೋಪಿಸಿದರು.

ಆಸ್ಟ್ರೇಲಿಯನ್ ಗ್ರ್ಯಾನ್ ಪ್ರಿ: ಲೆಕ್ಲರ್ಕ್‌ಗೆ ಪ್ರಶಸ್ತಿ

ಮೆಲ್ಬರ್ನ್ (ಎಪಿ): ಫೆರಾರಿ ಚಾಲಕ ಚಾರ್ಲ್ಸ್ ಲೆಕ್ಲರ್ಕ್ ಅವರು ಆಸ್ಟ್ರೇಲಿಯನ್ ಗ್ರ್ಯಾನ್ ಪ್ರಿ ಫಾರ್ಮುಲಾ ಒನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಮೊನ್ಯಾಕೊದ 24 ವರ್ಷದ ಚಾಲಕ ಭಾನುವಾರ ಈ ಋತುವಿನಲ್ಲಿ ಎರಡನೇ ಪ್ರಶಸ್ತಿಗೆ ಮುತ್ತಿಕ್ಕಿದರು. ಇದಕ್ಕೂ ಮೊದಲು ಬಹರೇನ್ ಗ್ರ್ಯಾನ್ ಪ್ರಿಯಲ್ಲಿ ಅವರಿಗೆ ಪ್ರಶಸ್ತಿ ಒಲಿದಿತ್ತು.

ಈ ಚಾಂಪಿಯನ್‌ಷಿಪ್‌ನಲ್ಲಿ ಲೆಕ್ಲರ್ಕ್ 1 ತಾಸು 27 ನಿಮಿಷ 46 ಸೆಕೆಂಡುಗಳಲ್ಲಿ ಗುರಿ ತಲುಪಿದರು. ರೆಡ್‌ಬುಲ್ ತಂಡದ ಸೆರ್ಜಿಯೊ ಪೆರೆಜ್ ಎರಡನೇ ಸ್ಥಾನ ಗಳಿಸಿದರೆ, ಮರ್ಸಿಡಿಸ್ ತಂಡದ ಜಾರ್ಜ್ ರಸೆಲ್ ಮೂರನೇ ಸ್ಥಾನ ಪಡೆದುಕೊಂಡರು. ಮರ್ಸಿಡಿಸ್ ತಂಡದವರೇ ಆದ ಲೂಯಿಸ್ ಹ್ಯಾಮಿಲ್ಟನ್ ನಾಲ್ಕನೇ ಸ್ಥಾನ ಗಳಿಸಿದರು.

ಮೆಕ್‌ಲಾರೆನ್ ಚಾಲಕರಾದ ಒಲ್ಯಾಂಡೊ ನೊರಿಸ್ ಮತ್ತು ಡೇನಿಯಲ್ ರಿಕಿಯಾರ್ಡೊ ಕ್ರಮವಾಗಿ ಐದು ಮತ್ತು ಆರನೇ ಸ್ಥಾನ ಗಳಿಸಿದರು.



ಪ್ರಶಸ್ತಿಯೊಂದಿಗೆ ಚಾರ್ಲ್ಸ್ ಲೆಕ್ಲರ್ಕ್– ಎಎಫ್‌ಪಿ ಚಿತ್ರ

ನೇಪಾಳ: ಐಷಾರಾಮಿ ವಸ್ತುಗಳ ಆಮದು ನಿಷೇಧ

ಕಠ್ಮಂಡು (ಪಿಟಿಐ): ನೇಪಾಳದಲ್ಲೂ ಆರ್ಥಿಕ ಬಿಕ್ಕಟ್ಟು ಕಾಣಿಸಿಕೊಂಡಿದ್ದು, ವಿದೇಶಿ ವಿನಿಮಯ ಸಂಗ್ರಹದಲ್ಲಿ ಇಳಿಮುಖವಾಗಿದೆ. ಹೀಗಾಗಿ ವಾಹನಗಳು ಮತ್ತು ಇತರ ಐಷಾರಾಮಿ ವಸ್ತುಗಳ ಆಮದನ್ನು ನಿಷೇಧಿಸಲಾಗಿದೆ ಎಂದು ನೇಪಾಳ ಸರ್ಕಾರ ಹೇಳಿದೆ.

ಮೋದಿ–ಬೈಡನ್ ವರ್ಚುವಲ್ ಸಭೆ ಇಂದು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ (ಏ. 11) ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಡನೆ ವರ್ಚುವಲ್ ಸಭೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಭಾನುವಾರ ಹೇಳಿದೆ.

ಈ ವೇಳೆ ಉಭಯ ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಸಹಕಾರ ಪರಿಶೀಲನೆ, ದಕ್ಷಿಣ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳು ಹಾಗೂ ಇಂಡೋ-ಪೆಸಿಫಿಕ್ ಮತ್ತು ಪರಸ್ಪರ ಆಸಕ್ತಿಯ ಜಾಗತಿಕ ಸಮಸ್ಯೆಗಳ ಕುರಿತು ಇಬ್ಬರೂ ನಾಯಕರು ಚರ್ಚೆ ನಡೆಸಲಿದ್ದಾರೆ ಎಂದು ಎಂಇಎ ತಿಳಿಸಿದೆ.

‘ವರ್ಚುವಲ್ ಸಭೆಯು ದ್ವಿಪಕ್ಷೀಯ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಗುರಿಯೊಂದಿಗೆ ಸಹಭಾಗಿತ್ವವನ್ನು ಮುಂದುವರಿಸಲು ಎರಡೂ ರಾಷ್ಟ್ರಗಳಿಗೆ ಅನುವು ಮಾಡಿಕೊಡುತ್ತದೆ’ ಎಂದು ಎಂಇಎ ಹೇಳಿಕೆಯಲ್ಲಿ ತಿಳಿಸಿದೆ.

ನಿಧನ ವಾರ್ತೆ

ಬ್ರಿಟಿಷ್ ಕಾದಂಬರಿಕಾರ ಜ್ಯಾಕ್ ಹಿಗ್ಗಿನ್ಸ್

ಲಂಡನ್ (ಎಪಿ): ‘ದಿ ಈಗಲ್ ಹ್ಯಾಸ್ ಲ್ಯಾಂಡೆಡ್’ ಖ್ಯಾತಿಯ ಕಾದಂಬರಿಕಾರ ಜ್ಯಾಕ್ ಹಿಗ್ಗಿನ್ಸ್(92) ಜೆರ್ಸಿ ದ್ವೀಪದಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು.

ಹಿಗ್ಗಿನ್ಸ್ 80ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು, ಅವರ 2.50 ಕೋಟಿಗೂ ಹೆಚ್ಚು ಕೃತಿಗಳು ಮಾರಾಟವಾಗಿವೆ.

ಜೋಸೆಫೈನ್

ಕಣ್ಣೂರು: ಸಿಪಿಎಂ ನಾಯಕಿ ಹಾಗೂ ಕೇರಳ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಎಂ.ಸಿ. ಜೋಸೆಫೈನ್ (74) ಹೃದಯಾಘಾತದಿಂದ ಭಾನುವಾರ ಇಲ್ಲಿನ ಆಸ್ಪತ್ರೆಯಲ್ಲಿ ನಿಧನರಾದರು

ಇಲ್ಲಿ ನಡೆಯುತ್ತಿರುವ ಸಿಪಿಎಂನ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜೋಸೆಫೈನ್ ಅವರು ಶನಿವಾರ ವೇದಿಕೆಯಲ್ಲೇ ಕುಸಿದು ಬಿದ್ದಿದ್ದರು, ಬಳಿಕ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮ್ಯಾರಥಾನ್: ವಿಪುಲ್, ಗುಂಜನ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪುಲ್ ಕುಮಾರ್ ಮತ್ತು ಗುಂಜನ್ ಖುರಾನ ಅವರು ಭಾನುವಾರ ನಡೆದ ಶ್ರೀರಾಮ್ ಪ್ರಾಪರ್ಟೀಸ್ ಪ್ರಾಯೋಜಕತ್ವದ ಬೆಂಗಳೂರು ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳೆಯ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

42.2 ಕಿಲೊ ಮೀಟರ್ಸ್ ದೂರದ ಮ್ಯಾರಥಾನ್‌ಅನ್ನು ವಿಪುಲ್ ಕುಮಾರ್ 2 ತಾಸು 38 ನಿಮಿಷ 50 ಸೆಕೆಂಡುಗಳಲ್ಲಿ ಕೊನೆಗೊಳಿಸಿದರು. ಗುಂಜನ್ 3 ತಾಸು 27 ನಿಮಿಷ, 9 ಸೆಕೆಂಡು ತೆಗದುಕೊಂಡರು. ಪುರುಷರ ಹಾಫ್ ಮ್ಯಾರಥಾನ್‌ನಲ್ಲಿ (21.9 ಕಿ.ಮೀ) ನಂಜುಂಡಪ್ಪ ಎಂ. ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರೀನು ಯಾದವ್ ಅಗ್ರಸ್ಥಾನ ಗಳಿಸಿದರು. ಎಂಟು ಸಾವಿರಕ್ಕೂ ಹೆಚ್ಚು ಸ್ಪರ್ಧಿಗಳು ಪಾಲ್ಗೊಂಡಿದ್ದರು. ಕಂಠೀರವ ಕ್ರೀಡಾಂಗಣದಿಂದ ಮ್ಯಾರಥಾನ್ ಆರಂಭಿಸಲಾಗಿತ್ತು.

ಫಲಿತಾಂಶಗಳು: ಮ್ಯಾರಥಾನ್: ಪುರುಷರು: ವಿಪುಲ್ ಕುಮಾರ್–1, ಕಾಲ: 2 ತಾಸು 38 ನಿಮಿಷ, 50ಸೆ; ಸರ್ವೇಶ್ ಕುಮಾರ್–2, ರಾಜ್‌ಕುಮಾರ್ ಚೌಧರಿ–3. **ಮಹಿಳೆಯರು:** ಗುಂಜನ್ ಖುರಾನ–1, ಕಾಲ: 3 ತಾಸು 27 ನಿ. 9 ಸೆ.; ಮನೀಷಾ ಜೋಷಿ–2, ಟಿಮ್‌ಟಿಮ್ ಶರ್ಮಾ–3. **ಹಾಫ್ ಮ್ಯಾರಥಾನ್: ಪುರುಷರು:** ನಂಜುಂಡಪ್ಪ ಎಂ.–1, ಕಾಲ: 1 ತಾಸು 14 ನಿ. 5 ಸೆಕೆಂಡು; ನವದೀಪ್ ಕೆ.–2, ಮಧು ಮಧುಸೂದನ್–3. **ಮಹಿಳೆಯರು:** ಪ್ರೀನು ಯಾದವ್–1, ಕಾಲ: 1 ತಾಸು 33 ನಿ.; ಫರ್ಹೀನ್ ಫಿರ್ದೋಸ್–2, ನೀರಾ ಕತ್ವಾಲ್–3.



ಮಹಿಳೆಯರ ಮ್ಯಾರಥಾನ್‌ನಲ್ಲಿ ಪ್ರಶಸ್ತಿ ಗೆದ್ದ ಗುಂಜನ್ ಖುರಾನ (ಮಧ್ಯೆ), ಎರಡನೇ ಸ್ಥಾನ ಗಳಿಸಿದ ಮನೀಷಾ ಜೋಷಿ ಮತ್ತು ಮೂರನೇ ಸ್ಥಾನ ಗಳಿಸಿದ ಟಿಮ್‌ಟಿಮ್ ಶರ್ಮಾ– ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ಅಗ್ನಿಪುತ್ರಗೆ ಜಯ

ಬೆಂಗಳೂರು: ಪ್ರೇಮ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಅಗ್ನಿಪುತ್ರ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.


ಭಾನುವಾರ ನಡೆದ ಉತ್ತರ ವಲಯ ಪಿ ಗುಂಪಿನ ಪಂದ್ಯದಲ್ಲಿ ಅಗ್ನಿಪುತ್ರ 8–1ರಿಂದ ಬೆನ್ಸನ್ ಎಫ್‌ಸಿಗೆ ಸೋಲುಣಿಸಿತು. ಪ್ರೇಮ್ 32, 36 ಮತ್ತು 60ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಪ್ರಮೋದ್ ಕುಮಾರ್ (7, 14ನೇ ನಿ.), ಟಿ. ಹರೀಶ್ ಕುಮಾರ್ (12ನೇ ನಿ.) ಮತ್ತು ಮಣಿ ಮಾರನ್ (52ನೇ ನಿ.) ಕೂಡ ಮಿಂಚಿದರು. ಬೆನ್ಸನ್ ಪರ ಶಿವ (60+1ನೇ ನಿ.) ಒಂದು ಗೋಲು ಹೊಡೆದರು.

ಇನ್ನುಳಿದ ಪಂದ್ಯಗಳಲ್ಲಿ ರೆಬೆಲ್ಸ್ ಫೀನಿಕ್ಸ್ ಎಫ್‌ಸಿ 5–0ಯಿಂದ ವಿಎಎಸ್ ಸ್ಪೋರ್ಟ್ಸ್ ಅಕಾಡೆಮಿ ಎದುರು, ಬಿವೈಎಫ್‌ಎಲ್ 4–2ರಿಂದ ಹೈಡ್ರಾ ತಂಡದ ಎದುರು ಗೆದ್ದಿತು.

ಪ್ರೇಕ್ಷಕನ ಕ್ಷಮೆ ಕೋರಿದ ಕ್ರಿಸ್ಟಿಯಾನೊ ರೊನಾಲ್ಡೊ

ಮ್ಯಾಂಚೆಸ್ಟರ್ (ಎಪಿ): ಪ್ರೇಕ್ಷಕನ ಕೈಯಲ್ಲಿದ್ದ ಮೊಬೈಲ್ ಫೋನ್‌ಗೆ ಹೊಡೆದ ಮ್ಯಾಂಚೆಸ್ಟರ್ ಸಿಟಿ ತಂಡದ ಕ್ರಿಸ್ಟಿಯಾನೊ ರೊನಾಲ್ಡೊ ವಿರುದ್ಧ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಎವರ್ಟನ್‌ನಲ್ಲಿ ಶನಿವಾರ ನಡೆದ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದ ನಂತರ ಅಂಗಣ ತೊರೆಯುವ ಸಂದರ್ಭದಲ್ಲಿ ಘಟನೆ ನಡೆದಿತ್ತು. ಪಂದ್ಯದಲ್ಲಿ ಮ್ಯಾಂಚೆಸ್ಟರ್ ಯುನೈಟೆಡ್ 0–1 ಗೋಲಿನಿಂದ ಎವರ್ಟನ್ ಎದುರು ಸೋತಿತ್ತು. ವಾಪಸ್ ಹೋಗುವ ವೇಳೆ ರೊನಾಲ್ಡೊ ಪ್ರೇಕ್ಷಕನ ಮೇಲೆ ಹಲ್ಲೆ ಮಾಡಿದ್ದಾರೆ ಎನ್ನಲಾಗಿದೆ.



ರೊನಾಲ್ಡೊ

‘ತಂಡದ ಸದಸ್ಯರೊಬ್ಬರು ಹಲ್ಲೆ ಮಾಡಿದ್ದಾಗಿ ವರದಿಯಾಗಿದೆ. ಈ ಬಗ್ಗೆ ತನಿಖೆ ಆರಂಭಿಸಿದ್ದು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿರುವ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ಮರ್ಸಿಸೈಡ್ ಪೊಲೀಸರು ತಿಳಿಸಿದ್ದಾರೆ.

ಕ್ಷಮೆ ಕೋರಿದ ರೊನಾಲ್ಡೊ: ಘಟನೆಯ ಬಗ್ಗೆ ಕ್ಷಮೆ ಕೋರಿರುವ ರೊನಾಲ್ಡೊ ‘ಕೆಲವು ಸಂದರ್ಭಗಳಲ್ಲಿ ಭಾವನೆಗಳನ್ನು ತಡೆದುಕೊಳ್ಳುವುದು ಸುಲಭ ಸಾಧ್ಯವಲ್ಲ. ಆದರೂ ಶನಿವಾರ ನಡೆದ ಘಟನೆಯ ಬಗ್ಗೆ ಪಶ್ಚಾತ್ತಾಪವಿದ್ದು ಪ್ರೇಕ್ಷಕನ ಕ್ಷಮೆ ಕೋರುತ್ತೇನೆ. ಕ್ರೀಡಾ ಮನೋಭಾವದ ಭಾಗವಾಗಿ ಆ ಪ್ರೇಕ್ಷಕ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯಲಿರುವ ಪಂದ್ಯ ವೀಕ್ಷಿಸಲು ಬರಲಿ ಎಂದು ಹಾರೈಸುತ್ತೇನೆ’ ಎಂದು ಹೇಳಿದ್ದಾರೆ.

ಗಾಲ್ಫ್: ಸ್ಕಾಟಿ ಶೀಫ್ಲರ್ ಮಿಂಚು

ಆಗಸ್ಟಾ (ರಾಯಿಟರ್ಸ್): ವಿಶ್ವದ ಅಗ್ರ ಕ್ರಮಾಂಕದ ಆಟಗಾರ ಸ್ಕಾಟಿ ಶೀಫ್ಲರ್ ಮತ್ತು ಪ್ರತಿಭಾವಂತ ಗಾಲ್ಫರ್ ಟೈಗರ್ ವುಡ್ಸ್ ಅವರು ಆಗಸ್ಟಾ ಮಾಸ್ಟರ್ಸ್ ಗಾಲ್ಫ್ ಟೂರ್ನಿಯಲ್ಲಿ ಭಾನುವಾರ ಉತ್ತಮ ಸಾಧನೆ ಮಾಡಿದ್ದಾರೆ. ಇಬ್ಬರೂ ಅಗ್ರಸ್ಥಾನಗಳಲ್ಲಿ ಮುಂದುವರಿದಿದ್ದಾರೆ.

ಶೀಫ್ಲರ್ ಕಳೆದ ಐದು ಪಿಜಿಟ ಟೂರ್‌ಗಳ ಪೈಕಿ ಮೂರರಲ್ಲಿ ಪ್ರಶಸ್ತಿ ಗಳಿಸಿದ್ದು ಆಸ್ಟ್ರೇಲಿಯಾದ ಕ್ಯಾಮರಾನ್ ಸ್ಮಿತ್ ಕೂಡ ಉತ್ತಮ ಸಾಧನೆ ಮಾಡಿದ್ದು ಪ್ರಶಸ್ತಿ ಗೆಲ್ಲುವ ರೇಸ್‌ನಲ್ಲಿದ್ದಾರೆ.

ದಕ್ಷಿಣ ಕೊರಿಯಾದ ಸಂಗ್ ಜೇ ಮತ್ತು ದಕ್ಷಿಣ ಆಫ್ರಿಕಾದ ಚಾರ್ಲ್ ಸ್ವಾಟ್ಸೆಲ್ ಅವರಿಂದಲೂ ಸವಾಲು ಎದುರಾಗಿದೆ.

ಚೆಸ್: ಕರ್ನಾಟಕದ ಚಿನ್ಮಯ್‌ಗೆ ಗೆಲುವು

ಮಂಡ್ಯ: ಕರ್ನಾಟಕದ ಚಿನ್ಮಯ್ ಕೌಶಿಕ್ ರಾಷ್ಟ್ರೀಯ ಬಾಲಕ-ಬಾಲಕಿಯರ ಚೆಸ್ ಟೂರ್ನಿಯಲ್ಲಿ ಗೆಲುವು ಸಾಧಿಸಿದರು.

ಭಾನುವಾರ ನಡೆದ ಎರಡನೇ ಸುತ್ತಿನ ಪಂದ್ಯದಲ್ಲಿ ಚಿನ್ಮಯ್, ಪಶ್ಚಿಮ ಬಂಗಾಳದ ವಂಶಿಕ್ ಮಂಡಲ್ ವಿರುದ್ಧ ಜಯಗಳಿಸಿದರು. ತೆಲಂಗಾಣದ ಆದಿರೆಡ್ಡಿ ಅರ್ಜುನ್ ವಿಜಯ ಯಾತ್ರೆ ಮುಂದುವರಿಸಿದ್ದು ಎರಡನೇ ಸುತ್ತಿನ ಪಂದ್ಯದಲ್ಲಿ ಕೇರಳದ ಜೋಸೆಫ್ ಟಾಮ್ ವಿರುದ್ಧ ಜಯ ಗಳಿಸಿದರು. ಕರ್ನಾಟಕದ ಅಂಶುಲ್ ಪಣಿಕ್ಕರ್ ವಿರುದ್ಧ ಗೋವಾದ ವಾಜ್ ಈಥನ್, ಅಸ್ಸಾಂನ ಮೃಣಯ್ ರಾಜ್‌ಕೋವ ವಿರುದ್ಧ ಚಂಡೀಗಡದ ಅಯಾನ್ ಗರ್ಗ್, ತಮಿಳುನಾಡಿನ ಸಾಯಿ ಅಭಿನವ್ ವಿರುದ್ಧ ಮಹಾರಾಷ್ಟ್ರದ ಮನಸ್ ಗಾಯಕವಾಡ್ ಗೆಲುವು ಪಡೆದರು.